ಕೊಪ್ಪಳ ಜಿಲ್ಲೆಯ ಚಿತ್ರಕಲೆ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ



ಸಂಶೋಧಕರು

ದಯಾನಂದ ಕೋಳಿ

ನೋಂದಣಿ ಸಂಖ್ಯೆ : KUVA-00532

ಮಾರ್ಗದರ್ಶಕರು

ಡಾ.ಎಸ್.ಸಿ.ಪಾಟೀಲ

ದೃಶ್ಯಕಲಾ ವಿಭಾಗ

ತಕಲಾ ನಿಕಾಯ

ವಿದ್ಯಾಲಯ, ಹಂಪಿ

೨೦೧೩

ಕೊಪ್ಪಳ ಜಿಲ್ಲೆಯ ಚಿತ್ರಕಲೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ದಯಾನಂದ ಕೋಳಿ

ಮಾರ್ಗದರ್ಶಕರು
ಡಾ. ಎಸ್. ಸಿ. ಪಾಟೀಲ್
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಚೇರಿ, ಬೆಂಗಳೂರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ

ಪ್ರಮಾಣ ಪತ್ರ

ಕೊಪ್ಪಳ ಜಿಲ್ಲೆಯ ಚಿತ್ರಕಲೆ ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಮಾರ್ಗದರ್ಶಕರು ಹಾಗೂ ನೂತನ ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ **ಡಾ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಈ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 29/07/13

ಸ್ಥಳ: ವಿದ್ಯಾರಣ್ಯ

(ದಯಾನಂದ ಕೋಳಿ)
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದೃಢೀಕರಣ ಪತ್ರ

ದಯಾನಂದ ಕೋಳಿ ಇವರು ಬರೆದು ಸಾದರಪಡಿಸಿದ **ಕೊಪ್ಪಳ ಜಿಲ್ಲೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಈ ಎಂ.ಫಿಲ್ ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಈ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: 29/07/13

ಸ್ಥಳ: ವಿದ್ಯಾರಣ್ಯ

(ಡಾ.ಎಸ್.ಸಿ.ಪಾಟೀಲ)
ಮಾರ್ಗದರ್ಶಕರು
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಛೇರಿ, ಬೆಂಗಳೂರು

ದೃಢೀಕರಣ ಪತ್ರ

ದಯಾನಂದ ಕೋಳಿ ಅವರು **ಕೊಪ್ಪಳ ಜಿಲ್ಲೆಯ ಚಿತ್ರಕಲೆ** ಎಂಬ ಶೀರ್ಷಿಕೆಯ ಎಂ.ಫಿಲ್ ಸಂಶೋಧನಾ ಪ್ರಬಂಧವನ್ನು **ಡಾ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಈ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 30/7/13

ಸ್ಥಳ: ವಿದ್ಯಾರಣ್ಯ

(ಡಾ. ರವೀಂದ್ರನಾಥ ಕೆ)
ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮುಖ್ಯಸ್ಥರು
ದೃಶ್ಯಕಲಾ ವಿಭಾಗ (ಲಲಿತಕಲಾ ನಿಕಾಯ)
ಕನ್ನಡ ವಿಶ್ವ ವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಕೊಪ್ಪಳ ಜಿಲ್ಲೆಯ ಚಿತ್ರಕಲೆ

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಮಾನವನ ಸಾಂಸ್ಕೃತಿಕ ಬೆಳವಣಿಗೆಯ ಇತಿಹಾಸದಲ್ಲಿ ಕಲಾಸೃಷ್ಟಿ ಒಂದು ಪ್ರಮುಖ ಸಾಧನವಾಗಿದೆ. ಮಾನವನ ಬದುಕಿನ ಅನುಭವಗಳು ಹಲವು ಮಾಧ್ಯಮಗಳ ಮುಖಾಂತರ ಪ್ರಕಟಗೊಳ್ಳುತ್ತಾ ಬಂದಿವೆ. ಅವುಗಳಲ್ಲಿ ಸಾಹಿತ್ಯ, ಸಂಗೀತ ಮತ್ತು ಕಲೆ ಮುಖ್ಯವಾದವುಗಳು. ಇವುಗಳಲ್ಲಿ ಸಂಗೀತ ಮತ್ತು ಸಾಹಿತ್ಯ ಒಂದು ರೀತಿಯಲ್ಲಿ ನಾಗರಿಕ ಅಭಿವ್ಯಕ್ತಿಗಳಾದರೆ, ಕಲೆಯು ಅವನ ಅಧಿಮ ಅಭಿವ್ಯಕ್ತಿ ಮಾಧ್ಯಮವಾಗಿದೆ. ಏಕೆಂದರೆ ಅಕ್ಷರದ ಅರಿವು ಉಂಟಾಗುವ ಎಷ್ಟೋ ವರ್ಷಗಳ ಹಿಂದೆ ಮನುಷ್ಯ ತನ್ನ ಭಾವನೆಗಳನ್ನು ಚಿತ್ರಗಳ ಮೂಲಕ ಅಭಿವ್ಯಕ್ತಿಸುತ್ತಿದ್ದನು. ಮಾನವನ ಅಧಿಮ ಹಂತದ ಈ ಕಲೆ ಶಿಷ್ಟ ಪ್ರಕಾರದ್ದಾಗಿರಲಿಲ್ಲ, ಕೇವಲ ಗೀಚು ಪ್ರಧಾನವಾಗಿದ್ಧಿತು. ಕ್ರಮೇಣ ಗೀಚುಗಳು, ಚಿತ್ರಗಳು, ಅಕ್ಷರಗಳ ಸೃಷ್ಟಿಗೆ ಕಾರಣವಾದವು. ಹೀಗಾಗಿ ಮಾನವನ ಸಾಂಸ್ಕೃತಿಕರಣದ ಪ್ರಕ್ರಿಯೆಯಲ್ಲಿ ಚಿತ್ರಕಲೆಗೆ ಪ್ರಧಾನ ಸ್ಥಾನವಿದೆ.

ಶಿಲಾಯುಗದ ಕಾಲದಲ್ಲಿ ಕಲಾಸೃಷ್ಟಿಯ ಪ್ರಕ್ರಿಯೆ ಮೊದಲ್ಗೊಂಡಿದ್ದು, ಪ್ರಾಚೀನ ಮಾನವನು ತನ್ನ ಸಂತೋಷ, ದು:ಖ ಮುಂತಾದ ಉದ್ವೇಗಗಳನ್ನು ವ್ಯಕ್ತಪಡಿಸುವ ಸಲುವಾಗಿ ತನ್ನ ಆಶ್ರಯ ತಾಣಗಳಾಗಿದ್ದ ಗುಹೆಗಳು, ಶಿಲಾಶ್ರಯಗಳ ಗೋಡೆಗಳಲ್ಲಿ ಗೀಚತೊಡಗಿದ. ಇದೇ ಕಾಲಕ್ರಮೇಣ ಚಿತ್ರರಚನೆಗೆ ಮೂಲ ಪ್ರೇರಣೆಯಾಯಿತು. ಆಹಾರಕ್ಕಾಗಿ ಬೇಟೆಯನ್ನೇ ತಮ್ಮ ಕಸುಬನ್ನಾಗಿಸಿಕೊಂಡಿದ್ದ ಆದಿಮಾನವ ತನ್ನ ವೃತ್ತಿಯ ಅನುಭವ, ಚಟುವಟಿಕೆಗಳನ್ನು ಚಿತ್ರಗಳ ವಿಷಯ ವಸ್ತುವಾಗಿಸಿಕೊಂಡನು. ಹೀಗೆ, ಆದಿಮಾನವನ ಚಿತ್ರಕಲೆ ಮೊದಲಾಯಿತು. ಈ ಕಲೆಗೆ ಪ್ರಾಗೈತಿಹಾಸದ ಕಲೆ ಎಂದು ಕರೆಯಲಾಗಿದೆ. ಪ್ರಪಂಚದ ಹಲವಾರು ಭಾಗಗಳಲ್ಲಿ ಪ್ರಾಗೈತಿಹಾಸಕಾಲದ ವರ್ಣಚಿತ್ರ ಗವಿಗಳು, ಕಲ್ಲಾಸರೆಗಳು ಮತ್ತು ಬಯಲು ಬಂಡೆಯ ಚಿತ್ರಗಳು ಅಸಂಖ್ಯಾತವಾಗಿ ಬೆಟ್ಟ-ಗುಡ್ಡಗಳಲ್ಲಿವೆ. ಆದರೆ ಇತ್ತಿಚಿನವರೆಗೂ ಇದರ ಕಡೆಗೆ ತಜ್ಞರ, ಚಿತ್ರಕಲಾಭಿಮಾನಿಗಳ

ಗಮನ ಹರಿದಿರಲಿಲ್ಲ. ಕೆಲವು ಆಕಸ್ಮಿಕ ಶೋಧನೆಗಳಿಂದ ಇವುಗಳ ಸೌಂದರ್ಯ ಮತ್ತು ಮಹತ್ವಗಳ ಅರಿವಾಗಿರುವುದರಿಂದ ಇಗೀಗ ಇವುಗಳ ಶೋಧನೆ, ಅಭ್ಯಾಸದಲ್ಲಿ ಆಸಕ್ತಿ ಹೆಚ್ಚುತ್ತಿದೆ.

ಪ್ರಪಂಚದ ಕೆಲವು ಭಾಗಗಳಲ್ಲಿ ಗವಿಚಿತ್ರಗಳು ಮತ್ತು ಬಯಲುಬಂಡೆಯ ಚಿತ್ರಗಳು ಶೋಧವಾಗಿವೆ. ಸ್ಪೇನ್, ಫ್ರಾನ್ಸ್, ಜರ್ಮನ್, ಇಂಗ್ಲೆಂಡ್, ರಷ್ಯಾ, ಜಪಾನ್ ಮತ್ತು ಭಾರತದಲ್ಲಿ ಶೋಧವಾದ ಗವಿಚಿತ್ರಗಳು ಇಗಾಗಲೆ ಜಗತ್ಪ್ರಸಿದ್ಧವಾಗಿವೆ. ಕರ್ನಾಟಕದಲ್ಲಿಯು ಹಲವು ಕಡೆ ಇಂತಹ ಚಿತ್ರಗಳು ಕಂಡುಬಂದಿವೆ. ಅದರಲ್ಲಿ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಹೇರಳವಾಗಿರುವದನ್ನು ಕಾಣಬಹುದಾಗಿದೆ. ಕಾರಣ ಇಲ್ಲಿರುವ ಬಯಲು ಬಂಡೆಗಳು, ಗುಹೆಗಳು, ಬೆಟ್ಟ-ಗುಡ್ಡಗಳು ಹಾಗೂ ಆದಿಮಾನವನಿಗೆ ಬದುಕಲು ಬೇಕಾದಂತಹ ವಸತಿ ತಾಣಗಳು, ಕುಡಿಯಲು ನೀರಿನ ವ್ಯವಸ್ಥೆ ಇರುವದರಿಂದ ಇಂತಹ ತಾಣಗಳನ್ನು ಆಯ್ಕೆಮಾಡಿಕೊಂಡಿದ್ದರು ಎಂದು ಊಹಿಸಬಹುದಾಗಿದೆ.

ನಾಗರೀಕತೆ ಮುಂದುವರೆದಂತೆ ಗ್ರಾಮ, ನಗರ, ಪಟ್ಟಣಗಳ ಪರಿಕಲ್ಪನೆ ಬೆಳೆದು ಸಂಸ್ಕೃತಿ, ಸಂಸ್ಕಾರಗಳ ಅಡಿಯಲ್ಲಿ ಆಯಾ ವಲಯಗಳಲ್ಲಿ ರಾಜರುಗಳು ಒಡೆತನಗಳನ್ನು ಏರಲು ಆರಂಭಿಸಿದರು. ನಗರ ಸಂಸ್ಕೃತಿ ಬೆಳೆದಂತೆ ಧಾರ್ಮಿಕ ಮಠ-ಮಂದಿರಗಳನ್ನು ಕಟ್ಟಲು ಪ್ರಾರಂಭಿಸಿದರು. ಅಲ್ಲಿ ಶಿಲ್ಪ, ಚಿತ್ರಗಳ ರಚನೆಗಾಗಿ ಕಲಾವಿದರನ್ನು ರಾಜಾಶ್ರಯದಲ್ಲಿ ಇರಿಸಿಕೊಳ್ಳಲು ಆರಂಭಿಸಿದರು. ಅಂದಿನ ರಾಜರುಗಳು ಕೇವಲ ಕಲೆ, ವಾಸ್ತುಶಿಲ್ಪವಲ್ಲದೆ, ನೃತ್ಯ, ಸಂಗೀತ, ಸಾಹಿತ್ಯಗಳಲ್ಲಿ ಒಲವುಉಳ್ಳವರಾಗಿದ್ದರು. ಅದಕ್ಕೆ ಸಾಕ್ಷಿಯಂತೆ ಇಂದು ನಮಗೆ ನೋಡಲು ಸಿಗುವ ದೇವಾಲಯ, ಮಠ-ಮಂದಿರಗಳಲ್ಲಿನ ವಾಸ್ತುಶಿಲ್ಪ, ಭಿತ್ತಿಶಿಲ್ಪ, ಮೂರ್ತಿಶಿಲ್ಪ, ಭಿತ್ತಿಚಿತ್ರಕಲೆ, ಹಸ್ತಪ್ರತಿಗಳಲ್ಲಿ ಚಿತ್ರಕಲೆ ಇವೆಲ್ಲವು ಕಾಣಸಿಗುತ್ತವೆ. ಈ ಎಲ್ಲಾ ಆಕರಗಳು ಇತಿಹಾಸ ತಜ್ಞರಿಗೆ, ಸಂಶೋಧಕರಿಗೆ ಆಕರವಾಗಿದೆ.

ಕರ್ನಾಟಕದಲ್ಲಿ ಕದಂಬರು, ರಾಷ್ಟ್ರಕೂಟರು, ಗಂಗರು, ಮೌರ್ಯರು, ಚಾಲುಕ್ಯರು ವಾಸ್ತುಶಿಲ್ಪಕ್ಕೆ ಬುನಾದಿ ಹಾಕಿದ್ದರು. ೮ನೇ ಶತಮಾನದ ಹೊತ್ತಿಗೆ ದಕ್ಷಿಣ ಕರ್ನಟಕದ ಹೊಯ್ಸಳರು ಶಿಲ್ಪಕಲೆಯಲ್ಲಿ ಶೃಂಗಾರದ ಮೇರಗನ್ನಿಟ್ಟರು. ಆನಂತರ ೧೨ನೇ ಶತಮಾನದಲ್ಲಿ ಚೋಳರ ಆಕ್ರಮಣದಿಂದ ವೈಷ್ಣವ ದೇವಾಲಯಗಳು ನಾಶಗೊಂಡು, ಶೈವ ದೇವಾಲಯಗಳು ನಿರ್ಮಾಣವಾದವು. ಮುಂದುವರೆದಂತೆ ೧೫ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಪ್ರಾಬಲ್ಯವನ್ನು ಮೆರೆದಿದ್ದ ವಿಜಯನಗರ ಅರಸರು ಶಿಲ್ಪಕಲೆ, ಚಿತ್ರಕಲೆ, ಸಂಗೀತ, ನೃತ್ಯ, ಸಾಹಿತ್ಯ ಇವೆಲ್ಲವಕ್ಕು ತಮ್ಮದೇ ಆದ ಶೈಲಿಗೆ ದಾರಿಯೊಂದನ್ನು ತೋರಿದರು. ವಿಜಯನಗರ ಪತನದ ನಂತರ ಆಸ್ಥಾನದ ಕಲಾವಿದರು ಹಲವೆಡೆ ಚದುರಿ, ಸಾಮಂತ ರಾಜರುಗಳ ಆಸ್ಥಾನ ಕಲಾವಿದರಾಗಿ ಸೇರಿದರು. ಹೀಗೆ ಸೇರಿದ ಕಲಾವಿದರು ಮೈಸೂರು ಪ್ರಾಂತ್ಯಕ್ಕೆ ಹೋಗಿ ಮೈಸೂರು ಶೈಲಿ ಎಂಬ ಹೊಸದಾದ ಚಿತ್ರಪರಂಪರೆಯನ್ನು ಹುಟ್ಟುಹಾಕಿದರು. ಅಂತೆಯೇ ಹಾಗೆ ಚದುರಿದ ಕೆಲವು ಕಲಾವಿದರು

ಕೊಪ್ಪಳದ ನವಾಬರು, ದೇಸಾಯಿಗಳು, ಜಹಾಗಿರದಾರರ ಆಶ್ರಯ ಪಡೆದು ಕಿನ್ನಾಳ ಎಂಬ ಗ್ರಾಮದಲ್ಲಿ ನೆಲೆಸಿ, ಕಿನ್ನಾಳಕಲೆ ಎಂಬ ಶಿಲ್ಪ, ಚಿತ್ರಪರಂಪರೆಯನ್ನು ಹುಟ್ಟುಹಾಕಿದರು.

ಕೊಪ್ಪಳವನ್ನಾಳಿದ ರಾಜಮನೆತನಗಳಲ್ಲಿ ಮೊದಲಿಗರು ಮೌರ್ಯರು. ನಂತರ ಶಾತವಾಹನರು, ಕದಂಬರು, ಬಾದಾಮಿಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕಲ್ಯಾಣಚಾಲುಕ್ಯರು, ಕಲ್ಯಾಣದ ಕಲಚೂರಿಗಳು, ಹೊಯ್ಸಳರು, ದೇವಗಿರಿಯಾದವರು, ವಿಜಯನಗರ ಅರಸುಮನೆತನಗಳು, ದಕ್ಷಿಣ ಭಾರತದ ಅರಸು ಮನೆತನಗಳಲ್ಲಿ ಮಹತ್ವದ ಪಾತ್ರವಹಿಸಿದ ಮನೆತನ ವಿಜಯನಗರದ್ದು. ಈ ಅವಧಿಯಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಪ್ರೋತ್ಸಾಹ ಅಪರಿಮಿತವಾದದ್ದು. ಇವರ ಕಾಲದಲ್ಲಿ ಅನೇಕ ದೇವಾಲಯಗಳಲ್ಲಿ ವಾಸ್ತುಶಿಲ್ಪ, ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿದೆ. ಇವುಗಳೇ ಅವರ ಕಲಾಪ್ರೀತಿಗೆ ಸಾಕ್ಷಿ ಎನ್ನಬಹುದಾಗಿದೆ.

ಕೊಪ್ಪಳ ಪ್ರಾಚೀನ ಕಾಲದಲ್ಲಿಯೂ ತಿರುಳ್ಗನ್ನಡ ನಾಡಿನ ಮಹಾಕೋಪಣ ನಗರವಾಗಿ, ಶಾಸನಗಳಲ್ಲಿ ಕುಪಣ, ಕೋಪಣ, ಕೋಪಣಾಚಲ, ಕೋಪಣತೀರ್ಥವಾಗಿ ಹೆಸರುಗಳಿಸಿದ್ದಲ್ಲದೇ, ಬೌದ್ಧ, ಜೈನಧರ್ಮಗಳ ಮಹಾಕೇಂದ್ರವಾಗಿ ಮೆರೆದಿತ್ತು. ಕೊಪ್ಪಳ ಜಿಲ್ಲೆಯು ದಕ್ಷಿಣ ಭಾರತ ಅದರಲ್ಲೂ, ಕರ್ನಾಟಕ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಹೈದ್ರಾಬಾದ್-ಕರ್ನಾಟಕದ ಹಿಂದುಳಿದಪ್ರದೇಶವೆಂಬ ಹಣೆಪಟ್ಟಿ ಕಟ್ಟಿಕೊಂಡರೂ ಶ್ರೀಮಂತ ಚರಿತ್ರೆಯನ್ನು ಹೊಂದಿದೆ.

ಅಧ್ಯಯನದ ಉದ್ದೇಶ

ಕಲೆ ಮಾನವನ ಆಂತರಿಕ ಮತ್ತು ಬಾಹ್ಯ ಬದುಕಿನ ರೀತಿ-ನೀತಿಗಳನ್ನು ನಿರ್ಧರಿಸುವುದರೊಂದಿಗೆ, ಅವನು ಸುಸಂಸ್ಕೃತನಾಗಿ ಜೀವನ ನಡೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹಾಗಾಗಿ ಯಾವುದೇ ಪ್ರದೇಶದ ಸಾಂಸ್ಕೃತಿಕ ಬದುಕು, ಸಾಮಾಜಿಕ ಬದುಕು ಮತ್ತು ಅಲ್ಲಿನ ಹಿರಿಮೆ, ಗರಿಮೆಗಳನ್ನು ನಿರ್ಧರಿಸುವಲ್ಲಿ ಕಲೆಗಳು ತುಂಬಾ ಗಮನಾರ್ಹ ಸ್ಥಾನ ಪಡೆದುಕೊಂಡಿವೆ. ಭಾರತ ದೇಶವು ಸಹಿತ ವಿವಿಧ ರೀತಿಯ ಕಲಾಪ್ರಕಾರಗಳಿಂದಾಗಿ ವಿಶ್ವದಲ್ಲಿ ಪ್ರಖ್ಯಾತಿ ಪಡೆದುಕೊಂಡಿದೆ. ಈ ದೇಶದ ಪ್ರತಿಯೊಂದು ರಾಜ್ಯಗಳು ವಿಶೇಷವಾದ ಕಲಾಪ್ರಕಾರಗಳನ್ನು ಒಳಗೊಂಡು, ನಾಡಿನ ಸಂಸ್ಕೃತಿಯ ಭವ್ಯತೆಗೆ ಶ್ರೀಮಂತ ಕೊಡುಗೆ ನೀಡಿವೆ. ಇದಲ್ಲದೆ ಆಯಾ ರಾಜ್ಯಗಳಲ್ಲಿರುವ ಜಿಲ್ಲೆಗಳು ಮತ್ತು ತಾಲೂಕುಗಳು ಸಹ ವಿಶಿಷ್ಟವಾದ ಪ್ರಾದೇಶಿಕ ಕಲೆಗಳನ್ನು ಒಳಗೊಂಡಿದ್ದು, ನಾಡಿನ ಸಂಸ್ಕೃತಿಯ ಜೀವ ಸೆಲೆಯಾಗಿವೆ.

ಕರ್ನಾಟಕ ಪ್ರದೇಶವು ಇಡೀ ಭಾರತದಲ್ಲಿ ತನ್ನ ಕಲಾವೈಭವದಿಂದ ಖ್ಯಾತಿಯನ್ನು ಗಳಿಸಿದೆ. ಈ ನಾಡಿನಲ್ಲಿ ಆಳಿಹೋದ ರಾಜ-ಮಹಾರಾಜರು, ಸಾಮಂತರು, ಸಂಸ್ಥಾನಿಕರು, ಸ್ಥಳಿಯ ನಾಯಕರು, ಊರಿನ ಜಹಗೀರದಾರರು, ದೇಸಾಯಿಗಳು, ಗೌಡರು ಮುಂತಾದವರಲ್ಲದೆ ಅಧಿಕಾರಿಗಳು, ಶ್ರೀಮಂತ ವ್ಯಕ್ತಿಗಳು, ಮಠ-ಮಾನ್ಯಗಳ, ದೇವಾಲಯಗಳ, ಚರ್ಚ್-ಮಸೀದಿಗಳ

ಧರ್ಮಾಧಿಕಾರಿಗಳು ಮತ್ತು ಮಠಾಧಿಪತಿಗಳು ಈ ನಾಡಿನ ಕಲಾಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.[೧] ಇವರೆಲ್ಲರ ಅನನ್ಯವಾದ ಕೊಡುಗೆಗಳಿಂದ ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆ ಮತ್ತು ತಾಲೂಕುಗಳು ಕಲಾಶ್ರೀಮಂತಿಕೆಯಿಂದ ವೈಭವಯುತವಾಗಿ ತಮ್ಮನ್ನು ಗುರುತಿಸಿಕೊಂಡಿವೆ.

ಒಂದು ನಾಡಿನ ಸಮಗ್ರ ಕಲೆಯನ್ನು ಕುರಿತು ಅಧ್ಯಯನಕ್ಕೆ ತೊಡಗಿದಾಗ ಆ ಕಲಾಪ್ರಕಾರಗಳನ್ನು ಪ್ರಾದೇಶಿಕವಾಗಿ ವಿಂಗಡಿಸಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯನ್ನು ಮುಖ್ಯವಾಗಿಟ್ಟುಕೊಂಡು, ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬೆಳೆದು ಬಂದಿರುವ ವಿವಿಧ ರೀತಿಯ ಕಲಾಪ್ರಕಾರಗಳನ್ನು ವಿಷಯಾನುಸಾರ ವಿಂಗಡಿಸಿಕೊಂಡು, ವಿಶ್ಲೇಷಣೆ ಮಾಡುವ ಉದ್ದೇಶವನ್ನು ಪ್ರಸ್ತುತ ಅಧ್ಯಯನದಲ್ಲಿ ಹೊಂದಲಾಗಿದೆ.

ಕೊಪ್ಪಳ ಜಿಲ್ಲೆಯು ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ, ರಾಜಕೀಯವಾಗಿ ಮತ್ತು ಮನುಷ್ಯನ ನಾಗರೀಕ ಬದುಕಿನ ಘಟ್ಟಗಳನ್ನು ಗುರುತಿಸುವಲ್ಲಿ ತನ್ನದೆ ಆದ ವಿಶೇಷ ಸ್ಥಾನ ಪಡೆದುಕೊಂಡಿದೆ. ಈ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಬೆಟ್ಟ-ಗುಡ್ಡಗಳು, ಗುಹೆ ಮತ್ತು ಶಿಲಾಶ್ರಯ ತಾಣಗಳು ನೈಸರ್ಗಿಕವಾಗಿ ರಚನೆಗೊಂಡಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಈ ರೀತಿಯ ಸ್ವಾಭಾವಿಕ ನೆಲೆಗಳು ಆದಿಮಾನವನ ವಾಸದ ನೆಲೆಗಳಾಗಿದ್ದು, ಇತಿಹಾಸಗಳಿಂದ ಕಂಡು ಬರುತ್ತದೆ.[೨] ಕೊಪ್ಪಳ ಜಿಲ್ಲೆಯ ಹಲವು ಕಡೆ ಕಂಡುಬರುವ ಬೆಟ್ಟ-ಗುಡ್ಡಗಳಲ್ಲಿ ಆದಿಮಾನವರು ವಾಸಿಸಿದ ಕುರುಹುಗಳು ಇಂದಿಗೂ ಉಳಿದುಕೊಂಡು ಬಂದಿವೆ. ಇಂತಹ ಪ್ರದೇಶಗಳಲ್ಲಿ ಆದಿಮಾನವರು ರಚಿಸಿದ ಬಯಲು ಬಂಡೆಯ ಚಿತ್ರಗಳು ಮತ್ತು ಗುಹಾವರ್ಣ ಚಿತ್ರಗಳು ವಿಫೂಲ ಸಂಖ್ಯೆಯಲ್ಲಿ ಕಂಡುಬಂದಿವೆ. ಹಿರೆಬೆನಕಲ್, ಆನೆಗುಂದಿ ಮತ್ತು ಕೊಪ್ಪಳ ಪ್ರದೇಶಗಳಲ್ಲಿ ಆಧಿಮಾನವನ ಅತೀ ಹೆಚ್ಚು ಚಿತ್ರಗಳಿವೆ.[೩] ಜಿಲ್ಲೆಯಾದ್ಯಂತ ಕಂಡುಬರುವ ಆದಿಮಾನವರ ಚಿತ್ರಗಳನ್ನು ಇಲ್ಲಿ ಮಾಧ್ಯಮ ಮತ್ತು ವಿಷಯಾನುಸಾರ ವಿಂಗಡಿಸಿಕೊಂಡು ವಿವೇಚಿಸುವ ಉದ್ದೇಶವನ್ನು ಈ ಪ್ರಬಂಧವು ಹೊಂದಿದೆ.

ಪ್ರಾಗೈತಿಹಾಸಿಕ ಕಾಲಘಟ್ಟದ ನಂತರ ಕೊಪ್ಪಳ ಜಿಲ್ಲೆಯಲ್ಲಿ ನಾಗರಿಕ ಮಾನವರಿಂದ ಇತಿಹಾಸವು ಹೇಗೆ ರೂಪುಗೊಂಡಿತೆಂಬುದನ್ನು ತಿಳಿಯಲು ಅನೇಕ ಆಧಾರಗಳು ಲಭ್ಯವಾಗಿವೆ. ಕೊಪ್ಪಳ ಜಿಲ್ಲೆಯನ್ನು ಗಮನಿಸಿದಾಗ ಮೌರ್ಯರ ಕಾಲದಿಂದಲೇ ಜಿಲ್ಲೆಯ ಇತಿಹಾಸ ಆರಂಭವಾಗುತ್ತದೆ. ಕೊಪ್ಪಳದಲ್ಲಿನ ಬೆಟ್ಟದ ಮೇಲಿರುವ ಪಾಲ್ಕಿಗೊಂಡ ಮತ್ತು ಗವಿಸಿದ್ದೇಶ್ವರ ಮಠ ಹತ್ತಿರದ ಬಂಡೆಯೊಂದರ ಮೇಲಿರುವ ಅಶೋಕನ ಶಿಲಾಶಾಸನಗಳು ಮೌರ್ಯರ ಬಗ್ಗೆ

೦೧. ಡಾ. ಎಸ್.ಸಿ.ಪಾಟೀಲ : ವರ್ಣಸಂಚಯ, ಪುಟ - ೧೮

೦೨. ಬಿ. ಸಿ. ಪಾಟೀಲ : ಕೊಪ್ಪಳ ಸಾಂಸ್ಕೃತಿಕ ಅಧ್ಯಯನ, ಪುಟ - ೨೯

೦೩. ಡಾ. ಶರಣಬಸಪ್ಪ ಕೋಲ್ಕಾರ : ಶಿಲಾಯುಗ ಗವಿಚಿತ್ರಗಳು, ಪುಟ - ೪೮

ತಿಳಿಸಿಕೊಡುತ್ತದೆ.[೪] ಇವರ ನಂತರ ಈ ಭಾಗವನ್ನು ಶಾತವಾಹನರು, ಬನವಾಸಿಯ ಕದಂಬರು, ಬಾದಾಮಿಯಚಾಲುಕ್ಯರು, ತಲಕಾಡಿನ ಗಂಗರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಸೇವುಣರು, ಹೊಯ್ಸಳರು, ವಿಜಯನಗರದ ಅರಸರು ಆಳ್ವಿಕೆ ಮಾಡಿದ ಬಗ್ಗೆ ತಿಳಿದುಬರುತ್ತದೆ. ಇವರಷ್ಟೇ ಅಲ್ಲದೆ ಎರಂಬರಿಗೆಯ ಸಿಂಧರು, ಹೊಸಮಲೆದುರ್ಗ, ಕಮ್ಮಟದುರ್ಗದ ನಾಯಕರು, ಕನಕಗಿರಿಯ ಗುಜ್ಜಲವಂಶದ ಅರಸರು, ಬಿಜಾಪುರದ ಆದಿಲ್‌ಶಾಹಿಗಳು, ಹೈದರಾಲಿ ಮತ್ತು ಟಿಪ್ಪುಸುಲ್ತಾನ, ಮರಾಠರು ಕೊಪ್ಪಳವನ್ನು ಆಡಳಿತ ಮಾಡಿದ ಬಗ್ಗೆ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಇದಲ್ಲದೆ ಬ್ರಿಟೀಷರ ವಶವಾಗುವವರೆಗೂ ಕೊಪ್ಪಳವು ಸ್ಥಳೀಯ ನಾಯಕರು ಮತ್ತು ಹೈದ್ರಾಬಾದಿನ ಸಾಲಾರಜಂಗನ ವಶದಲ್ಲಿತ್ತು.[೫] ಈ ರೀತಿ ಕಾಲಕಾಲಕ್ಕೆ ಆಡಳಿತ ನಡೆಸಿದ ಅನೇಕ ವ್ಯಕ್ತಿಗಳು ಜಿಲ್ಲೆಯಲ್ಲಿ ಚಿತ್ರಕಲೆಯನ್ನು ಉಳಿಸಿ ಬೆಳೆಸಿದ್ದಾರೆ. ಇಂತಹ ಅಂಶಗಳನ್ನು ಒಳಗೊಂಡಂತೆ ಕೊಪ್ಪಳ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಯನ ಹೊಂದಿದೆ.

ಯಾವುದೇ ಪ್ರದೇಶದ ಜನಪದ ಕಲೆಗಳು ಅಲ್ಲಿನ ಸಾಂಸ್ಕೃತಿಕ ಬದುಕು ಮತ್ತು ನಾಗರೀಕ ಬದುಕಿನ ಅಂತಃಸತ್ವಗಳನ್ನು ಒಳಗೊಂಡಿರುತ್ತದೆ. ಹಾಗಾಗಿ ಜನಪದ ಕಲೆಗಳ ಬಗೆಗಿನ ಅಧ್ಯಯನವು ಒಂದು ದೃಷ್ಟಿಯಲ್ಲಿ ಜನಸಮುದಾಯದ ಅಧ್ಯಯನವೇ ಆಗಿದೆ ಎಂದು ಹೇಳಬಹುದು.[೬] ಕೊಪ್ಪಳ ಜಿಲ್ಲೆಯಲ್ಲಿ ಹಲವಾರು ಜನಪದ ಚಿತ್ರಕಲಾಪ್ರಕಾರಗಳಿವೆ. ಉದಾ: ಕಿನ್ನಾಳಕಲೆ, ಹಚ್ಚೆ, ರಂಗೋಲಿ, ಕೌದಿಕಲೆ, ಶೀಗಿಕಲೆ, ತೊಗಲುಗೊಂಬೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಲಂಬಾಣಿಕಲೆ, ಕಸೂತಿಕಲೆ, ಹಗಲು ವೇಷದಾರರ ಕಲೆ, ಸುಡುಗಾಡಸಿದ್ಧರ ಕಲೆ, ಬಿದಿರುಕಲೆ, ನೇಯ್ಗೆಕಲೆ ಮುಂತಾದ ಹತ್ತು ಹಲವು ಕಲೆಗಳು ಈ ಜಿಲ್ಲೆಯಲ್ಲಿವೆ. ಆಧುನಿಕ ಬದುಕಿನ ಪ್ರಭಾವಕ್ಕೆ ಸಿಲುಕಿ ಕೆಲವು ಕಲಾಪ್ರಕಾರಗಳು ನಶಿಸುತ್ತಲಿವೆ. ಇವುಗಳನ್ನು ಒಳಗೊಂಡಂತೆ ಕೊಪ್ಪಳ ಜಿಲ್ಲೆಯ ಜನಪದ ಚಿತ್ರಕಲಾಪ್ರಕಾರಗಳನ್ನು ಮಾಧ್ಯಮ ಮತ್ತು ವಿಷಯಾನುಸಾರ ವಿಂಗಡಿಸಿಕೊಂಡು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

ಒಂದು ನಾಡಿನ ಕಲಾಪರಂಪರೆಯ ಬಗ್ಗೆ ಅಧ್ಯಯನಕ್ಕೆ ತೊಡಗಿದಾಗ ಆ ಕಲೆಯ ಜನಪದ ರೂಪ ಮತ್ತು ಶಿಷ್ಟಪದಗಳ ರೂಪಾಂತರಗಳನ್ನು ಪರಾಮರ್ಶಿಸಬೇಕಾಗುತ್ತದೆ.[೭] ಅಲ್ಲದೆ ಆಯಾ ಕಲಾಪ್ರಕಾರಗಳು ಜನಪದದಿಂದ ಶಿಷ್ಟಪದಕ್ಕೆ ಹೇಗೆ ಪರಿವರ್ತನೆಗೊಂಡವು? ಎಂಬಂತಹ ಕಾರಣಗಳನ್ನು ವಿವೇಚನೆ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಶಿಷ್ಟಪದ

---

೦೪. ಡಾ. ಸಾಯಬಣ್ಣ ಕ. ಮೇಲಕಾರ : ಕೊಪ್ಪಳ ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆ, ಪುಟ – ೨೫

೦೫. ಅಲ್ಲಮಪ್ರಭು ಬೆಟ್ಟದೂರು : ಕೊಪ್ಪಳ ಜಿಲ್ಲಾದರ್ಶನ, ಪುಟ – ೮೫

೦೬. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೧೬

೦೭. ಡಾ. ಎಸ್. ಸಿ. ಪಾಟೀಲ : ಆಚರಣೆಯಲ್ಲಿ ಜನಪದ ಶಿಲ್ಪಗಳು, ಪುಟ – ೮

ಚಿತ್ರಕಲೆಯನ್ನು ಪ್ರತ್ಯೇಕವಾಗಿ ವಿವೇಚಿಸುವ ಉದ್ದೇಶವು ಇಲ್ಲಿದೆ. ಕೊಪ್ಪಳ ಜಿಲ್ಲೆಯಲ್ಲಿ ಶಿಷ್ಟಪದ ಚಿತ್ರಕಲೆಯು ಅನೇಕ ಕಡೆಗಳಲ್ಲಿ ಕಂಡುಬರುತ್ತದೆ. ಜಿಲ್ಲೆಯಾದ್ಯಂತ ಇರುವ ಪ್ರಾಚೀನ ದೇವಾಲಯಗಳು, ಅರಮನೆಗಳು, ಮಠ–ಮಾನ್ಯಗಳು ಇನ್ನಿತರ ಸಾರ್ವಜನಿಕ ಕಟ್ಟಡಗಳು ಮುಂತಾದ ಕಡೆಗಳಲ್ಲಿ ಶಿಷ್ಟಪದ ಚಿತ್ರಕಲೆ ರಚನೆಯಾಗಿದ್ದು, ಅವು ಇಂದಿಗೂ ಉಳಿದುಕೊಂಡು ಬಂದಿದೆ.[೮] ಇವುಗಳಲ್ಲದೇ ಮಧ್ಯಕಾಲೀನ ಮತ್ತು ಆಧುನಿಕ ದೇವಾಲಯಗಳಲ್ಲಿಯೂ ಶಿಷ್ಟಪದ ಚಿತ್ರಕಲೆಯನ್ನು ರಚನೆ ಮಾಡಿದ್ದು, ಇವೆಲ್ಲವುಗಳನ್ನು ವಿಶ್ಲೇಷಣಾತ್ಮಕವಾಗಿ ವಿವರಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಕೊಪ್ಪಳ ಜಿಲ್ಲೆಯು ಕಲೆ ಮತ್ತು ಕಲಾವಿದರ ದೃಷ್ಟಿಯಿಂದ ಪ್ರಸಿದ್ಧಿ ಪಡೆದುಕೊಂಡಿದೆ. ಆದಿ ಮಾನವನ ಹಂತದಿಂದ ಹಿಡಿದು ಇಂದಿನವರೆಗೆ ಕಲಾವಿದರು ಈ ಜಿಲ್ಲೆಯಲ್ಲಿ ನಿರಂತರ ಚಿತ್ರರಚನೆ ಮಾಡುತ್ತ ಬಂದಿದ್ದಾರೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಅಲ್ಲಿನ ಕಲಾವಿದರು ಕೊಪ್ಪಳ ಜಿಲ್ಲೆಯ ಕಿನ್ನಾಳ ಗ್ರಾಮದಲ್ಲಿ ಬಂದು ನೆಲೆಸಿದರು. ಇಲ್ಲಿದ್ದು ತಮ್ಮ ಮೂಲ ಆಶಯಗಳನ್ನು ಇಟ್ಟುಕೊಂಡು ಸ್ಥಳೀಯ ಅಂಶಗಳ ಅಳವಡಿಕೆಯೊಂದಿಗೆ ಹೊಸ ಕಲಾಪ್ರಕಾರವನ್ನು ಹುಟ್ಟುಹಾಕಿದರು. ಇದು ಕಿನ್ನಾಳ ಕಲೆ ಎಂಬುದಾಗಿಯೇ ಪ್ರಖ್ಯಾತಿ ಪಡೆದಿದೆ. ಕಿನ್ನಾಳದಲ್ಲಿ ಇಂದಿಗೂ ನೂರಾರು ಜನ ಕಲಾವಿದರು ಕೃತಿ ರಚನೆಯಲ್ಲಿ ತೊಡಗಿದ್ದಾರೆ. ಇವರಲ್ಲದೇ ಜಿಲ್ಲೆಯಾದ್ಯಂತ ಅನೇಕ ಜನರು ಕಲಾಶಿಕ್ಷಣವನ್ನು ಪಡೆದುಕೊಂಡು ಕಲಾಶಿಕ್ಷಕರಾಗಿ, ಹವ್ಯಾಸಿ ಕಲಾವಿದರಾಗಿ, ವಾಣಿಜ್ಯ ಕಲಾವಿದರಾಗಿ ತಮ್ಮ ಬದುಕನ್ನು ಕಂಡುಕೊಂಡಿದ್ದಾರೆ. ಈ ಮೂಲಕ ಜಿಲ್ಲೆಯ ಚಿತ್ರಕಲೆಯ ಶ್ರೀಮಂತಿಕೆಯನ್ನು ಎತ್ತಿ ಹಿಡಿದಿದ್ದಾರೆ. ಇಂತಹ ಅಂಶಗಳ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಸಮಕಾಲೀನ ಕಲೆ ಮತ್ತು ಕಲಾವಿದರ ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧದಲ್ಲಿ ಹೊಂದಲಾಗಿದೆ. ಇವೆಲ್ಲ ಅಂಶಗಳ ಜೊತೆಗೆ ಜಿಲ್ಲೆಯಲ್ಲಿ ನಡೆಯುವ ಕಲಾಚಟುವಟಿಕೆಗಳು ಹಾಗೂ ಕಲಾಪ್ರದರ್ಶನಗಳು ಮುಂತಾದ ಪೂರಕ ಚಟುವಟಿಕೆಗಳನ್ನು ಸ್ಥೂಲವಾಗಿ ಗಮನಿಸುವ ಉದ್ದೇಶವನ್ನು ಈ ಅಧ್ಯಯನದಲ್ಲಿ ಹೊಂದಲಾಗಿದೆ.

ಪ್ರಸ್ತುತ ಅಧ್ಯಯನ ಕುರಿತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಕೊಪ್ಪಳ ಜಿಲ್ಲೆ ಚಿತ್ರಕಲೆಯ ಕುರಿತು ಇದುವರೆಗೆ ನಡೆದ ಅಧ್ಯಯನವನ್ನು ಸ್ಥೂಲವಾಗಿ ಈ ಕೆಳಗಿನಂತೆ ಗಮನಿಸಲಾಗಿದೆ. ಜಿಲ್ಲೆಯ ಚಿತ್ರಕಲೆಯ ಬಗ್ಗೆ ಕೃತಿಗಳು, ಲೇಖನಗಳು ಮಾತ್ರವಲ್ಲದೇ ವಿವಿಧ ಸ್ಮರಣಸಂಚಿಕೆಗಳು, ಗೆಝೆಟಿಯರ್‌ಗಳು, ಪುರಾತತ್ವವರದಿಗಳು, ಅಲ್ಲಲ್ಲಿ ಕಂಡುಬರುವ ಬಿಡಿ ಲೇಖನಗಳು ಮಾಹಿತಿ ಒದಗಿಸುತ್ತವೆ. ಅವುಗಳಲ್ಲಿರುವ ಚಿತ್ರಕಲೆಯ ಅಂಶಗಳನ್ನು ಕೆಳಗಿನಂತೆ ಸಮೀಕ್ಷಿಸಲಾಗಿದೆ.

---

೦೮. ಡಾ. ಸಿದ್ಧಲಿಂಗಪ್ಪ ಕೋಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು, ಪುಟ – ೪೨

ಬಾ.ರಾ. ಗೋಪಾಲರವರು ೧೯೮೭ರಲ್ಲಿ **ಕರ್ನಾಟಕದಲ್ಲಿ ನವಶಿಲಾಯುಗ**[೯] ಎಂಬ ಕೃತಿಯನ್ನು ರಚಿಸಿದ್ದು, ಇದರಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಕೆಲವು ಆದಿಮಾನವ ಚಿತ್ರಕಲೆಯ ನೆಲೆಗಳ ಬಗ್ಗೆ ಹೇಳಿದ್ದಾರೆ. ಇದೇ ಅವಧಿಯಲ್ಲಿ ಪ್ರಕಾಶ ಹುನಸಗಿ ಎಂಬುವರು **ಗಂಗಾವತಿ ತಾಲೂಕು ದರ್ಶನ**[೧೦] ಎಂಬ ಕೃತಿಯನ್ನು ರಚನೆ ಮಾಡಿದ್ದು,ಇದರಲ್ಲಿ ಹಿರೆಬೆನಕಲ್ ಗವಿವರ್ಣ ಚಿತ್ರಗಳ ಬಗ್ಗೆ ಹೇಳಲಾಗಿದೆ. ೧೯೯೨ರಲ್ಲಿ ಆರ್. ಎಚ್. ಕುಲಕರ್ಣಿಯವರು **ಕಿನ್ನಾಳದ ಚಿತ್ರಕಲೆ**[೧೧] ಎಂಬ ಕಿರುಪುಸ್ತಕವನ್ನು ರಚನೆ ಮಾಡಿದ್ದು, ಇದರಲ್ಲಿ ಕಿನ್ನಾಳ ಕಲೆಯ ಸಂಕ್ಷಿಪ್ತ ಇತಿಹಾಸ, ಕಲಾಪರಿಕರಗಳು, ರಚನಾ ವಿಧಾನ, ವಸ್ತುವಿಷಯ ಮತ್ತು ಶೈಲಿಯ ಬಗ್ಗೆ ತಿಳಿಸಿದ್ದಾರೆ.

೧೯೯೩ರಲ್ಲಿ ಡಾ. ಎಸ್.ಸಿ.ಪಾಟೀಲ ಅವರು **ಕರ್ನಾಟಕ ಜನಪದ ಚಿತ್ರಕಲೆ**[೧೨] ಎಂಬ ವಿಷಯ ಕುರಿತು ತಮ್ಮ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದ್ದು. ಅದರಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಶಿಷ್ಟಪದ ಚಿತ್ರಕಲೆ ಮತ್ತು ಜಿಲ್ಲೆಯ ಜನಪದ ಚಿತ್ರಕಲೆಯ ಬಗ್ಗೆ ವಿವರಿಸಿದ್ದಾರೆ. ಇದೆ ಅವಧಿಯಲ್ಲಿ ಕೊಪ್ಪಳದಲ್ಲಿ ನಡೆದ ಅಖಿಲ ಭಾರತ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ತಿರುಳ್ಗನ್ನಡ ಸವಿಸಂಚಿಕೆಯನ್ನು ಹೊರತರಲಾಗಿದೆ. ಇದರಲ್ಲಿ ಕೊಪ್ಪಳ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ಹೇಳುವುದರ ಜೊತೆಗೆ ಜಿಲ್ಲೆಯಲ್ಲಿ ಕಂಡುಬರುವ ಪ್ರಾಗಿತಿಹಾಸ ಕಾಲದ ಚಿತ್ರಗಳು, ಶಿಷ್ಟಪದ ಚಿತ್ರಗಳು, ಜನಪದ ಚಿತ್ರಕಲೆ ವಿಶೇಷವಾಗಿ ಕಿನ್ನಾಳ ಕಲೆ, ಭಾಗ್ಯನಗರದ ನೇಯ್ಗೆಕಲೆ ಮುಂತಾದವುಗಳಲ್ಲದೇ ಜಿಲ್ಲೆಯ ಕಲಾವಿದರು ಮತ್ತು ಕಲಾಪರಂಪರೆಯ ಬಗ್ಗೆ ಮಾಹಿತಿ ಕೊಡುವ ಲೇಖನಗಳು ಇಲ್ಲಿವೆ.

೧೯೯೪ರಲ್ಲಿ ಡಾ. ಅ. ಸುಂದರವರು **ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ**[೧೩] ಎಂಬ ಪುಸ್ತಕವನ್ನು ರಚಿಸಿದ್ದಾರೆ. ಅದರಲ್ಲಿ ಕೊಪ್ಪಳ ಜಿಲ್ಲೆಯ ಹಿರೆಬೆನಕಲ್, ಆನೆಗುಂದಿ, ಬಿಳೆಬಾವಿ, ಚಿಕ್ಕಬೆನಕಲ್, ಎಮ್ಮಿಗುಡ್ಡ, ಚಿಕ್ಕರಾಂಪುರ, ಮಲ್ಲಾಪುರ, ಅಂಜನಹಳ್ಳಿ, ಕೊಪ್ಪಳ ಮುಂತಾದ ಸ್ಥಳಗಳಲ್ಲಿ ಕಂಡುಬರುವ ಆದಿನಮಾನವ ಚಿತ್ರಗಳ ಬಗ್ಗೆ ವಿಶೇಷವಾಗಿ ಹೇಳಿದ್ದಾರೆ. ಇದೇ ಅವಧಿಯಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯವರು ಹೊರತಂದ **ಶಿಲ್ಪಕಲಾ ಪ್ರಪಂಚ**[೧೪] ಪುಸ್ತಕದಲ್ಲಿ ಕೊಪ್ಪಳ ಜಿಲ್ಲೆಯ ಕಿನ್ನಾಳ ಗೊಂಬೆಗಳ ಬಗ್ಗೆ ಲೇಖನ ಪ್ರಕಟಗೊಂಡಿದೆ. ೧೯೯೬ರಲ್ಲಿ

---

೦೯. ಬಾ. ರಾ. ಗೋಪಾಲ : ಕರ್ನಾಟಕದಲ್ಲಿ ನವಶಿಲಾಯುಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೭

೧೦. ಪ್ರಕಾಶ ಹುಣಸಗಿ : ಗಂಗಾವತಿ ತಾಲೂಕು ದರ್ಶನ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು. ೧೯೮೭

೧೧. ಆರ್. ಎಚ್. ಕುಲಕರ್ಣಿ : ಕಿನ್ನಾಳ ಚಿತ್ರಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೨

೧೨. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ. ೧೯೯೩

೧೩. ಅ. ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

೧೪. ಪಿ. ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಶಿಲ್ಪಕಲಾ ಪ್ರಪಂಚ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು. ೧೯೯೪

ವಿಲಾಸ ಮ. ಜೋಗುಳ ಅವರು **ಇತಿಹಾಸ ದರ್ಶನ**[೧೫] ಸಂಪುಟದಲ್ಲಿ ಬರೆದ ಕಲ್ಲಾಸರೆಯ ವರ್ಣ ಚಿತ್ರಗಳ ಶೋಧನೆ ಎಂಬ ಲೇಖನದಲ್ಲಿ ಕೊಪ್ಪಳ ಜಿಲ್ಲೆಯ ತಾವರಗೇರಿಯ ಬೆಟ್ಟಗಳಲ್ಲಿರುವ ಗುಹಾ ವರ್ಣಚಿತ್ರಗಳ ಬಗ್ಗೆ ವಿವರಿಸಲಾಗಿದೆ. ಇದೇ ಅವಧಿಯಲ್ಲಿ ಗವಿಸಿದ್ಧ ಎನ್ ಬಳ್ಳಾರಿಯವರು **ಕಿನ್ನಾಳದ ಗೊಂಬೆಗಳು**[೧೬] ಎಂಬ ಕಿರುಪುಸ್ತಕವನ್ನು ಬರೆದಿದ್ದು, ಜಿಲ್ಲೆಯ ಕಿನ್ನಾಳದಲ್ಲಿ ತಯಾರಾಗುವ ಕಲಾತ್ಮಕ ಗೊಂಬೆಗಳ ತಯಾರಿಕೆಯ ಬಗ್ಗೆ ತಿಳಿಸಲಾಗಿದೆ. ಅಲ್ಲದೇ ಗೊಂಬೆಗಳನ್ನು ತಯಾರಿಸುವ ವಿಧಾನದಲ್ಲಿ ಅವುಗಳ ರೇಖಾಚಿತ್ರಗಳು, ಬಣ್ಣಗಳ ತಯಾರಿಕೆ ಬಣ್ಣ ಲೇಪನ ವಿಧಾನ ಮುಂತಾದವುಗಳನ್ನು ಹೇಳಲಾಗಿದೆ.

೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಹೊರತರಲಾದ **ಕರ್ನಾಟಕ ಚರಿತ್ರೆ**[೧೭]ಯ ಮೊದಲ ಸಂಪುಟದಲ್ಲಿ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸ ಕಾಲದ ಚಿತ್ರಗಳ ಬಗ್ಗೆ ವಿವರಣೆ ಕಂಡುಬರುತ್ತದೆ. ೧೯೯೮ರಲ್ಲಿ ಬಿ.ಸಿ ಪಾಟೀಲ ಎಂಬುವರು **ಕೊಪ್ಪಳ ಸಾಂಸ್ಕೃತಿಕ ಅಧ್ಯಯನ**[೧೮] ಎಂಬ ಸಂಶೋಧನಾತ್ಮಕ ಪುಸ್ತಕವನ್ನು ರಚಿಸಿದ್ದು. ಇದರಲ್ಲಿ ಜಿಲ್ಲೆಯ ಆದಿ ಮಾನವ ಚಿತ್ರಗಳು, ಕೆಲವು ಶಿಷ್ಟಪದ ಚಿತ್ರಗಳ ಬಗ್ಗೆ ತಿಳಿಸಲಾಗಿದೆ. ಡಾ. ಅ. ಲ. ನರಸಿಂಹನ್ ಅವರು **ಕರ್ನಾಟಕ ಭಿತ್ತಿಚಿತ್ರ ಪರಂಪರೆ**[೧೯] ಎಂಬ ಪುಸ್ತಕವನ್ನು ಇದೇ ಅವಧಿಯಲ್ಲಿ ರಚಿಸಿದ್ದಾರೆ. ಇಲ್ಲಿ ಕೊಪ್ಪಳ ಜಿಲ್ಲೆಯ ಆನೆಗುಂದಿ ಮತ್ತು ಕನಕಗಿರಿಯ ಭಿತ್ತಿಚಿತ್ರಗಳ ಬಗ್ಗೆ ಸಾಂದರ್ಭಿಕವಾಗಿ ಉಲ್ಲೇಖಿಸಲಾಗಿದೆ. ೧೯೯೯ರಲ್ಲಿ ದೃವರಾಜ ನಾ ಗದಗಕರರವರು **ದೇಗುಲ ರಥಶಿಲ್ಪ**[೨೦] ಎಂಬ ಪುಸ್ತಕವನ್ನು ರಚನೆಮಾಡಿದ್ದು, ಇದರಲ್ಲಿ ಕೊಪ್ಪಳ ಜಿಲ್ಲೆಯ ರಥ ಶಿಲ್ಪಕಾರರು, ಚಿತ್ರಕಲಾವಿದರು, ಮತ್ತು ಬಣ್ಣಗಾರರ ಬಗ್ಗೆ ಮಾಹಿತಿ ಕೊಡಲಾಗಿದೆ. ೨೦೦೦ರಲ್ಲಿ ಡಾ. ಕರೀಗೌಡ ಬೀಚನಹಳ್ಳಿಯವರು **ಕರಕುಶಲ ಕಲೆಗಳು**[೨೧] ಎಂಬ ವಿಶ್ವಕೋಶವನ್ನು ಸಂಪಾದನೆ ಮಾಡಿದ್ದು, ಇದರಲ್ಲಿ ಜಿಲ್ಲೆಯ ಕಿನ್ನಾಳ ಕಲೆಯ ಬಗ್ಗೆ ವಿವರ ಕಂಡುಬರುತ್ತದೆ.

ಡಾ. ಯಾದಪ್ಪ ಪರದೇಶಿಯವರು ೨೦೦೧ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ**[೨೨] ಎಂಬ ಮಹಾಪ್ರಬಂಧವನ್ನು ಸಲ್ಲಿಸಿದ್ದಾರೆ. ಇಲ್ಲಿ ಕೊಪ್ಪಳ ಜಿಲ್ಲೆಯ ಭಿತ್ತಿಚಿತ್ರಗಳ ಬಗ್ಗೆ ವಿವರಿಸಲಾಗಿದೆ. ಇದೇ ಅವಧಿಯಲ್ಲಿ

---

೧೫. ವಿಲಾಸ ಮ. ಜೋಗುಳ : ಇತಿಹಾಸ ದರ್ಶನ, (ಸಂಪುಟ –). ________________ ೧೯೯೬

೧೬. ಗವಿಸಿದ್ಧಪ್ಪ ಎನ್. ಬಳ್ಳಾರಿ : ಕಿನ್ನಾಳದ ಗೊಂಬೆಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೧೯೯೬

೧೭. ಅ. ಸುಂದರ : ಕರ್ನಾಟಕ ಚರಿತ್ರೆ (ಸಂಪುಟ – ೧), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭

೧೮. ಪಾಟೀಲ ಬಿ.ಸಿ. : ಕೊಪ್ಪಳ ಸಾಂಸ್ಕೃತಿಕ ಅಧ್ಯಯನ, ಹರಿಹರನ ಪ್ರಕಾಶನ, ಕೊಪ್ಪಳ. ೧೯೯೮

೧೯. ಡಾ. ಅ. ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ________________ ೧೯೯೮

೨೦. ದೃವರಾಜ ನಾ. ಗದಗಕರ : ದೇಗಲು ರಥಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೯

೨೧. ಡಾ. ಕರೀಗೌಡ ಬೀಚನಹಳ್ಳಿ (ಪ್ರ.ಸಂ.) : ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೨೨. ಡಾ. ಯಾದಪ್ಪ ಬಿ. ಪರದೇಶಿ : ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

ಡಾ. ಕೆ. ಎಂ. ಸುರೇಶರವರು ಸಂಪಾದಿಸಿದ **ಕರ್ನಾಟಕ ದೇವಾಲಯ ಕೋಶ-ಕೊಪ್ಪಳ ಜಿಲ್ಲೆ**[೧೩] ಎಂಬ ಗ್ರಂಥದಲ್ಲಿ ಜಿಲ್ಲೆಯಲ್ಲಿ ಬರುವ ಪ್ರಮುಖ ದೇವಾಲಯಗಳನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ಆಯಾ ದೇವಾಲಯದ ಕಾಲಮಾನ, ಶೈಲಿ, ಭಾಗಗಳು ಅಲಂಕಾರಿಕ ವಿನ್ಯಾಸ ಶಿಲ್ಪಕಲೆ ಇವುಗಳನ್ನು ಹೇಳಲಾಗಿದೆ. ೨೦೦೩ರಲ್ಲಿ ಬಿ.ಕೆ. ಹಿರೇಮಠ ಅವರ ಅಭಿನಂದನ ಗ್ರಂಥವಾದ **ನಿಜದ ನೆಲೆ**[೧೪]ಯನ್ನು ಡಾ. ಎಸ್. ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟರವರು ಸಂಪಾದಿಸಿದ್ದು, ಇದರಲ್ಲಿ ಕಿನ್ನಾಳ ಕಲೆಯ ಕುರಿತು ಅನೇಕ ಲೇಖನಗಳಿದ್ದು; ಅವುಗಳಲ್ಲಿ ಮೂರು ಲೇಖನಗಳು ಕೊಪ್ಪಳ ಜಿಲ್ಲೆಯ ಚಿತ್ರಕಲೆಯ ಬಗ್ಗೆ ಮಾಹಿತಿ ನೀಡುತ್ತವೆ. ಡಾ. ವೀರೇಶ ಬಡಿಗೇರ ಅವರ ಲೇಖನವು ಕಿನ್ನಾಳ ವರ್ಣಚಿತ್ರಕಲೆಯ ಬಗ್ಗೆ ವಿವರಿಸಿದ್ದಾರೆ. ಡಾ. ಯಾದಪ್ಪ ಪರದೇಶಿಯವರ ಕರ್ನಾಟಕದ ಗುಹಾ ಚಿತ್ರಗಳು ಮತ್ತು ಕರ್ನಾಟಕದ ಭಿತ್ತಿಚಿತ್ರಕಲೆ ಎಂಬ ಲೇಖನಗಳಲ್ಲಿ ಅನುಕ್ರಮವಾಗಿ ಕೊಪ್ಪಳ ಜಿಲ್ಲೆಯ ಆದಿಮಾನವ ಚಿತ್ರಗಳು ಮತ್ತು ಕೊಪ್ಪಳ ಜಿಲ್ಲೆಯ ಶಿಷ್ಟಪದ ಚಿತ್ರಕಲೆಯ ಬಗ್ಗೆ ಸಾಂದರ್ಭಿಕವಾಗಿ ವಿವರಿಸಿದ್ದಾರೆ.

೨೦೦೫ರಲ್ಲಿ ಅಲ್ಲಮಪ್ರಭು ಬೆಟ್ಟದೂರ ಅವರು ಸಂಪಾದನೆ ಮಾಡಿದ **ಕೊಪ್ಪಳ ಜಿಲ್ಲಾ ದರ್ಶನ**[೧೫] ಎಂಬ ಪುಸ್ತಕದಲ್ಲಿ ಕೊಪ್ಪಳ ಜಿಲ್ಲೆಯ ಆದಿಮಾನವ ಚಿತ್ರಕಲೆ, ಶಿಷ್ಟಪದ ಚಿತ್ರಕಲೆ ಮತ್ತು ಜನಪದ ಚಿತ್ರಗಳನ್ನು ಕುರಿತು ಸ್ಥೂಲವಾಗಿ ಹೇಳಲಾಗಿದೆ. ೨೦೦೬ರಲ್ಲಿ ರವಿನಾಯಕ ಎಂಬುವರು ತಮ್ಮ ಎಂ.ಫಿಲ್ ಪದವಿಗಾಗಿ **ಕಿನ್ನಾಳ ಕಲೆ**[೧೬] ಎಂಬ ವಿಷಯ ಕುರಿತು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇಲ್ಲಿ ಕಿನ್ನಾಳ ಕಲೆಯ ಗೊಂಬೆಗಳ ತಯಾರಿಕೆ, ಬಣ್ಣ ತಯಾರಿಕೆ, ಚಿತ್ರರಚನೆ ಮುಂತಾದ ಅಂಶಗಳ ಬಗ್ಗೆ ಹೇಳಲಾಗಿದೆ. ೨೦೦೮ರಲ್ಲಿ ಇರ್ಫಾನ್ ಹಬೀಬ್ ಅವರು **ಪೂರ್ವೇತಿಹಾಸ**[೧೭] ಎಂಬ ಕೃತಿಯನ್ನು ರಚಿಸಿದ್ದು, ಇಲ್ಲಿ ಕೊಪ್ಪಳ ಜಿಲ್ಲೆಯ ಶಿಲಾಯುಗ ಚಿತ್ರಗಳ ಬಗ್ಗೆ ಸಾಂಧರ್ಬಿಕವಾಗಿ ಉಲ್ಲೇಖಿಸಲಾಗಿದೆ.

೨೦೧೦ರಲ್ಲಿ ಎಲ್. ಶ್ರೀನಿವಾಸ್‌ರವರು **ಹಂಪಿ ಪರಿಸರದ ಆದಿ ಮಾನವ ನೆಲೆಗಳು**[೧೮] ಎಂಬ ಪುಸ್ತಕವನ್ನು ರಚನೆ ಮಾಡಿದ್ದು, ಇದರಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಆದಿ ಮಾನವ ಚಿತ್ರಗಳ ಬಗ್ಗೆ ವಿವರಿಸಿದ್ದಾರೆ. ಇದೇ ಅವಧಿಯಲ್ಲಿ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್

---

೧೩. ಡಾ. ಕೆ. ಎಂ. ಸುರೇಶ (ಸಂ.) : ಕರ್ನಾಟಕ ದೇವಾಲಯ ಕೋಶ – ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ. ೨೦೦೧

೧೪. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ, ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ. ೨೦೦೩

೧೫. ಅಲ್ಲಮಪ್ರಭು ಬೆಟ್ಟದೂರ (ಸಂ.) : ಕೊಪ್ಪಳ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲ್ಬರ್ಗಾ ವಿ.ವಿ. ಗುಲ್ಬರ್ಗಾ. ೨೦೦೫

೧೬. ರವಿನಾಯಕ : ಕಿನ್ನಾಳ ಕಲೆ – ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬

೧೭. ಇರ್ಫಾನ್ ಹಬೀಬ್ : ಪೂರ್ವೇತಿಹಾಸ, ಚಿಂತನ ಪುಸ್ತಕ ಶಿರಸಿ. ೨೦೦೮

೧೮. ಎಲ್. ಶ್ರೀನಿವಾಸ : ಹಂಪಿ ಪರಿಸರದ ಆದಿ ಮಾನವ ನೆಲೆಗಳು, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ. ೨೦೧೦

ಅವರು **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ್**[೨೯] ಎಂಬ ಕೃತಿಯನ್ನು ರಚಿಸಿದ್ದು, ಇದರಲ್ಲಿ ಸಾಂಧರ್ಭಿಕವಾಗಿ ಜಿಲ್ಲೆಯ ಚಿತ್ರಕಲೆಯ ಬಗ್ಗೆ ಉಲ್ಲೇಖಿಸಲಾಗಿದೆ.

೨೦೧೧ರಲ್ಲಿ ಸಾಯಿಬಣ್ಣ ಮೆಲಕಾರ ಅವರು **ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗ ಸಂಸ್ಕೃತಿ**[೩೦] ಎಂಬ ಪುಸ್ತಕವನ್ನು ರಚಿಸಿದ್ದು, ಇದರಲ್ಲಿಯು ಸಾಂದರ್ಭಿಕವಾಗಿ ಜಿಲ್ಲೆಯ ಆದಿ ಮಾನವ ಚಿತ್ರಕಲೆಯ ಬಗ್ಗೆ ಹೇಳಲಾಗಿದೆ. ೨೦೧೨ರಲ್ಲಿ ರಾಘವೇಂದ್ರರವರು **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ**[೩೧] ಎಂಬ ವಿಷಯದ ಬಗ್ಗೆ ಎಂ.ಫಿಲ್ ಪ್ರಬಂಧ ರಚನೆ ಮಾಡಿದ್ದು, ಇದರಲ್ಲಿ ಜಿಲ್ಲೆಯ ಆದಿಮಾನವ ಚಿತ್ರಕಲೆಯನ್ನು ತಾಲೂಕಾವಾರು ವಿಂಗಡಿಸಿಕೊಂಡು ವಿವರಿಸಲಾಗಿದೆ. ೨೦೧೨ರಲ್ಲಿ ಡಾ.ಎಸ್.ಸಿ.ಪಾಟೀಲ್ ಹಾಗೂ ಡಾ.ಪಿ.ಕೆ ಖಂಡೋಬಾ ಅವರ ಸಂಪಾದನೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ **ಹೈದ್ರಾಬಾದ ಕರ್ನಾಟಕದ ಲಲಿತಕಲೆಗಳ ಕೋಶ**[೩೨] ಗ್ರಂಥದಲ್ಲಿ ಕೊಪ್ಪಳ ಜಿಲ್ಲೆಯ ಹಲವಾರು ಕಲಾವಿದರ ಜೀವನ ಕಲಾಸಾಧನೆಯ ಕುರಿತ ಸಮೀಕ್ಷೆ ಇಲ್ಲಿ ಮಾಡಲಾಗಿದೆ.

ಇವುಗಳಲ್ಲದೆ ಕೊಪ್ಪಳ ಜಿಲ್ಲೆಯ ಚಿತ್ರಕಲೆಯ ಬಗ್ಗೆ ಅದರಲ್ಲೂ ವಿಶೇಷವಾಗಿ ಕಿನ್ನಾಳ ಕಲೆ ಮತ್ತು ಕಲಾವಿದರ ಬಗ್ಗೆ ಸುಮಾರು ೩೦ಕ್ಕೂ ಅಧಿಕ ಬಿಡಿಲೇಖನಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವುಗಳಲ್ಲದೇ ಕರ್ನಾಟಕ ಇತಿಹಾಸವನ್ನು ಹೇಳುವಾಗ ಮತ್ತು ಕಲಾಸಂಸ್ಕೃತಿಯನ್ನು ಬಿಂಬಿಸುವಾಗ ಸಾಂದರ್ಭಿಕವಾಗಿ ಚಿತ್ರಕಲೆಯ ಉಲ್ಲೇಖಗಳು ಅಲ್ಲಲ್ಲಿ ಬಳಕೆಯಾಗಿದ್ದು ಕಂಡುಬರುತ್ತದೆ. ಇವೆಲ್ಲವುಗಳನ್ನು ಗಮನಿಸಿದಾಗ ಕೊಪ್ಪಳ ಜಿಲ್ಲೆಯ ಚಿತ್ರಕಲೆಯ ಕಲಾಪ್ರಕಾರಗಳ ಬಗ್ಗೆ ಬಿಡಿಯಾದ ಲೇಖನಗಳು ಮತ್ತು ಚಿಕ್ಕಪುಟ್ಟ ಸಂಶೋಧನೆಗಳು ಒಂದು ಪ್ರದೇಶಕ್ಕೆ ಒಳಗೊಂಡಂತೆ ಒಟ್ಟಾರೆ ಜಿಲ್ಲೆಯ ಕಲಾಪರಂಪರೆಯನ್ನು ಕುರಿತಂತೆ ಸಂಶೋಧನೆಗಳು ಇದುವರೆಗೆ ನಡೆಯದೇ ಇರುವುದು ಕಂಡುಬರುತ್ತದೆ. ಇಂತಹ ಅಂಶಗಳ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಚಿತ್ರಕಲೆಯ ಕುರಿತು ಸಮಗ್ರವಾಗಿ ಅಧ್ಯಯನ ನಡೆಯದೇ ಇರುವುದನ್ನು ಗಮನಿಸಿ ಪ್ರಸ್ತುತ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಒಟ್ಟು ಏಳು ಅಧ್ಯಯನಗಳನ್ನಾಗಿ ವಿಂಗಡಿಸಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯದ ಕುರಿತು ಅದರ ಸಂಕ್ಷಿಪ್ತ ರೂಪದ ವಿವರವನ್ನು ಇಲ್ಲಿ ಹೇಳಲಾಗಿದೆ.

---

೨೯. ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು ಸಾಂಸ್ಕೃತಿ ಇತಿಹಾಸ, ಮೇಘನ ಪ್ರಕಾಶನ, ಕೊಪ್ಪಳ. ೨೦೧೦

೩೦. ಡಾ. ಸಾಯಿಬಣ್ಣ ಕ. ಮೇಲಕರ : ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗದ ಸಂಸ್ಕೃತಿ, ಭಾರತ ಸಿಂಧೂರಶ್ಮಿ ಪ್ರಕಾಶನ, ಧಾರವಾಡ. ೨೦೧೧

೩೧. ರಾಘವೇಂದ್ರ : ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೨

೩೨. ಡಾ. ಎಸ್. ಸಿ. ಪಾಟೀಲ, ಡಾ. ಪಿ. ಕೆ. ಖಂಡೋಬಾ (ಸಂ.) : ಹೈದ್ರಾಬಾದ್ –ಕರ್ನಾಟಕ ಲಲಿತಕಲೆಗಳ ಕೋಶ, ಗುಲಬರ್ಗಾ ಪ್ರಸಾರಾಂಗ, ಗುಲಬರ್ಗಾ. ೨೦೧೨

ಅಧ್ಯಾಯ : ಒಂದು – ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ ಕುರಿತು ವಿವರಿಸಲಾಗುವುದು.

ಅಧ್ಯಾಯ : ಎರಡು– ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿ

ಪ್ರಸ್ತುತ ಅಧ್ಯಾಯದಲ್ಲಿ ಕೊಪ್ಪಳ ಜಿಲ್ಲೆಗೆ ಮುಂಚೆ ಇರುವ ಹೆಸರುಗಳು, ಅದನ್ನಾಳಿದ ಅನೇಕ ಅರಸುಮನೆತನಗಳು, ಅಲ್ಲಿನ ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಇತಿಹಾಸವನ್ನು ಸ್ಥೂಲವಾಗಿ ಅಧ್ಯಯನ ಮಾಡಲಾಗುವುದು.

ಅಧ್ಯಾಯ : ಮೂರು – ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಪ್ರಸ್ತುತ ಅಧ್ಯಾಯದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ದೊರೆಯುವಂತಹ ಅನೇಕ ಆದಿಮಾನವನ ನೆಲೆಗಳ ಕ್ಷೇತ್ರಕಾರ್ಯ ಮಾಡಿ, ಅಲ್ಲಿರುವ ಚಿತ್ರಗಳ ಛಾಯಾಚಿತ್ರಣ ಮಾಡಿಕೊಂಡು ಅದರ ಮಾಹಿತಿಯನ್ನು ಸಂಗ್ರಹಿಸಿ, ಅಂತಹ ತಾಣಗಳನ್ನು ಸಂಶೋಧಿಸಿ ಚಿತ್ರಗಳ ವಿಷಯದ ಕುರಿತು ವಿಶ್ಲೇಷಣೆಯನ್ನು ನೀಡಲಾಗುವುದು ಹಾಗೂ ಕಲಾಕೃತಿಗಳ ಚಿತ್ರಣಗಳನ್ನು ಅಧ್ಯಯನದ ಕೊನೆಯಲ್ಲಿ ಬಳಸಿಕೊಳ್ಳಲಾಗುವುದು.

ಅಧ್ಯಾಯ : ನಾಲ್ಕು – ಕೊಪ್ಪಳ ಜಿಲ್ಲೆಯ ಜನಪದ ಚಿತ್ರಕಲೆ

ಈ ಅಧ್ಯಾಂಯುದಲ್ಲಿ ಕೊಪ್ಪಳ ಜಿಲ್ಲೆಂಯುಲ್ಲಿ ಬರುವ ಕಿನ್ನಾಳಕಲೆಂಯುನ್ನು ಮುಖ್ಯವಾಗಿಟ್ಟುಕೊಂಡು ಇನ್ನು ಹಲವಾರು ಜನಪದ ಕಲೆಗಳನ್ನು ಸಹ ಈ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗುವುದು. ಹಾಗೂ ಈ ಕಲೆಯ ಇತಿಹಾಸ, ಬೆಳೆದುಬಂದ ರೀತಿ, ದೊರಕಿರುವ ಮಣ್ಣನೆ ಕುರಿತು ಇಲ್ಲಿ ಸ್ಥೂಲವಾಗಿ ಹೇಳಲಾಗುವುದು. ಹಾಗೂ ಕಲಾಕೃತಿಗಳ ಚಿತ್ರಣಗಳನ್ನು ಅಧ್ಯಯನದ ಕೊನೆಯಲ್ಲಿ ಬಳಸಿಕೊಳ್ಳಲಾಗುವುದು.

ಅಧ್ಯಾಯ : ಐದು – ಕೊಪ್ಪಳ ಜಿಲ್ಲೆಯ ಶಿಷ್ಟಪದ ಚಿತ್ರಕಲೆ

ಕೊಪ್ಪಳ ಜಿಲ್ಲೆಯಲ್ಲಿರುವಂತಹ ಅನೇಕ ಶಿಷ್ಟಪದ ಚಿತ್ರಕಲೆ ಕುರಿತು ಸಮಗ್ರವಾದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅದರ ಇತಿಹಾಸ, ಬಣ್ಣಗಾರಿಕೆ, ಅವು ಚಿತ್ರಿತವಾಗಿರುವ ಕಾಲಮಾನ ಹಾಗೂ ಕಲಾಕೃತಿಗಳ ಚಿತ್ರಣಗಳನ್ನು ಅಧ್ಯಯನದ ಕೊನೆಯಲ್ಲಿ ಬಳಸಿಕೊಳ್ಳಲಾಗುವುದು.

ಅಧ್ಯಾಯ : ಆರು – ಕೊಪ್ಪಳ ಜಿಲ್ಲೆಯ ಸಮಕಾಲಿನ ಕಲೆ ಮತ್ತು ಕಲಾವಿದರು

ಪ್ರಸ್ತುತ ಅಧ್ಯಾಯದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಬರುವ ಸಮಕಾಲೀನ ಕಲೆ ಹಾಗೂ ಕಲಾವಿದರ ಕುರಿತಾಗಿದ್ದು, ಕಲಾವಿದರ ಹಾಗೂ ಹಲವಾರು ಹಿರಿಯ ನಾಗರಿಕರ ಜೊತೆ ಸಂದರ್ಶನ ಮಾಡಿ ಈ ಅಧ್ಯಯನಕ್ಕೆ ಒಳಪಡಿಸಿಕೊಳ್ಳಾಗುವುದು.

ಅಧ್ಯಾಯ : ಏಳು – ಸಮಾರೋಪ

ಈ ಅಧ್ಯಾಯ ಸಮಾರೋಪವಾಗಿದ್ದು, ಇಲ್ಲಿ ಮೇಲಿನ ಏಳು ಅಧ್ಯಾಯಗಳ ಫಲಿತಗಳ ಕುರಿತು ವಿವರಿಸಲಾಗುವುದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಕೊಪ್ಪಳ ಜಿಲ್ಲೆಯ ಚಿತ್ರಕಲೆಯ ಕುರಿತಾಗಿದ್ದು, ವಿಶೇಷವಾಗಿ ಕೊಪ್ಪಳ ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ಕೇಂದ್ರವಾಗಿಟ್ಟುಕೊಂಡು ಕೊಪ್ಪಳ ಜಿಲ್ಲೆಯಲ್ಲಿ ಬರುವ ಅನೇಕ ಕಲೆಗಳು, ಕಲಾವಿದರು, ಕಿನ್ನಾಳಕಲೆ, ಭಿತ್ತಿಚಿತ್ರಕಲೆ, ಜನಪದಕಲೆ, ಆದಿಮಾನವನ ಕಲೆಗಳ ತಾಣಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವೈಧಾನಿಕತೆ

ಈ ಅಧ್ಯಯನಕ್ಕೆ ಪ್ರಮುಖವಾಗಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗುವುದು. ೧. ಮೂಲ ಆಕರ ಸಾಮಗ್ರಿ, ೨. ಆನುಷಂಗಿಕ ಆಕರ ಸಾಮಗ್ರಿ. ಈ ಎರಡು ಮೂಲಗಳಿಂದ ವಿಷಯ ಸಂಗ್ರಹಣೆ ಮಾಡಲಾಗುವುದು.

೧. ಮೂಲ ಆಕರ ಸಾಮಗ್ರಿ

ಸಂಶೋಧನ ಅಧ್ಯಯನದ ಮೂಲಕ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ಇಲ್ಲಿ ಕೊಪ್ಪಳದಲ್ಲಿ ದೊರೆಯುವ ಆದಿಮಾನವನ ನೆಲೆಗಳು, ಕಲಾವಿದರು, ಕಲಾಕೃತಿಗಳು, ಜನಪದ ಚಿತ್ರಕಲೆ, ಶಿಷ್ಟಪದ ಚಿತ್ರಕಲೆಗಳ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯ ಮಾಡಲಾಗುವುದು. ಇದರಲ್ಲಿ ಸಂದರ್ಶನ, ಧ್ವನಿಗ್ರಹಣ, ಛಾಯಾಚಿತ್ರಣ ಮುಂತಾದ ಸಂಶೋಧನ ಅಧ್ಯಯನಕ್ಕೆ ಸಂಬಂಧಪಟ್ಟಿರುವ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನ ಮಾಡಲಾಗುವುದು.

ಸಂದರ್ಶನ

ಇಲ್ಲಿ ವಿಶೇಷವಾಗಿ ಕೊಪ್ಪಳ ಜಿಲ್ಲೆಯಲ್ಲಿರುವ ಅನೇಕ ಕಲಾವಿದರ ಹಾಗೂ ಅವರ ವಂಶಸ್ಥರ, ದೇವಸ್ಥಾನಗಳಲ್ಲಿರುವ ಪೂಜಾರಿಗಳ ಸಂದರ್ಶನ ಮಾಡಿಚಿತ್ರಕಲೆಯನ್ನು ಬೆಳೆಸಿ ಪೋಷಿಸಿದ ಅನೇಕ ಮಾಹಿತಿಗಳನ್ನು ಸಂಗ್ರಹಿಸಲಾಗುವುದು. ಜೊತೆಗೆ ಕೊಪ್ಪಳ ಜಿಲ್ಲೆಯ ಚಿತ್ರಕಲೆಯ ಕುರಿತು ಹೆಚ್ಚಿನ ವಿಷಯವನ್ನು ತಿಳಿದುಕೊಂಡಿರುವ ನಾಡಿನ ಪ್ರಮುಖ ವಿದ್ವಾಂಸರನ್ನು ಸಂದರ್ಶಿಸುವುದಲ್ಲದೇ ಕೆಲವೊಂದು ಸಂದರ್ಭದಲ್ಲಿ ಅವರಜೊತೆ ಪತ್ರದೊಂದಿಗೆ ಸಂಪರ್ಕಿಸಿ, ಅಮೂಲ್ಯವಾದ ಮಾಹಿತಿಯನ್ನು ಸಂಗ್ರಹಿಸಿ, ಸಂದರ್ಭೋಚಿತವಾಗಿ ಅಧ್ಯಯನಗಳಲ್ಲಿ ಬಳಸಿಕೊಳ್ಳಲಾಗುತ್ತದೆ.

ಛಾಯಾಚಿತ್ರಣ

ಇಲ್ಲಿ ವಿಶೇಷವಾಗಿ ಕೊಪ್ಪಳ ಜಿಲ್ಲೆಯಲ್ಲಿ ಬರುವ ಅನೇಕ ಕಲಾಪ್ರಕಾರಗಳು, ಪ್ರಾಗೈತಿಹಾಸಿಕ ಚಿತ್ರಗಳು, ಕಿನ್ನಾಳ ಕಲೆ, ಜಿಲ್ಲೆಯ ಹಲವಾರು ಕಡೆಗಳಲ್ಲಿ ಸಿಗುವ ಭಿತ್ತಿಚಿತ್ರಕಲೆ, ಹಲವಾರು ಕಲಾವಿದರ ಕಲಾಕೃತಿಗಳ ಕುರಿತು ಆ ಎಲ್ಲಾ ಸ್ಥಳಗಳಿಗೆ ಹೋಗಿ, ಕ್ಷೇತ್ರಕಾರ್ಯ ಕೈಗೊಳ್ಳಲಾಗುವುದು. ಅಲ್ಲಿರುವ ಮೂಲ ಕಲಾಕೃತಿಗಳ ಛಾಯಾಚಿತ್ರಣ ಮಾಡಲಾಗುವುದು. ಅದರಲ್ಲಿ ಭಿತ್ತಿಚಿತ್ರಗಳು, ಜನಪದ ಚಿತ್ರಗಳು, ಶಿಷ್ಟಪದ ಚಿತ್ರಗಳು ಅಷ್ಟೇ ಅಲ್ಲದೆ ಇತರ ಕಲಾಶೈಲಿಗಳ ಪ್ರಭಾವದಿಂದ ರಚನೆಗೊಂಡ ಕಲಾಕೃತಿಗಳನ್ನು ವರ್ಗೀಕರಿಸಿಕೊಂಡು ಬಳಸಿಕೊಳ್ಳಲಾಗುವುದು.

೨. ಆನುಷಂಗಿಕ ಆಕರ ಸಾಮಗ್ರಿ

ಸಂಶೋಧನ ಮಹಾಪ್ರಬಂಧಗಳು, ಪ್ರಕಟಿತ, ಅಪ್ರಕಟಿತ ಕೃತಿಗಳು, ನಿಘಂಟುಗಳು, ಗೆಝುಟಿಯರ್‌ಗಳು, ವಿಶ್ವಕೋಶಗಳು, ಚಿತ್ರಕಲೆಗೆ ಸಂಬಂಧಪಟ್ಟಂತೆ ಪ್ರಕಟಿತವಾದ ಲೇಖನಗಳು ಮತ್ತು ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಶೋಧನ ಲೇಖನಗಳು ಹಾಗೂ ಇಂದಿನ ತಾಂತ್ರಿಕ ಯುಗದ ಅವಿಭಾಜ್ಯ ಅಂಗವಾಗಿರುವ ಅಂತರ್ಜಾಲದ ಮೂಲಕವೂ ಸಹ ಈ ಕೊಪ್ಪಳ ಜಿಲ್ಲೆಯ ಚಿತ್ರಕಲೆಗೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡು ಸಂಶೋಧನ ಪ್ರಬಂಧವನ್ನು ಸಿದ್ಧಪಡಿಸಲಾಗುವುದು.

❑❑❑

[illegible]

[illegible] - [illegible]

ಕೊಪ್ಪಳ ಪ್ರದೇಶವು ಪ್ರಾಗೈತಿಹಾಸಕಾಲದಿಂದ ಇಂದಿನವರೆಗೆ ವಿವಿಧ ರೀತಿಯ ಜನಸಮುದಾಯಗಳನ್ನು ಕಂಡ ಪ್ರದೇಶವಾಗಿದೆ. ಅಲ್ಲದೆ ಮೌರ್ಯರಿಂದ ಸ್ಥಳೀಯ ಸಂಸ್ಥಾನಿಕರವರೆಗೆ ಹಲವಾರು ರಾಜವಂಶಗಳು ಈ ಪ್ರದೇಶವನ್ನು ಆಳ್ವಿಕೆ ಮಾಡಿವೆ. ಈ ಹಿನ್ನೆಲೆಯಲ್ಲಿ ಕೊಪ್ಪಳವು ಭವ್ಯ ಐತಿಹಾಸಿಕ ಪರಂಪರೆಯನ್ನು ಹೊಂದಿದ ಪ್ರದೇಶವಾಗಿದ್ದು, ಅದರ ಪ್ರಮುಖ ಅಂಶಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಪೂರಕವಾಗಿ ಪರಿಶೀಲಿಸಲು ಉದ್ದೇಶಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಇತಿಹಾಸವು ಮೌರ್ಯರಿಂದ ಅಧಿಕೃತವಾಗಿ ದಾಖಲಿಸಲ್ಪಟ್ಟರು. ಆದಿ ಮಾನವ ಹಂತದ ಜನವಸತಿ ಈ ಜಿಲ್ಲೆಯಲ್ಲಿ ವಾಸಿಸಿದ ಕುರುಹುಗಳನ್ನು ವಿದ್ವಾಂಸರು ಕಂಡು ಹಿಡಿದ ಹಿನ್ನೆಲೆಯಲ್ಲಿ ಅದೇ ಕಾಲಘಟ್ಟದಿಂದ ಜಿಲ್ಲೆಯ ಇತಿಹಾಸವನ್ನು ರೂಪಿಸುವ ಪ್ರಯತ್ನ ಇಲ್ಲಿದೆ. ಕೊಪ್ಪಳ ಜಿಲ್ಲೆಯಲ್ಲಿ ಅತ್ಯಂತ ಪ್ರಾಚೀನ ಮಾನವನ ವಸತಿಯ ನೆಲೆಗಳು ಕುಷವಿಗಿ ತಾಲೂಕಿನ ಹನುಮಸಾಗರಧಲ್ಲಿ ಕಂಡು ಬಂದಿವೆ. ಈ ನೆಲೆಯಲ್ಲಿ ಕಂಡು ಬಂದಿರುವ ಉಪಕರಣಗಳನ್ನು ಪರಿಶೀಲಿಸಿ ಇವುಗಳು ಹಳೆಯ ಶಿಲಾಯುಗ ಕಾಲಕ್ಕೆ ಸೇರುತ್ತವೆ ಎಂದು ಹೇಳಲಾಗಿದೆ.[೧]

ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಗೆ ಸಂಬಂಧಪಟ್ಟಂತೆ ಜಿಲ್ಲೆಯಲ್ಲಿ ಎರಡು ನೆಲೆಗಳು ಕಂಡುಬಂದಿವೆ. ಗಂಗಾವತಿ ತಾಲೂಕಿನ ಮಲ್ಲಾಪುರ ಮತ್ತು ಆನೆಗುಂದಿಗಳಲ್ಲಿ ಈ ಕಾಲದ ಉಪಕರಣಗಳು ಕಂಡುಬಂದಿವೆ. ನವಶಿಲಾಯುಗ ಕಾಲಕ್ಕೆ ಬಂದಂತೆ ಜಿಲ್ಲೆಯಲ್ಲಿ ಜನವಸತಿಯ

---

೦೧. ಡಾ.ಸಾಯಬಣ್ಣ ಕೆ.ಮೇಲಕಾರ : ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗ ಸಂಸ್ಕೃತಿ, ಪುಟ–೧೧

ನೆಲೆಗಳು ಹೆಚ್ಚಾದಂತೆ ಕಂಡುಬರುತ್ತದೆ. ಈ ಅವಧಿಗೆ ಸೇರಿದ ನೆಲೆಗಳು ಜಿಲ್ಲೆಯ ಕಕ್ಕರಗೋಳ, ಕುಂಟೋಜಿ, ರಾಮದುರ್ಗ, ಹೆಬ್ಬಾಳ, ಹೊಸಕೇರ, ತಿಪ್ಪನಾಳ, ಅರಳಹಳ್ಳಿ, ಅರಹಾಳ, ಇಂದುರ್ಗಿ, ಇಂದರ್ಗಿ, ಕೊಪ್ಪಳ, ಕಾತರಾಳ, ಗುನಾಳ, ಚಿಕ್ಕರಾಮಾ ಪೂರ, ತಾವರಗೇರ, ಬಂಡಿಹರ್ಲಾಪೂರ, ಮಲ್ಲಾಪೂರ, ರಾಮಪುರ, ವೆಂಕಟಾಪುರ, ಚಿಕ್ಕಬೆನಕಲ್ ಮತ್ತು ಹಿರೇಬೆನಕಲ್‌ಗಳಲ್ಲಿ ಕಂಡುಬಂದಿವೆ.[೨]

ತಾಮ್ರಯುಗಕ್ಕೆ ಬಂದಂತೆ ಕೊಪ್ಪಳ ಜಿಲ್ಲೆಯಲ್ಲಿ ಜನವಸತಿ ಮತ್ತಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಈ ಕಾಲಮಾನಕ್ಕೆ ಸಂಬಂಧಪಟ್ಟ ಒಟ್ಟು ೨೫ ನೆಲೆಗಳು ಕಂಡು ಬಂದಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕನಕಗಿರಿ, ಕೆರೆಹಳ್ಳಿ, ಅರಹಾಳ, ಕೆಸರಟ್ಟಿ, ಜರಕುಂಟಿ, ಇಂದರ್ಗಿ ಇವುಗಳನ್ನು ಹೆಸರಿಸಬಹುದು.

ಬೃಹತ್ ಶಿಲಾ ಸಂಸ್ಕೃತಿಯ ಕಾಲಕ್ಕೆ ಜಿಲ್ಲೆಯ ಜನವಸತಿ ಮತ್ತುಷ್ಟು ಹೆಚ್ಚಾಗಿದ್ದಲ್ಲದೇ ಈ ಕಾಲದ ಹೆಚ್ಚಿನ ಉಪಕರಣಗಳು ಈ ಕಾಲದ ಗುಹಾ ವರ್ಣ ಚಿತ್ರಗಳು, ಶಿಲಾಗೋರಿಗಳು, ಮೃತ್ಪಾತ್ರೆಗಳು ಪಾತ್ರೆಗಳ (ಮಣ್ಣಿನ ಪಾತ್ರೆ), ಅವುಗಳ ಮೇಲಿನ ಚಿತ್ರ ವಿನ್ಯಾಸಗಳು, ವಿವಿಧ ರೀತಿಯ ಆಯುಧ ಮತ್ತು ಉಪಕರಣಗಳು ಈ ಕಾಲದ ಜನರ ಸಾಂಸ್ಕೃತಿಕ ಬದುಕನ್ನು ತೋರಿಸುತ್ತವೆ. ಬೃಹತ್ ಶಿಲಾಯುಗಕ್ಕೆ ಸಂಬಂಧಪಟ್ಟ ನೆಲೆಗಳು ಜಿಲ್ಲೆಯಲ್ಲಿ ೨೫ಕ್ಕಿಂತ ಹೆಚ್ಚಿನ ಕಡೆಗೆ ಕಂಡುಬಂದಿದೆ ಅವುಗಳಲ್ಲಿ ಮುಖ್ಯವಾದವುಗಳೆಂದರೆ ಚಿಕ್ಕ ಬೆನಕಲ್, ಹಿರೆಬೆನಕಲ್, ಕೊಪ್ಪಳ, ಆನೆಗುಂದಿ, ಚಿಕ್ಕ ರಾಮಪುರ, ಮಲ್ಲಾಪುರ, ಶಿವಪೂರ, ಇಂದರ್ಗಿ, ತಾವರಗೇರಾ, ಬಿಳೆಬಾವಿ, ಹೆಮಗುಡ್ಡ, ಮರಕುಂಬಿ ಮುಂತಾದವುಗಳನ್ನು ಹೆಸರಿಬಹುದು.

ಇತಿಹಾಸದ ಆರಂಭಕಾಲ

ಕೊಪ್ಪಳ ಜಿಲ್ಲೆಯ ಇತಿಹಾಸವನ್ನು ಗಮನಿಸಿದಾಗ ಮೌರ್ಯರಿಂದ ಈ ಭಾಗದಲ್ಲಿ ಅಧಿಕೃತ ದಾಖಲೆಗಳು ದೊರಕಲು ಪ್ರಾರಂಭಿಸಿದವು. ಕೊಪ್ಪಳದ ಪಾಲ್ಕಿಗುಂಡು, ಹಾಗೂ ಗವಿಮಠಗಳಲ್ಲಿರುವ ಅಶೋಕನ ಶಾಸನಗಳು ಈ ಭಾಗವು ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದನ್ನು ತಿಳಿಸುತ್ತವೆ.[೩] ಮೌರ್ಯರ ಅವನತಿಯ ನಂತರ ಈ ಭಾಗವು ಶಾತವಾಹನರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದು ತಿಳಿದುಬರುತ್ತದೆ. ಇತ್ತೀಚೆಗೆ ಈ ಜಿಲ್ಲೆಯ ಸಿಂಧಗಿಯಲ್ಲಿ ಉತ್ಖನನ ನಡೆಸಿದಾಗ ಶಾತವಾಹನರ ಕಾಲದ ಮಡಿಕೆ ಚೂರುಗಳು, ಮಣಿಗಳು, ಶಂಖದಿಂದ ಮಾಡಿದ ಆಭರಣಗಳು, ಇಟ್ಟಿಗೆಗಳು ಮತ್ತು ಸೀಸದ ನಾಣ್ಯಗಳು, ಕಂಡು ಬಂದಿವೆ. ಇವು ಶಾತವಾಹನರ ಕಾಲದ ಸಂಸ್ಕೃತಿ ಮತ್ತು ಕಲಾವಂತಿಕೆಯನ್ನು ಬಿಂಬಿಸುತ್ತವೆ.

---

೦೨. ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಪುಟ-೩

೦೩. ಡಾ.ಶರಣಬಸಪ್ಪ ಕೋಲ್ಕಾರ್ : ಶಿಲಾಯುಗದ ಗವಿ ಚಿತ್ರಗಳು, ಪುಟ-೫೮

ಶಾತವಾಹನರ ನಂತರ ಕದಂಬ ಅರಸರ ಆಡಳಿತಕ್ಕೆ ಈ ಪ್ರದೇಶವು ಒಳಪಟ್ಟ ಬಗ್ಗೆ ಆಕರಗಳು ಲಭ್ಯವಾಗಿವೆ. ಮಯೂರವರ್ಮನ ಪುನರಂವಿಮರ್ಶಿತ ಚಂದ್ರವಳ್ಳಿ ಶಾಸನದಲ್ಲಿ 'ಕುಪಣದ ಚಾಮನ' ಎಂಬ ಉಲ್ಲೇಖವಿರುವುದನ್ನು ಗಮನಿಸಿದರೆ ಈ ಪ್ರದೇಶ ಅವರ ಆಡಳಿತಕ್ಕೆ ಒಳಪಟ್ಟಿದ್ದು ತಿಳಿದುಬರುತ್ತದೆ.[೪] ಇದಲ್ಲದೆ ಜಿಲ್ಲೆಯ ಪುರ ಎಂಬ ಗ್ರಾಮದಲ್ಲಿ ಕಂಡುಬಂದ ಶಾಸನವು ಕಂದಬವಂಶದ ಮಹಾಮಂಡಳೇಶ್ವರನಾದ ಬಾಚಿದೇವ ಎಂಬವನನ್ನು ಹೆಸರಿಸುತ್ತದೆ.

ಕೊಪ್ಪಳ ಜಿಲ್ಲೆಯ ಖಚಿತವಾದ ರಾಜಕೀಯ ಚರಿತ್ರೆಯು ಬಾದಾಮಿ ಚಾಲುಕ್ಯರಿಂದ ಪ್ರಾರಂಭವಾಗುತ್ತದೆ. ಇವರ ಕಾಲದ ಇತಿಹಾಸಕ್ಕೆ ಸಂಬಂಧಪಟ್ಟಂತೆ ಜಿಲ್ಲೆಯ ಹಲಗೇರಿ, ಇಟಗಿ ಮತ್ತು ಕುಕನೂರುಗಳಲ್ಲಿ ಶಾಸನಗಳು ದೊರಕಿವೆ. ಹಲಗೇರಿಯಲ್ಲಿ ಇರುವ ವಿಜಯಾದಿತ್ಯನ ಕಾಲದ ಶಾಸನವು ಕೊಪ್ಪಳದ ಮೂರು ಜಾತಿಗಳು ಮತ್ತು ಗರೋಜ ಎಂಬ ಮುಖ್ಯಸ್ಥರನ್ನು ಹೆಸರಿಸುತ್ತದೆ. ಇಟಗಿಯ ಶಾಸನದಲ್ಲಿ 'ಯುದ್ಧಮಲ್ಲ ಸತ್ಯಾಶ್ರಯ' ಎಂಬ ಬಿರುದು ಪಡೆದ ಯುದ್ಧಮಲ್ಲನು ಇಟಗಿ ಗ್ರಾಮವನ್ನು ದಾನಪಡೆದು ಅದನ್ನು ನಾಗನಸೋಮಯಾಜಿಗೆಂದು ಬಿಟ್ಟುಕೊಟ್ಟನೆಂದು ತಿಳಿಸುತ್ತದೆ.[೫]

ಕರ್ನಾಟಕದ ಚರಿತ್ರೆಯಲ್ಲಿ ತಲಕಾಡಿನ ಗಂಗರಿಗೆ ವಿಶೇಷವಾದ ಸ್ಥಾನವಿದೆ. ಇವರು ಕೊಪ್ಪಳ ಪ್ರದೇಶದವರೆಗು ತಮ್ಮ ಸಾಮ್ರಾಜ್ಯ ವಿಸ್ತರಿಸಿದ್ದ ಬಗ್ಗೆ ಆಕರಗಳು ಲಭ್ಯವಾಗುತ್ತವೆ. ಕುಕನೂರು, ಹೆಬ್ಬಾಳ, ಇಟಗಿ ಮತ್ತು ಕೊಪ್ಪಳಗಳಲ್ಲಿ ದೊರೆಯುವ ಗಂಗರ ಕಾಲದ ಶಾಸನಗಳಿಂದ ಜಿಲ್ಲೆಯ ಅಂದಿನ ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ತೆ ಹೀಗಿತ್ತು ಎಂಬುದು ತಿಳಿದು ಬರುತ್ತದೆ. ಎರಡನೆಯ ಭೂತುಗನ ಕಾಲದ ಶಾಸನವು ಅವನು ಮಾಡಿದ ಸಹಾಯಕ್ಕೆ ಮೂರನೇಯ ಕೃಷ್ಣನು ಆತನಿಗೆ ಅನೇಕ ಪ್ರದೇಶಗಳನ್ನು ಬಳುವಳಿಯಾಗಿ ಕೊಡುತ್ತಾನೆ. ಅದರಲ್ಲಿ ಕುಕನೂರು ೩೦ ಎಂಬ ಪ್ರದೇಶವು ಒಳಗೊಂಡಿದೆ. ಕುಕನೂರಿನಲ್ಲಿ ಲಭ್ಯವಾಗಿರುವ ತಾಮ್ರಪಟ ಶಾಸನವು ಗಂಗರ ವಂಶಾವಳಿಯನ್ನು ತಿಳಿಸುತ್ತದೆ. ಇದಲ್ಲದೆ ಗಂಗರ ಕಾಲದ ನಿಶದಿ ಶಾಸನಗಳು ಕೊಪ್ಪಳದಲ್ಲಿ ದೊರಕಿವೆ. ಅವುಗಳಲ್ಲಿ ಗಂಗ ಅರಸರ ರಾಣಿಯರು ಕೊಪ್ಪಳಕ್ಕೆ ಬಂದ ವಿಷಯ, ಅವರು ಮರಣ ಹೊಂದಿದ ವಿಷಯ ತಿಳಿಸುತ್ತವೆ.[೬]

ಕರ್ನಾಟಕದಲ್ಲಿ ಬಹುದೊಡ್ಡ ಸಾಮ್ರಾಜ್ಯ ಸ್ಥಾಪಿಸಿ ಆಳ್ವಿಕೆ ಮಾಡಿದ ಬಲಿಷ್ಟ ಅರಸರಾಗಿದ್ದ ರಾಷ್ಟ್ರಕೂಟರ ಆಡಳಿತದ ವ್ಯಾಪ್ತಿಯು ಕೊಪ್ಪಳ ಪ್ರದೇಶವನ್ನು ಒಳಗೊಂಡಿತ್ತು ಎಂಬುದು ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಜಿಲ್ಲೆಯ ಇಟಗಿ, ಅರಕೇರಿ, ಕೊಪ್ಪಳ, ಸಂಕನೂರು, ಅಳವಂಡಿ,

---

೦೪. ಡಾ.ಸಾಯಬಣ್ಣ ಕೆ.ಮೇಲಕಾರ : ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ, ಪುಟ-೪೧

೦೫. ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಪುಟ-೩೮

೦೬. ಡಾ.ಅ.ಸುಂದರ (ಸಂ) : ಕರ್ನಾಟಕ ಚರಿತ್ರೆ ಸಂಪುಟ-೧, ಪುಟ-೪೫

ಉಪ್ಪಿನ ಬೇಟಗೇರಿ ಗ್ರಾಮಗಳಲ್ಲಿ ರಾಷ್ಟ್ರಕೂಟರ ಹಲವಾರು ಶಾಸನಗಳು ದೊರಕಿವೆ.[೭] ಕ್ರಿ.ಶ.೮೮೪ರ ಇಂದ್ರನ ಆಳ್ವಿಕೆಗೆ ಸಂಬಂಧ ಪಟ್ಟ ಶಾಸನವು ಕುಪಣದ ದಂಡನಾಯಕನಾದ ಮಾಮರಸನು ಕುಪಣಕ್ಕೆ ಭೇಟಿ ನೀಡಿ, ಬಸದಿಯೊಂದಕ್ಕೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಇಲ್ಲಿಯೇ ದೊರೆತ ಅಮೋಘವರ್ಷನ ಕಾಲದ ವೀರಗಲ್ಲು ಒಂದರಲ್ಲಿ ವೀರನೊಬ್ಬ ಮರಣ ಹೊಂದಿದ್ದನ್ನು ದಾಖಲಿಸಲಾಗಿದೆ. ಇಟಗಿಯಲ್ಲಿರುವ ಮೂರನೇಯ ಕೃಷ್ಣನ ಕಾಲದ ಶಾಸನವು ರಾಷ್ಟ್ರಕೂಟರು ಮತ್ತು ಗಂಗರಿಗೆ ಇರುವ ಉತ್ತಮ ಸಂಬಂಧದ ಬಗ್ಗೆ ತಿಳಿಸುತ್ತದೆ. ಇತನ ಕಾಲದ ಇನ್ನೊಂದು ಶಾಸನವು ಜಿಲ್ಲೆಯ ಹೊಸಕೇರಿಯಲ್ಲಿ ಕಂಡುಬರುತ್ತದೆ. ಮುಧೋಳದ ಕ್ರಿ.ಶ.೮೯೭ರ ಶಾಸನವು ರಾಷ್ಟ್ರಕೂಟ ಎರಡನೇ ಕೃಷ್ಣನ ಕಾಲಮಾನದ್ದಾಗಿದೆ. ಈ ಸಂದರ್ಭದಲ್ಲಿ ಮುಧೋಳದ ಮೇಲೆ ದಾಳಿ ಮಾಡಿದ ಸಂತಯ ಎಂಬುವವನ ವಿರುದ್ಧ ಹೋರಾಡಿ ಸಮಗಾರ ಚಂದ ಉರನ್ನು ಉಳಿಸಿದನೆಂದು ಶಾಸನದಲ್ಲಿ ಹೇಳಲಾಗಿದೆ. ಇದರಂತೆ ಕ್ರಿ.ಶ.೯೬೪ರ ಉಪ್ಪಿನ ಬೇಟಗೇರಿ ಶಾಸನದಲ್ಲಿ ಮೂರನೆಯ ಕೃಷ್ಣನ ಕಾಲದಲ್ಲಿ ಕೊಪ್ಪಳದ ಜಯಧೀರ ಜಿನಾಲಯಕ್ಕೆ ದತ್ತಿ ಬಿಟ್ಟ ವಿಚಾರ ಹೇಳಲಾಗಿದೆ.[೮] ಹೀಗೆ ಅನೇಕ ಶಾಸನಾಧಾರಗಳು ಮತ್ತು ಅವರ ಕಾಲದಲ್ಲಿ ಕಟ್ಟಲ್ಪಟ್ಟ ಸುಂದರ ದೇವಾಲಯಗಳು ಅವರ ಕಾಲದ ಸಾಂಸ್ಕೃತಿಕ ಹಿರಿಮೆಯನ್ನು ತಿಳಿಸುತ್ತದೆ.

ರಾಷ್ಟ್ರಕೂಟರ ನಂತರ ಕರ್ನಾಟಕದಲ್ಲಿ ಪ್ರಬಲರಾದ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಕೊಪ್ಪಳ ಜಿಲ್ಲೆಯು ಸಾಂಸ್ಕೃತಿಕವಾಗಿ ಮತ್ತಷ್ಟು ಬೆಳೆಯಿತು. ಜಿಲ್ಲೆಯಲ್ಲಿ ಇವರ ಆಡಳಿತದ ಬಗ್ಗೆ ಅನೇಕ ಶಾಸನಗಳು ಮತ್ತು ದೇವಾಲಯಗಳು ನಮಗೆ ತಿಳಿಸಿಕೊಡುತ್ತದೆ. ಕಲ್ಯಾಣದ ಚಾಲುಕ್ಯರ ಕಾಲದ ಶಾಸನಗಳು ಜಿಲ್ಲೆಯಲ್ಲಿ ಆನೆಗುಂದಿ, ಕೊಪ್ಪಳ ಮತ್ತು ತಳಕಲ್‌ಗಳಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಜಿಲ್ಲೆಯ ಮಾದಿನೂರಿನಲ್ಲಿರುವ ಶಾಸನವೊಂದು ತೈಲಪನು ಯಾಗ ಮಾಡಿದ ಕುರಿತು ಮಾಹಿತಿ ನೀಡುತ್ತದೆ. ಕೊಪ್ಪಳದಲ್ಲಿರುವ ಶಾಸನದಲ್ಲಿ ಕಲ್ಯಾಣದ ಚಾಲುಕ್ಯರ ಅರಸನಾದ ಬಕ್ಕಲದೇವನಿಗೆ ಗಂಗವಂಶದ ರಂಬಲದೇವಿಯನ್ನು ಮದುವೆ ಮಾಡಿಕೊಟ್ಟಿರುವ ವಿಷಯ ತಿಳಿಸುತ್ತದೆ.[೯] ಆನೆಗುಂದಿಯಲ್ಲಿರುವ ಇವರ ಕಾಲದ ಶಾಸನದಲ್ಲಿ ಅಹಮಲ್ಲದೇವನು ತುಂಗಭದ್ರೆಯ ದಕ್ಷಿಣಕ್ಕೆ ಸಾಗಿ ಬಂದಿದ್ದನ್ನು ತಿಳಿಸುತ್ತದೆ. ತಳಕಲ್ಲಿನಲ್ಲಿರುವ ಶಾಸನದಲ್ಲಿ ಸಾಮಂತನಾದ ಸೋಬನರಸನು ಒಳ್ಳೆಯ ಆಳ್ವಿಕೆ ಮಾಡುತ್ತಿದ್ದನೆಂದು ಇತನ ಮಾಂಡಲಿಕನಾಗಿ ಸಾವಿಯನ್ನನು ಕೂಕನೂರಿನಲ್ಲಿ ಅಧಿಕಾರ ನಡೆಸುತ್ತಿದ್ದುದನ್ನು ತಿಳಿಸಲಾಗಿದೆ. ಕಲ್ಯಾಣದ ಚಾಲುಕ್ಯರ ಆಡಳಿತದಲ್ಲಿ ಸತ್ಯಾಶ್ರಯ ಇರಿವಬೆಡಂಗನು ಪ್ರಬಲವಾದ ಆಡಳಿತ ನೀಡಿದವನಾಗಿದ್ದಾನೆ. ಈತನ ಕಾಲದ

---

೦೭. ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಪುಟ-೪೮

೦೮. ಹಂಪನಾಗರಾಜಯ್ಯ : ಕೊಪ್ಪಳ ಜಿಲ್ಲೆಯ ಶಾಸನಗಳು, ಪುಟ-೨೯

೦೯. ಪಾಟೀಲ ಬಿ.ಸಿ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ-೪೯

ಶಾಸನಗಳು ಜಿಲ್ಲೆಯ ಬಳಗೇರಿ, ಹಿರೇಮನ್ನಾಪುರ, ಕಲ್ಲೂರು, ಕೂಕನೂರುಗಳಲ್ಲಿ ಕಂಡುಬಂದಿವೆ. ಇದರಲ್ಲಿ ಹಿರೇಮನ್ನಾಪೂರದ ಶಾಸನವು ಇವರ ವಂಶಾವಳಿಯನ್ನು ಬಿಂಬಿಸುತ್ತದೆ. ಇದರಲ್ಲಿ ಸತ್ಯಾಶ್ರಯನಿಗೆ ವಿಕ್ರಮ ಎಂಬ ಮಗನಿದ್ದನು ಎಂದು ಹೇಳಿದೆ. ಆದರೆ ಕೂಕನೂರಿನಲ್ಲಿರುವ ಮತ್ತೊಂದು ಶಾಸನವು ವಿಕ್ರಮನ ಜೊತೆಗೆ ಐಯನ ಹಾಗೂ ಜಯಿಸಿಂಹ ಎಂಬ ಮೂರು ಮಕ್ಕಳು ಸತ್ಯಾಶ್ರಯನಿಗೆ ಇದ್ದರೆಂದು ತಿಳಿಸಲಾಗಿದೆ.

ಸತ್ಯಾಶ್ರಯನ ನಂತರ ಆಳ್ವಿಕೆ ಮಾಡಿದ ಕಲ್ಯಾಣ ಚಾಲುಕ್ಯರ ಇನ್ನೂ ಹಲವಾರು ಅರಸರ ಕಾಲದ ಶಾಸನಗಳು ಕೊಪ್ಪಳ ಜಿಲ್ಲೆಯಲ್ಲಿ ಅಲ್ಲಲ್ಲಿ ಕಂಡು ಬರುತ್ತವೆ. ಐದನೆಯ ವಿಕ್ರಮಾದಿತ್ಯನ ಶಾಸನವು ಕೊಪ್ಪಳದಲ್ಲಿ ಲಭ್ಯವಾಗಿದ್ದರೆ ಜಯಸಿಂಹನ ಕಾಲದ ಒಂದು ಶಾಸನವು ಗೊತಗಿ ಎಂಬ ಗ್ರಾಮದಲ್ಲಿ ದೊರಕಿದೆ. ಇವರ ನಂತರ ಒಂದನೆಯ ಸೋಮೇಶ್ವರನ ಕಾಲದ ಶಾಸನಗಳು ಜಿಲ್ಲೆಯಲ್ಲಿ ಗೋತಗಿ, ಶಿವಪುರ, ವಿಪ್ರ, ಅಳವಂಡಿಗಳಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ಅನಂತರದ ವಿಕ್ರಮಾದಿತ್ಯನ ಕಾಲದ ಶಾಸನಗಳು ಜಿಲ್ಲೆಯಲ್ಲಿ ಒಂಬತ್ತು ಕಂಡು ಬಂದಿವೆ.[೧೦] ಮೊದಲನೆಯದು ಹುಲಗಿಯಲ್ಲಿದ್ದರೆ ಕೊನೆಯದು ಕೂಕನೂರಿನಲ್ಲಿದೆ. ಈತನ ನಂತರ ಅವನ ಮಗ ಮೂರನೆಯ ಸೋಮೇಶ್ವರನು ಆಡಳಿತಕ್ಕೆ ಬಂದಿದ್ದು ಈತನ ಕಾಲದ ಶಾಸನಗಳು ಜಿಲ್ಲೆಯಲ್ಲಿ ಕಲ್ಲೂರು, ಮಾದಿನೂರು ಮತ್ತು ಕೂಕನೂರುಗಳಲ್ಲಿ ಕಂಡು ಬಂದಿವೆ. ಇವನ ಮಗನಾದ ಜಯಸಿಂಹನ ಶಾಸನಗಳು ಜಿಲ್ಲೆಯಲ್ಲಿ ಎರಡು ಕಂಡು ಬಂದಿದ್ದು ಅವು ಕುಕನೂರಿನಲ್ಲಿ ಇವೆ. ಆಮೇಲೆ ಅಧಿಕಾರಕ್ಕೆ ಬಂದ ಮೂರನೆಯ ತೈಲಪನ ಕಾಲದ ಶಾಸನಗಳು ಜಿಲ್ಲೆಯಲ್ಲಿ ಕುಕನೂರು, ಮುಧೋಳ ಮತ್ತು ಕಲ್ಲೂರುಗಳಲ್ಲಿವೆ. ನಂತರ ಅಧಿಕಾರಕ್ಕೆ ಬಂದ ನಾಲ್ಕನೆ ಸೋಮೇಶ್ವರನು ಪ್ರಭಲ ದೊರೆಯಾಗಿರಲಿಲ್ಲ. ಈತನ ಕಾಲದಲ್ಲಿ ಕಲ್ಯಾಣ ಚಾಲುಕ್ಯರ ಆಡಳಿತವು ಕ್ಷೀಣಿಸತೊಡಗಿತು. ಈತನ ಕಾಲದ ಶಾಸನಗಳು ಜಿಲ್ಲೆಯಲ್ಲಿ ಮಾದಿನೂರು ಮತ್ತು ಕಲ್ಲೂರುಗಳಲ್ಲಿ ಕಂಡುಬಂದಿವೆ. ಇವರ ಕಾಲದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಅನೇಕ ದೇವಾಲಯಗಳು ಕಟ್ಟಲ್ಪಟ್ಟಿವೆ. ಅವುಗಳಲ್ಲಿ ಏಕಕೂಟ, ದ್ವಿಕೂಟ, ತ್ರಿಕೂಟ ಮತ್ತು ಪಂಚಕೂಟ ದೇವಾಲಯಗಳಿವೆ.[೧೧] ಇಂತಹ ಅಂಶಗಳನ್ನು ಗಮನಿಸಿದಾಗ ಸಾಂಸ್ಕೃತಿಕವಾಗಿ ಕೊಪ್ಪಳ ಜಿಲ್ಲೆಯು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರಬುದ್ಧವಾಗಿ ಬೆಳೆದಿತ್ತು ಎಂದು ಹೇಳಬಹುದು.

ಕಲ್ಯಾಣಚಾಲುಕ್ಯರ ಕಾಲದಲ್ಲಿ ಕೊಪ್ಪಳ ಜಿಲ್ಲೆಯ ಆಡಳಿತವು ವೈಭವಯುತವಾಗಿ ನಡೆದರೆ ಆನಂತರ ಬಂದ ಕಲಚೂರಿಗಳು ತಮ್ಮ ಆಡಳಿತ ಕಾಲದಲ್ಲಿ ಕೊಪ್ಪಳ ಜಿಲ್ಲೆಯನ್ನು ಸಾಂಸ್ಕೃತಿಕವಾಗಿ ಕಲಾತ್ಮಕವಾಗಿ ಶ್ರೀಮಂತಗೊಳಿಸಲು ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ಜಿಲ್ಲೆಯಲ್ಲಿ ಕಲಚೂರಿಗಳ

---

೧೦. ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಪುಟ–೪೫

೧೧. ಡಾ.ಕೆ.ಎಂ.ಸುರೇಶ : ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ, ಪುಟ–೭೭

ಆಡಳಿತ ಕಾಲದ ಏಳು ಶಾಸನಗಳು ಲಭ್ಯವಾಗಿವೆ. ಕೂಕನೂರಿನ ಕ್ರಿ.ಶ.೧೧೬೩ರ ಶಾಸನವು ಬಿಜ್ಜಳನ ಕಾಲದ್ದಾಗಿದೆ. ಬಿಜ್ಜಳನು ಕಲ್ಯಾಣದಿಂದ ಆಳ್ವಿಕೆ ಮಾಡುವಾಗ ಅವನ ಕೈಕೆಳಗೆ ಅಮ್ಮಣರಸ, ಬೋಪಣ್ಣನಾಯಕ, ಬೀವರಸ, ಸಾಯಿದೇವ, ವಿಠ್ಠಪ್ಪಯ್ಯ, ಬಲದೇವ, ಮಧುಸುದನ, ಆಧಿತ್ಯದೇವ, ಸೋಮರಾಜ, ಬೊಪ್ಪದೇವ ಮತ್ತು ಚಾವುಂಡರಾಯರೆಂಬ ದಂಡನಾಯಕರು ಕೆಲಸ ನಿರ್ವಹಿಸುತ್ತಿದ್ದ ಬಗ್ಗೆ ತಿಳಿಸಿಕೊಡುತ್ತದೆ. ಕೂಕನೂರಿನಲ್ಲಿಯೇ ಇರುವ ಕ್ರಿ.ಶ.೧೧೭೦ ಶಾಸನವು ಭುಜಬಲ ಮಲ್ಲನಾದ, ರಾಯಮುರಾರಿಯಾದ ಸೋವಿದೇವರಸನು ಮುದೆನೂರು ಪ್ರದೇಶವನ್ನು ಸುಖ ಮತ್ತು ಸಂತೋಷದಿಂದ ಆಳುತ್ತಿದ್ದನೆಂದು ತಿಳಿಸಲಾಗಿದೆ.[೧೨] ಇದೇ ಊರಿನಲ್ಲಿರುವ ಕ್ರಿ.ಶ.೧೧೭೮ರ ಶಾಸನವು ಕೂಕನೂರಕು ಎಂಬ ಅಗ್ರಹಾರವನ್ನು ಕಾವ್ಯಮಯವಾಗಿ ವರ್ಣಿಸುತ್ತದೆ. ಇದಲ್ಲದೆ ಕವಲೂರು ಗ್ರಾಮದಲ್ಲಿ ಲಭ್ಯವಾಗಿರುವ ಶಾಸನವೊಂದು ಬೇರೆ ಬೇರೆ ಅರಸರ ಕಾಲಮಾನವನ್ನು ಸೂಚಿಸುತ್ತವೆ. ಇದರಲ್ಲಿ ಕ್ರಿ.ಶ. ೧೧೮೨ರ ಶಾಸನವು ಅಹಮಲ್ಲ ಎಂಬ ದೊರೆಯನ್ನು ಹೆಸರಿಸುತ್ತದೆ. ಇಟಗಿಯಲ್ಲಿ ಲಭ್ಯವಾಗಿರುವ ಕ್ರಿ.ಶ.೧೧೮೩ರ ಶಾಸನವು ತಾಮ್ರಪಟದ ಮೇಲೆ ರಚನೆಯಾಗಿದ್ದು ಕಲಚೂರಿಗಳ ವಂಶಾವಳಿಯನ್ನು ತಿಳಿಸುತ್ತದೆ. ಹೀಗೆ ಕಲಚೂರಿಗಳ ಆಡಳಿತದ ಬಗ್ಗೆ ಜಿಲ್ಲೆಯಲ್ಲಿ ಅನೇಕ ಮಾಹಿತಿ ಲಭ್ಯವಾಗುತ್ತಿವೆ.

ಕಲಚೂರಿಗಳ ನಂತರ ಕೊಪ್ಪಳ ಜಿಲ್ಲೆಯನ್ನು ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ತಮ್ಮ ತೆಕ್ಕೆಗೆ ತೆಗೆದುಕೊಂಡವರು ದೇವಗಿರಿಯ ಸೇವುಣರಾಗಿದ್ದಾರೆ. ಇವರ ಕಾಲದ ರಾಜಕೀಯವ್ಯವಸ್ಥೆಯನ್ನು ತಿಳಿಯಲು ಜಿಲ್ಲೆಯಲ್ಲಿ ನಾಲ್ಕು ಶಾಸನಗಳು ಲಭ್ಯವಾಗಿವೆ.[೧೩] ಕುಕನೂರಿನಲ್ಲಿ ಲಭ್ಯವಾದ ಕ್ರಿ.ಶ.೧೨೩೨ರ ಶಾಸನವು ಸಿಂಗನದೇವನೆಂಬ ಸೇವುಣ ದೊರೆಯನ್ನು ಹೆಸರಿಸುತ್ತದೆ. ಅದರಂತೆ ಸಂಕನೂರಿನಲ್ಲಿರುವ ಶಾಸನವು ಸಿಂಗನ ದೇವನನ್ನು ಯಾದವ ನಾರಾಯಣ ಭುಜಬಲ ಚಕ್ರವರ್ತಿ ಎಂದು ಸಂಬೋಧಿಸುತ್ತದೆ. ಇದೇ ರಾಜನ ಮತ್ತೊಂದು ಶಾಸನವು ಕೊಪ್ಪಳದಲ್ಲಿ ಲಭ್ಯವಾಗಿದೆ. ಇದು ಕ್ರಿ.ಶ.೧೨೪೦ರ ಕಾಲಮಾನದ್ದಾಗಿದ್ದು ನಾಶವಾಗಿರುವುದರಿಂದ ಹೆಚ್ಚಿನ ವಿಷಯ ತಿಳಿದುಬರುವುದಿಲ್ಲ. ಸಂಖನೂರಿನಲ್ಲಿರುವ ಕ್ರಿ.ಶ.೧೨೧೨ರ ಶಾಸನವು ಕಣ್ಣರದೇವ ಎಂಬ ಅರಸನನ್ನು ಹೆಸರಿಸುತ್ತದೆ. ಈತನನ್ನು ದ್ವಾರಾವತಿಪುರ ವರಾದೀಶ್ವರ, ವಿಷ್ಣುವಂಶೋದ್ಭವಂ, ಸುವರ್ಣ ಗರುಡ ದ್ವಜಂ, ಯಾದವ ಕುಲಕಮಲಂ, ಎಂಬುದಾಗಿ ವರ್ಣಿಸಿದೆ. ಇದರಿಂದ ಜಿಲ್ಲೆಯಲ್ಲಿ ಸೇವುಣರ ಅಸ್ತಿತ್ವದ ಬಗ್ಗೆ ಸ್ಥೂಲವಾಗಿ ತಿಳಿದುಬರುತ್ತದೆ.

ಹೊಯ್ಸಳರು ಕರ್ನಾಟಕದ ಇತಿಹಾಸದಲ್ಲಿ ಮಾತ್ರವಲ್ಲದೆ ಕೊಪ್ಪಳ ಜಿಲ್ಲೆಯಲ್ಲಿಯೂ ತಮ್ಮ ಪ್ರಭಾವ ಬೀರಿದ್ದಾರೆ ಎಂಬುದಕ್ಕೆ ಇಲ್ಲಿ ದೊರೆತಿರುವ ಶಾಸನಗಳು ಮಾಹಿತಿ ಒದಗಿಸುತ್ತವೆ.[೧೪]

---

೧೨. ಡಾ.ಸಾಯಬಣ್ಣ ಕೆ.ಮೇಲಕಾರ : ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗ ಸಂಸ್ಕೃತಿ, ಪುಟ-೫೦

೧೩. ಪಾಟೀಲ ಬಿ.ಸಿ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ-೩೮

೧೪. ಬಿ.ಷೇಕ್ ಅಲಿ (ಸಂ) : ಕರ್ನಾಟಕ ಚರಿತ್ರೆ ಸಂಪುಟ-೪, ಪುಟ-೮೯

ವಿಷ್ಣುವರ್ಧನನ ಕಾಲದಲ್ಲಿ ಗಂಗರಾಜ ಮತ್ತು ಶಾಂತಲೆಯರು ಜೈನ ಧರ್ಮದ ಪ್ರಾಮುಖ್ಯತೆಯನ್ನು ಜಿಲ್ಲೆಯಲ್ಲಿ ಹರಡಿದರು. ಅಲ್ಲದೇ ಶಾಂತಲೆಯೂ ಜೈನ ಬಸದಿ ಒಂದನ್ನು ಕೊಪ್ಪಳದಲ್ಲಿ ನಿರ್ಮಿಸಿದಳು. ಇದಲ್ಲದೇ ಗಂಗರಾಜ ಮತ್ತು ಏಚಿರಾಜ ತಮ್ಮ ಪ್ರದೇಶದ ಅಭಿವೃದ್ಧಿಗೆ ಕೊಪ್ಪಳವನ್ನೇ ಮಾದರಿಯಾಗಿಟ್ಟುಕೊಂಡಿದ್ದರು. ಇದಲ್ಲದೆ ಹುಳ್ಳರಾಜ ಎಂಬುವನು ಕೊಪ್ಪಳದ ಜೈನ ಮುನಿಯ ಸಂಘಕ್ಕೆ ಬಂಗಾರದ ದಾನವನ್ನು ನೀಡಿದ್ದಾನೆ ಎಂಬ ವಿಷಯಗಳು ಜಿಲ್ಲೆಯ ಶಾಸನಗಳಿಂದ ತಿಳಿದುಬರುತ್ತದೆ. ಇವರ ಕಾಲದ ಶಾಸನಗಳು ಕೊಪ್ಪಳ, ಸಂಕನೂರು ಮತ್ತು ಯಲಬುರ್ಗಾಗಳಲ್ಲಿ ಕಂಡುಬಂದಿವೆ.

ಹೊಯ್ಸಳರ ನಂತರ ಕರ್ನಾಟಕದಲ್ಲಿ ಹನ್ನೊಂದು ಪ್ರದೇಶಗಳಲ್ಲಿ ಸಿಂಧರಾಜ ಮನೆತನದ ಅರಸರು ಆಳ್ವಿಕೆ ಮಾಡಿದರು. ಇದರಲ್ಲಿ ಒಂದು ಮನೆತನವು ಇಂದಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪ್ರದೇಶವನ್ನು ಕೇಂದ್ರ ಮಾಡಿಕೊಂಡು ಜಿಲ್ಲೆಯ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದರು.[೧೫] ಇವರಿಗೆ ಶಾಸನದಲ್ಲಿ ಯರಂಬರಿಗೆಯ ಸಿಂಧರು ಎಂದು ಕರೆಯಲಾಗಿದೆ. ಕಲ್ಲೂರಿನಲ್ಲಿ ದೊರೆತಿರುವ ಶಾಸನದಲ್ಲಿ ಚಾವುಂಡರಾಯ ಎಂಬ ಅರಸನನ್ನು ಪ್ರಸ್ತಾಪಿಸಲಾಗಿದೆ. ಇದರಲ್ಲಿ ಈತನು ಆರನೇಯ ವಿಕ್ರಮಾದಿತ್ಯನ ಮಂಡಳೇಶ್ವರನಾಗಿ ನರೆಯಂಗಲ್ಲು, ೧೨ ಕಲ್ಲೂರು ಮತ್ತು ಬೆಳಗೆರೆ ಗ್ರಾಮದ ಮೇಲೆ ಪ್ರಭುತ್ವ ಹೊಂದಿದ್ದನ್ನು ತಿಳಿಸುತ್ತದೆ. ಸಂಕನೂರಿನಲ್ಲಿ ಲಭ್ಯವಾದ ಕ್ರಿ.ಶ.೧೧೧೩ರ ಶಾಸನವು ಅಚುಗಿ ಎಂಬುವನು ಆರನೇಯ ವಿಕ್ರಮಾದಿತ್ಯನ ಮಂಡಳೇಶ್ವರ ಸಾಮಂತ ಅರಸನಾಗಿ ನರೆಯಂಗಲ್ಲದಲ್ಲಿ ಆಳುತ್ತಿದ್ದನೆಂದು ಹೇಳಲಾಗಿದೆ.

ಆನಂತರ ಎರಂಬರಿಗೆ ಯಲಬುರ್ಗಾ ಸಿಂಹಾಸನಕ್ಕೆ ಪೆರ್ಮಾಡಿ ಎಂಬ ಸಿಂಧ ಅರಸನು ಪಟ್ಟಕ್ಕೆ ಬಂದನು. ಇವನು ಮೂರನೇಯ ಸೋಮೇಶ್ವರನ ಮಹಾಮಂಡಳೇಶ್ವರನಾಗಿದ್ದನು. ಈ ವಿಷಯವನ್ನು ಕಲ್ಲೂರಿನಲ್ಲಿರುವ ಕ್ರಿ.ಶ.೧೧೩೨ರ ಶಾಸನವು ತಿಳಿಸುತ್ತದೆ. ಇದಲ್ಲದೆ ಈತನ ವಿಷಯವನ್ನು ಕುಕನೂರಿನ ಶಾಸನವು ಸಹಿತ ತಿಳಿಸುತ್ತದೆ. ಜಿಲ್ಲೆಯಲ್ಲಿರುವ ಮುಧೋಳದ ಶಾಸನವು ಚಾವುಂಡನೆಂಬ ಸಿಂಧ ರಾಜನು ಎರಂಬರಿಗೆಯ ಸಿಂಹಾಸನಕ್ಕೆ ಬಂದಂತಹ ವಿಷಯ ತಿಳಿಸುತ್ತದೆ. ಇದೇ ಜಿಲ್ಲೆಯ ಸಂಕನೂರಿನಲ್ಲಿರು ಶಾಸನವು ತಣ್ಣರದೇವ ಎಂಬ ರಾಜನ ಬಗ್ಗೆ ವಿವರಿಸುತ್ತಿದೆ. ಕಲ್ಲೂರಿನಲ್ಲಿರುವ ಕ್ರಿ.ಶ.೧೧೮೬ರ ಶಾಸನವು ಸಿರಿಯಾ ದೇವಿ ಎಂಬ ರಾಣಿಯು ಎರಂಬರಿಗೆಯನ್ನು ಆಳುತ್ತಿದ್ದ ಬಗ್ಗೆ ತಿಳಿಸುತ್ತದೆ. ಇದಲ್ಲದೇ ಯಲಬುರ್ಗಾದಲ್ಲಿರುವ ಶಾಸನವು ಮಹಾಮಂಡಳೇಶ್ವರ ವಿಕ್ರಮಾದಿತ್ಯ ದೇವ ಎಂದು ಹೆಸರಿಸಿದರೆ ಕಲ್ಲೂರಿನಲ್ಲಿರುವ ಮತ್ತೊಂದು ಶಾಸನವು ಬಿಜ್ಜಳದೇವರಸ ಎಂಬ ದೊರೆಯನ್ನು ಸೂಚಿಸುತ್ತವೆ.

---

೧೫. ಡಾ.ಸಾಯಬಣ್ಣ ಕೆ.ಮೇಲಕಾರ : ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗ ಸಂಸ್ಕೃತಿ, ಪುಟ-೫೬

ನೊಳಂಬರು ನೇರವಾಗಿ ಕೊಪ್ಪಳ ಜಿಲ್ಲೆಯಲ್ಲಿ ಆಳ್ವಿಕೆಯನ್ನು ಮಾಡದೇ ಹೋದರು ಕೆಲವು ಕಾಲದವರೆಗೆ ಗಂಗಾವತಿ ತಾಲೂಕಿನ ವಿಪ್ರ ಎಂಬ ಗ್ರಾಮವನ್ನು ನೆಲೆಬೀಡನ್ನಾಗಿ ಮಾಡಿಕೊಂಡ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೇ ನೊಳಂಬವಂಶದ ಕೆಲವು ಸ್ತ್ರೀಯರು ಕೊಪ್ಪಳದಲ್ಲಿ ಧಾರ್ಮಿಕ ವಿಧಾನಗಳಿಂದ ಮರಣ ಹೊಂದಿರುವುದನ್ನು ಕೊಪ್ಪಳದಲ್ಲಿ ದೊರೆತ ನಿಷಿಧಿ ಶಾಸನಗಳು ತಿಳಿಸುತ್ತವೆ.[೧೬]

ಕೊಪ್ಪಳ ಜಿಲ್ಲೆಯಲ್ಲಿ ಹೊಸಮಲೆದುರ್ಗ ಮತ್ತು ಕಮ್ಮಟದುರ್ಗದ ಅರಸರು ಆಳ್ವಿಕೆ ಮಾಡಿದ ಬಗ್ಗೆ ಕೆಲವು ದಾಖಲೆಗಳು ಲಭ್ಯವಾಗುತ್ತದೆ. ಹೊಸಮಲೆದುರ್ಗದ ಅರಸರಿಗೆ ಸಂಬಂಧಿಸಿದಂತೆ ಎರಡು ಶಾಸನಗಳು ಪ್ರಕಟವಾಗಿವೆ. ಇವು ವೀರಗಲ್ಲು ಶಾಸನಗಳಾಗಿವೆ. ಇದರಲ್ಲಿ ಬರುವ ಅಂಶ ಮತ್ತು ಕಾವ್ಯಗಳ ಆಧಾರದ ಮೇಲೆ ಕುಮಾರ ರಾಮನ ವಂಶಾವಳಿಯನ್ನು ಸಂಕ್ಷಿಪ್ತವಾಗಿ ಸೂಚಿಸಬಹುದಾಗಿದೆ. ಈ ಸಂದರ್ಭದಲ್ಲಿ ಹೊಸಮಲೆ ದುರ್ಗದಿಂದ ಕಮ್ಮಟದುರ್ಗಕ್ಕೆ ರಾಜಧಾನಿಯನ್ನು ಸ್ಥಳಾಂತರಿಸಿದ ಬಗ್ಗೆ ತಿಳಿದುಬರುತ್ತದೆ. ಅಲ್ಲದೆ ಉತ್ತರ ಭಾರತದಿಂದ ಬರುತ್ತಿದ್ದ ಮುಸ್ಲೀಮರ ದಾಳಿಗಳನ್ನು ಸ್ವಲ್ಪ ಮಟ್ಟಿಗೆ ಕುಮಾರರಾಮನು ಸಮರ್ಥವಾಗಿ ಎದುರಿಸಿದನು ಎಂದು ಹೇಳಲಾಗಿದೆ. ಅಲ್ಲದೇ ಕುಮಾರರಾಮನ ನೆನಪಿಗೋಸ್ಕರ ರಾಮನಾಥ ದೇವಾಲಯವನ್ನು ಕಮ್ಮಟದುರ್ಗ, ಆನೆಗುಂದಿಗಳಲ್ಲಿ ಕಟ್ಟಿಸಿದರ ಬಗ್ಗೆ ತಿಳಿದುಬರುತ್ತದೆ.[೧೭] ಈ ಸಂದರ್ಭದಲ್ಲಿ ಬಲಾಢ್ಯವಾಗಿದ್ದ ಕೊಪ್ಪಳ ದುರ್ಗಕ್ಕೆ ಕುಟಿಲರಾಯನು ತಿಮ್ಮರಾಜನೆಂಬವನನ್ನು ಮಾಂಡಲಿಕನನ್ನಾಗಿ ನೇಮಿಸಿದ್ದನೆಂದು ಕುಮಾರ ರಾಮನ ಸಾಂಗತ್ಯ ತಿಳಿಸುತ್ತವೆ.

ಕರ್ನಾಟಕದಲ್ಲಿ ಅತ್ಯಂತ ಪ್ರಖ್ಯಾತ ದೊರೆಗಳಲ್ಲಿ ಒಬ್ಬರೆನಿಸಿದ ವಿಜಯನಗರ ಅರಸರ ಕಾಲದಲ್ಲಿ ಕೊಪ್ಪಳ ಜಿಲ್ಲೆಯು ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿತ್ತು. ಇವರ ಆಳ್ವಿಕೆಗೆ ಸಂಬಂಧಪಟ್ಟಂತೆ ಹಲವಾರು ಶಾಸನಗಳು ಜಿಲ್ಲೆಯಲ್ಲಿ ಲಭ್ಯವಾಗಿವೆ. ಆನೆಗುಂದಿಯಲ್ಲಿ ದೊರೆತಿರುವ ಕ್ರಿ.ಶ.೧೩೪೨ರ ಶಾಸನವು ಹರಿಹರನ ದಂಡನಾಯಕನಾದ ಭೈರ ದಂಡನಾಯಕನ ಮಗನಾದ ಇರುಗಪ್ಪನು ಆನೆಗುಂದಿಯಲ್ಲಿ ಜೈನ ಬಸದಿಯನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ. ಕೊಪ್ಪಳದಲ್ಲಿರುವ ಕ್ರಿ.ಶ.೧೩೪೬ರ ಶಾಸನವು ಹರಿಹರನ ಆಡಳಿತವನ್ನು ಉಲ್ಲೇಖಿಸುತ್ತದೆ. ಆನೆಗುಂದಿಯಲ್ಲಿರುವ ಕ್ರಿ.ಶ.೧೩೪೯ರ ಮತ್ತೊಂದು ಶಾಸನವು ಹರಿಹರನ ಮಗನಾದ ಸಾವಣ್ಣ ಎಂಬುವವನನ್ನು ಹೆಸರಿಸಿದೆ. ಇದೇ ಊರಿನಲ್ಲಿರುವ ೧೩೫೭ರ ಶಾಸನವು ಬುಕ್ಕರಾಯನ ಪ್ರಧಾನಿಗಳಲ್ಲಿ ಒಬ್ಬನಾದ ಬುಳ್ಳರಾಜ ಎಂಬುವನನ್ನು ಹೆಸರಿಸುತ್ತದೆ. ಕುಕನೂರಿನಲ್ಲಿರುವ ೧೩೭೯ ಶಾಸನದಲ್ಲಿ ಇಮ್ಮಡಿ ಹರಿಹರನು ಕೂಕನೂರ ಅಗ್ರಹಾರವನ್ನು ಪುನರ್‌ನಿರ್ಮಿಸಿದ ಬಗ್ಗೆ ತಿಳಿಸಿಕೊಡುತ್ತದೆ.[೧೮]

೧೬. ಪ್ರೊ. ಅಲ್ಲಮಪ್ರಭು ಬೆಟ್ಟದೂರ (ಸಂ) : ಕೊಪ್ಪಳ ಜಿಲ್ಲಾದರ್ಶನ, ಪುಟ-೫

೧೭. ಡಾ.ಕೆ.ಎಂ.ಸುರೇಶ : ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ, ಪುಟ-೧೬

೧೮. ಬಿ.ಷೇಕ್ ಅಲಿ (ಸಂ) : ಕರ್ನಾಟಕ ಚರಿತ್ರೆ ಸಂಪುಟ-೪, ಪುಟ-೮೯

ಆನೆಗುಂದಿಯಲ್ಲಿರುವ ಕ್ರಿ.ಶ.೧೩೮೨ರ ಶಾಸನವು ಹರಿಹರನ ಮಗನಾದ ಕಂಪನ ಎಂಬುವನನ್ನು ಹೆಸರಿಸುತ್ತದೆ.

ಕನಕಗಿರಿಯಲ್ಲಿ ಇರುವ ಶಾಸನವು ಕ್ರಿ.ಶ.೧೪೩೬ರ ಕಾಲಮಾನದ್ದಾಗಿದೆ. ಇದು ಪ್ರೌಢದೇವರಾಯನು ಕನಕಗಿರಿನಾಥನಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಇಲ್ಲಿಯೇ ಇರುವ ೧೪೮೮ರ ಮತ್ತೊಂದು ಶಾಸನವು ಸಾಳ್ವನರಸಿಂಹದೇವನು ಕನಕಗಿರಿನಾಥನಿಗೆ ನಾಲ್ಕು ಗ್ರಾಮಗಳನ್ನು ದಾನಕೊಟ್ಟಿದ್ದನ್ನು ತಿಳಿಸುತ್ತದೆ. ಆನೆಗುಂದಿಯಲ್ಲಿರುವ ೧೪೩೭ರ ಶಾಸನವು ಪ್ರೌಢದೇವರಾಯನ ಅಳಿಯನಾದ ತಿರುವೆಂಕಟನನ್ನು ಹೆಸರಿಸುತ್ತದೆ. ಕಣ್ಣೀರು ಮಡು ಎಂಬಲ್ಲಿ ಇರುವ ೧೫೦೬ರ ಶಾಸನವು ತಿಂತಣಿಯ ಬೊಮ್ಮಣ್ಣನಾಯಕ ಎಂಬವನನ್ನು ಹೆಸರಿಸುತ್ತದೆ. ಇದೇ ಊರಿನ ೧೫೩೦ರ ಶಾಸನವು ಅಚ್ಚುತ ದೇವರಾಯನ ಆಡಳಿತದ ಬಗ್ಗೆ ತಿಳಿಸಿಕೊಡುತ್ತದೆ.[19] ವಿಜಯನಗರ ಅರಸರಲ್ಲಿ ಪ್ರಸಿದ್ಧನಾದ ದೊರೆ ಕೃಷ್ಣದೇವರಾಯನ ಬಗ್ಗೆ ಕನಕಗಿರಿಯ ಕ್ರಿ.ಶ.೧೫೧೨ರ ಶಾಸನ ಮತ್ತು ಗೊಂಡಬಾಳುವಿನಲ್ಲಿರುವ ೧೫೧೩ರ ಶಾಸನಗಳು ಉಲ್ಲೇಖಿಸುತ್ತವೆ. ಗಿಣಗೇರಿಯಲ್ಲಿರುವ ಒಂದು ಶಾಸನದಲ್ಲಿ ಆನೆಗುಂದಿಯಲ್ಲಿ ತಿಮ್ಮರಾಜು ಎಂಬ ದಳವಾಯಿ ಇದ್ದನೆಂದು ತಿಳಿಸಲಾಗಿದೆ. ಇದಲ್ಲದೆ ಕೊಪ್ಪಳದಲ್ಲಿರುವ ಒಂದು ಶಾಸನ ಮತ್ತು ಕೆಸರಟ್ಟಿಯಲ್ಲಿರುವ ಒಂದು ಶಾಸನವು ಕೃಷ್ಣದೇವರಾಯನ ಬಗ್ಗೆ ತಿಳಿಸುತ್ತದೆ. ಆನೆಗುಂದಿಯಲ್ಲಿ ಕಂಡುಬಂದಿರುವ ಕ್ರಿ.ಶ.೧೫೩೧ ಮತ್ತು ೧೫೩೪ರ ಶಾಸನಗಳು ಹಾಗೂ ಕಲ್ಲೂರಿನ ಕ್ರಿ.ಶ.೧೫೩೭ರ ಶಾಸನವು ಅಚ್ಯುತರಾಯನ ಆಡಳಿತದ ಬಗ್ಗೆ ತಿಳಿಸುತ್ತವೆ. ಮುಂದಿನ ಕೆಲವು ಶಾಸನಗಳು ಗುಜ್ಜಲವಂಶದ ಅರಸರು ವಿಜಯನಗರ ಅರಸರ ಮಾಂಡಲಿಕರಾಗಿದ್ದ ಬಗ್ಗೆ ತಿಳಿಸಲಾಗಿದೆ.[20] ಅಲ್ಲದೆ ಹಿರೇಜಂತಕಲ್ಲದಲ್ಲಿ ದೊರೆತಿರುವ ಶಾಸನದಲ್ಲಿ ಸದಾಶಿವರಾಯನಿಗೆ ಹಾಗೂ ತಿರುವೆಂಕಟಾದ್ರಿಗೆ ಪುಣ್ಯವಾಗಲೆಂದು ಚಂದ್ರಗಿರಿಯ ಹೇಮರಸ್ಯನು ದಾನ ನೀಡಿದ ಬಗ್ಗೆ ವಿವರಗಳಿವೆ.

ಮರಾಠ ವಂಶದ ಪ್ರಸಿದ್ದ ದೊರೆಯಾದ ಶಿವಾಜಿಯ ಕಾಲದ ಶಾಸನ ಒಂದು ಆನೆಗುಂದಿಯಲ್ಲಿ ದೊರೆತಿದೆ. ಇದರಲ್ಲಿ ಆನೆಗುಂದಿ ರಾಜ್ಯದ ಶ್ರೀರಂಗರಾಜನು ಮರಣಹೊಂದಿದ ಬಗ್ಗೆ ತಿಳಿಸುತ್ತದೆ. ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಈ ಸ್ಥಳವನ್ನು ಮುಜಾಪುರನಗರ ಎಂದು ಕರೆಯುತ್ತಿದ್ದರು. ಮುಂದೆ ಇದು ಅಬ್ದುಲ್ ರಹಿಮನಿಗೆ ಜಹಗೀರ ಉಡುಗೊರೆ (ಬಹುಮಾನ) ಕೊಡಲ್ಪಟ್ಟಿತು. ಹುಸೇನ್‌ಮಿಯಾ ಎಂಬುವನನ್ನು ಶಿವಾಜಿಯು ಸೆರೆಹಿಡಿದು ಕೊಪ್ಪಳ ಕೋಟೆಯನ್ನು ಕೊಟ್ಟರೆ ಆತನನ್ನು ಬಿಡುವುದಾಗಿ ಅಬ್ದುಲ್‌ರಹೀಮನಿಗೆ ತಿಳಿಸಿದನು. ಅದೇ ಪ್ರಕಾರ ಶಿವಾಜಿ ಇದನ್ನು ವಶಪಡಿಸಿಕೊಂಡು ಸಂಬಾಜಿರಾವ್ ಎಂಬುವವನಿಗೆ ಕೊಟ್ಟನು. ತರುವಾಯ ಕೊಪ್ಪಳವು

೧೯. ಪಾಟೀಲ ಬಿ.ಸಿ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ-೫೧

೨೦. ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಪುಟ-೫೪

ಹೈದರಾಲಿಯ ಕೈ ಸೇರಿತು. ಅವನು ಕೊಪ್ಪಳವನ್ನು ಆಳಲು ಮಹಮದ್‌ಉಸ್ಮಾನ್ ಕೋವಾರ್ ಎಂಬುವನನ್ನು ನೇಮಿಸಿದನು. ಈತನು ತನ್ನ ಆಡಳಿತದ ಕಾಲದಲ್ಲಿ ಕೊಪ್ಪಳ ಕೋಟೆಯ ಎರಡನೆಯಬಾಗಿಲು ಮತ್ತು ಬಹದ್ದೂರ ಬಂಡೆಯ ಕೋಟೆಯನ್ನು ಕಟ್ಟಿಸಿದನು.[೨೧] ನಂತರ ಟಿಪ್ಪು ಸುಲ್ತಾನ ತನ್ನ ಆಡಳಿತದ ಕಾಲದಲ್ಲಿ ಕೊಪ್ಪಳವನ್ನು ಸುಲ್ತಾನ ಗಡ ಎಂದು ಕರೆದನು. ಕಿತ್ತೂರಿನ ಮಲ್ಲಸರ್ಜ ದೊರೆಯನ್ನು ಇದೇ ಕೋಟೆಯಲ್ಲಿ ಬಂದಿಸಿ ಇಡಲಾಗಿತ್ತು.

ಇಂಗ್ಲೀಷರ ಆಡಳಿತದ ಕಾಲದಲ್ಲಿ ಕ್ರಿ.ಶ. ೧೭೯೯ರಲ್ಲಿ ಕರ್ನಲ್‌ಕಿಡ್‌ನು ಕೊಪ್ಪಳವನ್ನು ವಶಪಡಿಸಿಕೊಂಡನು. ಆನಂತರ ಕ್ರಿ.ಶ.೧೮೫೦ರಿಂದ ೫೭ರ ಅವಧಿಯಲ್ಲಿ ವೀರಪ್ಪನೆಂಬ ಜಮಿನ್ದಾರನು ಬ್ರಿಟೀಷರ ವಿರುದ್ಧ ಬಂಡಾಯ ಎದ್ದು ಸ್ವಲ್ಪ ಕಾಲದವರೆಗೆ ಈ ಕೋಟೆಯನ್ನು ತನ್ನ ಅಧೀನಕ್ಕೆ ಪಡೆದುಕೊಂಡಿದ್ದನು. ಇದೇ ಪ್ರವೃತ್ತಿಯು ಮುಂಡರಗಿಯ ಮೊಂಡಗೈ ಭೀಮರಾಯನಲ್ಲಿ ಮುಂದುವರೆಯಿತು. ಆದರೆ ಬ್ರಿಟೀಷರು ೧೮೫೮ರಲ್ಲಿ ಮುಂಡರಗಿಯ ಭೀಮರಾಯನನ್ನು ಸೋಲಿಸಿ ಕೊಪ್ಪಳವನ್ನು ಪುನಹ ವಶಪಡಿಸಿಕೊಂಡರು. ಮುಂದೆ ೧೮೬೧ರಲ್ಲಿ ಕೊಪ್ಪಳ ಭಾವುನವಾಬ ಸಾಲಾರ ಜಂಗ ಎಂಬವನಿಗೆ ಜಹಗೀರಾಗಿ ಕೊಡಲ್ಪಟ್ಟಿತು.[೨೨] ನಂತರ ಭಾರತಕ್ಕೆ ಸ್ವಾತಂತ್ರ್ಯ ಬರುವವರೆಗೂ ಈ ಪ್ರದೇಶ ಸಾಲಾರಜಂಗನ ಅಧೀನದಲ್ಲಿಯೇ ಇದ್ದಿತು.

ದೇವಾಲಯ ಸಂಸ್ಕೃತಿ

ಕೊಪ್ಪಳ ಜಿಲ್ಲೆಯಲ್ಲಿ ಅಧಿಕೃತವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ದೇವಾಲಯಗಳ ನಿರ್ಮಾಣವಾಗಿದ್ದು ಕಂಡುಬರುತ್ತದೆ. ಆದರೆ ಕೇವಲ ಚಿಕ್ಕಪುಟ್ಟ ಕುರುಹುಗಳು ಮಾತ್ರ ಜಿಲ್ಲೆಯಲ್ಲಿ ಕಂಡುಬಂದಿವೆ. ಅಲಂಕಾರಿಕ ಸ್ಮಾರಕ ನೆಲೆಯೊಂದು ಇಟಗಿಯಲ್ಲಿ ದೊರತಿದ್ದು ಇದು ವಿಜಯಾದಿತ್ಯನ ಕಾಲದ್ದಾಗಿದೆ. ಎರಡು ಕಲಾತ್ಮಕ ಕಂಬಗಳ ಮೇಲೆ ಅಡ್ಡಲಾಗಿರುವ ತೊಲೆಯೊಂದನ್ನು ನಿಲ್ಲಿಸಲಾಗಿದೆ. ಈ ಮಂಟಪದ ಮೇಲೆ ಪೂರ್ಣಕುಂಬ, ಮೀನುಗಳು, ನಂದಿ, ಶಂಕಪದ್ಮ ಮತ್ತು ಗಜಲಕ್ಷ್ಮೀಯ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಇದು ಬಾದಾಮಿ ಕೆಂಪುಮರಳು ಶಿಲೆಯಲ್ಲಿ ನಿರ್ಮಾಣವಾಗಿದೆ. ಬಾದಾಮಿ ಚಾಲುಕ್ಯರ ನಂತರ ರಾಷ್ಟ್ರಕೂಟರ ಕಾಲದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಪೂರ್ಣಪ್ರಮಾಣದ ದೇವಾಲಯಗಳು ನಿರ್ಮಾಣವಾಗ ತೊಡಗಿದವು. ಹಲಗೇರಿಯ ಕಲ್ಲೇಶ್ವರ, ಕರಮುಡಿಯ ಕಲ್ಲೇಶ್ವರ ಮತ್ತು ಕುಸುಮೇಶ್ವರ, ಮುಧೋಳದ ಸಿದ್ದೇಶ್ವರ, ಕುಕನೂರಿನ ನವಲಿಂಗೇಶ್ವರ, ಕಡೂರಿನ ಕಲ್ಲೇಶ್ವರ ಈ ದೇವಾಲಯಗಳು ರಾಷ್ಟ್ರಕೂಟರ ರಚನೆಗಳಾಗಿವೆ.[೨೩]

ರಾಷ್ಟ್ರಕೂಟರ ತರುವಾಯ ಕಲ್ಯಾಣದ ಚಾಲುಕ್ಯರ ದೇವಾಲಯಗಳು ಜಿಲ್ಲೆಯಲ್ಲಿ

೨೧. ಪಾಟೀಲ ಬಿ.ಸಿ : ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ-೬೦

೨೨. ಪ್ರೊ, ಅಲ್ಲಮ ಪ್ರಭು ಬೆಟ್ಟದೂರ (ಸಂ) : ಕೊಪ್ಪಳ ಜಿಲ್ಲಾದರ್ಶನ, ಪುಟ-೫೮

೨೩. ಡಾ.ಕೆ.ಎಂ.ಸುರೇಶ : ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ, ಪುಟ-೭೮

ರಚನೆಯಾಗಿವೆ. ಕರ್ನಾಟಕದಲ್ಲಿ ಅತೀ ಹೆಚ್ಚಿನ ದೇವಾಲಯಗಳು ಇವರ ಕಾಲದಲ್ಲಿಯೇ ರಚನೆಯಾಗಿವೆ. ದೇವಾಲಯದ ಚಕ್ರವರ್ತಿ ಎಂದು ಕರೆಸಿಕೊಂಡಿರುವ ಇಟಗಿಯ ಮಹಾದೇವ ದೇವಾಲಯ ಕಲ್ಯಾಣ ಚಾಲುಕ್ಯರ ಕೊಡುಗೆಯಾಗಿದೆ. ಜಿಲ್ಲೆಯಲ್ಲಿ ಇವರ ಕಾಲದಲ್ಲಿ ಏಕಕೂಟ, ದ್ವಿಕೂಟ, ತ್ರಿಕೂಟ ಮತ್ತು ಪಂಚಕೂಟ ದೇವಾಲಯಗಳನ್ನು ನಿರ್ಮಿಸಲಾಗಿದೆ. ಏಕಕೂಟ ದೇವಾಲಯಗಳಲ್ಲಿ ಪ್ರಮುಖವಾದವುಗಳೆಂದರೆ ಕೊಪ್ಪಳ, ಇರಕಲ್ಲಗಡ, ಉಪ್ಪಿನ ಬೆಟಗೇರಿ, ಮಾದಿನೂರು, ಗೊಂಡವಾಳು, ಕವಲೂರು, ಹಿರೇಸಿಂದೋಗಿ, ಅಂಜನಹಳ್ಳಿ, ವಿಪ್ರ ಗಂಗಾವತಿ, ಕಾರಟಗಿ, ಕುಷ್ಟಗಿ, ಪುರ್ತಗೇರಿ, ತಾವರಗೇರಿ, ಗೂಲಗೇರಿ, ಅಂಟರಠಾಣ, ಯಲಬುರ್ಗ, ಇಟಗಿ, ಕುಕನೂರು ಮತ್ತು ಮುಧೋಳಗಳಲ್ಲಿ ಕಂಡುಬರುತ್ತವೆ.[೨೪] ಇವರ ಕಾಲದ ದ್ವಿಕೂಟ ದೇವಾಲಯವು ಮುಧೋಳದಲ್ಲಿದೆ. ಇಲ್ಲಿನ ಮಲ್ಲಿಕಾರ್ಜುನ ದೇವಾಲಯವು ಎರಡು ಗರ್ಭಗೃಹಗಳನ್ನು ಹೊಂದಿದೆ.

ಕಲ್ಯಾಣಚಾಲುಕ್ಯರ ತ್ರಿಕೂಟ ದೇವಾಲಯಗಳು ಜಿಲ್ಲೆಯಲ್ಲಿ ಅನೇಕ ಕಡೆ ಕಂಡುಬಂದಿವೆ. ಕೂಕನೂರಿನ ಬಳೇಶ್ವರ, ಪುರ್ತಗೇರಿಯ ತ್ರಿಕೂಟೇಶ್ವರ, ಅಂಟರ ಠಾಣಾದ ಮೌನೇಶ್ವರ, ನವಲಿಯ ಈಶ್ವರ, ಹೆಬ್ಬಾಳಿನ ಸೋಮಶೇಖರ ಗಂಗಾವತಿಯ ರಾಮಲಿಂಗೇಶ್ವರ, ಮುಧೋಳದ ತ್ರಿಲಿಂಗೇಶ್ವರ, ತಾವರಗೇರೆಯ ವೈಜನಾಥೇಶ್ವರ ಮತ್ತು ಕವಲೂರಿನ ಯತಿಶ್ವರ ದೇವಾಲಯುಗಳು ತ್ರಿಕೂಟಾಚಲಗಳಾಗಿವೆ. ಚತುಸ್ಕೂಟ ದೇವಾಲಯಗಳು ಜಿಲ್ಲೆಯಲ್ಲಿ ಕಂಡುಬಂದಿಲ್ಲ. ಆದರೆ ಕೊಪ್ಪಳದ ಪಾರ್ಶ್ವನಾಥ ಬಸದಿಯು ಪಂಚಕೂಟ ಶೈಲಿಯಲ್ಲಿದೆ. ಇದರ ಒಂದು ಗರ್ಭಗೃಹ ನಾಶವಾಗಿದ್ದೂ ನಾಲ್ಕು ಮಾತ್ರ ಉಳಿದುಕೊಂಡಿವೆ. ಇದಲ್ಲದೆ ಇವರ ಕಾಲದಲ್ಲಿ ವಿಸ್ತರಣೆ ಹೊಂದಿದ ಕೂಕನೂರಿನ ನವಲಿಂಗೇಶ್ವರ ದೇವಾಲಯ ಒಂಭತ್ತು ಗರ್ಭಗೃಹಗಳನ್ನು ಹೊಂದಿದ್ದು ಕರ್ನಾಟಕದಲ್ಲಿಯೇ ಅಪರೂಪದ್ದಾಗಿದೆ.

ಕಲ್ಯಾಣ ಚಾಲುಕ್ಯರ ನಂತರ ಬಂದ ಕಲಚೂರಿಗಳು ಕಟ್ಟಿಸಿದ ಎರಡು ದೇವಾಲಯಗಳು ಜಿಲ್ಲೆಯ ಚಳಗೇರಾ ಮತ್ತು ಕವಾಲೂರುಗಳಲ್ಲಿವೆ. ಆದರೆ ಇತ್ತೀಚೆಗೆ ಇವುಗಳನ್ನು ಜೀರ್ಣೋದ್ಧಾರ ಮಾಡುವ ಮೂಲಕ ನವೀಕರಿಸಲಾಗಿದೆ. ಹೊಯ್ಸಳರ ಹೆಚ್ಚಿನ ದೇವಾಲಯಗಳು ಜಿಲ್ಲೆಯಲ್ಲಿ ಕಂಡುಬಂದಿಲ್ಲ, ಆದರೆ ಆನೆಗುಂದಿಯಲ್ಲಿ ಹುಚ್ಚಪ್ಪಯ್ಯನ ಮಠದ ದ್ವಾರ ಬಂದ ಹಾಗೂ ಗಜಾನನ ದೇವಾಲಯದ ಕಂಬಗಳಲ್ಲಿ ಮತ್ತು ರಂಗನಾಥ ದೇವಾಲಯದ ನಿರ್ಮಿತಿಯಲ್ಲಿ ಹೊಯ್ಸಳರ ಕಾಲದ ಶಿಲ್ಪಕಲಾಕೃತಿಗಳನ್ನು ಮರುಬಳಕೆ ಮಾಡಲಾಗಿದೆ.[೨೫] ಮುಂದೆ ಕಮ್ಮಟದುರ್ಗದ ದೊರೆಗಳ ಕಾಲದ ದೇವಾಲಯಗಳು ಕಮ್ಮಟದುರ್ಗದಲ್ಲಿಯೇ ಇವೆ. ಕಮ್ಮಟ ದುರ್ಗದ ಜೈನಬಸದಿ, ಮಲ್ಲಿಕಾರ್ಜುನ ದೇವಾಲಯ, ಎಮ್ಮಿಗುಡ್ಡದ ಶಿವದೇವಾಲಯ ಇವರ ಕಾಲದ್ದಾಗಿವೆ.

---

೨೪. ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್ : ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಪುಟ-೧೫೯

೨೫. ಡಾ.ಸಾಯಬಣ್ಣ ಕೆ.ಮೇಲಕಾರ : ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗ ಸಂಸ್ಕೃತಿ, ಪುಟ-೩೦೫

ಕರ್ನಾಟಕದ ಆಡಳಿತದಲ್ಲಿ ಪ್ರಮುಖ ಪಾತ್ರವಹಿಸಿದ ವಿಜಯನಗರ ಅರಸರ ದೇವಾಲಯಗಳು ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಕಂಡುಬಂದಿವೆ. ತಾವರಗೆರೆಯ ಆಂಜನೆಯ, ವೀರಭದ್ರ, ಸಿರಗುಂಟೆಯ ಆಂಜನೇಯ, ಹನುಮಸಾಗರದ ಆಂಜನೆಯ, ಕಿನ್ನಾಳದ ವೇಂಕಟೇಶ್ವರ, ಪಾಂಡುರಂಗ, ಕೂಕನಪಳ್ಳಿಯ ಅಮರೇಶ್ವರ, ಕೇರೆಹಳ್ಳಿಯ ವೆಂಕಟೇಶ್ವರ ದೇವಾಲಯಗಳು ವಿಜಯನಗರ ಕಾಲದ ಕೊಡುಗೆಗಳಾಗಿವೆ. ಇವುಗಳಲ್ಲದೆ ಮುಂಡರಗಿಯ ಈಶ್ವರ, ಹುಲಗಿಯ ಹುಲಿಗೆಮ್ಮ, ಆನೆಗುಂದಿಯ ರಂಗನಾಥ, ಗವಿರಂಗನಾಥ, ಜೈನಬಸದಿ ಹೀಗೆ ಜಂತಕಲ್ಲಿನ ಪ್ರಸನ್ನ ವಿರೂಪಾಕ್ಷ, ಆಂಜನೇಯ, ನವಲಿಯ ಬೋಗೇಶ್ವರ, ವೆಂಕಟಗಿರಯ ವೆಂಕಟೇಶ್ವರ, ಕುಕನೂರಿನ ಮಹಾಮಾಯಾ, ಕಲ್ಲೂರಿನ ಕಲ್ಲಿನಾಥೇಶ್ವರ, ಕನಕಗಿರಿಯ ಕನಕಾಚಲಪತಿ ದೇವಾಲಯಗಳು ವಿಜಯನಗರ ಅರಸರ ಕಲಾ ಕೊಡುಗೆಗಳಾಗಿವೆ.[೨೬]

ವಿಜಯನಗರೋತ್ತರ ಕಾಲದಲ್ಲಿಯು ಸಹಿತ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಚಿಕ್ಕಪುಟ್ಟ ಅರಸರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದೇವಾಲಯಗಳನ್ನು ನಿರ್ಮಿಸುವ ಮೂಲಕ ಈ ಪ್ರದೇಶವನ್ನು ಕಲೆಯ ಬೀಡನ್ನಾಗಿ ಮಾಡಿದ್ದಾರೆ. ಇರಕಲ್ಲಗಡದಲ್ಲಿರುವ ದೇವಾಲಯ ಮತ್ತು ಬಹದ್ದೂರ ಬಂಡೆಯ ಮೇಲಿರುವ ದೇವಾಲಯ, ಚಳಗೇರಿಯ ವೀರಭದ್ರೇಶ್ವರ ದೇವಾಲಯ ಅದರಂತೆಯೇ ಹಿರೇಮನ್ನಾಪುರದ ಈಶ್ವರ, ಹಲಗೇರಿಯ ಗುಂಡುಮಲ್ಲೇಶ್ವರ, ಅಳವಾಡಿಯ ಸಿದ್ದೇಶ್ವರ ಮತ್ತು ಹಿರೆಮ್ಯಾಗೇರಿಯ ಬಸವಣ್ಣ ದೇವಾಲಯಗಳು ಆಯಾ ಪ್ರಾಂತಗಳ ಮುಖಂಡರು ಮತ್ತು ಅಧಿಕಾರಿಗಳಿಂದ ನಿರ್ಮಾಣವಾಗಿವೆ.

ಆಧುನಿಕ ಕಾಲದಲ್ಲಿಯೂ ಕೊಪ್ಪಳ ಜಿಲ್ಲೆಯಲ್ಲಿ ಪ್ರಾದೇಶಿಕವಾಗಿ ದೇವಾಲಯಗಳು ನಿರ್ಮಾಣವಾಗಿವೆ. ಇವುಗಳಲ್ಲಿ ಮುಖ್ಯವಾದ ದೇವಾಲಯಗಳೆಂದರೆ ಸಂಗಾಪುರದ ರಾಮ ದೇವಾಲಯ ಮರಲಾನಹಳ್ಳಿಯ ವೆಂಕಟೇಶ್ವರ, ಕಲ್ಲುಗುಡಿಯ ಸೀತಾರಾಮ ದೇವಾಲಯ, ಗಂಗಾವತಿಯ ರಾಮಮಂದಿರ, ನೀಲಕಂಟೇಶ್ವರ ದೇವಾಲಯ, ಇದೇ ಊರಿನ ಕಲ್ಮಠ, ಮಲ್ಲಿಕಾರ್ಜುನ ಮಠಗಳು ಬುದೂಗುಂಪಾ ಹತ್ತಿರದ ಭುದೇಶ್ವರ, ಭೂದೇಶ್ವರಿ ದೇವಾಲಯಗಳು ಆಧುನಿಕ ಕಾಲದಲ್ಲಿ ರಚನೆಗೊಂಡ ಕೆಲವು ದೇವಾಲಯಗಳಾಗಿವೆ.

ಕೊಪ್ಪಳ ಜಿಲ್ಲೆಯಲ್ಲಿ ಈ ರೀತಿಯ ರಾಜಕೀಯ ವ್ಯವಸ್ಥೆ ಮತ್ತು ದೇವಾಲಯ ಪರಂಪರೆಗಳಲ್ಲದೆ, ಇನ್ನಿತರ ಕ್ರಮಗಳಿಂದಲು ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವು ಸಂಪತ್ಭರಿತವಾಗಿದೆ. ದೇವಾಲಯ ವಾಸ್ತು ರಚನೆಗಳಲ್ಲದೆ, ಕೋಟೆ-ಕೊತ್ತಲುಗಳು, ಮಠ-ಮಾನ್ಯಗಳು, ಚರ್ಚು-ಮಸೀದಿಗಳು ನಿರ್ಮಾಣವಾಗುವ ಮೂಲಕ ಜಿಲ್ಲೆಯ ಧಾರ್ಮಿಕ ಸೌಹಾರ್ದತೆಯನ್ನು

೨೬. ಪ್ರೊ. ಅಲ್ಲಮ ಪ್ರಭು ಬೆಟ್ಟದೂರ (ಸಂ) : ಕೊಪ್ಪಳ ಜಿಲ್ಲಾದರ್ಶನ, ಪುಟ-೫೪

ಕಾಯ್ದುಕೊಂಡು ಬಂದಿದೆ. ಕೊಪ್ಪಳದ ಗವಿಮಠವು ಐತಿಹಾಸಿಕ ಮತ್ತು ಧಾರ್ಮಿಕ ಪ್ರಧಾನವಾಗಿದ್ದು ತನ್ನದೇ ಆದ ಕೊಡುಗೆಯನ್ನು ಈ ನಾಡಿಗೆ ನೀಡಿದೆ. ಸಂಗೀತ ಕಲೆಯಲ್ಲಿಯು ಜಿಲ್ಲೆಯು ವಿಶೇಷ ಕೊಡುಗೆ ನೀಡಿದೆ. ಕೊಪ್ಪಳ ಸಮೀಪದ ತಳಕಲ್ಲಿನ ಖಾನಗೌಡರು ಬಹುದೊಡ್ಡ ತಬಲವಾದಕರಾಗಿದ್ದರು. ಇವರ ತಬಲಾವಾದನದ ಪ್ರಸಿದ್ಧಿಯಿಂದಾಗಿ ಅನೇಕ ಜನರು ತಳಕಲ್ಲಿಗೆ ಇವರನ್ನು ಹುಡುಕಿಕೊಂಡು ಬರುತ್ತಿದ್ದರು. ಪಂಡಿತ ಪುಟ್ಟರಾಜಗವಾಯಿ, ಮಲ್ಲಿಕಾರ್ಜುನ ಮನಸೂರರು, ಗುರುಬಸವಾರ್ಯ ಗವಾಯಿ ಇವರು ಸಮಕಾಲೀನರಾಗಿದ್ದರು. ಖಾನಗೌಡರ ಶಿಷ್ಯನಾದ ತಳಕಲ್ಲಿನವನೇ ಆದ ಕಾಳಪ್ಪ ಪತ್ತಾರನು ಅದ್ವಿತೀಯ ತಬಲಾ ಪಟುವಾಗಿದ್ದನು. ಈತನ ತಬಲವಾದನದಿಂದ ಗುರುಗಳಾದ ಖಾನ್‌ಗೌಡರೇ ತುಂಬು ಹೃದಯದಿಂದ ಹೊಗಳುತ್ತಿದ್ದರು. ಕಾಳಪ್ಪ ಪತ್ತಾರರು ಸಂಗೀತ ಕಲೆಯ ಜೊತೆಗೆ ಭಾವಚಿತ್ರ ರಚನೆ ಮತ್ತು ಲೋಹದ ಮೂರ್ತಿಯ ತಯಾರಿಕೆಯಲ್ಲಿ ಪ್ರಸಿದ್ಧರಾಗಿದ್ದರು. ಇವರು ೧೯೭೧ರಲ್ಲಿ ತೀರಿಕೊಂಡರು.

ಯಲಬುರ್ಗಾ ತಾಲೂಕಿನ ಇಟಗಿಯಲ್ಲಿದ್ದ ಶಿವರುದ್ರಪ್ಪ ಕಿನ್ನಾಳ ಎಂಬುವವರು ಹಾರ್ಮೋನಿಯಂ ಬಾರಿಸುವುದರಲ್ಲಿ ಪ್ರಖ್ಯಾತರಾಗಿದ್ದರು. ಇವರು ಗರುಡ ಸದಾಶಿವರಾಯರ ಕಂಪನಿಯಲ್ಲಿ ೧೯ ವರ್ಷಗಳ ಕಾಲ ಹಾರ್ಮೋನಿಯಂ ಮಾಸ್ತರರಾಗಿ ಸೇವೆಸಲ್ಲಿಸಿದರು. ಆನಂತರ ಕೆಲವು ಕಾಲದವರೆಗೆ ಸುಳ್ಯದ ದೇಸಾಯಿಯವರ ನಾಟಕ ಕಂಪನಿಯಲ್ಲಿ ಇವರು ಕೆಲಸ ಮಾಡಿದರು. ಪ್ರಸಿದ್ಧ ಸಾಹಿತಿಗಳಾಗಿದ್ದ ಶಿವರಾಮ ಕಾರಂತರು ಈ ಭಾಗಕ್ಕೆ ಬಂದಾಗ ಶಿವರುದ್ರಪ್ಪನವರನ್ನು ಭೇಟಿಯಾಗುತ್ತಿದ್ದರು. ಜಿಲ್ಲೆಯ ಇರಕಲ್ಲಗಡದಲ್ಲಿ ವಿರುಪಾಕ್ಷಪ್ಪ ಎಲಿಗಾರ ಎಂಬ ದೊಡ್ಡ ಹಾರ್ಮೋನಿಯಂ ಕಲಾವಿದರಿದ್ದರು. ಖಾನ ಗೌಡರ ಸಮಕಾಲೀನರಾಗಿದ್ದ ಇವರು ಅನೇಕ ನಾಟಕ ಕಂಪನಿಗಳಲ್ಲಿ ಮಾಸ್ತರರಾಗಿ ಸೇವೆಸಲ್ಲಿಸಿದ್ದಾರೆ.

ಇದೇ ಊರಿನ ವೀರಭದ್ರಪ್ಪ ಪತ್ತಾರ ಎಂಬುವರು ಸಹಿತ ಉತ್ತಮ ತಬಲಾ ಪಟುವಾಗಿದ್ದರು. ಹಲವಾರು ನಾಟಕ ಕಂಪನಿಗಳಿಗೆ ತಬಲಾ ನುಡಿಸಿದ ಇವರು ನಂತರದ ದಿನಗಳಲ್ಲಿ ಕೊಪ್ಪಳದಲ್ಲಿ ಸಂಗೀತ ಶಾಲೆಯೊಂದನ್ನು ಆರಂಭಿಸಿದರು. ಇವುಗಳಲ್ಲದೆ ಹಾಡುಗಾರಿಕೆಯಲ್ಲಿಯೂ ಜಿಲ್ಲೆ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಕೊಪ್ಪಳದ ಮಾದವರಾವ ಇನಾಮದಾರ ಧಾರವಾಡ ಆಕಾಶವಾಣಿ ಕೇಂದ್ರದ ಕಲಾವಿದರಾಗಿದ್ದರು. ಯಲಬುರ್ಗಾ ತಾಲೂಕಿನ ಮುಧೋಳದ ಬಸವರಾಜ ಗೋನಾಳ ಮತ್ತು ದೇವೇಂದ್ರಕುಮಾರ ಪತ್ತಾರ ಅವರು ಖ್ಯಾತ ಗಾಯಕರಾಗಿದ್ದರು. ಇವರಿಬ್ಬರು. ಆಕಾಶವಾಣಿಯ ಎ ಗ್ರೇಡ್ ಕಲಾವಿದರಾಗಿದ್ದರಲ್ಲದೆ ಕರ್ನಾಟಕ ಮತ್ತು ಭಾರತದಾದ್ಯಂತ ಸಂಗೀತ ಕಛೇರಿಗಳನ್ನು ನೀಡಿ ಕೊಪ್ಪಳ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಯಲಬುರ್ಗಾ ತಾಲೂಕಿನ ಮಂಡಲಗೇರಿಯ ಶಿವರಾಜಗವಾಯಿಗಳು ಸಂಗೀತ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು ಮಾಡಿದ್ದಾರೆ. ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಅನೇಕ ವರ್ಷ ಅಧ್ಯಯನ ಮಾಡಿದ ಇವರು ಕೆಲವು ಕಾಲದವರೆಗೆ ತಮ್ಮ ಸಂಗೀತ ಸಾಧನೆಯಿಂದಾಗಿ ಪುಟ್ಟರಾಜ ಗವಾಯಿಗಳ ಉತ್ತರಾಧಿಕಾರಿಗಳೆಂದೇ ಕರೆಯಿಸಿಕೊಳ್ಳತೊಡಗಿದ್ದರು. ಇವರು ಹುಟ್ಟು ಕುರುಡರಾಗಿದ್ದು ತಮ್ಮ ಗುರು ಪುಟ್ಟರಾಜ ಗವಾಯಿಗಳಂತೆ ಬಹುಮುಖ ಸಂಗೀತ ಪ್ರತಿಭೆಯನ್ನು ಹೊಂದಿದವರಾಗಿದ್ದಾರೆ. ಇವರು ಶಿವಮೊಗ್ಗದಲ್ಲಿ ಮತ್ತು ದಾವಣಗೆರೆಯಲ್ಲಿ ಸಂಗೀತ ಶಾಲೆಯನ್ನು ಪ್ರಾರಂಭಿಸಿ ಅನೇಕರಿಗೆ ಮಾರ್ಗದರ್ಶನ ನೀಡಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾಗಿದ್ದ ಬಂಗಾರಪ್ಪನವರು ಶಿವಮೊಗ್ಗದಲ್ಲಿ ಇವರಿಂದ ಸಂಗೀತ ಪಾಠವನ್ನು ಕಲಿತುಕೊಂಡಿದ್ದಾರೆ. ಇವರುಗಳಲ್ಲದೆ ಜಿಲ್ಲೆಯಲ್ಲಿ ಇನ್ನೂ ಅನೇಕ ಜನ ಸಂಗೀತ ಕಲಾವಿದರು. ಕೆಲಸ ನಿರ್ವಹಿಸುತ್ತಿದ್ದಾರೆ. ಗಂಗಾವತಿಯ ಬಸವಲಿಂಗಯ್ಯ ಹಿರೇಮಠರು ಉತ್ತಮ ಪಿಟೀಲುವಾದಕರು. ಅದರಂತೆ ತಾವರಗೆರೆಯ ಮರಿಯಪ್ಪ ಮನೆದಾಳ ಎಂಬವರು ಶ್ರೇಷವಿ ಬಾನ್ಸುರಿವಾದಕರಾಗಿದ್ದರು. ಇವರು ತಾವರಗೆರೆಯಲ್ಲಿ ಸಂಗೀತ ಶಾಲೆಯನ್ನು ನಡೆಸುತ್ತಿದ್ದರು. ಅಲ್ಲದೇ ತಾವರೆಗೆರೆಯ ಅಂಬಣ್ಣನವರು ಕೊಳಲುವಾದನದಲ್ಲಿ ಸೋಮನ್ನ ಕುದುರಿಮೋಲೆ, ಶೇಶಪ್ಪ ನಾಲತವಾಡ ಎಂಬುವರು ಜಿಲ್ಲೆಯ ಮಂಗಳೂರಿನವರಾಗಿದ್ದು ಹೆಸರಾಂತ ತಬಲವಾದಕರಾಗಿದ್ದರು. ಇವರಲ್ಲದೆ ಕುಕನೂರಿನ ಶಿವಕುಮಾರ ಕಲ್ಲೂರ ಸಹಿತ ಉತ್ತಮ ತಬಲವಾದಕರಾಗಿದ್ದರು. ಇಂತಹ ಪ್ರತಿಭೆಗಳಲ್ಲದೆ ಮುದ್ದಾಬಳ್ಳಿಯ ಸಿದ್ದಯ್ಯ ಸೊಪ್ಪಿಮಠ, ವೀರುಪಾಕ್ಷಪ್ಪ ಎಲಿಗಾರ, ರಾಮಣ್ಣ ಮರೋಳ, ಇವರು ಹಾರ್ಮೋನಿಯಂ ವಾದಕರಾಗಿದ್ದರು. ಯಂಕವ್ವ ಕಟ್ಟಿಮನಿ ಎಂಬಾಕೆ ಮತ್ತು ಕಾಸಿಬಾಯಿ ಕಟ್ಟಿಮನೆ ಇವರು ರಂಗಗೀತೆಗಳನ್ನು ಹಾಡುವಲ್ಲಿ ಪ್ರಸಿದ್ಧರಾಗಿದ್ದರು ಮತ್ತು ಹುಲಗೇರಿಯ ಅಂಬಾದಾಸ ಸಂಗನ ಬಸಪ್ಪ ಕುಕನೂರ ಇವರಿಬ್ಬರು ರಂಗಕಲಾವಿದರಾಗಿದ್ದರು. ಹೀಗೆ ಕೊಪ್ಪಳ ಜಿಲ್ಲೆಯು ನಾಡಿನ ಸಂಗೀತ ಕ್ಷೇತ್ರಕ್ಕೂ ಕೊಡುಗೆ ನೀಡುವ ಮೂಲಕ ಸಾಂಸ್ಕೃತಿಕ ಇತಿಹಾಸವು ಪ್ರಬುದ್ದವಾಗಿ ಬೆಳೆಯುವಲ್ಲಿ ತನ್ನ ಕೊಡುಗೆ ನೀಡಿದೆ.

ಕೊಪ್ಪಳ ಜಿಲ್ಲೆಯಲ್ಲಿ ಇನ್ನುಳಿದ ಎಲ್ಲಾ ಕಲಾಪ್ರಕಾರಗಳಂತೆ ಚಿತ್ರಕಲೆಯೂ ಸಹಿತ ಸಮೃದ್ಧವಾಗಿ ಬೆಳೆದಿದೆ. ಈ ಜಿಲ್ಲೆಯಲ್ಲಿ ಆದಿಮಾನವರ ಕಾಲದ ಶಿಲಾಶ್ರಯ ಚಿತ್ರಗಳಿಂದ ಒಳಗೊಂಡು ಸಮಕಾಲೀನ ಸಂದರ್ಭದವರೆಗೂ ಚಿತ್ರಕಲಾ ಪ್ರವಾಹವು ನಿರಂತರವಾಗಿ ಹರಿದು ಬಂದಿದೆ. ಆದಿಮಾನವನ ಕಾಲದ ಬಯಲು ಬಂಡೆಯ ಚಿತ್ರಗಳು, ಗುಹಾವರ್ಣ ಚಿತ್ರಗಳು ಜಿಲ್ಲೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ನಂತರದ ಐತಿಹಾಸಿಕ ಕಾಲದ ಚಿತ್ರಕಲೆ ಈ ಪ್ರದೇಶದಲ್ಲಿ ವಿಶೇಷವಾಗಿ ಬೆಳೆದಿದೆ. ಪ್ರಾಚೀನ ಕಾಲದಲ್ಲಿ ಕೊಪ್ಪಳವು ಒಂದು ಜೈನ

ಕೇಂದ್ರವಾಗಿದ್ದು ಇಲ್ಲಿನ ಬಸದಿಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಲಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಇದಲ್ಲದೆ ಆನೆಗುಂದಿಯ ಹುಚ್ಚಪ್ಪಯ್ಯನ ಮಠ, ಕನಕಗಿರಿಯ ಕನಕಾಚಲಪತಿ ದೇವಾಲಯಗಳಲ್ಲಿ ವಿಜಯನಗರ ಕಾಲದ ಭಿತ್ತಿಚಿತ್ರಗಳಿವೆ. ಇಟಗಿಯ ಪ್ರಖ್ಯಾತ ಮಹಾದೇವ ದೇವಾಲಯದಲ್ಲಿ ಪ್ರಾಚೀನ ಕಾಲದಲ್ಲಿ ಬಣ್ಣದ ಲೇಪನದಿಂದ ಅಲಂಕರಿಸಲ್ಪಟ್ಟಿರುವುದು ಅಲ್ಲಿನ ಕುರುಹುಗಳಿಂದ ಕಂಡುಬರುತ್ತದೆ. ಅಲ್ಲಲ್ಲಿ ಗೋಡೆಗಳ ಮೇಲೆ ಕೆಂಪುಬಣ್ಣವು ಇನ್ನು ಉಳಿದುಕೊಂಡಿರುವುದು ಈ ಮಾತಿಗೆ ಪುಷ್ಟಿ ಒದಗಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ಪತನದ ನಂತರ ಕಿನ್ನಾಳಕ್ಕೆ ಬಂದು ನೆಲೆಸಿದ ಚಿತ್ರಕಲಾವಿದರು ತಮ್ಮದೆ ಆದ ಪ್ರತ್ಯೇಕ ಕಲಾಶೈಲಿಯನ್ನು ಉಳಿಸಿಕೊಂಡಿದೆ. ಇದಲ್ಲದೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಹಚ್ಚೆ, ರಂಗವಲ್ಲಿ ಬೆಳದಿಂಗಳು ಚಿತ್ರಕಲೆ, ಸೀಗಿ ಚಿತ್ರಕಲೆ, ತೊಗಲುಗೊಂಬೆ ಚಿತ್ರಕಲೆ, ಹಬ್ಬ ಹರಿದಿನಗಳಲ್ಲಿ ರಚನೆ ಮಾಡುವ ಜನಪದ ಚಿತ್ರಕಲೆಗಳು ವ್ಯಾಪಕವಾಗಿ ಹರಡಿಕೊಂಡಿವೆ. ಈ ಎಲ್ಲಾ ಚಿತ್ರಕಲಾ ಪ್ರಕಾರಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ಪ್ರತಿಯೊಂದನ್ನು ಪ್ರತ್ಯೇಕವಾಗಿ ವಿಂಗಡಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

❑❑❑

ಅಧ್ಯಾಯ - ಮೂರು

ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಪ್ರಾಗೈತಿಹಾಸಿಕ ಚಿತ್ರಕಲೆ

ಆದಿ ಮಾನವನು ತನ್ನ ಆಶ್ರಯತಾಣಗಳಂತಿದ್ದ ಗುಹೆ, ಕಲ್ಲಾಸರೆ, ಪೊಟರೆಗಳಂತಲ್ಲಿ ತನ್ನ ದೈನಂದಿನ ಜೀವನದಲ್ಲಿ ಆಗುವ ಸಂತೋಷ ದುಃಖದುಮ್ಮಾನಗಳನ್ನು ಹಂಚಿಕೊಳ್ಳಲು ಗೋಡೆಯ ಮೇಲೆ ಚಿತ್ರಿಸಲಾರಂಭಿಸಿದ ಅವುಗಳಲ್ಲಿ ತನ್ನ ನಿತ್ಯದ ಬೇಟೆ ದೃಶ್ಯಗಳು, ಬೇಟೆಯಾಡುವ ಪ್ರಾಣಿಯ ದೃಶ್ಯಗಳು, ಮನುಷ್ಯರು, ನೃತ್ಯದ ದೃಶ್ಯಗಳು, ಯಂತ್ರಗಳ ನಕ್ಷಾ ವಿನ್ಯಾಸಗಳು ಇಂತಹ ಹಲವಾರು ದೃಶ್ಯಗಳು ಮುಖ್ಯವಾದವುಗಳು, ಇವುಗಳನ್ನೇ ಆದಿಮಾನವನ ಚಿತ್ರಗಳೆಂದು ಕರೆಯಲಾಗಿದೆ.

ಈ ಕಲೆಯು ಶಿಲಾಯುಗದ ಕಾಲದಲ್ಲಿ ಪ್ರಾರಂಭವಾಗಿರುವುದು ಇತಿಹಾಸತಜ್ಞರ ಅಭಿಪ್ರಾಯವಾಗಿದೆ. ಮಾನವನ ಮೊದಲ ಭಾಷೆ ಅದು ಚಿತ್ರಭಾಷೆ ಎಂದೇ ಹೇಳಬಹುದು. ಏಕೆಂದರೆ ಅಕ್ಷರದ ಅರಿವು ಉಂಟಾಗುವುದಕ್ಕಿಂತ ಎಷ್ಟೋ ವರ್ಷಗಳ ಹಿಂದೆ ಮನುಷ್ಯ ತನ್ನ ಭಾವನೆಗಳನ್ನು ಚಿತ್ರಗಳ ಮೂಲಕ ಅಭಿವ್ಯಕ್ತಿಸುತ್ತಿದ್ದನು. ಇದು ಶಿಷವಿ ಪ್ರಕಾರವಾಗಿರಲಿಲ್ಲ, ಕೇವಲ ಗೀಚು ಪ್ರಧಾನವಾಗಿತ್ತು. ಕ್ರಮೇಣ ಗೀಚುಗಳು, ಚಿತ್ರಗಳು, ಅಕ್ಷರಗಳ ಸೃಷಿವಿಗೆ ಕಾರಣವಾದವು. ಹೀಗಾಗಿ ಮಾನವನ ಸಾಂಸ್ಕೃತಿಕರಣದ ಪ್ರಕ್ರಿಯೆಯಲ್ಲಿ ಚಿತ್ರಕಲೆಗೆ ಮೊದಲ ಸ್ಥಾನವಿದೆ.

ಪ್ರಪಂಚದ ಹಲವಾರು ಭಾಗಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಹಾಗೂ ಇತಿಹಾಸ ಕಾಲದ ವರ್ಣಚಿತ್ರ ಗವಿಗಳು, ಕಲ್ಲಾಸರೆಗಳು ಮತ್ತು ಬಯಲುಬಂಡೆಯ ಚಿತ್ರಗಳು ಅಸಂಖ್ಯಾತವಾಗಿ ಬೆಟ್ಟಗುಡ್ಡಗಳಲ್ಲಿವೆ. ಇವುಗಳ ಶೋಧದ ಕಾರ್ಯ ಆಕಸ್ಮಿಕವಾಗಿ ನಡೆದಿದೆ. ಹಾಗಾಗಿ ಇವುಗಳ

ಸೌಂದರ್ಯ ಮತ್ತು ಮಹತ್ವಗಳ ಅರಿವಾಗುತ್ತಿರುವುದರಿಂದ ಇತ್ತೀಚೆಗೆ ಇವುಗಳ ಶೋಧನೆ ಅಭ್ಯಾಸದಲ್ಲಿ ಆಸಕ್ತಿ ಹೆಚ್ಚುತ್ತಿದೆ.

೧೮೩೭ರಲ್ಲಿ ಸರ್ ಜರ್ಜಾಗ್ರೆ ಅವರಿಂದ ಸಿಡ್ನಿ ಆಸ್ಟ್ರೇಲಿಯದಲ್ಲಿಯ ವರ್ಣ ಚಿತ್ರಿತ ಗವಿಗಳ ಶೋಧನೆ ಪ್ರಥಮವಾದರೂ ಬಹುಶಃ ೧೮೭೯ರ ಅಲ್ತಮಿರ ಸ್ಪೈನ್‌ದಲ್ಲಿಯ ವರ್ಣಚಿತ್ರಿತ ಗವಿಗಳ ಶೋಧನೆ.[೧] ಇತಿಹಾಸದಲ್ಲಿಯೇ ವಿಶೇಷವಾದುದು. ಆ ವರ್ಷ ಡಾಸ್ ಮಾರೆಲಿನೊದ ಸೌತ್‌ಪೋಲನು ಸೈನಿಕ ಕ್ಯಾಂಟುಬ್ರೇನ್ ಬೆಟ್ಟದ ಅಲ್ತಮಿರ ಗವಿಗಳಲ್ಲಿ ಕಪ್.ಬಣ್ಣದ ಗೂಳಿಗಳ ಚಿತ್ರಗಳನ್ನು ಆಕಸ್ಮಿಕವಾಗಿ ಶೋಧಿಸಿದನು. ಹೀಗೆ ಆಲ್ತಮಿರ ಗವಿ ಚಿತ್ರಗಳು ಮೊದಲಿಗೆ ಬೆಳಕಿಗೆ ಬಂದಿರುವುದರೊಂದಿಗೆ ಪ್ರಾಗೈತಿಹಾಸಿಕ ಚಿತ್ರಗಳ ಶೋಧನಾ ಕಾರ್ಯ ಚಾಲನೆಯನ್ನು ಪಡೆದುಕೊಂಡಿತು.[೨] ಕ್ರಮವಾಗಿ ಆಸ್ಟ್ರೇಲಿಯಾ, ಆಫ್ರಿಕಾ, ಜರ್ಮನಿ, ಇಂಗ್ಲೇಂಡ್, ಭಾರತ, ರಷ್ಯಾ, ಜಪಾನ್ ಮೊದಲಾದ ರಾಷ್ಟ್ರಗಳಲ್ಲಿ ಇಂತಹ ಚಿತ್ರಗಳ ಶೋಧನೆಯಾಯಿತು ಮತ್ತು ಆಗುತ್ತಲಿದೆ, ಜೊತೆಗೆ ಇವುಗಳ ಅಧ್ಯಯನವೂ ನಡೆಯುತ್ತಲಿದೆ. ಈಗ ಭಾರತದಲ್ಲಿ ಕೂಡ ಅಧ್ಯಯನ ತೀವ್ರವಾಗಿ ನಡೆಯುತ್ತಿದೆ.

ಭಾರತದಲ್ಲಿ ಗವಿವರ್ಣ ಮತ್ತು ಬಂಡೆ ಚಿತ್ರಗಳ ಶೋಧನೆ ಅಲ್ಲಲ್ಲಿ ಆಕಸ್ಮಿಕವಾಗಿ ೧೮೮೦ರಲ್ಲಿ ಪ್ರಾರಂಭವಾಯಿತೆನ್ನಬಹುದಾಗಿದೆ. ಹೂಬರ್ಟ್‌ನಾಕ್ಸ್ ಬಳ್ಳಾರಿಯ ಸಮೀಪದಲ್ಲಿರುವ ಕುಪ್ಪಗಲ್ಲು ಗ್ರಾಮದಲ್ಲಿಯ ಗುಡ್ಡಗಳಲ್ಲಿ ಗುಡ್ಡಗಳಲ್ಲಿ ದೊಡ್ಡ ದೊಡ್ಡ ಗುಂಡುಕಲ್ಲುಗಳ ಮೇಲೆ ಕುಟ್ಟಿ, ಗೀರಿ ಬಿಡಿಸಿದ ಚಿತ್ರಗಳನ್ನು ಸುಮಾರು ೧೮೮೦ರ ಸಮಯದಲ್ಲಿ ನೋಡಿ ಅವುಗಳ ಛಾಯಾಚಿತ್ರ ತೆಗೆದು ರಾಬರ್ಟ್ ಬ್ರೂಸ್ ಪುಟ್ ಅವರಿಗೆ ಕಳುಹಿಸಿಕೊಟ್ಟರು. ಪುಟ್ ಅವರು ೧೯೧೬ರಲ್ಲಿ ಪ್ರಕಟಿಸಿದ "ದಿ ಫುಟ್ ಕಲೆಕ್ಷನ್ ಆಫ್ ಇಂಡಿಯನ್ ಪ್ರಿ ಹಿಸ್ಟಾರಿಕ್ ಆ್ಯಂಡ್ ಪ್ರೋಟೋ ಹಿಸ್ಟಾರಿಕ್ ಆ್ಯಂಟಿಕ್ವಿಟೀನ್" ಪುಸ್ತಕದಲ್ಲಿ ಇವುಗಳ ವರ್ಣನೆಯನ್ನು ಕೊಟ್ಟಿದ್ದಾರೆ.[೩] ಇದೇ ಸಮಯದಲ್ಲಿ ಭಾರತದ ಅನೇಕ ಭಾಗಗಳಲ್ಲಿ ಅಂದರೆ ಮಿರ್ಜಾಪುರ, ಮಧ್ಯಪ್ರದೇಶ, ವಿಂಧ್ಯಪ್ರದೇಶದ ಕೈಮೂರ್ ಬೆಟ್ಟದ ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳನ್ನು ಕಂಡು ೧೮೮೦-೮೩ರಲ್ಲಿ ಅವುಗಳ ಬಗೆಗೆ ಮೂರು ಲೇಖನಗಳನ್ನು ಜಾನ್ ಕಾರ್‌ಬರ್ನ್ ಅವರು ಪ್ರಕಟಿಸಿದರು.[೪] ೧೯೦೧ರಿಂದ ಉತ್ತರಭಾರತದಲ್ಲಿ ಅಲ್ಲಲ್ಲಿ ಇಂತಹ ಗವಿವರ್ಣ ಚಿತ್ರಗಳು ಶೋಧವಾಗುತ್ತಲಿದ್ದವು.

ಪ್ರಸ್ತುತ ಕೊಪ್ಪಳ ಜಿಲ್ಲೆಯಲ್ಲಿ ೧೯೩೫ರ ಲಿಯೋನಾಡ್ ಮನ್ ಹಿರೆಬೆನಕಲ್‌ನ

---

೦೧. ಜಾನ್ ಜೂಲಿಯಾಸ್ ನಾರ್‌ವಿಟ್ (ಸಂ) : ೧೯೯೦ ಆಕ್ಸ್‌ಫರ್ಡ್, ಇಲ್ಲುಸ್ಟ್ರೇಟೆಡ್ ಇನ್ ಸೈ ಕ್ಲೋಪಿಡಿಯಾ ಆಫ್ ದಿ ಆರ್ಟ್ಸ್, ಪುಟ-೮೩

೦೨. ಡಾ. ಶರಣ ಬಸಪ್ಪ ಕೊಲ್ಕಾರ್ : ಶಿಲಾಯುಗದ ಗವಿವರ್ಣ ಚಿತ್ರಗಳು, ಪುಟ-೨

೦೩. ಡಾ. ಅ.ಸುಂದರ (ಸಂ) : ಕರ್ನಾಟಕ ಚರಿತ್ರೆ ಸಂಪುಟ-೧, ಪುಟ-೨೪೨

೦೪. ಅದೇ, ಪುಟ-೨೪೨

ಶೋಧನೆಯ ನಂತರ ಪುರಾತತ್ವಜ್ಞ ಡಾ.ಅ.ಸುಂದರವರು, ಪ್ರೊ.ಲಕ್ಷ್ಮಣ್ ತೆಲಗಾವಿಯವರು, ಆರಂ.ಎಂ.ಷಡಕ್ಷರಯ್ಯ, ಬಿ.ಸಿ.ಪಾಟೀಲ್, ಶಂಭುಲಿಂಗಪ್ಪನವರು, ಹಾಗೂ ಶರಣಬಸಪ್ಪ ಕೊಲ್ಕಾರ್ ವಿಲಾಸ್ ಜೋಗುಳ ಹಲವಾರು ಕಲ್ಲಾಸರೆ, ಬಂಡೆ ಚಿತ್ರ ನೆಲೆಗಳನ್ನು ಶೋಧಿಸಿದ್ದಾರೆ.

ಕರ್ನಾಟಕದಲ್ಲಿ

ಕರ್ನಾಟಕದಲ್ಲಿ ೧೮೮೦ರ ಸಮಯದಲ್ಲಿ ಹ್ಯೂಬರ್ಟ್ ನಾಕ್ಸ್ ಕಪಗಲ್‌ನಲ್ಲಿ ಕುಟ್ಟಿದ ಚಿತ್ರಗಳನ್ನು ಶೋಧಿಸಿದ ನಂತರ ೧೯೩೫ರಲ್ಲಿ ಲಿಯೋನಾರ್ಡ್‌ಮನ್ ಅವರು ಹಿರೇಬೆನಕಲ್‌ನ ಗುಡ್ಡದಲ್ಲಿ ಮೂರು ಗವಿವರ್ಣ ಚಿತ್ರಗಳನ್ನು ಹಾಗೂ ಸುಮಾರು ಅದೇ ಸಮಯದಲ್ಲಿ ಭಿಲ್ಲಮರಾಯನ ಗುಡ್ಡದಲ್ಲಿ ಕುಟ್ಟಿದ ಮತ್ತು ಗೀರು ಚಿತ್ರಗಳನ್ನು ಕಂಡುಹಿಡಿದರು.[೫]

ಲಿಯೋನಾರ್ಡ್‌ಮನ್ ಅವರ ಶೋಧನೆಯ ನಂತರ ೧೯೪೦ರ ದಶಕದಲ್ಲಿ ಮಸ್ಕಿ, ಕಲ್ಲೂರು, ರಾಯಚೂರು ತಾಲೂಕು, ಬಲಚಕ್ರ ಯಾದಗಿರಿ ತಾಲೂಕು, ಗುಲಬರ್ಗಾ ಜಿಲ್ಲೆ ಮತ್ತು ಆತನೂರು ಎಂಬಲ್ಲಿ ಹಿಂದಿನ ಹೈದ್ರಾಬಾದ್ ಸಂಸ್ಥಾನದ ಪುರಾತತ್ವ ಸರ್ವೇಕ್ಷಣ ಮತ್ತು ಭೂ ವಿಜ್ಞಾನ ವಿಭಾಗಗಳು ಕ್ರಮವಾಗಿ ಕುಟ್ಟಿದ ಮತ್ತು ಗವಿವರ್ಣ ಚಿತ್ರಗಳನ್ನು ಶೋಧಿಸಿ ತಮ್ಮ ಶಾಖೆಗಳ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿವೆ.[೬] ಆಗಿನ ಮುಂಬೈ ಸರ್ಕಾರದ ಕನ್ನಡಸಂಶೋಧನ ಸಂಸ್ಥೆಯು ೧೯೫೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಲ್ಪಟ್ಟಿತು. ಕುಳ್ಳೊಳ್ಳಿ ಜಮಖಂಡಿ ತಾಲೂಕು, ಬಿಜಾಪುರ ಜಿಲ್ಲೆಯಲ್ಲಿಯ ಗೀರಿದ ಕುಟ್ಟಿದ ಚಿತ್ರಗಳನ್ನು ೧೯೫೧ರಲ್ಲಿ ಪ್ರಕಟಿಸಿತು.[೭] ಅಲ್ಚಿನ್ ದಂಪತಿಗಳು ಪಿಕ್ಲಿಹಾಳ್ ಲಿಂಗಸುಗೂರು ತಾಲೂಕು, ರಾಯಚೂರು ಜಿಲ್ಲೆಯಲ್ಲಿ ತಾವು ಶೋಧಿಸಿದ ಪ್ರಾಚೀನ ನೆಲೆಯ ಉತ್ಖನನ ಕಾಲದಲ್ಲಿ ಇವೆರಡೂ ತರಹದ ಚಿತ್ರಗಳನ್ನು ಕಂಡುಹಿಡಿದು ಅಧ್ಯಯನ ಮಾಡಿದ್ದಾರೆ.[೮]

ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಶಿರಗುಪ್ಪ ತಾಲೂಕು ಸಂಗನಕಲ್ಲು[೧೦] ಬೆಳಗಲ್ಲು ಮತ್ತು ಕುರುಗೋಡು, ಬಳ್ಳಾರಿ ತಾಲೂಕು ಅಪ್ಪಯ್ಯನ ಹಳ್ಳಿಯಲ್ಲಿ ಇಂತಹ ಚಿತ್ರಗಳನ್ನು ಎಂ.ಎಸ್.ನಾಗರಾಜ್‌ರಾವ್, ರು.ಮ.ಷಡಕ್ಷರಯ್ಯ ಮೊದಲಾದವರು ಶೋಧಿಸಿದರು.

---

೦೫. ಮನ್ ಎಲ್ : ೧೯೩೪, ೩೫, ಎನಿವಲ್ ರಿಪೋರ್ಟ್ ಆಫ್ ದಿ ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್ ಆಫ್ ದಿ ಫಾರ್ಮರ್ ಹೈದ್ರಾಬಾದ್ ಸ್ಟೇಟ್,

೦೬. ಎನಿವಲ್ ರಿಪೋರ್ಟ್ ಆಫ್ ದಿ ಜಿಯಲಾಜಿಕಲ್ ಸರ್ವೇ ಆಫ್ ದಿ ಫಾರ್ಮರ್ ಹೈದ್ರಾಬಾದ್ ಸ್ಟೇಟ್ ಸಂಪುಟ-೪, ೧೯೪೧, ಪುಟ-೮೫

೦೭. ಪಂಚಮುಖಿ ಆರ್.ಎಸ್ : ೧೯೩೯ ೪೦, ಎನಿವಲ್ ರಿಪೋರ್ಟ್ ಆಫ್ ದಿ ಕನ್ನಡ ರಿಸರ್ಚ್ ಇನ್ಸಿಟ್ಯೂಟ್, ಪುಟ-೨೧

೦೮. ಆಲ್ವಿನ್ ಎಫ್.ಆರ್ : ೧೯೬೦, ಪಿಕ್ಲಿಹಾಳ್ ಎಕ್ಸ್‌ಕಾವೇಷನ್ಸ್ ಎಫಿಜಿಎಸ್ ನಂ-೧,

೦೯. ನಾಗರಾಜ ಎಂ.ಎಸ್ ಮತ್ತು ಮಲ್ಹೋತ್ರ ಕೆ.ಸಿ. : ೧೯೬೫, ದಿ.ಸ್ಟೋನ್ ಎಜ್ ಹಿಲ್ ಡೀಲರ್ಸ್ ಆಫ್ ತೆಕ್ಕಲಕೋಟ ಡಿಸಿಪಿಜಿ ಮತ್ತು ಆರ್.ಎಸ್, ಪುಟ-೯೭

೧೦. ಅನ್ಸಾರಿ ಝುಡ್.ಡಿ ಮತ್ತು ನಾಗರಾಜ ರಾವ್ ಎಂ.ಎಸ್ : ೧೯೬೯, ಎಕ್ಸ್‌ಕಾವೇಷನ್ಸ್ ಐಟ್ ಸಂಗನಕಲ್ಲು ೧೯೬೪ ೬೫, ಡಿ.ಸಿ.ಪಿ.ಜಿ ಮತ್ತು ಆರ್.ಎಸ್

ಕರ್ನಾಟಕದ ಪ್ರಾಗೈತಿಹಾಸಕಾಲದ ಕಲೆಯ ಶೋಧನೆ ಮತ್ತು ಅಧ್ಯಯನ ಕ್ಷೇತ್ರದಲ್ಲಿ ಡಾ.ಅ.ಸುಂದರ ಅವರ ಕೊಡುಗೆ ಅಪೂರ್ವವಾಗಿದೆ. ಆ ಬಗೆಗೆ ಇಲ್ಲಿ ವ್ಯವಸ್ಥಿತ ಅಧ್ಯಯನ ನಡೆಸಿದವರಲ್ಲಿ ಅವರೇ ಮೊದಲಿಗರಾಗಿದ್ದಾರೆ. ೧೯೬೮ರಲ್ಲಿ ಡಾ.ಅ.ಸುಂದರವರು ಲಿಯೋನಾರ್ಡ್‌ಮನ್ ಅವರು ಹಿಂದೆ ಹಿರೇಬೆನಕಲ್ಲಿನಲ್ಲಿ ಶೋಧಿಸಿದ ಚಿತ್ರಗಳ ನೆಲೆಯನ್ನು ಗುರುತಿಸುವ ಸಂದರ್ಭದಲ್ಲಿ ಇನ್ನೂ ಒಂಬತ್ತು ಕಡೆ ಚಿತ್ರಗಳನ್ನು ಶೋಧಿಸಿ[೧೧] ಆ ಬಗೆಗೆ ಲೇಖನ ಪ್ರಕಟಿಸಿದ್ದರು.[೧೨] ತದನಂತರ ಅವರು ೧೯೭೪ರಿಂದ ಕರ್ನಾಟಕದ ಹಲವಾರು ಭಾಗಗಳಲ್ಲಿ ಅನ್ವೇಷಣೆ ಕಾರ್ಯವನ್ನು ಕೈಗೊಂಡು ರಾಮದುರ್ಗ, ಬಾದಾಮಿ, ಹೊಸಮಹಾಕೂಟ, ಐಹೊಳೆ, ಕೊಪ್ಪಳ ಜಿಲ್ಲೆಯ ಬಿಳೆಬಾವಿ, ನಾರಾಯಣ ಪೇಟೆ, ಬಂಡಿಹರ್ಲಾಪುರ ಎಲ್ಲವು ಕೊಪ್ಪಳ ತಾಲೂಕು, ಮಲ್ಲಾಪುರ, ಆನೆಗುಂದಿ, ತಿರುಮಲಾಪುರ ಗಂಗಾವತಿ ತಾಲೂಕು, ಮಾನ್ವಿ, ಬೈಲಮರ್ಚೆಡ್ ಮಾನ್ವಿ ತಾಲೂಕು ಮುಂತಾದೆಡೆಗಳಲ್ಲಿ ವರ್ಣ ಚಿತ್ರಗಳನ್ನು ಹಾಗೂ ತಾವರೆಗೆರೆ ಕೊಪ್ಪಳ ಜಿಲ್ಲೆಯ ಕುರುಗೋಡು, ಹಳಕುಂದಿ ಬಳ್ಳಾರಿ ಜಿಲ್ಲೆಯ ಬ್ರಹ್ಮಗಿರಿ, ಚಿತ್ರದುರ್ಗ ಜಿಲ್ಲೆಯ ಜಟ್ಟಿಂಗ ರಾಮೇಶ್ವರ, ಚಂದ್ರವಳ್ಳಿ ಮತ್ತು ಬ್ರಹ್ಮಗಿರಿ, ಬೋಳೆ, ಅಂಕೋಲಾ ಹತ್ತಿರ ಉತ್ತರ ಕನ್ನಡ ಜಿಲ್ಲೆಗಳಲ್ಲಿ[೧೩] ಹಾಗೂ ಇತ್ತೀಚೆಗೆ ಹೊಳಲೂರು[೧೪] ಮುತ್ತನಹಳ್ಳಿ ಶಿವಮೊಗ್ಗಾ ತಾಲೂಕು ಹಿರೇಮಾದಾಪುರ ಧಾರವಾಡ ಜಿಲ್ಲೆಯಲ್ಲಿ ಕುಟ್ಟಿದ ಹಾಗೂ ಗೀರಿದ ಚಿತ್ರಗಳನ್ನು ಶೋಧಿಸಿದ್ದಾರೆ. ಇವುಗಳ ಜೊತೆಗೆ ಶೋಧವಾದದ್ದನ್ನೆಲ್ಲಾ ಅಧ್ಯಯನ ಮಾಡಿ ಅನೇಕ ಲೇಖನಗಳನ್ನು[೧೫] ಮತ್ತು ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.[೧೬] ಇತ್ತೀಚೆಗೆ ಅವರು ಸಂಪಾದಿಸಿರುವ ಕರ್ನಾಟಕ ಚರಿತ್ರೆ ಸಂಪುಟ ೧ರಲ್ಲಿ ಪ್ರಾಗೈತಿಹಾಸಕಾಲದ ಸಂಸ್ಕೃತಿ ಹಾಗೂ ಕಲೆಯ ಬಗೆಗೆ ವಿವರ ಪೂರ್ಣವಾಗಿ ವಿವೇಚಿಸಿದ್ದಾರೆ.

ಕುರುಗೋಡಿನಲ್ಲಿ ಒಟ್ಟು ೧೫ ನೆಲೆಗಳಿವೆ. ಇಲ್ಲಿಯ ಗವಿಚಿತ್ರಗಳನ್ನು ಮೊದಲಿಗೆ ಡಾ.ಎಂ.ಎಸ್.ಕೃಷ್ಣಮೂರ್ತಿ, ಡಾ.ಅ.ಸುಂದರ, ಡಾ.ಡಬ್ಲ್ಯೂ. ವಿ.ಎಸ್.ನರಸಿಂಹನ್ ಮತ್ತು ನಂತರ ಡಾ.ಶರಣಬಸಪ್ಪ ಕೋಲ್ಕಾರ ಶೋಧಿಸಿ ಲೇಖನಗಳನ್ನು ಪ್ರಕಟಿಸಿದ್ದಾರೆ.[೧೭] ಚಿತ್ರದುರ್ಗದ ಹೆಚ್.ಶ್ರೀಶೈಲ ಆರಾಧ್ಯರು, ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯಲ್ಲಿ ಮತ್ತೆ ಸುಮಾರು ೨೫ ೩೦ ವರ್ಣಚಿತ್ರಗಳನ್ನು, ಕೆಲವು ಬಯಲು ಬಂಡೆ ಚಿತ್ರಗಳನ್ನು ತಮ್ಮ ಸಂಶೋಧನೆಯ ಹಾದಿಯಲ್ಲಿ ಎಂಬ ಹೊತ್ತಿಗೆಯಲ್ಲಿ

---

೧೧. ಐ.ಎ.ಆರ್ ವ್ಯಾಲಂ : ೧೯೬೭–೬೮, ಪುಟ–೬೭

೧೨. ಡಾ. ಅ.ಸುಂದರ : ೧೯೭೪ ಫರ್ದರ್ ನೋಟಿಸ್ಸ್ ಆಫ್ ರಾಕ್ ಪೆಯಿಂಟಿಂಗ್ಸ್ ಇನ್ ಬೆಲಕಲ್ ರಾಯಚೂರು ಡಿಸ್ಟ್ರಿಕ್ಟ್ ಜೆ.ಐ.ಎಚ್, ಪುಟ–೫೨

೧೩. ಡಾ. ಅ.ಸುಂದರ, ಐ.ಎ.ಆರ್ : ೧೯೬೧ ೬೨

೧೪. ಡಾ. ಅ.ಸುಂದರ : ಪ್ರಿ ಹಿಸ್ಟಾರಿಕ್ ಎನ್‌ಗ್ರೇವಿಂಗ್ ಇಲ್ ಹೊಳಲೂರು

೧೫. ಡಾ. ಅ.ಸುಂದರ: ಸಮ್ ರೇರ್ ರಾಕ್ ಎನ್‌ಗ್ರೈವಿಂಗ್ಸ್ ಇನ್ ಹಿರೇಮಾದಾಪುರ ಮತ್ತು ಮುತ್ತೇನಹಳ್ಳಿ

೧೬. ಡಾ. ಅ.ಸುಂದರ : ೧೯೭೪, ಕರ್ನಾಟಕದಲ್ಲಿಯ ಪ್ರಾಗೈತಿಹಾಸಿಕ ವರ್ಣಚಿತ್ರಗಳು ಸವಿ ಸಂಚಯ, ಪುಟ–೨೫೩

೧೭. ಡಾ. ಅ.ಸುಂದರ : ೧೯೯೪, ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ

ಪ್ರಕಟಿಸಿದ್ದಾರೆ.[೧೮] ಪ್ರೊ.ಲಕ್ಷ್ಮಣ್ ತೆಲಗಾವಿಯವರು, ಚಿತ್ರದುರ್ಗಾ ಜಿಲ್ಲೆಯ ೭೦ಕ್ಕೂ ಹೆಚ್ಚು ಗುಡ್ಡಗಳ ಪರಿಸರದಲ್ಲಿ ವ್ಯಾಪಕ ಶೋಧನೆ ಮತ್ತು ಅಧ್ಯಯನ ಮಾಡಿದ್ದಾರೆ. ಕುಂದಾಪುರ ಹತ್ತಿರ ಗಾವಳಿ ದ.ಕ.ಜಿಲ್ಲೆಯಲ್ಲಿ ಬಯಲು ಬಂಡೆ ಮತ್ತು ಗೀರು ಚಿತ್ರಗಳನ್ನು ವಸಂತ ಶೆಟ್ಟಿಯವರು.[೧೯] ಸೊಲದಾದಲ್ಲಿ ಎಚ್.ಆರ್.ರಘುನಾಥಭಟ್ಟರು ಚಿತ್ರಗಳನ್ನು ಶೋಧಿಸಿದ್ದಾರೆ.

ಹಂಪಿಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ[೨೦] ಮತ್ತು ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದವರು[೨೧] ಕೆಲವು ಚಿತ್ರಿತ ಕಲ್ಲಾಸರೆಗಳನ್ನು ಶೋಧಿಸಿದ್ದಾರೆ. ಮಲ್ಲಾಪುರದ ಖಾನಸಾಬ ಗವಿಯ ಚಿತ್ರಗಳನ್ನು ರು.ಮ.ಷಡಕ್ಷರಯ್ಯ ಹಾಗೂ ಸ್ವಿಡ್ಜರ್‌ಲ್ಯಾಂಡಿನ ಈ.ಜ.ಟೆಲ್ನರ್ ಮತ್ತು ಬ್ರಿಗೆಟ್ಟೆಯವರು[೨೨] ಬೆಂಗಳೂರು ಜಿಲ್ಲೆಯ ಗೋತಗಿರಿ ಬೆಟ್ಟ ಹಾಗೂ ದೊಡ್ಡ ಕನ್ನೆಳ್ಳಿಯಲ್ಲಿ ಚಿತ್ರಗಳನ್ನು ಗೊರ್ಡ್‌ನ್‌ರವರು ದಾಖಲಿಸಿದ್ದಾರೆ.[೨೩] ಇದೇ ಜಿಲ್ಲೆಯ ಸಾಸಲು ಗ್ರಾಮದ ಚಿತ್ರಗಳನ್ನು ಜೆ.ವಿಶ್ವನಾಥ್ ಹಾಗೂ ಎಂ.ಜಿ.ಮಂಜುನಾಥ್‌ರವರು[೨೪] ಸೊಳೆಕಲ್ ಮಠದ ಚಿತ್ರಗಳನ್ನು ಮುತ್ತುರಾಜರವರು[೨೫] ತಾವರೆಗೆರೆಯ ಕೊಪ್ಪಳ ಜಿಲ್ಲೆ ವರ್ಣ ಚಿತ್ರಗಳನ್ನು ವಿಲಾಸ ಜೋಗುಳರವರು[೨೬] ಗಬ್ಬೂರಿನ ರಾಯಚೂರು ಜಿಲ್ಲೆ ರೇಖಾಚಿತ್ರಗಳನ್ನು ದೇವರಕೊಂಡಾರೆಡ್ಡಿಯವರು ಶೋಧಿಸಿದ್ದಾರೆ.[೨೭]

ಮಂಡ್ಯ ಜಿಲ್ಲೆಯ ವೇದಿಕ್ ನಗರದ ಚಿತ್ರಗಳನ್ನು ಜೆ.ಟಿ.ಜಯರಾಮಯ್ಯ ಹಾಗೂ ಇತರರು[೨೮] ಕೊಪ್ಪಳದಲ್ಲಿ ಮತ್ತೆ ಟಿ.ಶಂಭುಲಿಂಗಪ್ಪ[೨೯] ಹಾಗೂ ಬಿ.ಸಿ.ಪಾಟೀಲ್‌ರವರು[೩೦] ಕಮಲಾಪುರದ ವರ್ಣ ಮತ್ತು ಕೊರೆದ ಚಿತ್ರಗಳನ್ನು ಪ್ರೊ. ಲಕ್ಷ್ಮಣ ತೆಲಗಾವಿಯವರು ಶೋಧಿಸಿದ್ದಾರೆ.

---

೧೮. ಶ್ರೀಶೈಲ ಆರಾಧ್ಯ : ೧೯೮೩, ಸಂಶೋಧನೆಯ ಹಾದಿಯಲ್ಲಿ, ಪುಟ-೫೯

೧೯. ವಸಂತ ಶೆಟ್ಟಿ : ೧೯೮೩, ಪ್ರೀ ಹಿಸ್ಟಾರಿಕ್ ರಾಕ್ ಬ್ರೂಯಿಸಿಂಗ್ಸ್ ಪ್ರಾಮ್ ದಕ್ಷಿಣ ಕನ್ನಡ ಕಿವ್.ಜೆ.ಎಂ.ಎಸ್, ಸಂ ೭೪

೨೦. ಐ.ಎ.ಆರ್ : ೧೯೭೬ ೭೭, ಪುಟ-೨೪

೨೧. ಐ.ಎ.ಆರ್ : ೧೯೮೪ ೮೫, ಪುಟ-೫೯

೨೨. ಐ.ಎ.ಆರ್ ಮತ್ತು ಷಡಕ್ಷರಯ್ಯ ಆರ್.ಎಂ : ೧೯೯೦ ರಾಕ್ ಪೆಯಿಂಟಿಂಗ್ಸ್ ಇನ್ ಮಲ್ಲಾಪುರ ಆರ್ಕಿಯಾಲಾಜಿ ಇನ್ ಕರ್ನಾಟಕ

೨೩. ಗೋರ್ಡ್‌ನ್ ಡಿ.ಹೆಚ್ : ೧೯೫೮, ದಿ.ಪ್ರಿಹಿಸ್ಟಾರಿಕ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ಕಲ್ಚರ್, ಪುಟ-೧೧೬

೨೪. ವಿಶ್ವನಾಥ್ ಜಿ ಮತ್ತು ಮಂಜುನಾಥ್ ಎಂ.ಜಿ : ೧೯೯೬, ಸಾಸಲುವಿನ ಬೃಹತ್ ಶಿಲಾಯುಗದ ಸ್ಮಾರಕಗಳು ಮತ್ತು ರೇಖಾ ಚಿತ್ರಗಳು ಇ.ದ ಸಂಪುಟ-೧೧, ಪುಟ-೪೬

೨೫. ಮುತ್ತುರಾಜ್ : ೧೯೯೫, ಸುಳೆಕಲ್ ಮಠದ ಗುಹಾಚಿತ್ರಗಳು ಇ.ಜಿ, ಸಂಪುಟ-೧೦, ಪುಟ-೭೧

೨೬. ವಿಲಾಸ್ ಮ.ಜೋಗುಳ : ೧೯೯೬, ತಾವರಗೇರಾದಲ್ಲಿ ಕಲ್ಲಾಸರೆಯ ವರ್ಣಚಿತ್ರಗಳ ಶೋಧನೆ ಇ.ದ ಸಂ ೧೧, ಪುಟ-೪೪

೨೭. ದೇವರ ಕೊಂಡಾರೆಡ್ಡಿ : ೨೦೦೧, ಗಬ್ಬೂರಿನಲ್ಲಿ ಪ್ರಾಗೈತಿಹಾಸಿಕ ಅವಶೇಷಗಳ ಪತ್ತೆ ರಾಯಚೂರು ವಾಣಿ ದಿನಪತ್ರಿಕೆ, ೨೫.೨.೨೦೦೧

೨೮. ಜಯರಾಮಯ್ಯ ಜೆ.ಟಿ : ೨೦೦೦, ಬಯಲುಬಂಡೆ ಚಿತ್ರನೆಲೆ ವೇದಿಕನಗರ, ಇ.ದ ಸಂ -೧೫, ಪುಟ-೧೬ ೨೦

೨೯. ಶಂಬುಲಿಂಗಪ್ಪ ಟಿ : ೧೯೯೩, ರಾಯಚೂರು ಜಿಲ್ಲೆಯ ಗುಹಾಚಿತ್ರಗಳು, ತಿರುಳ್ಗನ್ನಡ, ಪುಟ-೨೩

೩೦. ಪಾಟೀಲ್ ಬಿ.ಸಿ : ೧೯೯೪, ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪುಟ-೧೩

ಕರ್ನಾಟಕದಲ್ಲಿ ವರ್ಣ ಚಿತ್ರಗಳು, ರಾಮದುರ್ಗ, ಬಾದಾಮಿ, ಐಹೊಳೆ, ಕೊಪ್ಪಳ, ಪಿಕ್ಲಿಹಾಳ್, ಹಿರೇಬೆನಕಲ್, ಆನೆಗುಂದಿ, ಹಂಪಿ, ರಾಯಚೂರು, ಮಾಸ್ಕಿ ಬ್ರಹ್ಮಗಿರಿ, ಚಿತ್ರದುರ್ಗ ಪ್ರದೇಶಗಳಲ್ಲಿ ಹೆಚ್ಚಾಗಿ ಇವೆ. ಬಯಲು ಬಂಡೆಯ ಚಿತ್ರಗಳು ಭಿಲ್ಲರಾಯನ ಗುಡ್ಡ ಪಿಕ್ಲಿಹಾಳ್, ತಾವರಗೆರೆ, ಕುರುಗೋಡು, ಸಂಗನಕಲ್ಲು, ಬೆಳಗಲ್, ಹಳಕುಂದಿ, ಅಪ್ಪಯ್ಯನ ಹಳ್ಳಿಗಳಲ್ಲಿ ಮಲೆನಾಡಿನ ಹೊಳಲೂರು, ಸೊಂದು, ಪಶ್ಚಿಮ ಕಡಲು ತೀರದ ಅಂಕೋಲಾ, ಕುಂದಾಪುರ ಪ್ರದೇಶಗಳಲ್ಲಿ, ದಕ್ಷಿಣ ಕರ್ನಾಟಕದ ಬೆಂಗಳೂರು, ಮಂಡ್ಯ ಪ್ರದೇಶಗಳಲ್ಲಿ ಇವೆ. ಬಿಡಿಯಾಗಿ ಗುಲಬರ್ಗಾ, ಬೆಳಗಾವಿ, ಧಾರವಾಡ ಜಿಲ್ಲೆಯಲ್ಲೂ ಇವೆ.

ಕೊಪ್ಪಳ ಜಿಲ್ಲೆ

ಕೊಪ್ಪಳವು ಬೆಟ್ಟಸಾಲುಗಳಿಂದ ತುಂಬಿದೆ. ತುಂಗಭದ್ರಾ ನದಿ ತೀರದ ಈ ಪ್ರದೇಶದಲ್ಲಿ ಮತ್ತು ಸಾಮಾನ್ಯ ಕಂದು ಇಲ್ಲವೇ ಬೂದುವರ್ಣದ ಗ್ರಾನೈಟ್ ಶಿಲೆಯ ಬೆಟ್ಟಗಳಿವೆ. ವಿಪರೀತ ಉಷ್ಣ ಶೀತಗಳ ವೈಪರೀತ್ಯದಿಂದ ಸಾಮಾನ್ಯವಾಗಿ ಈ ಶಿಲೆಯ ದೊಡ್ಡ ಬಂಡೆಗಳು ತಾನಾಗಿಯೇ ಸೀಳಿ ಹೋಗುವುದರಿಂದ ಮತ್ತು ಸವಕಳಿಯಿಂದ ಗವಿ ಕಲ್ಲಾಸರೆಗಳು ಉಂಟಾಗಿವೆ. ಇಂತಹ ಕಲ್ಲಾಸರೆ, ಗವಿಗಳಲ್ಲಿ ವಿರಳವಾಗಿ ವರ್ಣಚಿತ್ರಗಳಿವೆ.

೧೯೩೫ರಲ್ಲಿ ಆಂಗ್ಲ ಭೂಗರ್ಬ ತಜ್ಞರಾದ ಲಿಯೋನಾರ್ಡ್‌ಮನ್‌ರವರು ಪ್ರಥಮವಾಗಿ ಹಿರೇಬೆಣಕಲ್‌ನಲ್ಲಿ ಮೂರು ಚಿತ್ರಿತ ಗವಿಗಳನ್ನು ಬೆಳಕಿಗೆ ತಂದರು.[೩೧] ಇದಕ್ಕಿಂತ ಮೊದಲು ಇಲ್ಲಿಯ ಬೆಟ್ಟಗುಡ್ಡಗಳಲ್ಲಿಯ ಪ್ರಾಗೈತಿಹಾಸದ ಕಲಾಸಂಪತ್ತು ಅಜ್ಞಾತವಾಗಿ ಉಳಿದಿತ್ತು. ಇದಾದ ನಂತರ ಪುರಾತತ್ವಜ್ಞ ಡಾ. ಅ. ಸುಂದರ, ಪ್ರೊ. ಲಕ್ಷ್ಮಣ್ ತೆಲಗಾವಿ, ಆರ್. ಎಂ. ಷಡಕ್ಷರಯ್ಯ, ಬಿ. ಸಿ. ಪಾಟೀಲ್, ಶಂಭುಲಿಂಗಪ್ಪನವರು ಹಾಗೂ ಶರಣಬಸಪ್ಪ ಕೋಲ್ಕಾರ್ ಅವರು ಹಲವಾರು ಕಲಾನೆಲೆಗಳನ್ನು ಶೋಧಿಸಿ ಪ್ರಕಟಿಸಿದ್ದಾರೆ. ಆದಿ ಮಾನವನ ಪ್ರಾಗೈತಿಹಾಸ ಕಾಲದ ಕಲೆಯನ್ನು ನಾವು ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದಾಗಿದೆ.

೧. ಗವಿ ಕಲ್ಲಾಸರೆ ವರ್ಣಚಿತ್ರಗಳು

೨. ಬಯಲು ಬಂಡೆಯ ಕುಟ್ಟು ಮತ್ತು ಗೀರಾ ಚಿತ್ರಗಳು

ಗವಿ ಕಲ್ಲಾಸರೆ ವರ್ಣಚಿತ್ರಗಳು

ಇವು ಶಿಲಾಶ್ರಯಗಳಂತಹ ಪ್ರದೇಶಗಳಲ್ಲಿ ಮಳೆ, ನೀರು,ಗಾಳಿ, ಬಿಸಿಲುಗಳಂತಹ ಪರಿಸರದ ಅತೀವೃಷ್ಟಿಯಿಂದಾಗುವ ಪರಿಣಾಮಗಳಿಂದ ರಕ್ಷಣೆ ಪಡೆಯುವ ಸ್ಥಳಗಳಲ್ಲಿ ವರ್ಣಚಿತ್ರಗಳು

---

೩೧. ಡಾ.ಶರಣ ಬಸಪ್ಪ ಕೊಲ್ಕಾರ್ : ಶಿಲಾಯುಗದ ಗವಿಚಿತ್ರಗಳು, ಪುಟ-೬೨

ರಚಿತವಾಗಿರುವುದು ಮುಖ್ಯವಾಗಿ ನಾವು ಕಾಣುತ್ತೇವೆ. ಜನನಿಬಿಡ, ಅಷ್ಟೇನೂ ಸುಲಭವಾಗಿ ಪ್ರವೇಶಿಸಲಾರದಂತಹ ತೀರಾ ದುರ್ಗಮವಾದ ಗವಿಗಳಲ್ಲಿ, ತಲುಪಲು ಕಷ್ಟಕರವಾದ ಸ್ಥಳಗಳಲ್ಲಿ, ಶಿಲಾಶ್ರಯ, ಗವಿಗಳಂತಹ ಜಾಗದಲ್ಲಿ ಮಲಗಿಕೊಂಡು ಚಿತ್ರಿಸುವ ಹಾಗೂ ತುಂಬಾ ಎತ್ತರವಾದ ಛಾವಣಿಯಂತಹ ಬಂಡೆಗಳ ಮುಖಭಾಗದಲ್ಲಿ ಚಿತ್ರಿತವಾಗಿರುವುದನ್ನು ನೋಡಿದರೆ ಇಂದಿನ ದಿನಗಳಲ್ಲಿ ಕುತೂಹಲವೆನಿಸುತ್ತದೆ. ಇವುಗಳನ್ನು ಆದಿಮಾನವನು ಕಂದುಗೆಂಪು ವರ್ಣ, ಬಿಳಿ, ಹಳದಿ ಮಿಶ್ರಿತ ಬಿಳಿ ವರ್ಣಗಳಲ್ಲಿ ರಚಿಸಿರುವುದನ್ನು ನಾವು ಸಾಮಾನ್ಯವಾಗಿ ಆದಿಮಾನವನ ಗವಿ ಕಲ್ಲಾಸರೆ ಚಿತ್ರಗಳು ಎಂದು ಕರೆಯುತ್ತೇವೆ.

ಮುಖ್ಯವಾಗಿ ಈ ಚಿತ್ರಗಳಲ್ಲಿ ಹೆಚ್ಚಾಗಿ ಪ್ರಾಣಿಗಳು ಅವುಗಳಲ್ಲೂ ಕೆಲವೇ ಪ್ರಾಣಿಗಳಿವೆ. ಮನುಷ್ಯನ ಚಿತ್ರಗಳಲ್ಲಿ ಸಮೂಹ ನೃತ್ಯ, ಮೈಮೇಲೆ ಚಿತ್ರ ಬರೆದುಕೊಂಡ ನಗ್ನ ವ್ಯಕ್ತಿ ಆಯುಧ, ಪ್ರಾಣಿಗಳು ಹೀಗೆ ಕೆಲವೇ ತರಹದ್ದು ಇವೆ ಮತ್ತು ಇವುಗಳ ಬಾಹ್ಯರೇಖೆ ಮಾತ್ರ ಇವೆ. ವಸ್ತುವಿನ ಸಹಜ ಲಕ್ಷಣಗಳನ್ನು ಬಿಡಿಸಲು ಸಾಧ್ಯವಾಗದೆ ಹೀಗೆ ಮಾಡಿದುದು. ಉದ್ದೇಶಪೂರ್ವಕವಾಗಿಯೇ ಚಿತ್ರಗಳನ್ನು ಈ ಕ್ರಮದಲ್ಲಿಯೇ ಬಿಡಿಸಲಾಗಿದೆ. ಇವುಗಳಲ್ಲಿ ಕೆಲವಂತೂ ಸುಲಭವಾಗಿ ಹೋಗಿ ನೋಡುವಂತಹ ಸ್ಥಳಗಳಲ್ಲಿಲ್ಲ. ಸ್ವಸಂತೋಷಕ್ಕೋಸ್ಕರ ಈ ಪ್ಯಾರಾಗ್ರಾಪ್ ಮೇಲೆ ಹೋಗಬೇಕು ಮಾತ್ರವಲ್ಲದೆ ತಮ್ಮ ಸಮಾಜದ ಜನರೂ ನೋಡಲೆಂದು ಮಾಡಿದ್ದಾರೆ, ಇವು ಎಲ್ಲರಿಗೂ ನೋಡಲು ಆಗುವಂತಹ ಸ್ಥಳಗಳಲ್ಲಿ ಇವು ಇರುತ್ತಿದ್ದವೆಂದು ಅನ್ನಿಸುತ್ತದೆ. ಪ್ರಾಯಶಃ ಇಂತಹ ಬಹಳಷ್ಟು ಚಿತ್ರಗಳನ್ನು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಪ್ರಾಗೈತಿಹಾಸಿಕ ಮಾನವರು ತಮ್ಮ ತಮ್ಮ ಸಮಾಜದ ನಂಬಿಕೆಗಳಂತೆ ಮಾಂತ್ರಿಕ ಕಟ್ಟಳೆಗಳನ್ನು ನಡೆಸುವ ಕಾಲದಲ್ಲಿ ಅವುಗಳ ಅಂಗವಾಗಿ ರೂಪಿಸಿದ ಚಿತ್ರಗಳೆಂದು ತಜ್ಞರು ತರ್ಕಿಸಿದ್ದಾರೆ.[೩೨] ಒಬ್ಬ ಮನುಷ್ಯನ ಅಥವಾ ಪ್ರಾಣಿಯ ಛಾಯಾಚಿತ್ರಗಳನ್ನು ತೆಗೆದು ಮಂತ್ರಿಸಿದರೆ ಅವನು ಅಥವಾ ಅದು ತನ್ನ ವಶವಾಗುವುದೆಂದು, ಅಥವಾ ಅವನು ಶತ್ರುವಾಗಿದ್ದರೆ ನಾಶವಾಗುವನೆಂಬ ನಂಬಿಕೆ ಬಹು ಕಾಲದಿಂದ ಉಳಿದು ಬಂದಿರುವಂತಹದು. ಹಾಗೂ ಆದಿಮಾನವನಿಗೆ ಭಾಷೆಯು ಅರಿವಿಲ್ಲದಿರುವದರಿಂದ ಇಂತಹ ಚಿತ್ರಗಳು ಅಂದರೆ ಬೇಟೆಯ ಚಿತ್ರ, ಪ್ರಾಣಿಗಳ ಚಿತ್ರ ಸಾಮೂಹಿಕ ನೃತ್ಯಗಳ ಚಿತ್ರಗಳನ್ನು ಬಿಡಿಸಿ ಒಬ್ಬರ ಸಂದೇಶವನ್ನು ಒಬ್ಬರಿಗೆ ತಿಳಿಸುವಂತಹದ್ದಾಗಿದೆ ಎಂದು ನನ್ನ ಅಭಿಪ್ರಾಯ.

ಇಂತಹ ಆದಿಮಾನವನ ಗವಿವರ್ಣ ಚಿತ್ರಗಳು ನೂರಾರು ಕಿ.ಮೀ ಗಳುದ್ದಗಲಕ್ಕೂ ಹರಡಿದ ಬೆಟ್ಟಗುಡ್ಡಗಳ ನಾನಾ ಭಾಗಗಳಲ್ಲಿ ಕಂಡುಬರುತ್ತವೆ. ಇವು ಕೊಪ್ಪಳ ಜಿಲ್ಲೆಯಾದ್ಯಂತ ಅನೇಕ ಕಡೆ ಸ್ಥಳಗಳಲ್ಲಿ ಕಂಡುಬಂದಿವೆ. ಆ ಸ್ಥಳಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

---

೩೨. ಡಾ. ಅ.ಸುಂದರ, (ಸಂ) : ಕರ್ನಾಟಕ ಚರಿತ್ರೆ, ಪುಟ-೨೪೮

ಹಿರೇಬೆನಕಲ್, ಚಿಕ್ಕಬೆನಲಕ್, ಆನೆಗುಂದಿ ಮಲ್ಲಾಪುರ, ಕೊಪ್ಪಳ, ಬಿಳೆಬಾವಿ ನಾರಾಯಣ ಪೇಟೆ, ಇಂದರಗಿ, ತೆಂಬಾ, ತಿರುಮಲಪುರ, ಬಂಡಿ ಹರ್ಲಾಪುರ, ಹೊಸಬಂಡಿ ಹರ್ಲಾಪುರ, ಚಿಕ್ಕರಾಂಪುರ, ರಾಂಪುರ, ಕಡೆಬಾಗಿಲು, ಗಾಣಗಿತ್ತಿಗುಡ್ಡ, ಗೂಗಿಬಂಡಿ, ಸಂಗಾಪುರ, ಎಮ್ಮಿಗುಡ್ಡ, ಆಗೋಲಿ, ಗಡ್ಡಿ, ಹಂಪಸದುರ್ಗ, ರಾಮದುರ್ಗ, ಅಂಜನಹಳ್ಳಿ, ಬೊಮ್ಮಸಾಗರ, ಪಿಕ್ಲಿಹಾಳಗಳಲ್ಲಿ ಗವಿವರ್ಣ ಚಿತ್ರಗಳು ಕಂಡು ಬಂದಿವೆ.

ಹಿರೇಬೆಣಕಲ್

ಗಂಗಾವತಿಯಿಂದ ೧೦ ಕಿ.ಮಿ.ಪಶ್ಚಿಮಕ್ಕೆ ಕೊಪ್ಪಳಕ್ಕೆ ಹೋಗುವ ರಸ್ತೆಯಲ್ಲಿ ಹಿರೇಬೆಣಕಲ್ ಗ್ರಾಮವಿದೆ. ಗ್ರಾಮದ ದಕ್ಷಿಣ ದಿಕ್ಕಿನಲ್ಲಿರುವ ಬೆಟ್ಟಗಳಲ್ಲಿ ೧೭ ಶಿಲಾಶ್ರಯಗಳಲ್ಲಿ ಗುಹಾವರ್ಣ ಚಿತ್ರಗಳಿವೆ.

ಶಿಲಾಶ್ರಯ-೧

ಬೆಟ್ಟದ ಒಂದು ಭಾಗವಾದ ದುರ್ಗದ ದಡಿಯ ಆಗ್ನೇಯಕ್ಕೆ ಶಿಲಾ ಸಮಾಧಿ ನೆಲೆಗೆ ಹೋಗುವ ದಾರಿಯಲ್ಲಿ ಬೆಟ್ಟದ ಮಧ್ಯದಲ್ಲಿ ಈ ಕಲ್ಲಾಸರೆ ಇದೆ. ಇದು ಬೃಹತ್ ಗುಂಡುಕಲ್ಲು, ಇದರ ಪೂರ್ವ ಮತ್ತು ಪಶ್ಚಿಮ ಮುಖದಲ್ಲಿ ಕೆಂಪು ವರ್ಣದ ಅನೇಕ ಚಿತ್ರಗಳಿವೆ. ಇವು ಸುಮಾರು ೧.೮ ಅಡಿ ಎತ್ತರ ಹಾಗೂ ೨.೫ ಅಡಿ ಅಗಲವಿರುವ ಸ್ಥಳದ ತುಂಬ ಚಿತ್ರಗಳನ್ನು ಕಾಣಬಹುದಾಗಿದೆ.

ಇಲ್ಲಿ ಸಮೂಹ ನೃತ್ಯಗಳು, ಕುದುರೆಸವಾರರು, ನವಿಲುಗಳು ಬೇಟೆಯಾಡುತ್ತಿರುವ ಚಿತ್ರಗಳು, ಜಿಂಕೆಗಳು, ಹಾಗೂ ಗೂಳಿಗಳ ಚಿತ್ರಗಳನ್ನು ನಾವು ಕಾಣುತ್ತೇವೆ. ಚಿತ್ರದ ಒಂದು ಬದಿಯ ಮೇಲ್ಭಾಗದಲ್ಲಿ ನಾಲ್ಕು ಜನರು ನೃತ್ಯವನ್ನು ಮಾಡುತ್ತಿರುವುದು ಕಾಣಿಸುತ್ತದೆ. ಹಾಗೆ ಅದರ ಮುಂಬದಿಯಲ್ಲಿ ಕುದುರೆ ಸವಾರನ ಚಿತ್ರವಿದ್ದು ಈ ಚಿತ್ರದಲ್ಲಿ ಕುದುರೆಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಕತ್ತು ಹಾಗೂ ಬಾಲಗಳಿಗೆ ಸಣ್ಣ ಗೆರೆ ಎಳೆದು ರೋಮದಂತೆ ತೋರಿಸಿದ್ದಾರೆ. ಆ ಕುದುರೆ ಸವಾರನು ಒಂದು ಕೈಯಲ್ಲಿ ಕೊಡಲಿಯನ್ನು ಹಾಗೂ ಇನ್ನೊಂದು ಕೈಯಲ್ಲಿ ಈಟಿಯನ್ನು ಹಿಡಿದು ಬೇಟೆಗೆ ಹೋಗುತ್ತಿರುವುದು ಸ್ಪಷ್ಟವಾಗುತ್ತದೆ. ಕುದುರೆಯ ಬಾಯಲ್ಲಿ ಲಗಾಮನ್ನು ಹಾಕಿಕೊಂಡು ತನ್ನ ಎಡಗೈಯಲ್ಲಿ ಹಿಡಿದಿರುವುದು, ಕುದುರೆಯ ಅಂಗಾಂಗಳನ್ನು ಗಮನಿಸಿದಾಗ ಅದು ಗಂಡೆಂದು ಗೊತ್ತಾಗುತ್ತದೆ. ಹಾಗೆಯೆ ಅದರ ಮುಂಭಾಗದಲ್ಲಿ ಇಬ್ಬರು ಮನುಷ್ಯರು ಕೈಕೈ ಹಿಡಿದು ನಿಂತಿರುವ ಚಿತ್ರವಿದೆ. ಇದರಲ್ಲಿ ಅವರ ತಲೆಕೂದಲನ್ನು ಗಮನಿಸಿದಾಗ ಸ್ತ್ರೀಚಿತ್ರವೆಂದು ಸ್ಪಷ್ಟವಾಗುತ್ತದೆ. ಅವರ ಮುಂಭಾಗದಲ್ಲಿ ಇನ್ನೊಬ್ಬ ಸ್ತ್ರೀಚಿತ್ರಣವಿದ್ದು ಅದು ಇನ್ನೂ ದೊಡ್ಡ ಆಕಾರದಲ್ಲಿದೆ.

ಇವುಗಳ ಕೆಳಸಾಲಿನಲ್ಲಿ ಒಂದು ಜಿಂಕೆಯ ಚಿತ್ರವಿದೆ. ಅದರ ಮುಂಭಾಗದಲ್ಲಿ ಒಂದು ಗೂಳಿಯ ಚಿತ್ರವಿದ್ದು ಇನಿಯ ಮೂಲಕ ಗೂಳಿ ಎಂದು ಗುರುತಿಸಬಹುದಾಗಿದೆ. ಇದರ ಮುಂದೆಸ್ವಲ್ಪ ಕೆಳಭಾಗದಲ್ಲಿ ೧೩ ಜನರ ತಂಡವೊಂದು ನೃತ್ಯವನ್ನು ಮಾಡುತ್ತಿದೆ. ಇದರಲ್ಲಿ ಸ್ತ್ರೀ ಮತ್ತು ಪುರುಷರಿರುವುದನ್ನು ಕಾಣುತ್ತೇವೆ. ಇವರ ಕೆಳಗೆ ಒಂದು ಅಡ್ಡಗೆರೆ ಎಳೆದಿದ್ದಾರೆ ಅದು ಅವರು ನಿಂತ ನೆಲದ ಸಂಖೇತದಂತೆ ಕಾಣಿಸುತ್ತದೆ. ಇದರ ಕೆಳಗಿನ ಸಾಲಿನಲ್ಲಿ ಒಂದು ನವಿಲಿನ ಚಿತ್ರವಿದ್ದು ಮುಂದೆ ಕುದುರೆ ಸವಾರ ಬೇಟೆಯಲ್ಲಿ ತೊಡಗಿರುವ ದೃಶ್ಯವಿದೆ. ಅವನ ಮುಂದೆ ಇನ್ನೂ ಎರಡು ನವಿಲುಗಳಿವೆ. ಅವನು ಆ ನವಿಲುಗಳನ್ನು ಬೇಟೆಯಾಡುವಂತಿದೆ. ಅದರ ಹತ್ತಿರವೇ ಒಬ್ಬ ಮನುಷ್ಯನ ಚಿತ್ರವಿದ್ದು, ಅದು ಚಿಕ್ಕದಾಗಿದೆ. ಇದರ ಕೆಳಗಿನ ಸಾಲಿನಲ್ಲಿ ಗುಂಪುಗುಂಪಾಗಿ ಚಿತ್ರಗಳಿದ್ದು, ಚಿತ್ರದ ಸಾಲಿನ ಮೊದಲಿನಲ್ಲಿ ಸ್ತ್ರೀ ಚಿತ್ರಣವಿದೆ. ಮುಂದೆ ಒಬ್ಬ ಪುರುಷನ ಚಿತ್ರ ಹಾಗೂ ಒಂದು ನವಿಲಿನ ಚಿತ್ರವಿದೆ. ಇದರ ಮುಂದೆ ಕುದುರೆಯ ಸವಾರ ಬೇಟೆಯಾಡುವ ಚಿತ್ರವಿದೆ. ಕೆಳಗಡೆ ಚಿಕ್ಕ ಚಿಕ್ಕ ಮನುಷ್ಯರ ಚಿತ್ರವಿದೆ. ಇದರ ಮುಂದೆ ಜಿಂಕೆಗಳ ಚಿತ್ರವಿದ್ದು, ಅಲ್ಲಲ್ಲಿ ಅವುಗಳನ್ನು ಅಟ್ಟಿಸಿಕೊಂಡು ಬರುತ್ತಿರುವ ಚಿತ್ರಗಳು, ಕೈಯಲ್ಲಿ ಕೋಲನ್ನು ಹಿಡಿದಿರುವ ಚಿತ್ರ ಹಾಗೂ ೧೦ ಜನ ಕೈ ಕೈ ಹಿಡಿದು ಗುಂಪು ಗಟ್ಟಿ ಜಿಂಕೆಗಳನ್ನು ಓಡಿಸಿಕೊಂಡು ಬರುವುದು, ಎದುರಿಗೆ ನಿಂತ ಬೇಟೆಗಾರರು ಬೇಟೆಯಾಡುತ್ತಿದ್ದುದು ಇಲ್ಲಿ ಕಂಡು ಬರುತ್ತಿದೆ. ಇವರ ಹಿಂದೆಯೆ ಮೂರು ಜನ ಕುದುರೆ ಸವಾರರು ಈಟಿಯನ್ನು ಜಿಂಕೆಗಳಿಗೆ ಎಸೆಯುತ್ತಿರುವ ಚಿತ್ರಣವಿದೆ.

ಇದರ ಕೆಳಗಿನ ಸಾಲಿನಲ್ಲಿ ಇಬ್ಬರು ಸ್ತ್ರೀ ಚಿತ್ರಣ ಹಾಗೂ ಒಬ್ಬ ಪುರುಷನ ಚಿತ್ರವಿದ್ದು, ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡು ಮುಂದೆ ನಡೆಯುತ್ತಿರುವುದು ಕಾಲಿನ ಚಲನೆಯಿಂದ ತಿಳಿದುಬರುತ್ತಿದೆ. ಪುರುಷನ ಕೈಯಲ್ಲಿ ಕೊಡಲಿ ಇದ್ದು ಆ ಸ್ತ್ರೀಯರನ್ನು ರಕ್ಷಿಸಲು ಕರೆದುಕೊಂಡು ಹೊರಟಂತ್ತಿದೆ. ಇವರು ಒಂದು ಸಮತಟ್ಟಾದ ನೆಲದ ಮೇಲೆ ನಿಂತಿದ್ದಾರೆ ಎಂದು ತೋರಿಸಲು ಕೆಳಗೆ ಒಂದು ಸಮನಾದ ರೇಖೆಯನ್ನು ಎಳೆದಿದ್ದಾರೆ. ಮುಂದೆ ಜಿಂಕೆಯೊಂದಿದ್ದು ಅದರ ಕೆಳಗೆ ಜಿಂಕೆಮರಿಗಳಿವೆ. ಒಂದು ನಾಯಿ ಹಾಗೂ ಅಲ್ಲಲ್ಲಿ ನಾಲ್ಕೈದು ಜಿಂಕೆಗಳು ಚಲ್ಲಾಪಿಲ್ಲಿಯಾಗಿ ಓಡುತ್ತಿವೆ. ಇದರ ಹಿಂದೆ ಸಾಲಾಗಿ ಹತ್ತು ಜನರ ಗುಂಪೊಂದಿದ್ದು, ಎರಡು ಬದಿಗೆ ಆಯುಧ ಹಿಡಿದಿರುವ ಮನುಷ್ಯರು ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡಿದ್ದಾರೆ. ಆ ಜಿಂಕೆಗಳನ್ನು ಅಟ್ಟಿಸಿಕೊಂಡು ಸುತ್ತುವರೆದಿದ್ದಾರೆ. ಮುಂದೆ ಒಬ್ಬ ವ್ಯಕ್ತಿ ಈಟಿ ಹಾಗೂ ಕೊಡಲಿಯನ್ನು ಹಿಡಿದುಕೊಂಡು ನಿಂತ್ತಿದ್ದಾನೆ. ಅವು ಅವನ ಹತ್ತಿರ ಬರುತ್ತಿದ್ದಂತೆ ಅವುಗಳನ್ನು ಸಾಯಿಸುವ ಯತ್ನದಲ್ಲಿದ್ದಾನೆ. ಆದಿ ಮಾನವನು ಎಷ್ಟು ಉಪಾಯದಿಂದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದನೆಂದು

ಶಿಲಾಶ್ರಯ-೨

ಇದು ಸಮಾಧಿ ನೆಲೆಯಿಂದ ಆಗ್ನೇಯಕ್ಕೆ ಸು. ೧೧/೨ಕಿ.ಮಿ ದೂರದಲ್ಲಿದೆ. ಈ ಪ್ರದೇಶಕ್ಕೆ ರಕ್ಕಸ ಬೀಳು ಎಂದು ಕರೆಯುತ್ತಾರೆ. ಬೆಟ್ಟದ ಒಂದು ದೊಡ್ಡ ಬಂಡೆಯು ಉತ್ತರಾಭಿಮುಖವಾಗಿದ್ದೂ, ಬೆಟ್ಟಕ್ಕೆ ರಕ್ಕಸ ಕುಟ್ಟೆ ಎಂಬ ಬಂಡೆಗೆ ರಕ್ಕಸ ಬಂಡೆ ಎಂದು ಕರೆಯುತ್ತಾರೆ. ಬಂಡೆಯ ಮುಖ ಸು.೨೦ ಮೀ ಅಗಲ ೧೮ ಮೀ ಎತ್ತರವಾಗಿದ್ದು, ನುಣುಪಾಗಿ ಫಲಕದಂತೆ ಇದ್ದು ಚಿತ್ರರಚನೆಗೆ ಪ್ರಶಸ್ತವಾಗಿದೆ. ಇಡೀ ಬಂಡೆಯ ಮೇಲೆ ಒಂದು ಮುಂಚಾಚಿದ ಬಂಡೆ ಇದ್ದು ಆಸರೆ ನೀಡಿದೆ.

ಇಡೀ ಬಂಡೆಯ ಉದ್ದಗಲಕ್ಕೂ ಕೆಂಪು ವರ್ಣದ ರೇಖಾಚಿತ್ರಗಳಿವೆ. ಚಿತ್ರಗಳಿಗೆ ಹೆಚ್ಚಿನ ಆಸರೆ ಇಲ್ಲದಿರುವುದರಿಂದ ಮತ್ತು ಅಲ್ಲಲ್ಲಿ ಮಳೆ ನೀರ ಇಳಿಕೆಯಿಂದ ಚಿತ್ರಗಳು ಮಾಸಿವೆ. ಆದರೂ ಇಡೀ ಚಿತ್ರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಲಿಯೋನಾರ್ಡ್‌ಮನ್ ಅವರ ವಿವರಣೆಯನ್ನು ಗಮನಿಸಿದರೆ ಇದು ಅವರು ಗುರುತಿಸಿದ ಎರಡನೇ ಗವಿಯೆಂದು ತೋರುತ್ತದೆ.[೩೩] ಅವರು ಇದರ ಬಗೆಗೆ ಹಿರೇಬೆಣಕಲ್ಲಿನ ವರ್ಣಚಿತ್ರಗಳಲ್ಲೆಲ್ಲಾ ಇದೇ ಅತ್ಯಂತ ದೊಡ್ಡದಾದ ಭವ್ಯ ಗವಿಯೆಂದು ಸರಿಯಾಗಿ ಗುರುತಿಸಿದ್ದಾರೆ.

ಶಿಲಾಶ್ರಯ-೩

ಈ ಶಿಲಾಶ್ರಯದಲ್ಲಿ ಎರಡು ಕೋಣೆಗಳಿವೆ. ಒಂದು ಕೋಣೆಯ ಬಂಡೆಯೊಂದರಲ್ಲಿ ನಗ್ನ ಪುರುಷನ ರೇಖಾ ಚಿತ್ರವಿದ್ದು. ಇದು ಮಾಂತ್ರಿಕ ಕಟ್ಟಳೆಯಲ್ಲಿ ನಿರಂತನಾದ ಮನುಷ್ಯನ ಚಿತ್ರವೆಂದು ತೋರುತ್ತದೆ. ಕಾರಣ ಈ ಪುರುಷನ ಮೈಮೇಲೆಲ್ಲಾ ತ್ರಿಕೋಣ, ಅಡ್ಡ, ಡೊಂಕು, ಕತ್ತರಿ, ವಜ್ರಾಕೃತಿಗಳ ಹಾಗೆ ಗೆರೆ ಎಳೆಯಲಾಗಿದೆ. ಎರಡನೆಯ ಕೋಣೆಯ ಗೋಡೆಯಲ್ಲಿ ಬಂಡೆಯೊಂದರಲ್ಲಿ ಎರಡು ಚೌಕುಗಳು ಮಧ್ಯಗೆರೆ ಎಳೆಯಲಾಗಿದೆ. ಇದು ಸುಮಾರು ೨.೬೦ ಮೀ. ಎತ್ತರ ಮತ್ತು ೧.೫೦ ಮೀ ಅಗಲವಾಗಿದೆ ಎಂದು ಅಂದಾಜಿಸಬಹುದಾಗಿದೆ. ಹಾಗೂ ಎರಡು ಕುದುರೆಗಳು ಕತ್ತೆ, ನಾಯಿ, ಆನೆಯ ಚಿತ್ರಗಳಿವೆ. ಇವು ಕೆಂಪು ವರ್ಣದ ಚಿತ್ರಗಳಾಗಿವೆ.

ಶಿಲಾಶ್ರಯ-೪

ಶಿಲಾ ಸಮಾಧಿಗಳ ಮಧ್ಯದ ಗುಂಪಿನಿಂದ ಇದು ಪೂರ್ವಬದಿಯಲ್ಲಿ ಒಂದರ ಪಕ್ಕ ಒಂದರಂತೆ ಎರಡು ಕಲ್ಲಾಸರೆಗಳಿದ್ದು ಉತ್ತರಾಭಿಮುಖಿಯಾಗಿದೆ. ಎರಡರ ಚಿತ್ರಗಳು ಸಾಕಷ್ಟು ಮಾಸಿ ಹೋಗಿದ್ದು ಗುರುತಿಸಲು ಕಷ್ಟಸಾಧ್ಯ. ಪೂರ್ವ ಬದಿಯ ಕಲ್ಲಾಸರೆಯಲ್ಲಿ ಕೈ ಕೈ ಹಿಡಿದು ಸಾಲಾಗಿ ನಿಂತ ಮೂವರು ಮನುಷ್ಯರ ಚಿತ್ರಗಳಿವೆ. ಹಾಗೆ ಇದರಲ್ಲಿ ಅಶ್ವಸವಾರನ ಚಿತ್ರವಿದ್ದು ಕುದುರೆಯ ಕತ್ತು ಮತ್ತು ಬಾಲಕ್ಕೆ ರೇಖೆಗಳನ್ನು ಎಳೆದು ರೋಮದಂತೆ ಚಿತ್ರಿಸಿದ್ದಾರೆ. ನವಿಲು, ಚಿಗರೆಗಳ ಚಿತ್ರಗಳನ್ನು ಕೂಡಾ ಇದು ಒಳಗೊಂಡಿದೆ. ಪಶ್ಚಿಮ ಬದಿಯ ಕಲ್ಲಾಸರೆಯಲ್ಲಿ ಕೂಡ

ಅನೇಕ ಚಿತ್ರಗಳಿದ್ದು, ಅದರಲ್ಲಿ ನೃತ್ಯ ನಿರತ ಮನುಷ್ಯ ಚಿತ್ರಗಳು ಗೋಚರಿಸುತ್ತವೆ. ಉಳಿದವು ಸ್ಪಷ್ಟವಾಗಿ ಗೋಚರಿಸುವುದಿಲ್ಲ.

ಶಿಲಾಶ್ರಯ-೫

ಸುತ್ತಮುತ್ತಲಿನ ಬಂಡೆಗಳಲ್ಲಿ ಇದೇ ಸು.೩೦ ಮೀ ಎತ್ತರದಲ್ಲಿದ್ದು, ಇದು ಪೂರ್ವ ಈಶಾನ್ಯ ಮುಖಿಯಾಗಿದೆ. ಗವಿಯ ಎಡಗೋಡೆ ಮತ್ತು ಒಳಭಾಗಗಳಲ್ಲಿ ಚಿತ್ರಗಳಿವೆ. ಒಳಭಾಗದ ಚಿತ್ರಗಳಲ್ಲಿ ೨.೫೦ ಮೀ ಮತ್ತು ೦.೯೦ ಮೀ ಎತ್ತರ ವಿಸ್ತಾರದಲ್ಲಿ ಚಿತ್ರಗಳಿವೆ. ಚಿತ್ರಗಳು ತಲೆಯ ಮೇಲೆ ಕೋಡು ಮತ್ತು ಬಾಲವುಳ್ಳ ಮನುಷ್ಯನ ಚಿತ್ರವಿದ್ದು, ಇದು ವಿಚಿತ್ರ ಎನಿಸುತ್ತದೆ. ಡೊಂಕು ಡೊಂಕಾದ ಉದ್ದನೆಯ ಕೋಡುಗಳುಳ್ಳ ಚಿಗರೆಗಳು, ನವಿಲು, ಗೂಳಿಗಳು ಮತ್ತು ಒಂದಕ್ಕೊಂದು ಛೇದಿಸಿದ ವ್ಯಾಸಗಳುಳ್ಳ ವೃತ್ತಿಗಳು ಬಾಹ್ಯರೇಖೆಯಲ್ಲಿ ಚಿತ್ರಿಸಿದ ಹಾಗೂ ತಲೆಯ ಮೇಲೆ ಕೊಡುಗಳುಳ್ಳ ಮತ್ತೆರಡು ಮನುಷ್ಯರ ಚಿತ್ರಗಳು ಇಲ್ಲಿವೆ.

ಶಿಲಾಶ್ರಯ-೬

ದುರ್ಗದ ದಡಿಯಿಂದ ಸ್ವಲ್ಪ ಕೆಳಗೆ ಗುಡ್ಡದ ಉತ್ತರ ಇಳಿಜಾರಿನ ಮಧ್ಯಭಾಗದಲ್ಲಿ ಶಿಲಾಶ್ರಯ ಇದೆ. ಇದರಲ್ಲಿ ಛಾವಣಿ ಹಾಗೂ ಹಿಂದಿನ ಗೋಡೆಯಲ್ಲಿ ಚಿತ್ರಗಳಿವೆ. ಒಳಗಿನ ಛಾವಣಿ ಚಿತ್ರವು ೬.೩೦ ಮೀ ಅಳತೆಯ ವಿಸ್ತಾರದಲ್ಲಿದೆ. ಇಲ್ಲಿ ಬಿಲ್ಲು ಬಾಣಗಳನ್ನು ಹಿಡಿದ ಮನುಷ್ಯರು ಮತ್ತು ಭರ್ಜಿಗಳನ್ನು ಹಿಡಿದ ಅಶ್ವಸವಾರ, ನವಿಲುಗಳು, ಆಕಳು, ಗೂಳಿಗಳು, ಕೈ ಕೈ ಹಿಡಿದು ಸಾಲಾಗಿನಿಂತ ಮನುಷ್ಯರ, ಕವಲುಕೊಡಿನ ಜಿಂಕೆಗಳು ಗುಂಪು, ಸವಾರರಿರುವ ಕುದುರೆಗಳನ್ನು ಹಗ್ಗದಿಂದ ಎಳೆಯುತ್ತಿರುವ ವ್ಯಕ್ತಿಗಳು, ಕುದುರೆ ಸವಾರ ಜಿಂಕೆಯನ್ನು ಬೇಟೆಯಾಡುತ್ತಿರುವುದು, ನೃತ್ಯ ಮಾಡುತ್ತಿರುವ ಮನುಷ್ಯರು ಹಾಗೂ ಒಂದು ಮಂಡಲದ ಚಿತ್ರಕೂಡ ಇದರಲ್ಲಿದೆ.

ಶಿಲಾಶ್ರಯ-೭

ಮ್ಯಾದರ ಬಂಡೆ ಎಂದು ಕರೆಯುವ ಈ ಶಿಲಾಶ್ರಯವು ಉತ್ತರಾಭಿಮುಖವಾಗಿದ್ದು, ಬಸರಿ ಕೊಳ್ಳದ ದಾರಿಯ ಪ್ರಾರಂಭದಲ್ಲಿ ಈ ಶಿಲಾಶ್ರಯ ಇದೆ. ಇಲ್ಲಿ ಕಂದುಗೆಂಪು ಬಣ್ಣದ ಚಿತ್ರಗಳಿದ್ದು ಅದರಲ್ಲಿ ಗೂಳಿಗಳು ಮತ್ತು ನವಿಲಿನ ಚಿತ್ರಗಳಿವೆ ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಚಿತ್ರಗಳು ಕಂಡು ಬಂದಿರುವುದಿಲ್ಲ.

ಶಿಲಾಶ್ರಯ-೮

ಬಸರಿಕೊಳ್ಳದಿಂದ ಮೇಲೆರಿ ೫ನೇ ಗವಿಯಿಂದ ನೈರುತ್ಯಕ್ಕೆ ತಿರುಗಿದಾಗ ಪೂರ್ವ

ಗುಂಪಿನ ಶಿಲಾ ಸಮಾಧಿಗಳೆಡೆಗೆ ಸಾಗುವ ದಾರಿಯಲ್ಲಿ ಈ ಶಿಲಾಶ್ರಯ ಇದೆ. ಇದು ಕಮಾನಿನಾಕಾರದ ಶಿಲಾಶ್ರಯವಾಗಿದೆ. ಇಲ್ಲಿ ಎರಡು ಹುಲಿಗಳ ಚಿತ್ರಗಳಿದ್ದು ಮೈಮೇಲೆ ಗೆರೆಗಳನ್ನು ಹೊಂದಿವೆ.

ಶಿಲಾಶ್ರಯ–೯

ಇದು ಪೂರ್ವ ಗುಂಪಿನ ಸಮಾಧಿಗಳಿಂದ ಆಗ್ನೇಯಕ್ಕೆ ಇದೆ. ಈ ಗವಿಗೆ ಎರಡೂ ಕಡೆಗೆ ಪ್ರವೇಶವಿದ್ದು, ಒಳಭಾಗದಲ್ಲಿ ಹುಲಿ ಮತ್ತು ರೇಖಾಚಿತ್ರಗಳಿವೆ.

ಶಿಲಾಶ್ರಯ–೧೦

ದುರ್ಗದ ದಡಿಯ ತುದಿಯ ಮಧ್ಯಭಾಗದಲ್ಲಿ ೬ನೇ ಗವಿಯ ಬಲ ಬದಿಗೆ ಈ ಕಲ್ಲಾಸರೆ ಇದ್ದು ಉತ್ತರಾಭಿಮುಖವಾಗಿದೆ. ಗವಿಯ ಎಡಗೋಡೆಯ ಮೇಲೆ ಹಿಡಿಕೆಯುಳ್ಳ ಉದ್ದ ಕತ್ತಿಗಳನ್ನು ಬಿಲ್ಲು ಬಾಣಗಳನ್ನು ಹಿಡಿದುಕೊಂಡು ನಿಂತ ಮನುಷ್ಯರ ಚಿತ್ರಗಳಿವೆ.

ಶಿಲಾಶ್ರಯ–೧೧

ದುರ್ಗದ ದಡಿಯಲ್ಲಿ ಬೆಟ್ಟದ ಮೇಲೆ ಈ ಕಲ್ಲಾಸರೆ ಇದೆ. ಇಲ್ಲಿ ಕೈ ಕೈ ಹಿಡಿದು ನೃತ್ಯ ಮಾಡುತ್ತಿರುವ ಮನುಷ್ಯರ ಚಿತ್ರಗಳಿವೆ. ಇವು ನೇರ ಹಾಗೂ ವೃತ್ತಸಾಲುಗಳಾಗಿವೆ. ಆಯಾ ಮನುಷ್ಯ ಚಿತ್ರಗಳ ಕೆಳಗೆ ನೇರವಾಗಿ ಮತ್ತು ದ್ವಿ ಅರೆ ವೃತ್ತಾಕಾರದ ಗೆರೆಗಳಿವೆ. ಮನುಷ್ಯರ ಸಂಭೋಗದ ಚಿತ್ರಗಳು, ಗೂಳಿ, ಜಿಂಕೆಗಳ ಸಾಲು ಚಿತ್ರಗಳು ಕೂಡ ಇಲ್ಲಿವೆ.

ಕಲ್ಲಾಸರೆ–೧೨

ದುರ್ಗದ ದಡಿಯ ಬೆಟ್ಟದ ತುತ್ತತುದಿಯ ದುರ್ಗಮವಾದ ಭಾಗದಲ್ಲಿ ಈ ಗವಿ ಇದೆ. ಎರಡು ಬಂಡೆಗಳ ಸಂಧೆಯಲ್ಲಿ ಪಶ್ಚಿಮ ದಿಕ್ಕಿಗೆ ಎದುರಾಗಿರುವ ಬಂಡೆಯ ಮೇಲಿನ ಚಿತ್ರದಲ್ಲಿ ೨೭ ಜನರು ಕೈ ಕೈ ಹಿಡಿದುಕೊಂಡು ಸಾಲಾಗಿ ನಿಂತಿದ್ದಾರೆ. ಒಂದು ಬದಿಯಲ್ಲಿರುವ ವ್ಯಕ್ತಿ ಕೈಯಲ್ಲಿ ಆಯುಧ ಹಿಡಿದಿದ್ದಾನೆ. ಇನ್ನೊಂದು ಬದಿಯು ಅಸ್ಪಷ್ಟವಾಗಿದೆ. ಬಹುಶಃ ಇವರು ಪ್ರಾಣಿಗಳನ್ನು ಹಿಮ್ಮೆಟ್ಟಿ ಬಂದು ಗುಂಪುಗಟ್ಟಿ ಮುಂದೆ ಇರುವ ವ್ಯಕ್ತಿಯ ಕಡೆಗೆ ಒಡಿಸಿಕೊಂಡು ಬರುವುದು, ಹಾಗೂ ಮುಂದಿರುವ ಆವ್ಯಕ್ತಿ ಅವುಗಳನ್ನು ಆಯುಧದಿಂದ ಹತ್ಯೆಗಯ್ಯುತ್ತಾನೆ ಎಂದನಿಸುತ್ತದೆ.

ಇಲ್ಲಿ ಕೆಳಗಡೆ ಹಲವಾರು ಕುದುರೆ ಸಮೂಹದ ಚಿತ್ರಗಳು, ನಗ್ನ ಮನುಷ್ಯ, ಗಂಡುಗೊಡಲಿ ಹಿಡಿದ ಕುದುರೆ ಸವಾರ, ಉದ್ದನೆ ಕೋಡುಗಳನ್ನು ಹೊಂದಿದ ಎತ್ತು, ಮನುಷ್ಯರ ಸಂಭೋಗದ ಚಿತ್ರಗಳು, ಜಿಂಕೆಗಳ ಸಾಲು, ಕುಚ್ಚಿನಂತಹ ಬಾಲವಿರುವ ಪ್ರಾಣಿ, ನವಿಲು ಚಿತ್ರಗಳಿವೆ. ಇದರ

ಕೆಳಗೆ ೨೩ ಕುದುರೆ ಸವಾರರ ಸಾಲು, ೧೪ ಜಿಂಕೆಗಳ ಸಾಲು, ಬಿಲ್ಲು ಹಿಡಿದ ಮನುಷ್ಯ ಹೀಗೆ ಹಲವಾರು ಚಿತ್ರಗಳಿಂದ ಕೂಡಿದೆ.

ಶಿಲಾಶ್ರಯ-೧೩

ಸಮಾಧಿ ನೆಲೆಗೆ ಪ್ರವೇಶಿಸಿಸುವಾಗ ಅಗಸಿಯ ಸಮೀಪದಾರಿಯ ಎಡಕ್ಕೆ ಈ ಕಲ್ಲಾಸರೆ ಇದೆ. ಇಲ್ಲಿ ಮೂರು ಎತ್ತಿನ ಚಿತ್ರಗಳು ಹಾಗೂ ಒಂದು ಚಿಗರೆಯ ಚಿತ್ರವಿದೆ. ದೊಡ್ಡ ಎತ್ತು ಛಾಯಾರೂಪದ್ದು, ಉಳಿದವುಗಳು ಹೊರ ರೇಖೆಗಳನ್ನು ಮಾತ್ರ ಎಳೆಯಲಾಗಿದೆ. ಎತ್ತಿನ ದೇಹ ಸಘುರವಾಗಿ, ಉದ್ದವಾಗಿದೆ. ಕೋಡು, ಇಣಿ, ಬಾಲಗಳಿದ್ದು, ಬಾಲದ ತುದಿಯಲ್ಲಿ ಬಾಗಿದ ಅಡ್ಡ ರೇಖೆ ಹಾಕಿ ಕುಚ್ಚನ್ನು ಸೂಚಿಸಲಾಗಿದೆ. ಜಿಂಕೆ ಕೋಡು ವಜ್ರಾಕೃತಿಯಲ್ಲಿದೆ. ದೇಹದ ನಡುವೆ ಉದ್ದ ಗೆರೆ ಹಾಕಿ ಪಟ್ಟೆಯನ್ನು ತೋರಿಸಲಾಗಿದೆ.

ಶಿಲಾಶ್ರಯ-೧೪

ಈ ಶಿಲಾಶ್ರಯದಲ್ಲಿ ಕೋಣೆಯ ತರವಿದ್ದು, ನಾಲ್ಕು ದಿಕ್ಕಿನ ಬಂಡೆಗಳಲ್ಲಿ ಪಶ್ಚಿಮ ದಿಕ್ಕಿನದು ನಾಶವಾಗಿ ತೆರೆದುಕೊಂಡಿದೆ. ಇದರಲ್ಲಿ ಹಿಂದಿನ ಬಂಡೆಯ ಮೇಲೆ ತಿಳಿಗೆಂಪು ವರ್ಣದ ಮೂರು ಜಿಂಕೆಗಳ ಚಿತ್ರಗಳಿವೆ. ಇದರಲ್ಲಿ ಮೊದಲನೆಯದು ಸಣ್ಣ ಮುಖ, ಅಗಲ ಕಿವಿ, ಸಘುರವಾದ ದೇಹ, ನಾಲ್ಕು ಕಾಲುಗಳನ್ನು ಸ್ಪಷ್ಟವಾಗಿ, ಹಾಗೂ ಬಾಲವನ್ನು ಅತಿ ಚಿಕ್ಕದಾಗಿ ಚಿತ್ರಿಸಿದ್ದಾರೆ. ಉಳಿದೆರಡು ಜಿಂಕೆಗಳು ಅದರ ಹಿಂದೆ ಇದ್ದು, ಭಾಗಶಃ ಒಂದರ ಹಿಂದೆ ಒಂದು ನಿಂತಂತೆ ಚಿತ್ರಿಸಿದ್ದಾರೆ.

ಶಿಲಾಶ್ರಯ-೧೫

ಕೆರೆಯ ಎಡಬದಿಯ ಬೆಟ್ಟದಲ್ಲಿ ಶಿಲಾಶ್ರಯದ ಬಲಬದಿಯ ಗೋಡೆಯಲ್ಲಿ ಗುರುತಿಸಲು ಸಾಧ್ಯವಾಗದ ವಿಶಿಷ್ಟ ರೇಖಾ ಚಿತ್ರವಿದೆ. ಗರಗಸದ ಹಲ್ಲಿನಂತೆ ಎರಡೂ ಬದಿ ಹಲ್ಲುಗಳನ್ನು ಒಳಗೊಂಡ ರೇಖಾಕೃತಿ ಇದು.

ಶಿಲಾಶ್ರಯ-೧೬

ಶಿಲಾಸಮಾಧಿ ನೆಲೆಯಿಂದ ಆಗ್ನೇಯಕ್ಕೆ ಸು.೧೧/೨ ಕಿ.ಮೀ ದೂರದಲ್ಲಿರುವ ರಕ್ಕಸ ಬೀಳಿನ ರಕ್ಕಸ ಬಂಡೆ ಅಥವಾ ರಕ್ಕಸಕುಟ್ರೆ ವರ್ಣಚಿತ್ರ ಕಲ್ಲಾಸರೆಯ ಎದುರಿಗೆ ಇದು ಇದೆ. ದೊಡ್ಡ ಬಂಡೆಯೊಂದು ಗವಿಯಿಂದ ಮುಂಚಾಚಿದ್ದು ಅದರ ಛಾವಣಿಯಲ್ಲಿ ಉಡಗಳು, ಮೀನು ಮತ್ತು ಮನುಷ್ಯ ಚಿತ್ರಗಳಿವೆ. ಚಿತ್ರಗಳು ಕೆಂಪು ವರ್ಣದಲ್ಲಿದ್ದು, ಬಹಳಷ್ಟು ಮಾಸಿವೆ. ಹಲ್ಲಿ ಆಕಾರದ ಐದು ಉಡಗಳಿದ್ದು, ಅವು ಸಾಮಾನ್ಯವಾಗಿ ೧.೧೧ ಮೀ ಉದ್ದವಾಗಿ ಮತ್ತು ೦.೨೮ಮೀ

ಅಗಲವಾಗಿದೆ. ನಾಲ್ಕು ಮೇಲ್ಮುಖವಾಗಿ ನಿಂತಿವೆ. ಅಥವಾ ಹೋಗುತ್ತಿವೆ. ಇನ್ನೊಂದು ಕೆಳಭಾಗದಲ್ಲಿ ಅಡ್ಡವಾಗಿ ಹೋಗುತ್ತಿದೆ. ಇವುಗಳ ಮುಖ ಚೂಪಾಗಿದ್ದು, ಬಾಲ ಉದ್ದವಾಗಿವೆ. ಮೈಮೇಲೆ ಗೆರೆಗಳನ್ನು ಎಳೆದಿದ್ದಾರೆ. ತಲೆಯ ಸುತ್ತಲೂ ಮತ್ತು ಹಿಂದಿನ ಕಾಲುಗಳ ಹಿಂಬದಿಗೆ ಮಾತ್ರ ಸಾಲಾಗಿ ಚಿಕ್ಕ ಚಿಕ್ಕ ಗೆರೆಗಳನ್ನು ಹಾಕಲಾಗಿದೆ. ಇಲ್ಲಿ ಒಂದು ದೊಡ್ಡ ಮೀನಿನ ರೇಖಾಚಿತ್ರ ಒಳಬದಿಯಲ್ಲಿದೆ. ಸ್ವಲ್ಪ ಉದ್ದವಾಗಿ ಮೊಟ್ಟೆಯಾಕಾರದ ದೇಹ ಮುಂದೆ ಎರಡೂ ಕಡೆ ದೊಡ್ಡದಾದ ರೆಕ್ಕೆ ಮತ್ತು ಹಿಂಭಾಗದಲ್ಲಿ ಎರಡು ರೆಕ್ಕೆಗಳಿವೆ. ಮೈಮೇಲೆಲ್ಲಾ ಅಡ್ಡ ರೆಖೆಗಳನ್ನು ಸಾಲಾಗಿ ಹಾಕಲಾಗಿದೆ. ಇಲ್ಲಿಯೇ ಒಬ್ಬ ಚಿಕ್ಕಮನುಷ್ಯನ ಚಿತ್ರವಿದೆ. ಕಾಲುಗಳನ್ನು ಮುಂದಕ್ಕೆ ಮಾಡಿ ವಕ್ರವಾಗಿ ನಿಂತ ಪಾರ್ಶ್ವಬದಿಯದು ಕೈಯನ್ನು ಮುಂದೆ ಮೇಲಕ್ಕೆ ಎತ್ತಿದೆ. ತಲೆ ದೇಹ ಕಾಲುಗಳ ಮೇಲೆ ಅಡ್ಡ ರೇಖೆಗಳಿವೆ.

ಶಿಲಾಶ್ರಯ-೧೭

ರಕ್ಕಸ ಕುಟ್ರಿಯ ಹಿಂಭಾಗದ ಬೆಟ್ಟದ ಕೆಳಭಾಗದಲ್ಲಿ ಈ ವಿಶಾಲವಾದ ಗವಿ ಇದೆ. ಇದಕ್ಕೆ ಎರಡೂ ಕಡೆಯಿಂದ ಪ್ರವೇಶವಿದೆ. ಗವಿಯ ವಿಶಾಲವಾದ ಛಾವಣಿಯಲ್ಲಿ ಎರಡು ವಿಚಿತ್ರವಾದ ಆಕೃತಿಗಳಿವೆ.

ಮೊದಲನೆಯ ಆಕೃತಿಯು ಛಾವಣಿಯ ಪೂರ್ವಭಾಗದಲ್ಲಿದೆ. ಇಲ್ಲಿರುವ ಮೊದಲನೆಯ ಚಿತ್ರವು ಸ್ತ್ರೀ ಚಿತ್ರಣವಾಗಿದ್ದು. ೫ ಮೀ ಉದ್ದ, ೪ ಮೀ ಅಗಲವಾಗಿದೆ. ಅದು ಗರ್ಭಿಣಿಯ ಚಿತ್ರಣವೆಂದು ಗುರುತಿಸಬಹುದು. ಹೊಟ್ಟೆಯಲ್ಲಿರುವ ಮಗುವನ್ನು ಕೂಡ ಈ ಚಿತ್ರದಲ್ಲಿ ತೋರಿಸಲಾಗಿದೆ. ಒಂದು ಕೈಯನ್ನು ಮಾತ್ರ ಚಿತ್ರದಲ್ಲಿ ತೋರಿಸಿದ್ದು ಅದು ಮುಂದೆ ಚಾಚಿಕೊಂಡಿದೆ. ಎರಡು ಸ್ತನಗಳನ್ನು ತೋರಿಲಾಗಿದೆ. ಹಾಗೂ ಕಾಲನ್ನು ಮಡಿಚಿ, ಮಗುವಿಗೆ ಜನ್ಮ ನೀಡುತ್ತಿದ್ದ ದೃಶ್ಯ ಎಂದು ಅನಿಸುತ್ತದೆ. ಕೆಳಗಡೆ ಒಬ್ಬ ಮಗುವಿನ ಚಿತ್ರವಿದೆ ಮೈ ಮೇಲೆಲ್ಲಾ ಗೆರೆಗಳನ್ನು ಎಳೆದಿದ್ದಾರೆ. ಇನ್ನೊಂದು ಚಿತ್ರವನ್ನು ಗಮನಿಸಿದಾಗ ಡಾ.ಶರಣಬಸಪ್ಪ ಕೊಲ್ಕಾರ ಅವರು ಇದು ಒಬ್ಬ ಮನುಷ್ಯಾಕೃತಿ ಎಂದಿದ್ದಾರೆ. ಆದರೆ ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಒಂದು ಉಡದ ಚಿತ್ರ ಎಂದೆನಿಸುತ್ತದೆ. ಇದರ ಎರಡು ಕಾಲುಗಳನ್ನು ಮಾತ್ರ ತೋರಿಸಿದ್ದು ದಪ್ಪ ಹೊಟ್ಟೆ, ಬೆನ್ನಿನ ಉಬ್ಬಿದ ಭಾಗವನ್ನು ಎರಡು ಮೊಟ್ಟೆಯಾಕಾರ ಗೆರೆಗಳಿಂದ ಗುರುತಿಸಿದ್ದಾರೆ. ಹಾಗೂ ದಪ್ಪ ಮತ್ತು ಉದ್ದವಾದ ಬಾಲವನ್ನು ಇದು ಹೊಂದಿದೆ. ಬಾಲದ ಮೇಲೆ ಎರಡು ತುದಿಯಿಂದ ಒಂದಕ್ಕೊಂದು ಛೇದಿಸಿಕೊಂಡು ಹೊರಟ ರೇಖೆಗಳನ್ನು ಎಳೆಯಲಾಗಿದೆ. ಕೈಯಲ್ಲಿ ಗರಗಸದ ಹಲ್ಲಿನ ತರಹದ ಗೆರೆಗಳನ್ನು ಎಳೆಯಲಾಗಿದೆ. ಜೊತೆಗೆ ಮೂರು ಮೂರು ಬೆರಳುಗಳನ್ನು ಸಹ ಮಾಡಿರುವುದನ್ನು ನಾವು ಈ ಚಿತ್ರದಲ್ಲಿ ಕಾಣಬಹುದು.

ಚಿಕ್ಕಬೆಣಕಲ್

ಗಂಗಾವತಿಯಿಂದ ಕೊಪ್ಪಳಗೆ ಹೋಗುವ ರಸ್ತೆಯಲ್ಲಿ ದಕ್ಷಿಣಕ್ಕೆ ಸುಮಾರು ೧೨ ಕಿ.ಮಿ.ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ಮೂರು ಶಿಲಾಶ್ರಯಗಳು ಕಂಡು ಬಂದಿವೆ.

ಶಿಲಾಶ್ರಯ-೧

ಇದು ಗ್ರಾಮದಿಂದ ದಕ್ಷಿಣಕ್ಕೆ ಸುಮಾರು ೨ ಕಿ.ಮೀ ದೂರದಲ್ಲಿ ಒನಕಿಂಡಿ ದಾರಿಯಲ್ಲಿದೆ. ಬೆಟ್ಟದ ಪ್ರಾರಂಭದಲ್ಲಿ ಒಂದು ದೊಡ್ಡ ಒಂಟಿಗುಂಡು ಇದ್ದು, ಅದರ ಆಸರೆಯಲ್ಲಿ ಕೆಂಪು ವರ್ಣದ ಚಿತ್ರಗಳಿವೆ. ಇಲ್ಲಿ ಮುಖ್ಯವಾಗಿ ಮನುಷ್ಯನ ಎರಡು ಚಿತ್ರಗಳು, ಎತ್ತಿನ ಚಿತ್ರಗಳು ರಂಗೋಲಿ ಆಕಾರದ ನಕ್ಷೆ ಚಿತ್ರಗಳು, ಚೌಕ ವಿನ್ಯಾಸದ ಒಂದು ಚಿತ್ರವಿದೆ. ಇದರಲ್ಲಿ ಎರಡು ಅಡ್ಡ ರೇಖೆಗಳಿವೆ. ಹಾಗೂ ಆಯತಾಕಾರದ ಇನ್ನೊಂದು ಚುಕ್ಕೆ ಚಿತ್ರವಿದೆ. ಕೈಗಳನ್ನು ಮೇಲಕ್ಕೆತ್ತಿ ನಿಂತಿರುವ ಚಿತ್ರವಿದೆ. ಎತ್ತಿನ ಚಿತ್ರ ದ್ವಿ ರೇಖೆಯದು ಇದನ್ನು ಇತ್ತೀಚಿನ ದಿನಗಳಲ್ಲಿ ಮಾಡಿರಬಹುದು ಎಂದು ಊಹಿಸಬಹುದು. ಕೊಂಬು ಮುಂದಕ್ಕೆ ಬಾಗಿದೆ. ದೊಡ್ಡ ಇಣಿ ಇದೆ, ಬೆನ್ನಿನ ಗೆರೆಯ ಬಾಲವಾಗಿ ಕೊಣೆಗೊಂಡಿರುವುದು ಇನ್ನೊಂದು ಭಾಗದಲ್ಲಿ ಮಂಗನ ಹಾಗೂ ಎತ್ತಿನ ಕಡ್ಡಿ ರೂಪದ ಚಿತ್ರಗಳಿವೆ.

ಶಿಲಾಶ್ರಯ-೨

ಇದು ಗ್ರಾಮದಿಂದ ದಕ್ಷಿಣಕ್ಕೆ ಸುಮಾರು ೩ ಕಿ.ಮೀ ದೂರದಲ್ಲಿರುವ ಮಳೆಯಮ್ಮನ ಊಟಿಯ ಹತ್ತಿರವಿದೆ. ಇದು ಒಂದು ದೊಡ್ಡ ಬಂಡೆಗಲ್ಲಾಗಿದ್ದು ಸೊಗಸಾದ ಶಿಲಾಶ್ರಯ ಇದೆ. ಇದರಲ್ಲಿ ಅಸ್ಪಷ್ಟವಾದ ರೇಖಾ ಚಿತ್ರಗಳು ಕಂಡುಬಂದಿದ್ದು, ಇವು ಕೆಂಪು ವರ್ಣದಲ್ಲಿವೆ. ಇಲ್ಲಿ ದ್ವಿರೇಖೆಯಲ್ಲಿ ಗೂಳಿಯ ಚಿತ್ರ ವಿಶೇಷವಾಗಿದ್ದು ೨೦x೧೦ ಸೆಂ.ಮೀ ಇದೆ. ದಪ್ಪನಾಗಿ ಕಾಲು, ದೇಹವನ್ನು ಸಂಕೇತಿಸಿ ಬಿಡಿಸಲಾದ ಎತ್ತಿನ ಚಿತ್ರವಿದೆ. ಅದಕ್ಕೆ ಮುಂಭಾಗಿದ ಕೋಡುಗಳಿವೆ.

ಶಿಲಾಶ್ರಯ-೩

ಇದು ಮಳೆಯಮ್ಮನ ಊಟಿಯ ಬದಿಯಲ್ಲಿ ಬೃಹತ್ ಶಿಲಾಯುಗದ ಶಿಲಾ ಸಮಾಧಿಗಳ ನೆಲೆಯ ಮೊರೆರಕಲ್ಲಿನ ಹತ್ತಿರವಿದೆ. ಗವಿ ಇರುವ ಬೆಟ್ಟದ ಭಾಗದ ಹೆಸರು ತಡಸ್‌ಕುಟ್ರೆ, ಇಲ್ಲಿ ವಿಶಾಲವಾದ ಗವಿ ಇದ್ದು, ಬೃಹತ್ ಬಂಡೆಗಳು ಪರಸ್ಪರ ಮುಖಾಮುಖಿಯಾಗಿ ವಾರೆಯಾಗಿ ನಿಂತಿದ್ದು, ಉತ್ತಮ ಆಸರೆ ಉಂಟಾಗಿದೆ. ಅದರ ದಕ್ಷಿಣ ಬದಿಯ ಬಂಡೆಯಲ್ಲಿ ಕೆಂಪು ವರ್ಣದ ಚಿತ್ರಗಳಿವೆ. ಅವು ನೆಲದಿಂದ ಸು.೬ ಅಡಿ ಎತ್ತರದ ಮೇಲೆ ಇರುವುದನ್ನು ಕಾಣಬಹುದು. ಇಲ್ಲಿ ಪ್ರಮುಖವಾಗಿ ಬೃಹತ್ ಕಾಡುಕೋಣ ಹಾಗೂ ಮನುಷ್ಯ ಚಿತ್ರಗಳಿವೆ. ಇವು ೨ ಮೀ ಅಗಲ

ಮತ್ತು ೨ ಮೀ ಎತ್ತರದ ಚಿತ್ರಗಳಾಗಿವೆ. ಕಾಡು ಕೋಣಕ್ಕೆ ಕಿರಿದಾದ ಕಿವಿ ಇದ್ದು, ಬಾಯಿ, ಕಾಲುಗಳು, ಹೊಟ್ಟೆ ಸಹಜವಾಗಿದ್ದು, ಕೋಣ ಬಲಿಷ್ಠವಿಗಿದೆ. ಮುಖದ ರಚನೆ ಅತ್ಯಂತ ಪ್ರಮಾಣ ಬದ್ಧತೆಯಿಂದ ಸಹಜವಾಗಿದೆ. ಕೋಣದ ಹೊಟ್ಟೆಯ ಕೆಳಭಾಗದಲ್ಲಿ ಇನ್ನೊಂದು ಕೋಣದ ಮುಖವಿದ್ದು ಎದುರು ನೋಡುತ್ತಿರುವಂತಿದೆ. ಕೈಗಳನ್ನು ಮೇಲೆತ್ತಿದೆ.

ಇನ್ನುಳಿದವು ಕೈಗಳನ್ನು ಮೇಲಕ್ಕೆತ್ತಿವೆ. ಪಾದಗಳು ಯಾವ ಮನುಷ್ಯರಿಗೂ ಇರುವುದಿಲ್ಲ. ಹಾಗೂ ಕೋಣದ ಕೊಡುಗಳನ್ನು ಮಾತ್ರ ಚಿತ್ರಿಸಿದ್ದು ಅದರ ಮೇಲೆ ಹಂದಿಯ ದೇಹದ ಅರ್ಧ ಭಾಗವನ್ನು ಚಿತ್ರಿಸಲಾಗಿದೆ.

ಆನೆಗುಂದಿ

ಗಂಗಾವತಿಯಿಂದ ದಕ್ಷಿಣಕ್ಕೆ ಸುಮಾರು ೧೨ ಕಿ.ಮಿ.ದೂರದಲ್ಲಿ ಅಥವಾ ಹಂಪಿಯಿಂದ ತುಂಗಭದ್ರಾ ನದಿಯನ್ನು ದಾಟಿದರೆ ಸುಮಾರು ೩ ಕಿ.ಮಿ.ದೂರದಲ್ಲಿ ಈ ಗ್ರಾಮವಿದೆ. ಗ್ರಾಮದ ಸುತ್ತಮುತ್ತಲಿನ ಬೆಟ್ಟಗಳಲ್ಲಿ ಒಂಬತ್ತು ಶಿಲಾಶ್ರಯಗಳು ಕಂಡುಬಂದಿವೆ.

ಶಿಲಾಶ್ರಯ-೧

ಇದು ಆನೆಗುಂದಿಯಿಂದ ಗಂಗಾವತಿಗೆ ಹೋಗುವ ರಸ್ತೆಯ ಎಡಕ್ಕೆ ಮಲ್ಲೇದೇಶ್ವರ ದೇವಸ್ಥಾನದ ಪಕ್ಕದಲ್ಲಿ ಬಾಳೆತೋಟದ ಮೂಲಕ ಸ್ವಲ್ಪ ನಡೆದು ಹೋದರೆ ಅಲ್ಲಿರುವ ಸಣ್ಣ ಗುಡ್ಡದಲ್ಲಿರುವ ಛಾವಣಿಯ ಕಲ್ಲಾಸರೆಯಲ್ಲಿ ಒಂದು ಮಾನವಾಕೃತಿ ಇದೆ. ಇದು ಸುಮಾರು ೦.೮ ಅಡಿ ಅಗಲ ಮತ್ತು ೧.೯ ಅಡಿ ಎತ್ತರದ ಚಿತ್ರವಾಗಿದೆ. ಈ ಚಿತ್ರದಲ್ಲಿ ಎಡಗೈ ನೇರವಾಗಿ ಚಾಚಿ ಬಲಬುಜ ಅಸ್ಪಷ್ಟವಾಗಿದ್ದು. ಕೆಳ ಇಲಿಬಿಟ್ಟಂತೆ ತೋರುತ್ತದೆ. ಸೊಂಟದ ಭಾಗದಿಂದ ಬಾಲವನ್ನು ಇಲ್ಲಿ ತೋರಿಸಿದ್ದಾರೆ. ಇದು ಕಂದುಕೆಂಪು ವರ್ಣದಿಂದ ರಚಿಸಿರುವುದು ಕಂಡುಬರುತ್ತದೆ. ಈ ಶಾಲಾಶ್ರಯದ ಎಡ ಹಿಂದಕ್ಕೆ ಎತ್ತರ ಛಾವಣಿಯ ಮೇಲೆ ಕೆಂಪು ವರ್ಣದ ರೇಖಾ ಚಿತ್ರವಿದೆ. ಇವುಗಳು ಸ್ಪಷ್ಟವಾಗಿಲ್ಲದೆ ಯಾವ ಪ್ರಕಾರದ ಚಿತ್ರವೆಂಬುವುದನ್ನು ಗುರುತಿಸಲು ಸಾಧ್ಯವಾಗಿಲ್ಲ.

ಶಿಲಾಶ್ರಯ-೨

ಆನೆಗುಂದಿ ಇಂದ ಗಂಗಾವತಿಗೆ ಹೋಗುವ ರಸ್ತೆಯ ಬಲಕ್ಕೆ ನಾರಾಯಣಪ್ಪನ ತೋಟದ ಹತ್ತಿರವಿರುವ ಬೆಟ್ಟದ ಕಡಿದಾದ ಒಂದು ಶಿಲಾಶ್ರಯದಲ್ಲಿ ಬಿಳಿ ಸುಣ್ಣದಂತೆ ಕಾಣುವ ವರ್ಣದಿಂದ ಕಡ್ಡಿಯಂತಹ ಮನುಷ್ಯಾಕೃತಿಗಳು, ಪ್ರಾಣಿಗಳು ಹೆಚ್ಚಾಗಿದ್ದು, ಕುದುರೆಸವಾರ, ಆನೆಸವಾರರ ಚಿತ್ರಗಳು ಸಹಿತ ಇವೆ. ಕುದುರೆ ಸವಾರ ಬಿಲ್ಲು ಬಾಣ ಹಿಡಿದಿರುವ ಚಿತ್ರವು ಸಹಿತ ಇಲ್ಲಿದೆ.

ಶಿಲಾಶ್ರಯ-೩

ಎರಡನೆ ಕಲ್ಲಾಸರೆಯಿಂದ ಸ್ವಲ್ಪ ದೂರದಲ್ಲಿ ಈ ಗವಿ ಶಿಲಾಶ್ರಯವಿದೆ. ಇದರಲ್ಲಿ ಬಿಳಿ ಮತ್ತು ಕೆಂಪು ವರ್ಣದಿಂದ ಮಾನವಾಕೃತಿ, ಪ್ರಾಣಿ, ವೃತ್ತಾಕಾರದ ಚಕ್ರಗಳು ಚಿತ್ರಿಸಲಾಗಿದೆ. ಬಿಳಿ ವರ್ಣದ ಚಿತ್ರಗಳು ಹೇರಳವಾಗಿದ್ದು, ಕೆಂಪು ವರ್ಣದ ಚಿತ್ರಗಳು ವಿರಳವಾಗಿವೆ. ಕುದುರೆ ಸವಾರನ ಚಿತ್ರವಿದ್ದು, ಸವಾರ ಕೈಯಲ್ಲಿ ಭರ್ಜಿಯನ್ನು ಎಸೆಯುವಂತಹ ಚಿತ್ರವಿದೆ. ಇದರ ಹಿಂದಿರುವ ಕುದುರೆ ಸವಾರ ಕೈಯಲ್ಲಿ ಚಂಡನ್ನ ಹಿಡಿದಿದ್ದಾನೆ. ಇದರ ಹಿಂದೆ ಒಬ್ಬ ಮನುಷ್ಯನ ಚಿತ್ರವಿದೆ. ಕೈ ಕೈ ಹಿಡಿದು ಒಂಬತ್ತು ಜನರು ವೃತ್ತಾಕಾರವಾಗಿ ನಿಂತುಕೊಂಡಿದ್ದು, ಬಹುಶಃ ಮಗುವಿನ ಬಲಿಕೊಡುವ ಚಿತ್ರ ಎಂದು ಅನಿಸುತ್ತದೆ. ಇನ್ನು ಹಲವಾರು ಮನುಷ್ಯ ಹಾಗೂ ಪ್ರಾಣಿಗಳ ಚಿತ್ರಗಳನ್ನು ಬಿಡಿ ಬಿಡಿಯಾಗಿ ರಚಿಸಲಾಗಿದೆ.

ಸೇತುವೆ ರಸ್ತೆಯ ಬಲಬದಿಯ ಬೆಟ್ಟದಲ್ಲಿ ರಸ್ತೆಗೆ ಹೊಂದಿಕೊಂಡಂತೆ ಈ ಶಿಲಾಶ್ರಯವಿದೆ. ಆದರೆ ಛಾವಣಿ ಮತ್ತು ಗೋಡೆಗಳಲ್ಲಿ ಅನೇಕ ಮನುಷ್ಯಾಕೃತಿಗಳು ಚೌಕ, ಆಯತ ಅಂಕಣಗಳ ಚಿಕ್ಕ ಚಿಕ್ಕ ರೇಖಾ ಚಿತ್ರಗಳಿವೆ. ಬಿಳಿಯ ಬಣ್ಣವನ್ನು ಬಂಡೆಗೆಲ್ಲಾ ಬಳಿದು ಚಿತ್ರಗಳನ್ನು ಕೆಂಪು ಮತ್ತು ಬಿಳಿ ವರ್ಣದಲ್ಲಿ ಬಿಡಿಸಲಾಗದೆ. ಕೆಂಪು ಮನುಷ್ಯಾಕೃತಿಗಳಿಗಿಂತ ಬಿಳಿಯವು ಭಿನ್ನವಾಗಿವೆ. ಕೈಗಳಲ್ಲಿ ಕತ್ತಿಯನ್ನು ಹಿಡಿದಂತೆ ಕೆಲ ಚಿತ್ರಗಳಿವೆ. ಕೆಲವು ಮನುಷ್ಯ ಕೃತಿಗಳ ಮುಖವು ತ್ರಿಕೋನದಂತಿದ್ದು, ಬಾಲಗಳಿಗೆ ಪ್ರಾಯತಃ ಇಲ್ಲಿ ವಾನರ ಅಥವಾ ಮಂಗಗಳ ಚಿತ್ರಗಳಿರಬೇಕು. ಒಂದೊಂದು ಚಿತ್ರವು ಒಂದೊಂದು ಭಂಗಿಯಲ್ಲಿರುವುದು ವಿಶೇಷ.

ಶಿಲಾಶ್ರಯ-೫

ಇದು ವ್ಯಾಗೋಟಿ ದುರ್ಗಮ್ಮ ದೇವಾಲಯದ ಬೆಟ್ಟದಲ್ಲಿದೆ. ರಸ್ತೆ ಬದಿಗೆ ಹೊಂದಿಕೊಂಡಂತೆ ಈ ಕಲ್ಲಾಸರೆ ಇದೆ. ಇದರ ಛಾವಣಿಯ ತುಂಬ ಕೆಂಪು ಮತ್ತು ಬಿಳಿವರ್ಣದ ವೈವಿಧ್ಯಮಯವಾದ ಅನೇಕ ರಂಗೋಲಿ ತರಹದ ಚಿತ್ರಗಳಿವೆ. ಇವುಗಳಲ್ಲಿ ಹಲವಾರು ಒಂದೇ ರೀತಿಯಲ್ಲಿವೆ. ಕೆಲವು ಚಿತ್ರಗಳನ್ನು ಕೆಂಪು ಮತ್ತು ಬಿಳಿ ವರ್ಣದಿಂದ ತುಂಬಿ ಅಲಂಕಾರ ಗೊಳಿಸಲಾಗಿದೆ. ವಜ್ರಾಕೃತಿ, ಚಕ್ರ, ವೃತ್ತ, ಹೂಗಳ ರೀತಿಯಲ್ಲಿ ಚಿತ್ರಗಳಿವೆ.

ಶಿಲಾಶ್ರಯ-೬

ಇದು ದುರ್ಗಮ್ಮ ದೇವಾಲಯದ ಹಳೆಯ ಕಾಲುದಾರಿಯಲ್ಲಿ ಮೊದಲನೆಯ ಹಾಗೂ ಎರಡನೆಯ ಪ್ರವೇಶ ದ್ವಾರದ ನಡುವೆ ಇದೆ. ಇಲ್ಲಿ ಮೂರು ಗುಂಡುಗಳಿದ್ದು, ಗುಂಡುಗಳ ಮೂಲೆ ಭಾಗದಲ್ಲಿ ಕಲ್ಲು ತುಂಡಾಗಿ ಸಣ್ಣ ಪ್ರಮಾಣದ ಶಿಲಾಶ್ರಯಗಳುಂಟಾಗಿವೆ. ಆ ಭಾಗದಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ.

ಒಂದನೇಯ ಗುಂಡಿನಲ್ಲಿ ಸಾಲಾಗಿ ನಿಂತಿರುವ ಐದು ಪಕ್ಷಿಗಳ ಚಿತ್ರಗಳಿವೆ. ಇವು ಕಾಡುಕೋಳಿಯಂತೆ ತೋರುತ್ತವೆ. ಪ್ರಮಾಣದಲ್ಲಿ ಕ್ರಮವಾಗಿ ಒಂದಕ್ಕಿಂತ ಒಂದು ಚಿಕ್ಕದಾಗಿವೆ. (ಸುಮಾರು ೬ ಸೆಂ.ಮೀನಿಂದ ೧೦ ಸೆಂ.ಮೀ) ಇದರ ಕೆಳಗಡೆ ಎರಡು ಜಿಂಕೆಯ ಚಿತ್ರಗಳನ್ನು ರಚಿಸಿದ್ದು ದೇಹದ ರಚನೆಯನ್ನು ನೋಡಿ ಒಂದು ಗಂಡು ಹಾಗೂ ಒಂದು ಹೆಣ್ಣು ಎಂದು ಗುರುತಿಸಬಹುದಾಗಿದೆ. ಎರಡನೆ ಗುಂಡಿನಲ್ಲಿ ಮೂರು ಜಿಂಕೆಗಳ ಹಾಗೂ ಇಬ್ಬರು ಮನುಷ್ಯರ ಚಿತ್ರಗಳಿವೆ. ಈ ಜಿಂಕೆಯಲ್ಲಿ ಮಧ್ಯದ ಜಿಂಕೆಯನ್ನು ಮಾತ್ರ ದ್ವಿರೇಖೆಯಿಂದ ರಚಿಸಲಾಗಿದೆ. ಕೆಳಭಾಗದಲ್ಲಿರುವ ಮನುಷ್ಯರ ಚಿತ್ರವು ವಿಶೇಷವಾಗಿದ್ದು ಇಬ್ಬರು ಮನುಷ್ಯರು, ಪಕ್ಷಿಯನ್ನು ಬೇಟೆಯಾಡಿ ಅದರ ಎರಡು ಪುಕ್ಕಗಳನ್ನು ಹಿಡಿದುಕೊಂಡು ಹೊರಟಿರುವ ದೃಶ್ಯ ಚಿತ್ರವಿದೆ. ಮೂರನೇ ಗುಂಡಿನಲ್ಲಿ ಸುಣ್ಣ ಬಳಿದಿರುವುದರಿಂದ ಎರಡು ಸುಣ್ಣ ಪಟ್ಟಿಗಳ ನಡುವೆ ಒಂದು ಮನುಷ್ಯನ ಚಿತ್ರವಿದ್ದು, ಕತ್ತು ಮತ್ತು ದುಂಡು ತಲೆಯನ್ನು ಕೆಂಪು ವರ್ಣದಿಂದ ತುಂಬಲಾಗಿದೆ. ತಲೆಯ ಸುತ್ತಲೂ ಕೂದಲು ಹರಡಿದಂತೆ ರೇಖೆಗಳನ್ನು ಸುತ್ತಲೂ ಎಳೆಯಲಾಗಿದೆ. ಇನ್ನೊಂದು ರೀತಿಯಲ್ಲಿ ವೀಕ್ಷಿಸಿದರೆ ನಿಲುಗಡೆಯ ಮೇಲೆ ದೀಪವನ್ನು ಉರಿಸುವಂತೆ ಈ ಚಿತ್ರ ಕಾಣಿಸುತ್ತದೆ.

ಶಿಲಾಶ್ರಯ–೭

ಚಿಂತಾಮಣಿ ಆಶ್ರಯದ ಹಿಂದೆ ನದಿಗೆ ಹೊಂದಿಕೊಂಡು ಕಲ್ಲಾಸರೆ ಇದ್ದು, ಅದರ ಛಾವಣಿ ಗೋಡೆಯಲ್ಲಿ ಆನೆಯ ಹಾಗೂ ಎತ್ತಿನ ಚಿತ್ರಗಳು ಕಂಡುಬಂದಿವೆ. ಆನೆ ಚಿತ್ರ (೦.೫೮ ಮೀ ಉದ್ದ ಮತ್ತು ೦.೯೦ ಮೀ ಎತ್ತರ) ಪ್ರಮಾಣ ಬದ್ಧವಾಗಿಲ್ಲ. ದೇಹ ಆಯತಾಕಾರದಲ್ಲಿ ಬಹಳಷ್ಟು ಉದ್ದವಿದ್ದು, ಬೆನ್ನು ನೇರವಾಗಿದೆ. ಸೊಂಡಿಲು ದಪ್ಪವಾಗಿ ಕೆಳಗೆ ಇಳಿ ಬಿದ್ದಿದೆ. ಅದರ ತುದಿ ಮೇಲಕ್ಕೆ ಎತ್ತಿ ಅರೆ ವೃತ್ತಾಕಾರದಲ್ಲಿದೆ. ಕಾಲುಗಳನ್ನು ಮುಂದೆ ಮತ್ತು ಹಿಂದೆ ಒಂದರ ಪಕ್ಕ ಒಂದರಂತೆ ತೋರಿಸಲಾಗಿದೆ. ಇಡೀ ದೇಹವನ್ನು ವರ್ಣದಿಂದ ತುಂಬಲಾಗಿದೆ.

ಮೂರು ಎತ್ತಿನ ಚಿತ್ರಗಳಿದ್ದು, ಸ್ಪಷ್ಟವಾಗಿವೆ. ಸಾಲಾಗಿ ಮುಖವೆತ್ತಿ ನಿಂತಿವೆ. ಕೊಡು, ಮುಖ, ಕತ್ತು, ದೇಹ, ಇಣಿ, ಕಾಲು, ಬಾಲ, ಸಹಜವಾಗಿದ್ದು, ಬಾಲದ ತುದಿಗೆ ಮೂರು ಗೆರೆಗಳನ್ನು ಎಳೆದು ಕುಚ್ಚದ ರೀತಿಯಲ್ಲಿ ಬಿಡಿಸಲಾಗಿದೆ.

ಶಿಲಾಶ್ರಯ–೮

ದುರ್ಗಾದೇವಿಯ ದೇವಾಲಯವಿರುವ ವಾಲಿಖಿಲ್ಲಾ ಬೆಟ್ಟದ ದಕ್ಷಿಣದ ಕಣಿವೆಯಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಕೆಂಪು, ಬಿಳಿ ವರ್ಣದ ಅನೇಕ ಚುಕ್ಕೆಗಳನ್ನು ಚಿತ್ರಿಸಲಾಗಿದೆ. ಅಲ್ಲದೇ ಮನುಷ್ಯರ, ಆನೆಯ, ಎತ್ತಿನ ಚಿತ್ರಗಳು ಸಹ ಇವೆ.

ಮನುಷ್ಯ ಚಿತ್ರಗಳಲ್ಲಿ ಇಬ್ಬರ ಚಿತ್ರಗಳು ತಲೆಕೆಳಗಾಗಿ ರಚಿಸಲ್ಪಟ್ಟಿವೆ. ಆನೆಯ ಚಿತ್ರ ಒಂದಿದೆ. ಇಲ್ಲಿ ಚುಕ್ಕೆಗಳ ನಡುವೆ ಬಿಳಿ ಚುಕ್ಕೆಗಳನ್ನು ಇರಿಸಲಾಗಿದೆ. ಹಾಗೂ ನಾಲ್ಕು ಚಿಕ್ಕ ಮನುಷ್ಯಾಕೃತಿಗಳು ಬಿಳಿ ಬಣ್ಣದಿಂದ ಚಿತ್ರಿಸಲ್ಪಟ್ಟಿವೆ.

ಶಿಲಾಶ್ರಯ-೯

ಆನೆಗುಂದಿಯ ಉತ್ತರಕ್ಕೆ ಮ್ಯಾಗಲಮಠ ಗುಡ್ಡವಿದೆ. ಆ ಗುಡ್ಡದ ಪ್ರದೇಶದಲ್ಲಿ ನಾಲ್ಕು ಕಡೆ ಸಣ್ಣ ಸಣ್ಣ ಚಿತ್ರಗಳಿವೆ. ಮ್ಯಾಗಲ ಮಠ ಗುಡ್ಡದ ದಾರಿಯಲ್ಲಿ ಬೆಟ್ಟದ ಗುಂಡಿನಲ್ಲಿ ಕೆಂಪು ಬಣ್ಣದ ಮನುಷ್ಯ ಚಿತ್ರವಿದೆ. ಇದು ಛಾಯಾ ರೂಪದ್ದು, ಕೈಯಲ್ಲಿ ಆಯುಧವನ್ನು ಹಿಡಿದುಕೊಂಡಿದೆ. ಇದು ಸುಮಾರು ೧೮ ಸೆಂ.ಮೀ ಎತ್ತರವಾಗಿದೆ. ಇದರ ಎದುರಿನ ಗವಿಯಲ್ಲಿ ಉದ್ದವಾದ ಡಮರು ರೀತಿಯ ಕೆಂಪು ರೇಖಾ ಚಿತ್ರವಿದೆ. ತೇರು ಬೀದಿ ಎದುರಿನಲ್ಲಿ ಸುಮಾರು ೩೦ಮೀ ಎತ್ತರದಲ್ಲಿರುವ ಗವಿಯಲ್ಲಿ ೩ ವಜ್ರಾಕೃತಿಯ ರೇಖಾ ಚಿತ್ರಗಳಿವೆ, ಮೇಲಿನ ಗವಿ ಕೆಳಗೆ ಇರುವ ಇನ್ನೊಂದು ಗವಿಯಲ್ಲಿ ಬಿಳಿ ಮತ್ತು ಕೆಂಪು ಬಾಹ್ಯ ರೇಖೆಯ ಚೌಕ ಪಟ್ಟಿ ಇದೆ. ಅದರಲ್ಲಿ ಉದ್ದ ರೇಖೆಗಳಿವೆ. ಮೇಲೆ, ಚಂದ್ರ, ಸೂರ್ಯರ, ಮನುಷ್ಯ ಆಕೃತಿಯ ಕಡ್ಡಿರೂಪದ ಚಿತ್ರಗಳಿವೆ.

ಮಲ್ಲಾಪುರ

ಗಂಗಾವತಿ ಆನೆಗುಂದಿ ರಸ್ತೆಯಲ್ಲಿರುವ ಸಂಗಾಪುರದಿಂದ ೪ ಕಿ.ಮೀ ಅಂತರದಲ್ಲಿ ಈ ಗ್ರಾಮವಿದೆ. ಇಲ್ಲಿ ಹದಿನಾಲ್ಕು ಶಿಲಾಶ್ರಯಗಳಿವೆ.

ಶಿಲಾಶ್ರಯ-೧

ಇದು ಮಲ್ಲಾಪುರದಿಂದ ಉತ್ತರಕ್ಕೆ ಎರಡು ಕಿ.ಮೀ ದೂರದಲ್ಲಿ ಅರವಟ್ಟಿಗೆ ದಾರಿಯ ಬಲಬದಿಯ ಬೆಟ್ಟದಲ್ಲಿದೆ. ಬೆಟ್ಟದ ಮಧ್ಯಭಾಗದಲ್ಲಿ ಈ ಕಲ್ಲಾಸರೆಯ ಬಂಡೆ ಹೊರಚಾಚಿದೆ. ಇದರ ಛಾವಣಿಯಲ್ಲಿ ನಗ್ನ ಮನುಷ್ಯನ ಹಾಗೂ ಹಿಂಬದಿಯ ಕಲ್ಲಾಸರೆಯಲ್ಲಿ ಕೆಂಪು ವರ್ಣ ಚಿತ್ರಗಳಿವೆ. ಇಲ್ಲಿ ಎರಡು ನಗ್ನ ಮನುಷ್ಯರ ಚಿತ್ರಗಳಿದ್ದು, ದೇಹದ ಬಿಡಿಭಾಗಗಳನ್ನು ಸಹಜವಾಗಿ ಚಿತ್ರಿಸಿದ್ದಾರೆ. ಇದು ೨.೨೦ ಮೀ ಎತ್ತರ ಮತ್ತು ೧.೩೪ ಮೀ ಅಗಲವಾಗಿದೆ. ಇದರ ಉತ್ತರ ಬದಿಯಲ್ಲಿ ಪಶ್ಚಿಮಕ್ಕೆ ಮುಖವಿರುವ ಮತ್ತೊಂದು ಭಾಗದಲ್ಲಿ ಕೆಂಪು ವರ್ಣ ಚಿತ್ರಗಳಿದ್ದು, ವಿಚಿತ್ರವಾದ ಎರಡು ಮನುಷ್ಯಾಕೃತಿಗಳು, ಎರಡು ಎತ್ತು ಚಿತ್ರಗಳನ್ನು ಗುರುತಿಸಬಹುದು. ಇನ್ನೊಂದು ಪ್ರಾಣಿಯ ಚಿತ್ರವಿದ್ದು ಗುರುತಿಸಲು ಸಾಧ್ಯವಾಗದಷ್ಟು ಮಾಸಿಹೋಗಿದೆ.

ಶಿಲಾಶ್ರಯ-೨

ಮಲ್ಲಾಪುರದ ಅವರಟಗೆ ಪ್ರದೇಶದಲ್ಲಿ ಈ ಕಲ್ಲಾಸರೆ ಇದೆ. ವಿವಿಧ ಶೈಲಿಯ ಗೂಳಿಗಳ

ಚಿತ್ರಗಳು ಛಾಯಾ ರೂಪದಲ್ಲಿ ಚಿತ್ರಿಸಲ್ಪಟ್ಟಿದ್ದು, ಕೆಂಪು ವರ್ಣದಲ್ಲಿವೆ. ಗೂಳಿಗಳ ಚಿತ್ರವು ಸಹಜವಾಗಿದ್ದು, ದಷ್ಟಪುಷ್ಟವಾಗಿವೆ. ಇಲ್ಲಿರುವ ಇನ್ನೊಂದು ಪ್ರಾಣಿಯ ಕತ್ತು ಉದ್ದವಿದ್ದು, ಮುಖ ಕುದುರೆಯಂತಿದೆ. ಇನ್ನೊಂದು ಚಿತ್ರವು ಕುದುರೆ ಸವಾರನಂತಿದ್ದು, ಅಸ್ಪಷ್ಟವಾಗಿದೆ.

ಶಿಲಾಶ್ರಯ–೩

ಇದು ಮಲ್ಲಾಪುರದಿಂದ ದಕ್ಷಿಣದಕ್ಕೆ ಸುಮಾರು ೩ ಕಿ.ಮಿ.ದೂರದ ಬೆಟ್ಟದಲ್ಲಿದೆ. ಇದೊಂದು ಅತ್ಯಂತ ವಿಸ್ತಾರವಾದ ನೈಸರ್ಗಿಕ ಗುಹೆ, ಬೃಹತ್ತಾದ ಕಲ್ಲು ಚಪ್ಪಡಿಯೊಂದು ದೊಡ್ಡ ಕಲ್ಲುಗಳ ಮೇಲೆ ಚಾಚಿದ್ದು, ಕೆಳಗೆ ವಿಶಾಲವಾದ ಗವಿಯುಂಟಾಗಿದೆ. ಈ ಗವಿಯೊಳಗೆ ಅನೇಕ ಮನುಷ್ಯರ ಮತ್ತು ಪ್ರಾಣಿಗಳ ಚಿತ್ರಗಳಿವೆ. ದಕ್ಷಿಣ ಭಾಗದಲ್ಲಿ ಎರಡು ಜೋಡಿ ದಂಪತಿಗಳ, ನಾಲ್ಕು ಬಿಡಿ ಮನುಷ್ಯರ, ಒಂದು ಹಂದಿ, ಒಂದು ಜಿಂಕೆ ಮತ್ತು ಎರಡು ಸಾರಂಗದ ಚಿತ್ರಗಳಿವೆ. ಉತ್ತರ ಭಾಗದಲ್ಲಿ ಎರಡು ಕೋಣ, ಮೀನು, ಜಿಂಕೆ, ಹಂದಿ, ಮತ್ತು ಗಿಡದ ಒಂದು ಚಿತ್ರವಿದೆ. ಇಲ್ಲಿ ಒಟ್ಟು ಆರು ಮನುಷ್ಯರ ಬಿಡಿ ಚಿತ್ರಗಳಿದ್ದು, ಎಲ್ಲಾ ಚಿತ್ರಗಳ ಮೇಲೆ ಗೆರೆಗಳಿಂದ ಅಲಂಕಾರ ಮಾಡಿದಂತೆ ಚಿತ್ರಿಸಿದ್ದಾರೆ. ಇಲ್ಲಿ ಒಂದು ಪ್ರಾಣಿಯ ಮೇಲೆ ಇಬ್ಬರು ವೃತ್ತಿಗಳು ನೃತ್ಯ ಮಾಡುವಂತ್ತಿದ್ದು, ಗಂಡು ಹೆಣ್ಣು ಎಂದು ಗುರುತಿಸಲು ಸಾಧ್ಯವಾಗುವಂತಿವೆ. ಆ ಪ್ರಾಣಿಯ ಮೈ ಮೇಲೆ ರೋಮಗಳಿವೆ.

ಶಿಲಾಶ್ರಯ–೪

ಮಲ್ಲಾಪುರ ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು ೩ ಕಿ.ಮೀ ದೂರದಲ್ಲಿ ಬಳಿಗಾರ ಊಟಿ ಎಂಬಲ್ಲಿ ಈ ಕಲ್ಲಾಸರೆ ಇದೆ. ಇದಕ್ಕೆ ಲಕ್ಷ್ಮೀ ಗುಂಡು ಎಂದು ಕರೆಯುವರು. ಇದು ಒಂದು ಚಿಕ್ಕ ಗುಂಡಿನ ಮೇಲೆ ಸುಮಾರು ೩ ಅಡಿ ಎತ್ತರ ಬೃಹದಾಕಾರ ಬಂಡೆಯೊಂದು ಒರೆಯಾಗಿ ಬಿದ್ದಿದೆ. ದೊಡ್ಡ ಬಂಡೆಯ ಕೆಳಗೆ ಆಸರೆ ಉಂಟಾಗಿದ್ದು, ಅದರ ಬದಿಯಲ್ಲಿ ಹಾಗೂ ಕೆಳಗಿನ ಆಸರೆಯಲ್ಲಿ ಅನೇಕ ಚಿತ್ರಗಳಿವೆ. ಇಲ್ಲಿ ಮೂರು ಮನುಷ್ಯ ಚಿತ್ರಗಳಿದ್ದು, ಒಂದು ನಾಯಿ ಹಾಗೂ ಒಂದು ಹಂದಿ(೦.೭೦ ಮೀ) ಚಿತ್ರವಿದೆ. ಮಳೆ ನೀರಿನಿಂದಾಗಿ ಬಹಳಷ್ಟು ಮಾಸಿ ಅನೇಕ ಚಿತ್ರಗಳು ಅಸ್ಪಷ್ಟವಾಗಿವೆ. ಮನುಷ್ಯನ ಚಿತ್ರಗಳು ಮಾಂತ್ರಿಕ ನೃತ್ಯ ವಿಧಾನದಲ್ಲಿ ತೊಡಗಿದಂತೆ ಕಾಣಿಸುತ್ತದೆ. ಹಂದಿಯ ಮುಖದ ಚಿತ್ರ ಮಾತ್ರವಿದ್ದು, ಕಣ್ಣು, ಮೂಖ, ಬಾಯಿಗಳನ್ನು ಗುರುತಿಸಿಲ್ಲ. ಹಾಗೂ ನಾಯಿಯ ಚಿಕ್ಕ ರೇಖಾಚಿತ್ರವಿದೆ.

ಶಿಲಾಶ್ರಯ–೫

ಇದು ಮಲ್ಲಾಪುರ ಗ್ರಾಮದಿಂದ ದಕ್ಷಿಣಕ್ಕೆ ಒಂದು ಕಿ.ಮೀ.ದೂರದ ಬೆಟ್ಟದಲ್ಲಿಯ ಸಣ್ಣ ಮೊರಿಯರ ತಟ್ಟೆಯಲ್ಲಿದೆ. ಇದು ಬೃಹತ್ ಶಿಲಾಯುಗದ ಸಮಾಧಿ ನೆಲೆ ಇಲ್ಲಿರುವ ದೊಡ್ಡ

ಹಾಸಲು ಬಂಡೆಯ ಒಳಭಾಗದ ಛಾವಣಿಯಲ್ಲಿ ಕೆಂಪು ವರ್ಣದ ಚಿತ್ರಗಳಿವೆ. ಒಂದು ಪ್ರಾಣಿಯ ಮುಂಭಾಗದ ದೇಹ, ಎರಡು ರೇಖಾ ಸಂಕೇತಗಳು, ಕತ್ತು ಮತ್ತು ಅರ್ಧ ಮಂಡವನ್ನು ಹೊಂದಿದ ಚಿತ್ರಗಳಿವೆ.

ಶಿಲಾಶ್ರಯ–೬

ಇದು ಬೆಟ್ಟದ ಮೇಲಿರುವ ವಾನಭದ್ರೇಶ್ವರ ದೇವಾಲಯದ ದಾರಿಯಲ್ಲಿ ಪಾಪಯ್ಯ ಸುರಂಗದ ಎರಡನೆ ಕಿಂಡಿಯ ಹತ್ತಿರದಲ್ಲಿ ಶಿಲಾಶ್ರಯವಿದೆ. ಈ ಶಿಲಾಶ್ರಯದ ಮುಖಭಾಗದ ಛಾವಣಿ ಮತ್ತು ಗೋಡೆಯ ಮೇಲೆ ಅನೇಕ ರೇಖಾ ಚಿತ್ರಗಳು ಮತ್ತು ಛಾಯಾ ಚಿತ್ರಗಳಿವೆ. ಗೋಡೆಯಲ್ಲಿ ಅನೇಕ ಚಿತ್ರಗಳಿದ್ದು, ಅವುಗಳಲ್ಲಿ ಮುಖ್ಯವಾಗಿ ಎರಡು ನಾಯಿಗಳು, ಗೂಳಿಗಳು, ಜಿಂಕೆಗಳು ಮನುಷ್ಯರ ಮತ್ತು ನವಿಲಿನ ಚಿತ್ರಗಳಿವೆ. ಇನ್ನು ಕೆಲವು ಚಿತ್ರಗಳು ಅಸ್ಪಷ್ಟವಾಗಿವೆ. ನಾಲ್ಕು ಮನುಷ್ಯ ಚಿತ್ರಗಳು ಐದು ಎತ್ತಿನ ಚಿತ್ರಗಳು ಆರು ಜಿಂಕೆಯ ಚಿತ್ರಗಳು ಹಾಗೂ ಎರಡು ನಾಯಿ ಮತ್ತು ಒಂದು ನವಿಲಿನ ಚಿತ್ರವಿದೆ ಎಂದು ವಿಂಗಡಿಸಿಕೊಂಡು ಹೇಳಬಹುದಾಗಿದೆ.

ಶಿಲಾಶ್ರಯ–೭

ಇದು ಆರನೆಯ ಕಲ್ಲಾಸರೆಯಿಂದ ಈಶಾನ್ಯಕ್ಕೆ ಸ್ವಲ್ಪ ದೂರದಲ್ಲಿದೆ. ಬೆಟ್ಟದ ಮಧ್ಯ ಚಿಕ್ಕ ಕಲ್ಲಾಸರೆಯ ಛಾವಣಿಯಲ್ಲಿ ಕೆಂಪು ವರ್ಣದ ಚಿತ್ರಗಳಿದ್ದು, ಅವು ಅಸ್ಪಷ್ಟವಾಗಿ ತೋರುತ್ತವೆ. ಇಲ್ಲಿ ಒಬ್ಬ ಅಶ್ವ ಸವಾರ, ಮೂರು ಮನುಷ್ಯರ ಮತ್ತು ಎರಡು ಚಕ್ರಗಳ ಚಿತ್ರಗಳಿವೆ. ಎಲ್ಲವೂ ಛಾಯಾ ರೂಪದವು ಅಶ್ವ ಚಿತ್ರವು ಉದ್ದವಾಗಿದ್ದು, ಕುದುರೆ ಸಹಜವಾಗಿದೆ. ಕುದುರೆ ಮುಂದೆ ಒಬ್ಬ ವ್ಯಕ್ತಿ ನಿಂತಿದ್ದಾನೆ. ಅವು ಸ್ಪಷ್ಟವಾಗಿಲ್ಲ.

ಶಿಲಾಶ್ರಯ–೮

ಇದು ವಾನಭದ್ರೇಶ್ವರ ದೇವಾಲಯದ ಮೇಲಿನ ದಾರಿಯಲ್ಲಿ ಬಲಬದಿಯ ಗುಡ್ಡದಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಕೆಂಪು ವರ್ಣದ ಏಳು ಎತ್ತುಗಳು, ಒಂದು ಜಿಂಕೆ ಹಾಗೂ ಒಂದು ರೇಖಾ ಚಿತ್ರವಿದೆ. ಎತ್ತಿನ ಚಿತ್ರ ರೇಖಾಚಿತ್ರವಾಗಿದ್ದು, ಸಹಜವಾಗಿದೆ. ಹಾಗೂ ಮೈ ಮೇಲೆ ಗೆರೆಗಳನ್ನು ಎಳೆಯಲಾಗಿದೆ. ಇನ್ನೊಂದು ಎತ್ತಿನ ಮೇಲೆ ಗೆರೆಗಳಿಲ್ಲ. ಜಿಂಕೆಯ ಚಿತ್ರದ ರುಂಡ ಮಾಸಿ ಹೋಗಿದೆ. ಮೈ ಮೇಲೆ ಅಡ್ಡ ಗೆರೆಗಳನ್ನು ಎಳೆಯಲಾಗಿದೆ. ಹಾಗೂ ಕೆಲವು ರೇಖಾಕೃತಿಗಳು ಮತ್ತು ವೃತ್ತಗಳ ಚಿತ್ರಗಳು ಇಲ್ಲಿ ಕಂಡು ಬಂದಿವೆ.

ಶಿಲಾಶ್ರಯ–೯

ವಾನಭದ್ರೇಶ್ವರ ಗುಹಾ ದೇವಾಲಯದ ಹಿಂದೆ ಈ ಕಲ್ಲಾಸರೆ ಇದೆ. ಕೆಂಪು ವರ್ಣದ

ಏಳು ಮನುಷ್ಯರ, ಎರಡು ಗೂಳಿ ಮತ್ತು ಒಂದು ಜಿಂಕೆಯ ಚಿತ್ರಗಳು ಇಲ್ಲಿ ಕಂಡುಬಂದಿವೆ. ಮೊದಲಿಗೆ ಅರ್ಧ ಚಂದ್ರನಂತೆ ಒಂದು ಗೆರೆ ಎಳೆಯಲಾಗಿದೆ ಅದರ ಮುಂದೆ ಒಂದು ಗೂಳಿಯ ರೇಖಾಚಿತ್ರವಿದ್ದು, ಕೆಳಸಾಲಿನಲ್ಲಿ ಐದು ಮನುಷ್ಯರ ಛಾಯಾಚಿತ್ರಗಳಿದ್ದು, ದಷ್ಟಪುಷ್ಟವಾಗಿವೆ. ಇದು ಕೆಳಗಿನ ಸಾಲಿನಲ್ಲಿ ಜಿಂಕೆಯ ರೇಖಾಚಿತ್ರವಿದ್ದು, ಅದರ ಮುಂದೆ ಒಂದರೊಳಗೊಂದರಂತೆ ಮೂರು ಆಯತದ ಚಿತ್ರಗಳಿವೆ. ಅದರ ಮುಂದೆ ಒಂದು ಚಿಕ್ಕ ಮನುಷ್ಯ ಹಾಗೂ ಬೃಹದಾಕಾರ ಗೂಳಿ ಚಿತ್ರವಿದೆ. ಗೂಳಿ ಬಹಳ ಬಲಿಷ್ಟ ಎಂಬಂತೆ ಚಿತ್ರಿತವಾಗಿದೆ.

ಶಿಲಾಶ್ರಯ-೧೦

ಇದು ಒಂಬತ್ತನೆಯ ಶಿಲಾಶ್ರಯ ಬಳಿಯಲ್ಲಿ ದೊಡ್ಡ ಬಂಡೆಯೊಂದು ಸೀಳಿ ಆಸರೆ ಉಂಟಾಗಿದೆ. ಈ ಆಸರೆಯಲ್ಲಿ ಕೆಂಪು ವರ್ಣದಲ್ಲಿ ಎತ್ತುಗಳ ಮತ್ತು ಇತರ ಪ್ರಾಣಿಗಳ ರೇಖಾ ಚಿತ್ರಗಳಿವೆ. ಒಟ್ಟು ಆರು ಎತ್ತುಗಳು ಚಿತ್ರದಲ್ಲಿದ್ದು, ಮೇಲಿನ ಸಾಲಿನಲ್ಲಿ ಎರಡು ಮತ್ತು ಕೆಳಗಿನ ಸಾಲಿನಲ್ಲಿ ನಾಲ್ಕು ಎತ್ತುಗಳಿವೆ. ಎತ್ತುಗಳು ಸಹಜವಾಗಿದ್ದು, ಛಾವಣಿಯಲ್ಲಿ ಒಂದು ಜಿಂಕೆಯ ಚಿತ್ರವಿದೆ.

ಶಿಲಾಶ್ರಯ-೧೧

ಒಂಬತ್ತನೆಯ ಕಲ್ಲಾಸರೆಗೆ ಎಡಭಾಗದಲ್ಲಿ ಸ್ವಲ್ಪದೂರದಲ್ಲಿ ಈ ಗವಿ ಇದೆ. ಗವಿಯ ಪ್ರವೇಶ ಭಾಗದಲ್ಲಿ ಎಡಗೋಡೆಯಲ್ಲಿ ಕೆಂಪು ವರ್ಣದ ಚಿತ್ರಗಳಿವೆ. ಇಲ್ಲಿ ಹಲವಾರು ಗೂಳಿಯ ಚಿತ್ರಗಳಿದ್ದು, ರೇಖೆಗಳಿಂದ ಬಲಿಷ್ಟವಾದ ಗೂಳಿಗಳ ಚಿತ್ರಗಳನ್ನು ಚಿತ್ರಿಸಲಾಗಿದೆ.

ಶಿಲಾಶ್ರಯ-೧೨

ವಾನಭದ್ರೇಶ್ವರ ದೇವಾಲಯದ ಎದುರಿಗೆ ಅನತಿ ದೂರದಲ್ಲಿ ಕೆಲವು ಶಿಲಾಶ್ರಯಗಳು ಹಾಗೂ ಗುಹೆಗಳಿವೆ. ಕಲ್ಲಾಸರೆಯ ಛತ್ತಿನಲ್ಲಿ ಮನುಷ್ಯನು ನಿಂತ ಭಂಗಿಯಲ್ಲಿ ಒಂದು ಚಿಕ್ಕ ಚಿತ್ರ ಕೆಂಪು ಬಣ್ಣದಲ್ಲಿದೆ. ಇದು ಸುಮಾರು ೧೫ ಸೆಂ.ಮೀ ಎತ್ತರವಾಗಿದೆ. ದೇಹದ ಎಲ್ಲಭಾಗವನ್ನು ಬಣ್ಣದಿಂದ ತುಂಬಿದ್ದು, ತಲೆಯ ಭಾಗವನ್ನು ಮಾತ್ರ ತುಂಬಿಲ್ಲ.

ಶಿಲಾಶ್ರಯ-೧೩

ಇದು ವಾನಭದ್ರೇಶ್ವರ ಬೆಟ್ಟದ ಮೇಲೆ ಈಶಾನ್ಯ ತುದಿಯಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿಂದ ನೇರ ಕೆಳಗೆ ಪಾಪಯ್ಯ ಸುರಂಗದ ಹೊರ ಮುಖ ಗೋಚರಿಸುತ್ತದೆ. ಇಲ್ಲಿ ಕೆಂಪು ವರ್ಣದ ಒಂದು ಜಿಂಕೆಯ ಚಿತ್ರವಿದ್ದು ತುಂಬಾ ಸರಳವಾಗಿದೆ.

ಕೊಪ್ಪಳ

ಕೊಪ್ಪಳ ನಗರದ ಪೂರ್ವಬದಿಯ ಗವಿ ಮಠದ ಗುಡ್ಡ ಮತ್ತು ಪಶ್ಚಿಮ ಬದಿಯ ಮಳೆಮಲ್ಲೇಶ್ವರ ಬೆಟ್ಟದಲ್ಲಿ ಒಟ್ಟು ಒಂಭತ್ತು ಕಲ್ಲಾಸರೆಗಳಿವೆ.

ಶಿಲಾಶ್ರಯ-೧

ಮಳೆ ಮಲ್ಲೇಶ್ವರ ಬೆಟ್ಟದ ಪಾಂಡವರ ವಠಾರ ಎಂಬಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಕೆಂಪು ವರ್ಣದಲ್ಲಿ ಮನುಷ್ಯರ ಸಮೂಹ ಕುಣಿತದ ಚಿತ್ರವಿದೆ. ಮನುಷ್ಯ ಚಿತ್ರಗಳು ಛಾಯಾರೂಪದವು. ಇವು ಪರಸ್ಪರ ಕೈ ಕೈ ಹಿಡಿದು ಸಾಲಾಗಿ ನೃತ್ಯ ಭಂಗಿಯಲ್ಲಿವೆ. ಸೊಂಟಕ್ಕೆ ಚರ್ಮದ ಉಡುಪನ್ನು ಧರಿಸಿದ ರೀತಿ ತುಂಬಾ ಕುತೂಹಲವಾಗಿದೆ.

ಶಿಲಾಶ್ರಯ-೨

ಮಳೆ ಮಲ್ಲೇಶ್ವರ ದೇವಾಲಯದ ಬಯಲಿನ ಈಶಾನ್ಯ ಅಂಚಿನಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಬಿಳಿವರ್ಣದ ಕಾದಾಡುತ್ತಿರುವ ಗೂಳಿಗಳಿವೆ. ಇವು ಸುಮಾರು ೦.೮ ಮೀ ಎತ್ತರ ಹಾಗೂ ೧ ಮೀ ಅಗಲವಾಗಿದೆ. ಇವು ಸಹಜವಾಗಿದ್ದು, ದಷ್ಟಪುಷ್ಟವಾಗಿವೆ. ಹೋರಾಟದ ಆವೇಶ ಮತ್ತು ಭಂಗಿ ವ್ಯಕ್ತವಾಗಿದೆ. ಗೂಳಿಗಳ ಕಾದಾಟಕ್ಕೆ ಹೆದರಿ ಒಬ್ಬ ಮನುಷ್ಯ ಓಡುತ್ತಿರುವಂತೆ ಚಿತ್ರವಿದೆ.

ಶಿಲಾಶ್ರಯ-೩

ಮಳೆಮಲ್ಲೇಶ್ವರ ದೇವಾಲಯದ ಮೇಲ್ಭಾಗದಲ್ಲಿ ಹರಿವಿನ ಬಯಲು ಪಶ್ಚಿಮ ಅಂಚಿನಲ್ಲಿ ಈ ಶಿಲಾಶ್ರಯ ಇದೆ. ಇದು ಬೃಹದಾಕಾರದ ಸೀಳಿದ ಬಂಡೆ ಸೀಳು ಭಾಗದಲ್ಲಿ ಕೆಂಪು ಬಿಳಿವರ್ಣದ ಒಂದು ಚಿತ್ರವಿದೆ. ಉದ್ದ ರೇಖೆಗೆ ಮೇಲೆ ಮತ್ತು ಕೆಳಗೆ ತ್ರಿಕೋನಾಕಾರದ ಭಾಗಗಳಿವೆ.

ಶಿಲಾಶ್ರಯ-೪

ಇದು ಗವಿಮಠದ ಅಶೋಕನ ಶಾಸನವಿರುವ ಬಂಡೆಯಿಂದ ಈಶಾನ್ಯಕ್ಕೆ ಅನತಿ ದೂರದಲ್ಲಿ ಈ ಕಲ್ಲಾಸರೆ ಇದೆ. ಅರೆವೃತ್ತಾಕಾರದಲ್ಲಿ ಬಾಗಿರುವ ಬಂಡೆಯ ಒಡಲಲ್ಲಿ ಈ ಶಿಲಾಶ್ರಯವಿದೆ. ಇದರ ಛಾವಣಿಯಲ್ಲಿ ಕೆಂಪುವರ್ಣದ ಬಾಹ್ಯರೇಖಾ ರೂಪದ ಚಿತ್ರಗಳಿವೆ. ಇಲ್ಲಿ ಒಟ್ಟು ಒಬ್ಬ ಮನುಷ್ಯ ಮತ್ತು ನಾಲ್ಕು ಪ್ರಾಣಿಗಳ ಸಹಿತ ಐದು ಚಿತ್ರಗಳಿವೆ. ಒಬ್ಬ ಮನುಷ್ಯ ಕೈಯಲ್ಲಿ ಬಿಲ್ಲವನ್ನು ಹಿಡಿದು ಬಾಣವನ್ನು ಬಿಟ್ಟಿರುವ ಹಾಗಿದೆ. ಆ ಮನುಷ್ಯ ಜಿಂಕೆಗಳನ್ನು ಬೆನ್ನಟ್ಟಿ ಓಡಿ ಬರುತ್ತಿದ್ದಂತೆ ಇದ್ದು, ಎರಡು ಜಿಂಕೆಗಳು ನೆಲಕ್ಕೆ ಬಿದ್ದಿವೆ. ಇನ್ನೊಂದು ಜಿಂಕೆ ಓಡುತ್ತಿದೆ. ಹಾಗೆ ಕೆಳಗಡೆ ಸಣ್ಣ ಒಂದು ಪ್ರಾಣಿಯ ಚಿತ್ರವಿದೆ. ಇದಕ್ಕೆ ಕೋಡುಗಳನ್ನು ಚಿತ್ರಿಸಲಾಗಿದ್ದು, ಮುಖ ಚೂಪಾಗಿದ್ದು, ಛಾಯಾರೂಪದ್ದಾಗಿದೆ.

ಶಿಲಾಶ್ರಯ-೫

ಇದು ಗವಿಮಠದಿಂದ ಆಗ್ನೇಯ ದಿಕ್ಕಿಗೆ ಈ ವಿಶಾಲವಾದ ಗವಿ ಇದೆ. ಇಲ್ಲಿ ೧೩ ಚಿತ್ರಗಳು ಕೆಂಪುವರ್ಣದಿಂದ ರಚಿಸಲ್ಪಟ್ಟಿದ್ದು, ಎರಡು ಛಾರಾರೂಪದಲ್ಲಿದ್ದು, ಇನ್ನುಳಿದವು ರೇಖಾ ಚಿತ್ರವಾಗಿವೆ. ಮೊದಲನೆ ಸಾಲಿನಲ್ಲಿ ಜಿಂಕೆಯೊಂದು ನಿಂತಿದ್ದು, ತನ್ನ ವಿರುದ್ಧ ದಿಕ್ಕಿಗೆ ಮುಖ ಮಾಡಿ ತುಂಬಾ ಸಹಜವಾಗಿದೆ. ಕಾಡುಕೋಣ, ಕೆಚ್ಚಳುಳ್ಳ ಆಕಳು, ಟಗರು, ಗೂಳಿ, ಕುದುರೆ, ಜಿಂಕೆ, ತೋಳ, ಮೊಲ ಇಂತಹ ಪ್ರಾಣಿಗಳ ಚಿತ್ರಗಳು ಇಲ್ಲಿ ಸಹಜವಾಗಿ ಮೂಡಿ ಬಂದಿವೆ. ಕೆಲವೊಂದು ಪ್ರಾಣಿಗಳ ಚಿತ್ರವು ಸ್ಪಷ್ಟವಾಗಿರುವುದಿಲ್ಲ. ಹಾಗೆ ತೋಳದ ಮುಖವು ಕೂಡಾ.

ಶಿಲಾಶ್ರಯ-೬

ಗವಿಮಠದ ಬೆಟ್ಟದ ಮೇಲೆ ಈ ಶಿಲಾಶ್ರಯವಿದೆ. ಇಲ್ಲಿ ನಾಲ್ಕು ಎತ್ತು ಮತ್ತು ಒಂದು ಬಹುಶಃ ಮೊಲದ ಚಿತ್ರವಿದೆ. ಮೂರು ಎತ್ತುಗಳು ನಿಂತ ಭಂಗಿಯಲ್ಲಿದ್ದು, ಉಳಿದ ಒಂದು ಎತ್ತು ಮತ್ತು ಮೊಲ ಮಲಗಿರುವಂತೆ ತೋರುತ್ತದೆ. ಇವು ರೇಖಾ ಚಿತ್ರಗಳಾಗಿವೆ.

ಶಿಲಾಶ್ರಯ-೭

ಇದು ಗವಿಮಠದ ಗುಡ್ಡದಲ್ಲಿ ಅಶೋಕನ ಶಾಸನ ಸ್ಥಳದಿಂದ ಈಶಾನ್ಯಕ್ಕೆ ಸನಿಹದಲ್ಲಿವೆ. ಇದೊಂದು ಬೃಹತ್ ಬಂಡೆ ಒಡೆದು ಸೀಳಿದೆ. ಈ ಸೀಳಿದ ಒಡಲಲ್ಲಿ ಕೆಂಪು ವರ್ಣದ ಹುಲಿಯ ಚಿತ್ರವನ್ನು ಬಿಡಿಸಲಾಗಿದ್ದು, ಹುಲಿಯು ಮೇಲಕ್ಕೆ ನೆಗೆದ ಭಂಗಿಯಲ್ಲಿದೆ ಇದರ ಮುಖ ನಾಶವಾಗಿದೆ. ಮೈ ಮೇಲಿನ ಪಟ್ಟಿಗಳನ್ನು ಕಾಲಿನ ಉಗುರುಗಳು ಹಾಗೂ ಬಾಲವನ್ನು ಗಮನಿಸಿದಾಗ ಹುಲಿಯ ಚಿತ್ರವೆಂದು ಸ್ಪಷ್ಟವಾಗುತ್ತದೆ.

ಶಿಲಾಶ್ರಯ-೮

ಇದು ಅಶೋಕ ಶಾಸನ ಸ್ಥಳಕ್ಕೆ ಸಮೀಪದ ಕಿರುಬೆಟ್ಟದಲ್ಲಿ ಈ ಶಿಲಾಶ್ರಯವಿದೆ. ಈ ಶಿಲಾಶ್ರಯದ ಛಾವಣಿಯಲ್ಲಿ ಹಳದಿ ಮಿಶ್ರಿತ ತಿಳಿ ಬಿಳಿವರ್ಣದಲ್ಲಿ ಸ್ತ್ರೀಪುರುಷ ಜೋಡಿಯ ಚಿತ್ರಗಳಿವೆ. ಇವು ತುಂಬಾ ಸರಳವಾಗಿವೆ.

ಶಿಲಾಶ್ರಯ-೯

ಎಂಟನೇ ಶಿಲಾಶ್ರಯದ ಸಮೀಪದಲ್ಲಿ ಈ ಶಿಲಾಶ್ರಯವಿದೆ. ಇಲ್ಲಿ ಕೆಂಪು ವರ್ಣದ ಸೂರ್ಯನ ರೀತಿಯ ಚಿತ್ರ, ಮನುಷ್ಯ, ಪ್ರಾಣಿ ಮತ್ತು ಸಮೂಹ ನೃತ್ಯದ ಮನುಷ್ಯರ ಚಿತ್ರಗಳಿವೆ.

ಬಿಳೆಬಾವಿ

ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ರಸ್ತೆಯಲ್ಲಿ ಬೂದಗುಂಪದಿಂದ ಈಶಾನ್ಯಕ್ಕೆ

ಸುಮಾರು ೭ ಕಿ.ಮೀ ದೂರದಲ್ಲಿ ಈ ಗ್ರಾಮವಿದೆ. ಈ ಗ್ರಾಮದ ಉತ್ತರಕ್ಕಿರುವ ಬೆಟ್ಟಗಳಲ್ಲಿ ಎರಡು ಶಿಲಾಶ್ರಯಗಳಿವೆ.

ಶಿಲಾಶ್ರಯ–೧

ಗುಡ್ಡದ ಕೆಳಭಾಗದಲ್ಲಿ ಒಂದು ಸ್ವತಂತ್ರ್ಯ ಬಂಡೆಯೊಂದಿದ್ದು, ಅದರ ಕೆಳಭಾಗದಲ್ಲಿ ಪೊಳ್ಳಾಗಿ ಆಸರೆಯುಂಟಾಗಿದೆ. ಅದರ ಮೇಲ್ಛಾವಣಿಯಲ್ಲಿ ಪ್ರಮುಖವಾಗಿ ಕೆಂಪುವರ್ಣದ ಮತ್ತು ಬಿಳಿವರ್ಣದ ಚಿತ್ರಗಳಿದ್ದು, ಬಿಳಿ ವರ್ಣದ ಚಿತ್ರಗಳು ವಿರಳವಾಗಿದೆ. ಚಿತ್ರಗಳಲ್ಲಿ ಮಂಡಲ, ಸೂರ್ಯ, ಎತ್ತುಗಳು, ವೃತ್ತ, ಸೂರ್ಯ ಮತ್ತು ಕುದುರೆ ಸವಾರರ ಚಿತ್ರಗಳು ಪ್ರಮುಖವಾಗಿವೆ. ಒಂದರೊಳಗೊಂದರಂತೆ ಮೂರು ವೃತ್ತಗಳನ್ನು ಒಳಗೊಂಡ ಸೂರ್ಯನ ಚಿತ್ರದ ಕೊನೆಯ ಬಾಹ್ಯರೇಖೆಗೆ ಸುತ್ತಲು ಕಿರಣಗಳಂತೆ ರೇಖೆಗಳನ್ನು ಎಳೆಯಲಾಗಿದೆ. ಇನ್ನುಳಿದ ಚಿತ್ರಗಳು ಸರಳವಾಗಿವೆ.

ಶಿಲಾಶ್ರಯ–೨

ಈ ಶಿಲಾಶ್ರಯ ಬೆಟ್ಟದ ಮೇಲ್ಭಾಗದಲ್ಲಿದೆ. ಇಲ್ಲಿ ಬೃಹತ್ ಶಿಲಾಯುಗದ ಕೆಲವು ಶಿಲಾಸಮಾಧಿಗಳಿವೆ. ಸಮೀಪದಲ್ಲಿ ಒಂದು ಗುಹೆ ಇದ್ದು, ಹಲವಾರು ಕೆಂಪು ಮತ್ತು ಬಿಳಿ ವರ್ಣದ ಚಿತ್ರಗಳು ಇಲ್ಲಿವೆ. ಮೂರು ಮಂಡಲದ ಚಿತ್ರಗಳು ಒಂದು ಎತ್ತು ಹಾಗೂ ಒಂದು ಕಾಮಧೇನುವಿನ ತರಹದ ಚಿತ್ರವಿದ್ದು, ಇದು ವಿಶೇಷ ಎನಿಸಿಕೊಂಡಿದೆ. ಮುಖಭಾಗ ನೇರನೋಟವಾಗಿದ್ದು, ದೇಹ ಬಲದಿಂದ ಎಡಮುಖವಾಗಿದೆ. ಮುಖ ಮನುಷ್ಯನ ತರ ಇದ್ದು, ಕಿವಿ ಹಾಗೂ ಕೊಂಬಗಳಿವೆ. ಬಾಲ ಹಿಂದಿನಿಂದ ದೇಹದ ಮಧ್ಯದವರೆಗೂ ಇದ್ದು ಕೆಳಗೆ ಇಳಿಬಿದ್ದಿದೆ. ಎರಡು ಗಿಡಗಳ ಚಿತ್ರವಿದ್ದು, ಹೂ–ಗಿಡಗಳಂತೆ ಗೋಚರಿಸುತ್ತವೆ.

ನಾರಾಯಣಪೇಟೆ

ಗಂಗಾವತಿಯಿಂದ ಮುನಿರಾಬಾದ್‌ಗೆ ಹೋಗುವ ರಸ್ತೆಯಲ್ಲಿ ಬಸಾಪುರದಿಂದ ದಕ್ಷಿಣಕ್ಕೆ ಸು.೩ ಕಿ.ಮೀ ದೂರದಲ್ಲಿ ತುಂಗಭದ್ರಾ ನದಿ ಎಡದಂಡೆಯ ಮೇಲೆ ಈ ಗ್ರಾಮವಿದೆ. ಇಲ್ಲಿರುವ ಬೆಟ್ಟಗಳಲ್ಲಿ ನಾಲ್ಕು ಶಿಲಾಶ್ರಯಗಳು ಕಂಡು ಬಂದಿವೆ.

ಶಿಲಾಶ್ರಯ–೧

ಇದೊಂದು ಬಹಳ ದೊಡ್ಡ ಬಂಡೆಯ ಕೆಳಗೆ ಸಮತಲದ ಮೇಲೆ ಒಂದು ದೊಡ್ಡ ಮನುಷ್ಯ ಚಿತ್ರವಿದೆ. ಅದರ ಪಕ್ಕದಲ್ಲಿ ಒಂದು ಸ್ತ್ರೀ ಚಿತ್ರವು ಇದೆ. ದೊಡ್ಡ ಮನುಷ್ಯನ ಚಿತ್ರದಲ್ಲಿ ತಲೆ ಚಿಕ್ಕದಾಗಿದ್ದು, ಒಳಗಡೆ ಸಣ್ಣ ಸಣ್ಣ ಗೆರೆ ಎಳೆಯಲಾಗಿದೆ. ಬಹುಶಃ ಇವು ಕೂದಲನ್ನು

ಸೂಚಿಸುತ್ತವೆ. ಒಂದು ಕೈಯನ್ನು ಮೇಲೆತ್ತಿ ಕುಣಿಯುತ್ತಿರುವಂತೆ ಈ ಚಿತ್ರ ಕಾಣಿಸುತ್ತದೆ. ದಪ್ಪ ತೊಡೆಗಳು ಅಸ್ಪಷ್ಟವಾಗಿದ್ದು ಮೈ ಮೇಲೆ ಬಾಣದ ಸಂಕೇತ ಹಾಗೂ ಇತರ ರೇಖೆಗಳಿವೆ. ಸ್ತ್ರೀ ಚಿತ್ರವು ಎರಡು ಕಾಲು ಹಾಗೂ ಕೈಗಳನ್ನು ಅಗಲಿಸಿ ಜೋರಾಗಿ ಮೇಲೆ ಜಿಗಿದಂತಿದೆ. ಕಾರಣ ಇಬ್ಬರ ಕೂದಲು ಜಡೆಗಳು ಆ ಕಡೆ ಈ ಕಡೆ ಎಗರಿವೆ. ಕೂದಲು ಮತ್ತು ದೇಹದ ಬಿಡಿ ಭಾಗಗಳನ್ನು ಗಮನಿಸಿದಾಗ ಇದು ಸ್ತ್ರೀ ಚಿತ್ರವೆಂದು ಗುರುತಿಸಬಹುದು.

ಶಿಲಾಶ್ರಯ-೨

ಗ್ರಾಮದಿಂದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿರುವ ಬೆಟ್ಟದಲ್ಲಿ ಕಲ್ಲು ಗಣಿಗಾರಿಕೆಯ ಸ್ಥಳಕ್ಕೆ ಎದುರಿಗೆ ಪೂರ್ವಾಭಿಮುಖವಾಗಿ ಒಂದು ದೊಡ್ಡ ಶಿಲಾಶ್ರಯ ಇದೆ. ಅದರಲ್ಲಿ ಒಂದು ಸಣ್ಣ ಮನುಷ್ಯಾಕೃತಿ ಇದೆ. ಇದು ಕೆಂಪು ವರ್ಣದಿಂದ ರಚಿಸಿದ್ದು, ದ್ವಿರೇಖೆಯಲ್ಲಿ ವಿಶಿಷ್ಟವಾಗಿ ರಚಿಸಲಾಗಿದೆ. ಒಟ್ಟು ಕ್ರಿಯಾ ಭಂಗಿಯಲ್ಲಿ ಈ ಚಿತ್ರವನ್ನು ಬಿಡಿಸಲಾಗಿದೆ.

ಶಿಲಾಶ್ರಯ-೩

ಮೊದಲ ಕಲ್ಲಾಸರೆ ಮೇಲ್ಭಾಗದ ಬೆಟ್ಟದಲ್ಲಿ ಇದು ಇದೆ. ಕೆಳಗಿನ ಆಸರೆ ಬಂಡೆಯ ಮುಖಭಾಗದಲ್ಲಿ ನಾಲ್ಕು ಚಿತ್ರಗಳಿವೆ. ಅವು ಕ್ರಮವಾಗಿ ಸೂರ್ಯ ಮತ್ತು ಮೂರು ಮನುಷ್ಯಾಕೃತಿಗಳಿವೆ. ಸೂರ್ಯನ ಚಿತ್ರವು ವೃತ್ತಾಕಾರವಾಗಿದ್ದು, ಅದರ ಸುತ್ತಲೂ ಕಿರಣಗಳ ರೀತಿ ರೇಖೆಯನ್ನು ಎಳೆಯಲಾಗಿದೆ. ಮನುಷ್ಯ ಕೃತಿಗಳು ಒಂದಕ್ಕೊಂದು ಭಿನ್ನವಾಗಿದ್ದು, ಬೇರೆ ಬೇರೆ ಅಳತೆಯಲ್ಲಿವೆ.

ಶಿಲಾಶ್ರಯ-೪

ಎರಡನೆಯ ಕಲ್ಲಾಸರೆಯ ಎಡಬದಿಗೆ ಈ ಕಲ್ಲಾಸರೆ ಇದೆ. ಇದರಲ್ಲಿ ಮಲಗಿಕೊಂಡೇ ಚಿತ್ರಗಳನ್ನು ಬಿಡಿಸಿರಲು ಸಾಧ್ಯ. ಛಾವಣಿಯಲ್ಲಿ ೧೭ ಜಿಂಕೆಗಳ ಚಿತ್ರಗಳಿದ್ದು, ಅವು ಕೆಂಪು ಬಣ್ಣದಲ್ಲಿದೆ. ಕೋಣೆಯ ಸಾಲಿನಲ್ಲಿರುವ ಒಂದು ದೊಡ್ಡ ಜಿಂಕೆ ಛಾಯಾರೂಪದ ಚಿತ್ರವಾಗಿದ್ದು, ಇನ್ನುಳಿದವುಗಳು ರೇಖಾಚಿತ್ರಗಳಾಗಿವೆ. ಇವು ಹೆಚ್ಚೂ ಕಡಿಮೆ ಒಂದೇ ಅಳತೆಗಳನ್ನು ಹೊಂದಿವೆ. ಇದರಲ್ಲಿ ಮೂರನೆ ಸಾಲಿನ ಮಧ್ಯದ ಜಿಂಕೆ ಮಾತ್ರ ದಕ್ಷಿಣಾಭಿಮುಖವಾಗಿ ನಿಂತಿದೆ ಹಾಗೂ ಉಳಿದವು ಉತ್ತರಾಭಿಮುಖವಾಗಿ ನಿಂತು ಎಲ್ಲವು ಸರಳವಾಗಿದ್ದು, ಮಧ್ಯದಲ್ಲಿ ಒಂದು ಗೆರೆಗಳನ್ನು ಎಳೆಯಲಾಗಿದೆ.

ಇಂದರಗಿ

ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ರಸ್ತೆಯಲ್ಲಿ ಕೊಪ್ಪಳದಿಂದ ಸು. ೨೦ ಕಿ.ಮೀ ದೂರದಲ್ಲಿ ಈ ಗ್ರಾಮವಿದೆ. ಇದರ ಮೂವದಿಕ್ಕಿನ ಹೊರಬದಿಯ ಕಲ್ಲು ಗುಂಡುಗಳಲ್ಲಿ ಒಂದು ಶಿಲಾಸರೆ ಇದೆ.

ಶಿಲಾಶ್ರಯ-೧

ಇದು ಗ್ರಾಮದಿಂದ ಪೂರ್ವಕ್ಕೆ ಸು.೧ ಕಿ.ಮಿ ದೂರದ ಬಂಗಾರ ಮರಡಿಯಲ್ಲಿದೆ ಇಲ್ಲಿ ಒಂದು ವಿಶಿಷ್ಟವಾದ, ಕೆಂಪು ಬಣ್ಣದ ಮಾನವಾಕೃತಿಯ ಚಿತ್ರವಿದೆ. ತಲೆಯ ಚೌಕಾಕೃತಿಯಿಂದ ರಚಿಸಿದ್ದು, ದೇಹದ ಭಾಗ ತ್ರಿಕೋಣದಂತಿದೆ, ಎರಡು ಕೈಗಳನ್ನು ಮೇಲಕ್ಕೆತ್ತಿದೆ. ಕೈಗೆ ಮೂರು-ಮೂರು ಬೆರಳುಗಳನ್ನು ರಚಿಸಿದ್ದು, ದೇಹದ ವಿವಿಧ ಭಾಗಗಳನ್ನು ಬಿಡಿಸಿದ್ದೂ, ಕಣ್ಣು, ಕಿವಿ, ಮೂಗುಗಳನ್ನು ಬಿಡಿಸಿರುವುದಿಲ್ಲ. ಕಾಲುಗಳನ್ನು ಅಗಲಿಸಿ ನಗ್ನವಾಗಿ ನಿಂತ ಈ ಚಿತ್ರವು ವಿಚಿತ್ರ ಅಥವಾ ವಿಶೇಷ ಶೈಲಿಯಲ್ಲಿದೆ.

ತೆಂಬಾ

ಈ ಗ್ರಾಮವು ಬೂದಗುಂಪಾದಿಂದ ಗಂಗಾವತಿಗೆ ಹೋಗುವ ಬೆಟ್ಟ ಶ್ರೇಣಿಯ ಮಧ್ಯ ಇದೆ. ಮಲ್ಲಾಪುರದಿಂದ ಬೆಟ್ಟಮಾರ್ಗದಲ್ಲಿ ಸುಮಾರು ೫ ಕಿ.ಮೀ. ದಕ್ಷಿಣಕ್ಕೆ ಈ ಪ್ರದೇಶವಿದೆ. ಇಲ್ಲಿ ಐದು ಶಿಲಾಶ್ರಯಗಳು ಕಂಡುಬಂದಿವೆ.

ಶಿಲಾಶ್ರಯ-೧

ಇದು ಮಲ್ಲಾಪುರದಿಂದ ತೆಂಬಾಗೆ ಹೋಗುವ ದಾರಿಯಲ್ಲಿ ತೆಂಬಾದಿಂದ ೩ ಕಿ.ಮೀ ಮೊದಲೇ ಚಿತ್ರಪಡಿ ಸಮೀಪದ ಉಜ್ವಲ ಊಟಿ ಎಂಬಲ್ಲಿ ಹಳ್ಳದ ಪ್ರಪಾತವಿದೆ. ಅದರ ಬಲಬದಿಯಲ್ಲಿ ಒಂದು ಶಿಲಾಶ್ರಯ ಇದೆ. ಅದರಲ್ಲಿ ಕೆಂಪುವರ್ಣದ ಕೆಲವು ಚಿತ್ರಗಳಿವೆ. ಎರಡು ಮನುಷ್ಯನ ಚಿತ್ರಗಳಿದ್ದು, ಒಂದು ರೇಖಾಚಿತ್ರಣ ಹಾಗೂ ಇನ್ನೊಂದು ಛಾಯಾ ಚಿತ್ರಣವಾಗಿದೆ. ಛಾಯಾ ಚಿತ್ರದ ಮನುಷ್ಯ ಕಾಲುಗಳನ್ನು ಅಗಲಿಸಿ ಬಲಗೈ ಮೇಲಕ್ಕೆ ಎತ್ತಿ ಎಡಗೈ ಕೆಳಗೆ ಇಳಿಬಿಟ್ಟು ಭಂಗಿಯಲ್ಲಿದೆ. ಇನ್ನೊಂದು ಚಿತ್ರ ಕಡ್ಡಿಯಂತಿದೆ.

ಶಿಲಾಶ್ರಯ-೨

ಮಲ್ಲಾಪುರದಿಂದ ತೆಂಬಾಗೆ ಹೋಗುವ ದಾರಿಯಲ್ಲಿ ಭಾಗರಾಜನ ತೆರೆಯಿಂದ ಪಶ್ಚಿಮಕ್ಕೆ ಸುಮಾರು ೧ ಕಿ.ಮೀ ದೂರದಲ್ಲಿ ಒಂದು ವಿಶಾಲವಾದ ಬಂಡೆ ಇದೆ. ಅದರ ಪಕ್ಕದಲ್ಲಿ ಒಂದು ಶಿಲಾಶ್ರಯ ಇದೆ. ಅದರಲ್ಲಿ ಬಿಳಿ ವರ್ಣದ ಚಿತ್ರಗಳಿವೆ. ಚಿತ್ರಗಳು ರೇಖಾ ಚಿತ್ರವಾಗಿದ್ದು, ಸಣ್ಣ ಆಕೃತಿಗಳಾಗಿವೆ. ಎತ್ತಿನ ಸವಾರ, ಇಬ್ಬರು ಮನುಷ್ಯರು, ಒಂದು ಪಶು ಹಾಗೂ ಅಪೂರ್ಣ ರಚನೆಯ ವ್ಯಕ್ತಿ ಚಿತ್ರಗಳಿವೆ. ಎತ್ತಿನ ಮೇಲೆ ಕುಳಿತಿರುವ ವ್ಯಕ್ತಿ ಎರಡೂ ಕೈಗಳನ್ನು ಮೇಲಕ್ಕೆತ್ತಿದ್ದಾನೆ. ಎತ್ತಿನ ಬಿಡಿ ಭಾಗಗಳು ಸ್ಪಷ್ಟವಾಗಿವೆ. ಇನ್ನೊಂದು ಪ್ರಾಣಿಯ ಚಿತ್ರವಿದೆ. ಅರ್ಧ ಮನುಷ್ಯಾಕೃತಿಯ ತಲೆ, ಕೈಗಳನ್ನು ಹೊಂದಿದ್ದು, ಕೈ ಮೇಲಕ್ಕೆತ್ತಿವೆ.

ಶಿಲಾಶ್ರಯ-೩

ಮಲ್ಲಾಪುರದಿಂದ ತೆಂಬಾಗೆ ಹೋಗುವ ಎರಡನೆ ಬೆಟ್ಟದ ದಾರಿಯಲ್ಲಿ ಸಾರಾಯಿ ಡೋಣಿ ಅಡವಿಯ ದಾರಿ ಬದಿ ಒಂದು ಶಿಲಾಶ್ರಯವಿದೆ. ಈ ಶಿಲಾಶ್ರಯದಲ್ಲಿ ೧೩ ರೇಖಾ ಚಿತ್ರಗಳಿವೆ. ಎಲ್ಲವು ಕಾಲುಗಳನ್ನು ಅಗಲಿಸಿ ಕೈಗಳನ್ನು ಮೇಲಕ್ಕೆತ್ತಿದ ಭಂಗಿಯಲ್ಲಿವೆ.

ಶಿಲಾಶ್ರಯ-೪

ತೆಂಬಾದಿಂದ ವಾಯುವ್ಯಕ್ಕೆ ಸುಮಾರು ೧ ಕಿ.ಮೀ ದೂರದಲ್ಲಿ ಈ ಶಿಲಾಶ್ರಯವಿದೆ. ಅಲ್ಲಿ ಚಿಕ್ಕಹಳ್ಳದ ಪ್ರಪಾತವೊಂದಿದ್ದು, ಅದರ ಎಡಬದಿಗೆ ಹೊಂದಿಕೊಂಡಂತೆ ಪಶ್ಚಿಮಾಭಿಮುಖವಾಗಿ ಕಲ್ಲಾಸರೆ ಇದೆ. ಕಲ್ಲಾಸರೆಯಲ್ಲಿ ಸಾಲಾಗಿ ನಾಲ್ಕು ಎತ್ತುಗಳ ಚಿತ್ರವಿದ್ದು, ಹಿಂದೆಯೊಬ್ಬ ದನಗಾಯಿಯ ಚಿತ್ರವಿದೆ. (೨.೧೦ ಮೀ, ೧.೨೮ ಮೀ ಒಟ್ಟು ವಿಸ್ತೀರ್ಣ) ಎತ್ತುಗಳು ಸಹಜವಾಗಿದ್ದು, ದನಗಾಯಿಯ ಬಲಗೈಯಲ್ಲಿ ಒಂದು ಕೋಲು ಹಾಗೂ ಸೊಂಟದಲ್ಲಿ ಇನ್ನೊಂದು ಕೋಲು ಇದೆ. ಇವರ ಸಾಲಿನ ಕೆಳಗೆ ಒಂದು ವೃತ್ತದ ಚಿತ್ರವಿದ್ದು, ಅದು ಎತ್ತಿನಗಾಡಿಯ ಗಾಲಿಯಂತಿದೆ.

ಶಿಲಾಶ್ರಯ-೫

ನಾಲ್ಕನೆಯ ಕಲ್ಲಾಸರೆಯ ವಾಯುವ್ಯಕ್ಕೆ ಸ್ವಲ್ಪ ದೂರದಲ್ಲಿರುವ ದೊಡ್ಡ ಬಂಡೆಯಲ್ಲಿ ಪೂರ್ವಾಭಿಮುಖವಾಗಿ ಈ ಕಲ್ಲಾಸರೆ ಇದೆ. ಇಲ್ಲಿ ಕೆಂಪು ವರ್ಣದಿಂದ ಮಾಡಿರುವ ಚಿತ್ರಗಳಿವೆ. ಎತ್ತಿನ ತರಹದ ಪ್ರಾಣಿ ಒಂದು ಅಂಕಣದ ಚಿತ್ರಗಳಿವೆ. ಎತ್ತಿನ ತರಹ ಇರುವ ಪ್ರಾಣಿಗೆ ಇಣಿ ಇರುವುದಿಲ್ಲ, ಹಾಗೂ ಮೈ ಮೇಲೆ ಪರಸ್ಪರ ಛೇದಿಸುವಂತಹ ರೇಖೆಗಳಿದ್ದು, ಕೊಡು, ಬಾಲ, ಕಾಲುಗಳು, ಮುಖ ಸಹಜವಾಗಿವೆ. ಇದರ ಮುಂದೆ ಆಯತಾಕಾರದ ಅಂಕಣವಿದ್ದು, ಅದರಲ್ಲಿ ಸಮನಾಂತರದಲ್ಲಿ ಮೇಲಿನಿಂದ ಕೆಳಗೆ ಎಳೆದ ರೇಖೆಗಳಿದ್ದು ಅಂಕಣವನ್ನು ನಾಲ್ಕು ಭಾಗಗಳನ್ನಾಗಿಸಿದ ಈ ಎತ್ತಿನ ಕೆಳಗೆ ಮೇಲಕ್ಕೆ ಮುಖ ಮಾಡಿದ ಇನ್ನೊಂದು ಪ್ರಾಣಿ ಇದೆ.

ತಿರುಮಲಪುರ

ಗಂಗಾವತಿಯಿಂದ ಮುನಿರಾಬಾದಗೆ ಹೋಗುವ ರಸ್ತೆಯಲ್ಲಿ ಆನೆಗುಂದಿಯಿಂದ ಸುಮಾರು ೫ ಕಿ.ಮಿ.ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ಒಂದು ಕಲ್ಲಾಸರೆ ಇದೆ.

ಶಿಲಾಶ್ರಯ-೧

ಸಾಣಾಪುರದಿಂದ ತಿರುಮಲಾಪುರಕ್ಕೆ ಹೋಗುವ ರಸ್ತೆಯಲ್ಲಿ ತಿರುಮಲಾಪುರಕ್ಕೆ ಅರ್ಧ ಕಿ.ಮೀ ಮುಂಚೆ ರಸ್ತೆ ಎಡಬದಿ ಬೆಟ್ಟದ ಬುಡದಲ್ಲಿ ಪಶ್ಚಿಮಾಭಿಮುಖವಾಗಿ ಈ ದೊಡ್ಡ ಶಿಲಾಶ್ರಯವಿದೆ. ಇಲ್ಲಿ ಕೆಂಪು ಮತ್ತು ಬಿಳಿವರ್ಣದ ಅನೇಕ ಚಿತ್ರಗಳಿವೆ.

ಮನುಷ್ಯರ ಚಿಕ್ಕ ದೊಡ್ಡ ರೇಖಾಕೃತಿಗಳು, ಎತ್ತುಗಳು, ರೈಲ್ವೆ ಹಳಿಯಂತೆ ತೋರುವ ರಥದ ಮಾದರಿಗಳು, ಗಿಡಗಳು ಮತ್ತಿತರ ಅನೇಕ ಚಿಕ್ಕ ಚಿಕ್ಕ ಚಿತ್ರಗಳಿವೆ. ಎತ್ತಿನ ಮೇಲೆ ಕುಳಿತ ವ್ಯಕ್ತಿ ಮತ್ತು ಕೆಲವು ಬರಹಗಳು ಇಲ್ಲಿರುವುದರಿಂದ ಪ್ರಾಚೀನ ಮತ್ತು ಆಧುನಿಕ ಚಿತ್ರಗಳ ಗೊಂದಲ ಇಲ್ಲಿ ಉಂಟಾಗುತ್ತದೆ.

ಬಂಡಿಹರ್ಲಾಪುರ

ಗಂಗಾವತಿಯಿಂದ ಮುನಿರಾಬಾದ್‌ಗೆ ಹೋಗುವ ರಸ್ತೆಯಲ್ಲಿ ಈ ಗ್ರಾಮವಿದ್ದು ಇಲ್ಲಿ ಒಂದು ಶಿಲಾಶ್ರಯವಿದೆ.

ಶಿಲಾಶ್ರಯ–೧

ಗ್ರಾಮದ ಸಮೀಪದಲ್ಲಿಯ ಬೆಟ್ಟದಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ಬಿಳಿ ವರ್ಣದ ಚಿತ್ರಗಳಿವೆ. ಅವುಗಳಲ್ಲಿ ದೇಹದ ಮೇಲೆ ಅಡ್ಡ ಗೆರೆಗಳಿದ್ದು, ಪಟ್ಟಿಕೆಗಳನ್ನು ಸೂಚಿಸುತ್ತದೆ. ಜೊತೆಗೆ ಗೂಳಿಗಳ ಕಡ್ಡಿರೀತಿಯ ಹಾಗೂ ಮನುಷ್ಯ ಚಿತ್ರಗಳು, ಆಂಜನೇಯ ಒಂದು ಚಿತ್ರವಿದ್ದು, ಇವು ಇತಿಹಾಸ ಮತ್ತು ಸಮಕಾಲೀನ ಚಿತ್ರಗಳಾಗಿವೆ.

ಹೊಸ ಬಂಡಿ ಹರ್ಲಾಪುರ

ಗಂಗಾವತಿಯಿಂದ ಮುನಿರಾಬಾದ್ ರಸ್ತೆಯಲ್ಲಿ ಬೋರುಕಾ ಜಲವಿದ್ಯುತ್ ಘಟಕದ ಹತ್ತಿರ ಈ ಗ್ರಾಮವಿದೆ. ಇಲ್ಲಿ ಬೆಟ್ಟಗಳಲ್ಲಿ ಐದು ಶಿಲಾಶ್ರಯಗಳಿದ್ದು, ವರ್ಣ ಚಿತ್ರಗಳು ಕಂಡುಬಂದಿವೆ.

ಶಿಲಾಶ್ರಯ–೧

ಇದು ಜಲವಿದ್ಯುತ್ ಘಟಕದ ಎಡಬದಿಗೆ ಹೊಂದಿಕೊಂಡಿರುವ ಬೆಟ್ಟವಿದ್ದು, ಅದರ ಮುಂಭಾಗದಲ್ಲಿ ಬೃಹತ್‌ಗಾತ್ರದ ಬಂಡೆಯೊಂದಿದೆ. ಅದರ ಪಶ್ಚಿಮ ಭಾಗದಲ್ಲಿ ಕಲ್ಲಾಸರೆ ಇದ್ದು, ಕೆಮ್ಮಣ್ಣಿನ ಬಣ್ಣದ ಚಿತ್ರಗಳಿವೆ. ಒಂದು ಎತ್ತು ಮತ್ತು ಎರಡು ಮನುಷ್ಯರ ಚಿತ್ರಗಳಿದ್ದು, ಎತ್ತು ರೇಖಾಚಿತ್ರವಾಗಿದೆ. ಈ ಎತ್ತಿನ ಮುಂದೆ ಚಿಕ್ಕ ಮನುಷ್ಯನ ಚಿತ್ರವಿದ್ದು ರೇಖಾಚಿತ್ರದಲ್ಲಿ ಕೈ ಕಾಲು ದೇಹವಿದೆ. ತಲೆ ಛಾರಾರೂಪದಲ್ಲಿದ್ದು, ದುಂಡಾಗಿದೆ. ಬಲಗೈಯಲ್ಲಿ ಒಂದು ಚಿಕ್ಕ ಕೋಲು ಇದೆ. ಇದರಿಂದ ಇವನು ದನಗಾಯಿ ಎಂದು ಗುರುತಿಸಬಹುದು. ಇದರ ಮುಂದೆ ದೊಡ್ಡ ಮನುಷ್ಯಾಕೃತಿ ಇದ್ದು, ಛಾಯಾರೂಪದಲ್ಲಿದೆ. ಇದು ಕುರ್ಚಿಯ ಮೇಲೆ ಕುಳಿತ ಮನುಷ್ಯನ ಭಂಗಿಯಂತೆ ಈ ಚಿತ್ರವಿದೆ.

ಶಿಲಾಶ್ರಯ–೨

ಮೊದಲನೆ ಶಿಲಾಶ್ರಯದ ಬಂಡೆಯಲ್ಲಿಯೇ ದಕ್ಷಿಣಮುಖದಲ್ಲಿ ಕೆಮ್ಮಣ್ಣು ವರ್ಣದ

ಜಿಂಕೆಗಳು, ಗೂಳಿಗಳು ನಾಯಿಗಳ ಚಿತ್ರಗಳಿವೆ. ಹಾಗೂ ಅಪೂರ್ವ ರಚನೆಯ ಕಾಡು ಕೋಣದ ಚಿತ್ರವೊಂದಿದೆ. ಹಾಗೂ ಹಲವಾರು ಚಿತ್ರಗಳು ಮಳೆಗಾಳಿಗೆ ಸಿಲುಕಿ ಮಾಸಿ ಹೋಗಿವೆ. ಜಿಂಕೆಗಳೆಲ್ಲ ಒಂದೇ ಸಮನಾಗಿದ್ದು, ಚಿಕ್ಕ ಬಾಲವನ್ನು ಮೇಲಕ್ಕೆತ್ತಿವೆ. ಕವಲು ಕೊಂಬುಗಳನ್ನು ಹೊಂದಿವೆ. ಹಾಗೂ ಅಪೂರ್ಣ ರಚನೆಯ ಕೋಣದ ಚಿತ್ರ ಬಲಿಷ್ಟವಾಗಿದೆ. ನಾಯಿಯು ಬಾಯಿ ತೆರೆದಂತೆ ಚಿತ್ರವಿದೆ.

ಶಿಲಾಶ್ರಯ-೩

ಗ್ರಾಮದಿಂದ ಉತ್ತರಕ್ಕಿರುವ ಬೆಟ್ಟ ಪ್ರದೇಶದಲ್ಲಿ ಸು ೧೧/೨ ಕಿ.ಮೀ. ಅಂತರದಲ್ಲಿ ದುಬಾರಿ ಕ್ವಾರಿ ಗುಡ್ಡವಿದೆ. ಅದರಲ್ಲಿ ಉತ್ತರ ದಕ್ಷಿಣಕ್ಕೆ ಹಬ್ಬಿರುವ ಬೆಟ್ಟ ಶ್ರೇಣಿಯೊಂದಿದ್ದು, ಅದರ ಮಧ್ಯಭಾಗದಲ್ಲಿ ಪಶ್ಚಿಮಾಭಿಮುಖವಾಗಿರುವ ಬಹುವಿಶಾಲವಾದ ಶಿಲಾಶ್ರಯ ಒಂದಿದೆ. ಇದರಲ್ಲಿ ಎರಡು ಕೋಣಗಳ ಚಿತ್ರವಿದ್ದು, ಒಂದು ದೊಡ್ಡ ಆಕಾರ ಹಾಗೂ ಇನ್ನೊಂದು ಚಿಕ್ಕ ಆಕಾರದ ಚಿತ್ರಗಳಿವೆ.

ಇವು ಕೆಂಪು ವರ್ಣದಲ್ಲಿದ್ದು, ನೈಜ ಪ್ರಾಣಿಯ ಅಳತೆ ಹೊಂದಿದ್ದು, ರೇಖಾ ಚಿತ್ರವಾಗಿದೆ. ಮುಖ ಕೊಡು, ಕಿವಿ, ದೇಹ ಬಾಲ ಬಲಿಷ್ಟವಾಗಿದೆ. ಕಾಲಿನ ಗೊರಸಿನ ಭಾಗ ಸ್ಪಷ್ಟವಾಗಿಲ್ಲ. ಇನ್ನೊಂದು ಚಿಕ್ಕ ಕೋಣದ ಚಿತ್ರವು ದೊಡ್ಡ ಚಿತ್ರದ ಸ್ವಲ್ಪ ಹಿಂದೆ ಇದ್ದು ಮೇಲ್ಮುಖವಾಗಿ ನಿಂತಿದೆ. ನೋಡಲು ದೊಡ್ಡ ಚಿತ್ರದಂತೆ ಇದೆ.

ಶಿಲಾಶ್ರಯ-೪

ಮೂರನೆಯ ಶಿಲಾಶ್ರಯದ ಬೆಟ್ಟದಲ್ಲಿಯೇ ಅದರಿಂದ ದಕ್ಷಿಣಕ್ಕೆ ಸುಮಾರು ಅರ್ಧ ಕಿ.ಮೀ ದೂರದಲ್ಲಿಯೇ ಈ ಬೆಟ್ಟ ಇದೆ. ಈ ಬೆಟ್ಟದ ಕಲ್ಲಿನ ಗೋಡೆಗಳ ಮೇಲೆ ಕೆಂಪು ವರ್ಣದ ರೇಖಾಕೃತಿಗಳು ಕಂಡು ಬರುತ್ತವೆ. ಅವುಗಳಲ್ಲಿ ಒಂದು ಮನುಷ್ಯಾಕೃತಿಗಳು ಅಸ್ಪಷ್ಟವಾಗಿವೆ. ಇದು ವಿಶೇಷ ರಚನೆಯ ಮನುಷ್ಯಾಕೃತಿ ಆಗಿದ್ದು, ಕೈಗಳನ್ನು ಮೇಲಕ್ಕೆತ್ತಿದೆ ಮುಖ ಚೌಕಾಕಾರವಾಗಿದೆ.

ಶಿಲಾಶ್ರಯ-೫

ಇದು ನಾಲ್ಕನೆಯ ಕಲ್ಲಾಸರೆಯಿಂದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿ ಈ ಶಿಲಾಶ್ರಯವಿದೆ. ಈ ದೊಡ್ಡ ಬಂಡೆ ಹಾವಿನ ಹೆಡೆಯಂತಿದ್ದು, ಪಶ್ಚಿಮಕ್ಕೆ ಬಾಗಿದೆ. ಇದರ ಶಿಲಾಶ್ರಯದಲ್ಲಿ ಕೆಂಪು ವರ್ಣದಲ್ಲಿ ರಚಿಸಲಾದ ಅನೇಕ ರೇಖಾಚಿತ್ರಗಳಿವೆ. ಮಳೆ ನೀರು ಇಳಿ ಬರುವುದರಿಂದ ಚಿತ್ರಗಳು ಮಬ್ಬಾಗಿವೆ. ಇಲ್ಲಿ ಪ್ರಾಣಿಯ ಚಿತ್ರವೊಂದಿದ್ದು, ಮೈ ಮೇಲೆ ರೇಖೆಗಳಿವೆ. ಬಾಯಿಗೆ ಲಗಾಮು ಹಾಕಿದಂತಿದೆ ಕೈಯನ್ನು ಮುಂದಕ್ಕೆ ಚಾಚಿದಂತಿರುವ ಮನುಷ್ಯನ ಚಿತ್ರ ಅರೆ ರಚನೆಯಲ್ಲಿವೆ.

ಚಿಕ್ಕರಾಂಪುರ

ಗಂಗಾವತಿಯಿಂದ ಮುನಿರಾಬಾದ್‌ಗೆ ಹೋಗುವ ರಸ್ತೆಯಲ್ಲಿ ರಾಂಪುರ ಕ್ರಾಸ್‌ನಿಂದ ರಾಂಪುರ ಕಡೆ ಎರಡು ಕಿ.ಮೀ ದೂರದ ಒನಕೆ ಕಿಂಡಿ ಗುಡ್ಡದಲ್ಲಿ ಈ ನೆಲೆ ಇದೆ. ಇಲ್ಲಿ ಆರು ಕಲ್ಲಾಸರೆಗಳು ಇವೆ. ರಾಂಪುರ ರಸ್ತೆಯ ಬಲಬದಿಯ ಬೆಟ್ಟಗಳಲ್ಲಿ ನಡುವೆ ಸುಮಾರು ಇಪ್ಪತ್ತು ಎಕರೆಯಷ್ಟು ವಿಶಾಲವಾದ ಬಯಲು ಇದೆ. ಸುತ್ತಲೂ ಬೆಟ್ಟ ಈ ಬೆಟ್ಟದ ಗವಿ ಮತ್ತು ಶಿಲಾಶ್ರಯಗಳಲ್ಲಿ ವರ್ಣಚಿತ್ರಗಳಿವೆ. ಈ ಪ್ರದೇಶಕ್ಕೆ ಹೋಗಲು ಒಂದೇ ಇಕ್ಕಟ್ಟಿದ್ದ ದಾರಿ ಇದೆ. ಅದಕ್ಕೆ ಅದನ್ನು ಒನಕೆ ಕಂಡಿ ದಾರಿ ಎಂದು ಕರೆಯುತ್ತಾರೆ.

ಶಿಲಾಶ್ರಯ-೧

ಇದು ಬಯಲು ಪ್ರದೇಶದ ಪ್ರವೇಶಕ್ಕೆ ಬಲಭಾಗದಲ್ಲಿ ಈ ಗವಿ ಇದೆ. ಇಲ್ಲಿಯ ಪ್ರಮುಖ ವರ್ಣಚಿತ್ರಗಳೆಂದರೆ ಮನುಷ್ಯ ಎತ್ತುಗಳು, ಸಾಲು ಜಿಂಕೆಗಳ, ನವಿಲುಗಳ ಹಾಗೂ ಸಾಲು ನೃತ್ಯಗಾರರ ಚಿತ್ರಗಳಿವೆ.

ಗವಿಯಲ್ಲಿ ಒಬ್ಬ ವ್ಯಕ್ತಿ ಕೋಲು ತೆಗೆದುಕೊಂಡು ಓಡುತ್ತಿರುವ ದೃಶ್ಯ, ಎರಡು ಗೂಳಿಗಳು ಕಾದಾಡುತ್ತಿರುವುದು ಅದರ ಮಧ್ಯ ಒಬ್ಬ ಚಿಕ್ಕ ವ್ಯಕ್ತಿಯ ಚಿತ್ರ, ಮಂಡಲದ ಚಿತ್ರದಲ್ಲಿ ಎರಡು ವೃತ್ತಗಳು, ಆಯತಾಕಾರದಲ್ಲಿ ಇಬ್ಬರು ವ್ಯಕ್ತಿಗಳು, ನಾಯಿ, ಕುಣಿಯುತ್ತಿರುವ ವ್ಯಕ್ತಿಗಳ ಗುಂಪು, ನವಿಲುಗಳ ಚಿತ್ರಗಳಿದ್ದು ಛಾಯಾರೂಪದ ಮತ್ತು ರೇಖಾ ಚಿತ್ರಗಳಿವೆ.

ಶಿಲಾಶ್ರಯ-೨

ಒನಕೆ ಕಂಡಿ ದಾರಿಯ ಬಲದಲ್ಲಿ ಈ ಕಲ್ಲಾಸರೆ ಇದೆ. ಇಲ್ಲಿ ದೊಡ್ಡ ಬಂಡೆಯ ಮುಖಭಾಗದಲ್ಲಿ ಎದುರು ಬದುರಾಗಿ ನಿಂತ ಎರಡು ದೊಡ್ಡ ದನಗಳ ಚಿತ್ರಗಳಿವೆ. ಕೆಂಪು ವರ್ಣ ಚಿತ್ರಗಳು ಬಯಲಿಗೆ ಇರುವುದರಿಂದ ಮಳೆ, ಗಾಳೆ, ಬಿಸಿಲಿನ ಹೊಡೆತ್ತಕ್ಕೆ ಬಹಳಷ್ಟು ಮಾಸಿ ಹೋಗಿವೆ. ಇವುಗಳನ್ನು ಗಮನಿಸಿದಾಗ ಒಂದನೇ ಶಿಲಾಶ್ರಯದ ಚಿತ್ರಗಳಂತೆ ಇವೆ.

ಶಿಲಾಶ್ರಯ-೩

ಎರಡನೇ ಗವಿಯ ಪಕ್ಕದಲ್ಲಿಯೇ ಈ ಶಿಲಾಶ್ರಯವಿದ್ದು, ಛಾವಣಿ ಹಾಗೂ ಛಾವಣಿ ಕಲ್ಲಿನ ಬದಿಯ ಆಸರೆ ಕಲ್ಲಿಗೂ ಚಿತ್ರಗಳನ್ನು ಬಿಡಿಸಲಾಗಿದೆ. ಈ ಚಿತ್ರಗಳು ಅಸ್ಪಷ್ಟವಾಗಿವೆ.

ಶಿಲಾಶ್ರಯ-೪

ಒಂದನೇ ಕಲ್ಲಾಸರೆ ಎದುರಿನ ಬೆಟ್ಟಗಳಲ್ಲಿ ಈ ಶಿಲಾಶ್ರಯ ಇದೆ. ಶಿಲಾಶ್ರಯದ ಮುಖ ಭಾಗದಲ್ಲಿ ಬದಿಯ ಶಿಲೆಯೊಂದಕ್ಕೆ ವರ್ಣಚಿತ್ರಗಳಿವೆ. ಇಲ್ಲಿ ಪರಸ್ಪರ ಎದುರು ಮುಖಮಾಡಿನಿಂತ

ಎರಡು ಜೋಡಿ ಎತ್ತಿನ ಚಿತ್ರಗಳಿವೆ. ಇಬ್ಬರು ಬಿಲ್ಲುಗಾರರು ಹಾಗೂ ಒಬ್ಬ ಅಶ್ವ ಸವಾರರ ಚಿತ್ರಗಳಿವೆ. ಅಶ್ವ ಸವಾರನು ಎಡಗೈಯಲ್ಲಿ ಲಗಾಮು ಹಿಡಿದು ಅದೇ ಕೈಯಲ್ಲಿ ಒಂದು ಕೋಲನ್ನು ಹಿಡಿದಿದ್ದಾನೆ. ಬಲಗೈಯಲ್ಲಿ ಒಂದು ಆಯುಧ ಹಿಡಿದು ಸೊಂಟಕ್ಕೆ ಆಯುಧದ ಕವಚ ಇದ್ದಹಾಗೆ ಇದೆ. ಇನ್ನೊಬ್ಬ ದನ ಗಾಯಿ ಚಿತ್ರವಿದೆ, ಒಬ್ಬಮನುಷ್ಯ ಚಿತ್ರವಿದ್ದು, ಕೇವಲ ಎದೆಯ ಭಾಗ, ಭುಜ ಮತ್ತು ರುಂಡಗಳು ಮಾತ್ರ ಇದ್ದು, ಸ್ಪಷ್ಟವಾಗಿ ಇಲ್ಲ. ಸಿಂಹದ ಚಿತ್ರವಿದ್ದು, ಎದುರಿಗೆ ಗೂಳಿಯ ಚಿತ್ರವಿದೆ. ಅದರ ಹಿಂದೆ ಚಿಕ್ಕದಾದ ಜಿಂಕೆಯ ಚಿತ್ರವಿದೆ.

ಶಿಲಾಶ್ರಯ–೫

ಇದು ಮೂರನೆಯ ಶಿಲಾಶ್ರಯದ ಬದಿಯಲ್ಲಿ ಈ ಶಿಲಾಶ್ರಯ ನೆಲದಿಂದ ಸುಮಾರು ೮–೧೦ ಮೀ ಎತ್ತರದಲ್ಲಿದೆ. ಇಲ್ಲಿಯ ಛಾವಣಿಯಂತೆ ಅಡ್ಡ ಚಾಚಿರುವ ಬಂಡೆಯ ಒಳಮೈ ಮೇಲೆ ಒಬ್ಬ ಮನುಷ್ಯನ ಚಿತ್ರವಿದೆ. ಇದು ಸಂಪೂರ್ಣ ಛಾಯಾಚಿತ್ರವಾಗಿದೆ. ದುಂಡು ತಲೆ, ತೊಡೆಗಳನ್ನು ಅಗಲಿಸಿಲ್ಲ, ಕೈಗಳು ಬದಿಗೆ ಭುಜದಿಂದ ಸ್ವಲ್ಪ ಕೆಳಕ್ಕೆ ಎತ್ತಲ್ಪಟ್ಟಿವೆ. ಕಾಲಿನ ಬಳಿ ಒಂದು ಚಿಕ್ಕ ಗೂಳಿಯ ಛಾಯಾರೂಪದ ಚಿತ್ರವೂ ಇದೆ.

ಶಿಲಾಶ್ರಯ–೬

ಇದು ಐದನೆಯ ಶಿಲಾಶ್ರಯದ ಬಲಬದಿಗೆ ಸ್ವಲ್ಪ ದೂರದಲ್ಲಿದೆ. ಇಲ್ಲಿ ೧.೫೭ ಮೀ, ೧.೪೪ ಮೀ ಅಳತೆಯ ಜಾಗದಲ್ಲಿ ಚಿತ್ರಗಳಿದ್ದು, ಇದರಲ್ಲಿ ಐದು ಮಂಡಲಗಳ ಚಿತ್ರಗಳು, ಎರಡು ಗೂಳಿ ಒಬ್ಬ ಮನುಷ್ಯ ಹಾಗೂ ಒಂದು ಜಿಂಕೆಯ ಚಿತ್ರಗಳಿವೆ. ಒಂದು ಗೂಳಿಯ ಚಿತ್ರ ಛಾಯಾರೂಪವಾಗಿದ್ದರೆ. ಇನ್ನೊಂದು ಗೂಳಿಯ ಚಿತ್ರ ರೇಖಾ ಚಿತ್ರವಾಗಿದೆ. ಮೈ ಮೇಲೆ ಮೂರು ಗೆರೆಗಳನ್ನು ಎಳೆಯಲಾಗಿದೆ. ಬಾಲವನ್ನು ನೇರವಾಗಿ ಎತ್ತಿ ಹಿಡಿದಿದೆ. ಬಾಲಕ್ಕೆ ಕೂದಲಿನಂತೆ ಸಣ್ಣ ಗೆರೆ ಎಳೆಯಲಾಗಿದೆ. ಇಣಿಯಲ್ಲಿ ಮಾತ್ರ ಬಣ್ಣ ತುಂಬಲಾಗಿದೆ. ಒಬ್ಬ ಮನುಷ್ಯನ ಚಿತ್ರ ಚಿಕ್ಕದಾಗಿದ್ದು, ಛಾಯಾರೂಪದಲ್ಲಿದೆ. ಅದರ ಮೇಲೆ ಸಣ್ಣ ಜಿಂಕೆಯ ಚಿತ್ರವಿದೆ.

ರಾಂಪುರ

ಈ ಗ್ರಾಮವು ಮಲ್ಲಾಪುರದಿಂದ ದಕ್ಷಿಣಕ್ಕೆ ಸು. ೭ಕಿ.ಮೀ ದೂರದಲ್ಲಿದೆ. ಇಲ್ಲಿ ಎರಡು ಶಿಲಾಶ್ರಯಗಳಿವೆ.

ಶಿಲಾಶ್ರಯ–೧

ಈ ಶಿಲಾಶ್ರಯ ರಾಂಪುರನಿಂದ ಆನೆಗುಂದಿಗೆ ಹೋಗುವ ರಸ್ತೆಯ ಬಲಕ್ಕೆ ಕಾಲುವೆ ದಾರಿಯಲ್ಲಿ ತಳವಾರ ಕರೆಪ್ಪನ ಹೊಲದ ಪಕ್ಕದ ತಾಯಮ್ಮನ ಗುಡ್ಡದಲ್ಲಿದೆ.

ಇಲ್ಲಿ ಕೆಂಪು ವರ್ಣದ ಎರಡು ಮಾನವಾಕೃತಿಗಳ ಮತ್ತು ಒಂದು ನವಿಲಿನ ಚಿತ್ರವಿದೆ. ೦.೯೮ ಮೀ ಎತ್ತರವಿರುವ ಮಧ್ಯದ ಮನುಷ್ಯಾಕೃತಿ ಆಕರ್ಷಕವಾಗಿದ್ದು, ನಿಂತ ಭಂಗಿಯಲ್ಲಿದೆ. ಬಲಗೈ ಭುಜದ ಸಮಾಂತರದಲ್ಲಿ ಉದ್ದಕ್ಕೆ ಚಾಚಿದ್ದು, ತೋರು ಭಂಗಿಯನ್ನು ನಿದರ್ಶಿಸುತ್ತದೆ. ಎಡಗೈ ಸ್ವಲ್ಪ ಮಡಿಚಿ ಮೇಲಕ್ಕೆತ್ತಿದೆ. ಬೆರಳುಗಳನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಮುಖ ಬಲಕ್ಕೆ ವಾಲಿದೆ. ಇದರ ಪಕ್ಕದಲ್ಲಿ ಅಸ್ಪಷ್ಟ ಮಾನವನ ಚಿತ್ರವಿದೆ. ಇದರ ಎಡಗಾಲಿನ ಹತ್ತಿರ ನವಿಲಿನ ಚಿಕ್ಕ ಚಿತ್ರವಿದೆ. ಮೈ ಮೇಲೆ ಪರಸ್ಪರ ವಕ್ರವಾಗಿ ಛೇದಿಸಿದ ರೇಖೆಗಳು, ತಲೆಯ ಮೇಲೆ ತುರಾಯಿಯು ಇದೆ.

ಶಿಲಾಶ್ರಯ-೨

ಮಲ್ಲಾಪುರ ಜಲವಿದ್ಯುದಾಗರದ ದಕ್ಷಿಣಕ್ಕೆ ೨ ಕಿ.ಮೀ ದೂರದಲ್ಲಿ ಇರುವ ನಮನಕಲ್ ಗುಡ್ಡದ ಮೇಗಲ ಬಂಡೆಯ ಮೇಲೆ ಈ ಗವಿ ಇದೆ. ಇದೊಂದು ನೈಸರ್ಗಿಕ ಗವಿ ಗವಿಯ ಮುಖಭಾಗದ ಗೋಡೆಯಲ್ಲಿ ಅಧಿಕವಾಗಿ ಮತ್ತು ಒಳಭಾಗದ ಗೋಡೆಯಲ್ಲಿ ಅಲ್ಲಲ್ಲಿ ಚಿತ್ರಗಳಿವೆ. ಚಿತ್ರಗಳು ಬಹಳಷ್ಟು ಮಾಸಿವೆ ಮೂರು ಮನುಷ್ಯರ ಚಿತ್ರಗಳು ಒಂದು ಗುಬ್ಬಚ್ಚಿಯ ಗೂಡಿನಂತಿರುವ ಚಿತ್ರ, ಚಿಕ್ಕದಾದ ಹಸುವಿನ ಚಿತ್ರವಿದ್ದು, ಅದು ಕೆಚ್ಚಲನ್ನು ಹೊಂದಿದೆ. ಇನ್ನೊಂದು ಗುರುತಿಸಲಾಗದ ಪ್ರಾಣಿಯ ಚಿತ್ರವಿದೆ. ಹಾಗೂ ಹಲವಾರು ಚಿತ್ರಗಳು ಮಾಸಿ ಅಸ್ಪಷ್ಟವಾಗಿ ಕಾಣುತ್ತವೆ.

ಕಡೆ ಬಾಗಿಲು

ಆನೆಗುಂದಿಯಿಂದ ಸುಮಾರು ೩ ಕಿ.ಮೀ ದೂರದಲ್ಲಿ ಗಂಗಾವತಿಗೆ ಹೋಗುವ ರಸ್ತೆಯಲ್ಲಿ ಈ ಗ್ರಾಮವಿದೆ. ಈ ಗ್ರಾಮದ ಪಕ್ಕದಲ್ಲೇ ಬೆಟ್ಟವಿದ್ದು, ಬೆಟ್ಟದ ಮೇಲೆ ಇರುವ ಶಿಲಾಶ್ರಯಗಳಲ್ಲಿ ಎರಡು ಕಡೆ ಚಿತ್ರಗಳು ಕಂಡು ಬಂದಿವೆ.

ಶಿಲಾಶ್ರಯ-೧

ಇದು ಈ ಬೆಟ್ಟದಲ್ಲಿ ಶಿಲಾಶ್ರಯ ಒಂದರಲ್ಲಿ ಕಂದು ಗೆಂಪು ಬಣ್ಣದ ಚಿತ್ರಗಳಿವೆ. ಕೆಲವು ಅಸ್ಪಷ್ಟವಾಗಿವೆ. ನಾಯಿ, ಕೈ ಕೈ ಹಿಡಿದ ೧೦ ಜನ ಹೆಣ್ಣು ಮಕ್ಕಳ ಸಾಲು, ಹಾಗೂ ೧೨ ಹೆಣ್ಣು ಮಕ್ಕಳ ಸಾಲು, ಜಿಂಕೆ, ಚಿತ್ರಗಳಿವೆ. ನಾಯಿಯ ತಲೆಯ ಮೇಲೆ ಐದು ಸಣ್ಣ ಗೆರೆಗಳನ್ನು ಎಳೆದು ಕೂದಲಿನಂತೆ ಎಳೆಯಲಾಗಿದ್ದು, ಚಿಕ್ಕ ಬಾಲದಂತೆ ಹಿಂಭಾಗದಲ್ಲಿ ಕೆಲವು ರೇಖೆಗಳನ್ನು ತೋರಿಸಲಾಗಿದೆ. ಇದು ನೋಡುಗನಿಗೆ ಬಲಮುಖವಾಗಿದೆ. ಇಬ್ಬರು ಜೋಡಿಯಾಗಿ ನಿಂತಿರುವ ಚಿತ್ರವಿದೆ. ೧೦ ಹಾಗೂ ೧೨ ಜನ ಸಾಲಾಗಿ ನಿಂತ ಚಿತ್ರದಲ್ಲಿ ಬಹುಶಃ ಅವರು ನೃತ್ಯ ಮಾಡುವ ಭಂಗಿಯಲ್ಲಿದೆ. ಎದೆಯ ಬಾಗ ಉಬ್ಬಿದಂತಿದೆ. ತಲೆಯ ಮೇಲೆ ೪ ಅಥವಾ ೫ ಗೆರೆಗಳನ್ನು

ಎಲೆದು ಕೂದಲಿನಂತೆ ತೋರಿಸಲಾಗಿದೆ. ಕಾಲುಗಳನ್ನು ಜೋಡಿಸಿ ಕೈಗಳನ್ನು ಒಬ್ಬರಿಗೊಬ್ಬರು ಹಿಡಿದುಕೊಂಡಿದ್ದಾರೆ.

ಶಿಲಾಶ್ರಯ-೨

ಈ ಕಲ್ಲಾಸರೆಯು ಮೊದಲ ಕಲ್ಲಾಸರೆಯ ಕೆಳಭಾಗ ಬೆಟ್ಟದ ಸ್ಥಳದಲ್ಲಿ ಕಂಡುಬರುತ್ತದೆ. ಇಲ್ಲಿ ಕಂದುಗೆಂಪು ವರ್ಣದ ಚಿತ್ರಗಳಿದ್ದು, ಮುಟ್ಟುವುದು ಮತ್ತು ಸವರುವುದನ್ನು ಮಾಡಿರುವುದರಿಂದ ನಾಶವಾಗುತ್ತಿವೆ. ಅಸ್ಪಷ್ಟವಾದ ಡಮರು, ತ್ರಿಶೂಲ, ಮನುಷ್ಯ ಕಲಾಕೃತಿಯ ಚಿತ್ರಗಳಂತೆ ಅನಿಸುತ್ತದೆ.

ಗೂಗಿ ಬಂಡೆ

ಗಂಗಾವತಿಯಿಂದ ಆನೆಗುಂದಿಗೆ ಹೋಗುವ ರಸ್ತೆಯಲ್ಲಿ ಬಸವದುರ್ಗದಿಂದ ಆಗ್ನೇಯಕ್ಕೆ ಸುಮಾರು ೧ ಕಿ.ಮೀ. ದೂರದಲ್ಲಿ ಈ ಗ್ರಾಮವಿದೆ. ಈ ಗ್ರಾಮದ ಶಾಲೆಯ ಪಕ್ಕ ಒಂದು ಶಿಲಾಶ್ರಯವಿದೆ.

ಶಿಲಾಶ್ರಯ-೧

ಈ ಶಿಲಾಶ್ರಯದ ಮುಂಭಾಗದ ಛತ್ತಿನಲ್ಲಿ ವರ್ಣಚಿತ್ರಗಳಿವೆ. ಈ ಚಿತ್ರಗಳ ಮೇಲೆ ಇತ್ತೀಚೆಗೆ ದೇವಿ, ಆಂಜನೇಯ ಮುಂತಾದ ಚಿತ್ರಗಳನ್ನು ಬರೆಯಲಾಗಿದ್ದು ಆದಿ ಮಾನವನ ಚಿತ್ರಗಳು ಬಹುಮಟ್ಟಿಗೆ ನಾಶವಾಗಿವೆ. ಉಳಿದ ಕೆಲವು ಚಿತ್ರಗಳಲ್ಲಿ ಮೂರು ಎತ್ತಿನ ಚಿತ್ರಗಳು ಪ್ರಮುಖವಾಗಿವೆ. ಹಾಗೂ ಒಬ್ಬ ಎತ್ತಿನ ಮೇಲೆ ಕುಳಿತ ವ್ಯಕ್ತಿಯ ಚಿತ್ರವಿದೆ.

ಸಂಗಾಪುರ

ಗಂಗಾವತಿಯಿಂದ ಆನೆಗುಂದಿಗೆ ಹೋಗುವ ರಸ್ತೆಯಲ್ಲಿ ಗಂಗಾವತಿಯಿಂದ ಸುಮಾರು ೪ ಕಿ.ಮೀ ದೂರದಲ್ಲಿ ಈ ಗ್ರಾಮದ ಕರಡಿವಟ್ಲ ಬೆಟ್ಟದಲ್ಲಿ ಹತ್ತು ಕಲ್ಲಾಸರೆಗಳು ಕಂಡುಬಂದಿವೆ.

ಈ ಬೆಟ್ಟ ಶ್ರೇಣಿಯಲ್ಲಿ ಸಾಲಾಗಿ ಮತ್ತು ಎದುರಿಗೆ ಹೀಗೆ ಬೆಟ್ಟ ಭಾಗದಲ್ಲಿರುವ ಹತ್ತು ಕಲ್ಲಾಸರೆಗಳಲ್ಲಿ ಕಂದುಗೆಂಪು ಹಾಗೂ ಕೆಂಪು ಬಣ್ಣದ ಚಿತ್ರಗಳಿವೆ. ಇಲ್ಲಿ ಪ್ರಮುಖವಾಗಿ ಎಮ್ಮೆ, ಕಾಡುಕೋಣ, ಮನುಷ್ಯಾಕೃತಿಗಳು, ನಕ್ಷತ್ರಾಕೃತಿಯ ಕೋಣದ ಚಿತ್ರ, ನಡೆಯುತ್ತಿರುವ ಮನುಷ್ಯನ ಚಿತ್ರ, ವಿಶಿಷ್ಟ ಆಕೃತಿಗಳ ಚಿತ್ರ ಯಂತ್ರಮಂಡಲದ ಚಿತ್ರ ಮತ್ತು ದಳದ ಹೂಮಾದರಿಯ ಚಿತ್ರ ಆಯತಾಕಾರದ ಚಿತ್ರ, ಬಹು ಅಂಕಣದ ಚಿತ್ರ, ಜಿಂಕೆ ಗಿಡದ ರೀತಿಯ ಚಿತ್ರ, ದನಗಾಯಿಯ ಚಿತ್ರ, ದೇಹದ ತುಂಬ ವಕ್ರವಾಗಿ ಅಡರೇಖೆಯನ್ನು ಹಾಕಿದ ಪ್ರಾಣಿಯ ಚಿತ್ರ, ಹೂಗಿಡದ ಚಿತ್ರ, ಜೋಡಿ ಮನುಷ್ಯರ ಚಿತ್ರ, ಮೈ ಮೇಲೆ ವಕ್ರವಾಗಿ ರೇಖೆಯನ್ನು ಹಾಕಿದ ಎತ್ತುಗಳ ಚಿತ್ರ, ಹಲ್ಲಿಯ ರೀತಿಯ ಪ್ರಾಣಿಯ ವಕ್ರವಾಗಿ ರೇಖೆಯನ್ನು ಹಾಕಿದ ಎತ್ತುಗಳ ಚಿತ್ರ, ಹಲ್ಲಿಯ

ರೀತಿಯ ಪ್ರಾಣಿಯ ಚಿತ್ರ, ಅಂಗಿ ಮತ್ತು ಧೋತಿಯನ್ನು ತೊಟ್ಟಿರುವಂತ ಮನುಷ್ಯಾಕೃತಿ ಚಿತ್ರ, ನಾಯಿಯ ಚಿತ್ರ, ಪರಸ್ಪರ ಎದುರಾಗಿ ನಿಂತ ಅನೇಕ ಜೋಡಿ ಎತ್ತುಗಳ ಚಿತ್ರ, ಕುದುರೆಯಂತೆ ಕಾಣಿವ ಪ್ರಾಣಿಯ ಚಿತ್ರ, ಸೂರ್ಯಕಾಂತಿ ಚಿತ್ರ, ಆನೆ ಚಿತ್ರ, ದೇಹ ಕುದುರೆಯಂತೆ ತೋಡುವ ಸಿಂಹದ ಶೈಲಿಯಳ್ಳ ಪ್ರಾಣಿಯ ಚಿತ್ರ, ಸವಾರ ಸಹಿತ ಆನೆ ಚಿತ್ರ, ಸ್ತ್ರೀ ರೂಪದ ಚಿತ್ರ ಹೀಗೆ ಹಲವಾರು ಛಾಯಾರೂಪದ ಹಾಗೂ ರೇಖಾಚಿತ್ರಗಳಿವೆ. ಇನ್ನೂ ಹಲವಾರು ಚಿತ್ರಗಳು ಮಳೆ, ಗಾಳಿ, ಬಿಸಿಲಿನ ಹೊಡೆತಕ್ಕೆ ಮಾಸಿ ಹೋಗಿವೆ.

ಎಮ್ಮಿಗುಡ್ಡ

ಗಂಗಾವತಿಯಿಂದ ಕೊಪ್ಪಳಗೆ ಹೋಗುವ ರಸ್ತೆಯಲ್ಲಿ ಗಂಗಾವತಿಯಿಂದ ೧೫ ಕಿ.ಮೀ.ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ಎರಡು ಶಿಲಾಶ್ರಯಗಳು ಕಂಡು ಬಂದಿವೆ. ರಸ್ತೆಯ ಬಲಬದಿಯಲ್ಲಿಯ ಕೊರ್ರಮ್ಮನ ಮಟ್ಟಿಯಲ್ಲಿ ಎರಡು ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳಿವೆ. ಇದರಲ್ಲಿ ಛಾಯಾರೂಪದ ಮತ್ತು ರೇಖಾ ರೂಪದ ಚಿತ್ರಗಳಿವೆ. ಜಿಂಕೆಗಳು, ಗೂಳಿಗಳು, ಮನುಪ್ರಾಕೃತಿಗಳು, ತಲೆಗಳಿಲ್ಲದ ಜಿಂಕೆ ಚಿತ್ರಗಳು, ಗುರುತಿಸಲು ಸಾಧ್ಯವಾಗದ ಪ್ರಾಣಿಯ ಚಿತ್ರಗಳು, ಕೈಯಲ್ಲಿ ತ್ರಿನಾಮದಂತ ವಸ್ತುಗಳನ್ನು ಹಿಡಿದುಕೊಂಡಿರುವ ವ್ಯಕ್ತಿಚಿತ್ರ, ಬಾಲವನ್ನು ಮೇಲಕ್ಕೆತ್ತಿದ ಮಂಗನ ಚಿತ್ರ, ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ಗಂಡು ಹೆಣ್ಣಿನ ಚಿತ್ರ, ಕೈಯಲ್ಲಿ ಕಟ್ಟಿಗೆ (ಕೋಲು) ಹಿಡಿದ ವ್ಯಕ್ತಿಗಳ ಚಿತ್ರ ಕೈಗಳನ್ನು ಮೇಲಕ್ಕೆತ್ತಿ ಸಾಲಾಗಿ ನಿಂತ ಮನುಷ್ಯರ ಚಿತ್ರಗಳು ಇಲ್ಲಿ ಕಂಡುಬಂದಿವೆ.

ಗಡ್ಡಿ

ಇದು ಅಗೋಲಿ ರಸ್ತೆಯಲ್ಲಿ ದಾಸ ನಾಳದಿಂದ ಸು. ೪ ಕಿ.ಮೀ.ದೂರದಲ್ಲಿದೆ. ಇಲ್ಲಿ ಮೂರು ಶಿಲಾಶ್ರಯಗಳು ಕಂಡುಬಂದಿವೆ. ಗ್ರಾಮದಿಂದ ನೈರುತ್ಯಕ್ಕೆ ಸು ೧ ೧/೨ ಕಿ.ಮೀ ನಿಂದ ಮೂರು ಕಿಲೋಮೀಟರ್ ಒಳಗೆ ಮೂರು ಶಿಲಾಶ್ರಯಗಳು ಕಂಡುಬಂದಿವೆ. ಇಲ್ಲಿಯ ಛಾವಣಿಯ ಮೇಲೆ ಹಾಗೂ ಗೋಡೆಗಳ ಮೇಲೆ ಅನೇಕ ವರ್ಣ ಚಿತ್ರಗಳನ್ನು ನಾವು ಕಾಣಬಹುದಾಗಿದೆ. ಮನುಷ್ಯನೊಬ್ಬ ಭರ್ಜಿಯಿಂದ ಪ್ರಾಣಿಯೊಂದನ್ನು ಇರಿದ ಚಿತ್ರ ಹಾಗೂ ವಿಶೇಷ ರೀತಿಯ ಮನುಷ್ಯ ಚಿತ್ರವಿದೆ. ಕುದುರೆಯಂತಹ ಪ್ರಾಣಿಯ ಚಿತ್ರ, ಕಡವೆಯಂತಹ ಪ್ರಾಣಿಚಿತ್ರಗಳು ತೆಳು ಕೆಂಪು ಹಾಗೂ ಕೆಂಪು ವರ್ಣದ ಚಿತ್ರಗಳನ್ನು ಕಾಣಬಹುದಾಗಿದೆ.

ಹಂಪಸದುರ್ಗ

ದಾಸನಾಳದಿಂದ ಹಂಪಸದುರ್ಗಕ್ಕೆ ಹೋಗುವ ರಸ್ತೆಯಲ್ಲಿ ಆಗೋಲಿ ಗ್ರಾಮದ ನಂತರ

ಈ ಗ್ರಾಮವಿದ್ದು, ಇಲ್ಲಿ ಎರಡು ಶಿಲಾಶ್ರಯಗಳಿವೆ. ಇವು ಹಂಪಸದುರ್ಗದಿಂದ ರಾಮದುರ್ಗಕ್ಕೆ ಹೋಗುವ ಗುಡ್ಡದ ರಸ್ತೆಯಲ್ಲಿ ಹಂಪಸಾಗರದಿಂದ ಒಂದು ಕಿ.ಮೀ.ದೂರದಲ್ಲಿ ಹಾಗೂ ಹಂಪಸದುರ್ಗದಿಂದ ಉತ್ತರಕ್ಕೆ ಮೂರು ಕಿ.ಮೀ.ದೂರದಲ್ಲಿ ಮಡ್ಡಿಕೊಳದ ಎಡಕ್ಕೆ ಒಂದು ಶಿಲಾಶ್ರಯವಿದೆ. ಇಲ್ಲಿ ಪ್ರಮುಖವಾಗಿ ಬಿಳಿವರ್ಣದ ಇಬ್ಬರು ಎತ್ತಿನ ಸವಾರರು, ಒಬ್ಬ ಮನುಷ್ಯನ ರೇಖಾಚಿತ್ರಗಳಿದ್ದು, ಚಿಕ್ಕದಾಗಿವೆ. ಒಂದು ಕೈಯನ್ನು ಮೇಲೆತ್ತಿ ಇನ್ನೊಂದು ಕೈಯನ್ನು ಸೊಂಟದ ಮೇಲೆ ಇಟ್ಟಿರುವ ಚಿತ್ರವಿದೆ. ಹಾಗೂ ಇನ್ನೊಂದು ಶಿಲಾಶ್ರಯದಲ್ಲಿ ಹಲವಾರು ರೇಖಾ ಸಂಕೇತ ಚಿತ್ರಗಳಿವೆ.

ಅಗೋಲಿ

ದಾಸನಾಳದಿಂದ ಹಂಪಸದುರ್ಗಕ್ಕೆ ಹೋಗುವ ರಸ್ತೆಯಲ್ಲಿ ಹಂಪಸದುರ್ಗಕ್ಕಿಂತ ಪೂರ್ವದಲ್ಲಿ ಈ ಗ್ರಾಮವಿದೆ. ಇಲ್ಲಿ ಸುಮಾರು ಏಳು ಶಿಲಾಶ್ರಯಗಳಲ್ಲಿ ವರ್ಣ ಚಿತ್ರಗಳು ಕಂಡುಬಂದಿವೆ.

ಇವು ಗ್ರಾಮದಿಂದ ಮೂರು ಕಿ.ಮೀ ದೂರದಲ್ಲಿರುವ ಮೊರೆರಕಲ್ಲ ಗುಡ್ಡದಲ್ಲಿ ಹಾಗೂ ಅದರ ಸುತ್ತಮುತ್ತಲಿರುವ ಗುಡ್ಡದಲ್ಲಿ ಕಂಡುಬಂದಿವೆ. ಇಲ್ಲಿ ಕೆಂಪು ಹಾಗೂ ಬಿಳಿ ವರ್ಣದ ಚಿತ್ರಗಳಿರುವುದನ್ನು ಕಾಣಬಹುದಾಗಿದೆ. ಮನುಷ್ಯ ಮತ್ತು ಅಶ್ವಸವಾರರು ಬಿಲ್ಲುಗಳನ್ನು ಹಿಡಿದಿರುವ ಮನುಷ್ಯರು, ವಿರುದ್ಧ ದಿಕ್ಕಿನಲ್ಲಿ ನಿಂತಿರುವ ಪ್ರಾಣಿಗಳು, ಕೆಳಮುಖವಾಗಿ ನಿಂತ ದನದ ಚಿತ್ರ, ವೃತ್ತಗಳ ಚಿತ್ರಗಳು ಹಲವಾರು ಎತ್ತಿನ ಚಿತ್ರಗಳು, ಆಯತಾಕಾರದ ಮನುಷ್ಯನ ಚಿತ್ರ, ತಲೆಯ ಮೇಲೆ ಕೂದಲನ್ನು ಹೊಂದಿದ ಮನುಷ್ಯ, ಪಾದದ ಚಿತ್ರ, ಹಸ್ತಕ್ಕೆ ಕೆಂಪುವರ್ಣವನ್ನು ಬಳಿದುಕೊಂಡು ಮುದ್ರೆ ಒತ್ತಿ ಮೂಡಿಸಿದ ಸುಮಾರು ಹತ್ತು ಚಿತ್ರಗಳು ಇಲ್ಲಿ ಕಂಡು ಬಂದಿವೆ.

ರಾಮದುರ್ಗ

ಈ ಗ್ರಾಮವು ಹಂಪಸಾಗರದಿಂದ ಸುಮಾರು ೭ ಕಿ.ಮೀ ದೂರದಲ್ಲಿದೆ. ಇಲ್ಲಿರುವ ಒಂದು ಕೆರೆಯ ಎದುರಿನಲ್ಲಿ ರಸ್ತೆ ಬಲಬದಿಯ ಬೆಟ್ಟದ ಬುಡದಲ್ಲಿ ಒಂದು ಶಿಲಾಶ್ರಯವಿದೆ. ಅದರಲ್ಲಿ ಎರಡು ಎತ್ತಿನ ಚಿತ್ರಗಳಿದ್ದು, ರೇಖಾಚಿತ್ರವಾಗಿವೆ. ಇವುಗಳನ್ನು ನೈಜ ಅಳತೆಯಲ್ಲಿ ರಚಿಸಲಾಗಿದೆ. ಎರಡು ಕೋಡು, ಕಾಲು, ಇಣಿ, ಬಾಲಗಳು ಸ್ಪಷ್ಟವಾಗಿವೆ. ಇದರಲ್ಲಿ ಹಿಂದಿನ ಎತ್ತು ಮಾತ್ರ, ಪೂರ್ಣ ಪ್ರಮಾಣದಲ್ಲಿ ಗೋಚರಿಸುತ್ತಿದ್ದು, ದೇಹ ಬಲಿಷವಿವಾಗಿದೆ. ಹಿಂದಿನ ಎತ್ತು ಪೂರ್ಣ ಪ್ರಮಾಣದಲ್ಲಿ ಗೋಚರಿಸುತ್ತಿದ್ದು, ದೇಹ ಬಲಿಷವಿವಾಗಿದೆ. ಹಿಂದಿನ ಎತ್ತಿನ ಚಿತ್ರದ ಮೇಲೆ ಮಳೆ ನೀರಿನ ಇಳಿಕೆ ಇಂದಾಗಿ ನಾಶಗೊಂಡಿದೆ.

ಅಂಜನ ಹಳ್ಳಿ

ಈ ಗ್ರಾಮವು ಗಂಗಾವತಿಯಿಂದ ಮುನಿರಾಬಾದ್‌ಗೆ ಹೋಗುವ ರಸ್ತೆಯಲ್ಲಿ ರಾಂಪುರ ಕ್ರಾಸ್‌ನಿಂದ ಮುಂದೆ ಅರ್ಧ ಕಿ.ಮೀ.ದೂರದಲ್ಲಿ ಈ ಗ್ರಾಮವಿದೆ. ಈ ಗ್ರಾಮದಲ್ಲಿ ಎರಡು ಶಿಲಾಶ್ರಯಗಳಲ್ಲಿ ವರ್ಣಚಿತ್ರಗಳು ಕಂಡುಬಂದಿವೆ. ಪಂಪಾಸರೋವರ ತಿರುವಿಗೆ ಸಿಗುವ ಅಂಜನಹಳ್ಳಿ ರಸ್ತೆ ಕ್ರಾಸ್ ಎದುರಿಗೆ ಬೆಟ್ಟವೊಂದು ಇದೆ. ಅದರ ಶಿಲಾಶ್ರಯಗಳಲ್ಲಿ ಚಿತ್ರಗಳಿವೆ. ಒಂದು ದೊಡ್ಡ ದೋಣಿಯ ತರಹದ ಚಿತ್ರವಿದ್ದು ಮೇಲ್ಭಾಗದಲ್ಲಿ ಒಂದು ಗೂಳಿ ಹಾಗೂ ಒಂದು ನವಿಲಿನ ಚಿತ್ರವಿದೆ. ಹಾಗೆ ಕೆಳಭಾಗದಲ್ಲಿ ಒಂದರ ಹಿಂದೆ ಒಂದರಂತೆ ಎರಡು ಜಿಂಕೆಗಳ ಚಿತ್ರಗಳಿವೆ. ದೋಣಿಯ ಒಳ ಭಾಗದಲ್ಲಿ ಜಿಂಕೆ, ನವಿಲು ಎದುರಾಗಿ ನಿಂತ ಜೋಡಿ ಎತ್ತುಗಳು ಚಿಕ್ಕದಾಗಿವೆ. ದೋಣಿಯ ಎರಡು ತುದಿಗಳು ಚೂಪಾಗಿವೆ. ಇನ್ನೊಂದು ಶಿಲಾಶ್ರಯದಲ್ಲಿ ಗೂಳಿ ಮತ್ತು ಆನೆಯ ಚಿತ್ರಗಳಿದ್ದು, ಕೆಂಪುವರ್ಣದಲ್ಲಿವೆ.

ಬೊಮ್ಮಸಾಗರ ತಾಂಡ

ಈ ಗ್ರಾಮವು ಹಂಪಸದುರ್ಗದಿಂದ ಮುಖ್ಯರಸ್ತೆಯಲ್ಲಿ ಸು ೫ ಕಿ.ಮೀ ದೂರದಲ್ಲಿದೆ. ಇಲ್ಲಿರುವ ಒಂದು ಶಿಲಾಶ್ರಯದಲ್ಲಿ ವರ್ಣಚಿತ್ರಗಳು ಕಂಡುಬಂದಿವೆ. ರಾಮದುರ್ಗ ರಸ್ತೆಯಲ್ಲಿ ತಾಂಡದಿಂದ ಸ್ವಲ್ಪದೂರದಲ್ಲಿ ರಸ್ತೆಯ ಎಡಬದಿಯಲ್ಲಿ ಈ ಶಿಲಾಶ್ರಯವಿದ್ದು, ಮೂರು ನವಿಲುಗಳ ಚಿತ್ರಗಳಿವೆ. ಇವು ನೈಜ ಅಳತೆಯಲ್ಲಿದ್ದು, ಕೆಂಪು ಬಣ್ಣದ ಹೊರರೇಖೆಗಳಿಂದ ಚಿತ್ರಿಸಲ್ಪಟ್ಟಿದ್ದು, ಇವು ಆಕರ್ಷಿತವಾಗಿವೆ. ಇವು ಒಂದರ ಹಿಂದೆ ಒಂದು ಇರುವುದರಿಂದ ಮೊದಲನೆಯದು ಮಾತ್ರ ಪೂರ್ಣ ಕಾಣುತ್ತದೆ. ಉಳಿದೆರಡು ಚಿತ್ರಗಳು ಮುಖ ಅರ್ಧ ದೇಹ ಮಾತ್ರ ಗೋಚರಿಸುತ್ತದೆ.

ತಾವರಗೇರಿ

ಇದು ಕುಷ್ಟಗಿಯಿಂದ ಸು.೨೫ ಕಿ.ಮೀ ದೂರದಲ್ಲಿದೆ. ಗಂಗಾವತಿಯಿಂದ ಕನಕಗಿರಿಯಮೂಲಕ ಈ ಗ್ರಾಮಕ್ಕೆ ಹೋಗಬಹುದು. ಇದು ಗಂಗಾವತಿಯಿಂದ ೬೫ ಕಿ.ಮೀ. ದೂರದಲ್ಲಿದೆ. ಇಲ್ಲಿನ ಬೆಟ್ಟಗಳ ಮೂರು ಶಿಲಾಶ್ರಯಗಳಲ್ಲಿ ವರ್ಣಚಿತ್ರಗಳು ಕಂಡುಬಂದಿವೆ.

ಇವು ಕ್ರಮವಾಗಿ ಗಾಣಗಿತ್ತಿ ಗುಡ್ಡದಲ್ಲಿ ಎರಡು ಹಾಗೂ ಅದರ ಪಕ್ಕದ ಗುಡ್ಡವಾದ ಮಾನಪ್ಪಯ್ಯ ಗುಡ್ಡದ ಸಂತೆಬಾರದೋಣಿ ಹಿಂದೆ ಇರುವ ಶಿಲಾಶ್ರಯದಲ್ಲಿ ವರ್ಣಚಿತ್ರಗಳಿದ್ದು, ಮೊದಲ ಕಲ್ಲಾಸರೆಯಲ್ಲಿ ಹನ್ನೊಂದು ಗೂಳಿಯಚಿತ್ರ ೯ ಕಾಲುಗಳುಳ್ಳ ಒಂದು ವಿಚಿತ್ರ ಪ್ರಾಣಿಯ ಚಿತ್ರವಿದೆ. ಎರಡನೆ ಕಲ್ಲಾಸರೆಯಲ್ಲಿ ರೇಖಾ ಚಿತ್ರಗಳಿದ್ದು, ಸಾಲುನಿಂತ ಗೂಳಿಗಳು, ಎದುರು ಬದುರಾಗ ನಿಂತಗೂಳಿಗಳು, ಚೇಳುಗಳಂತೆ ತೋರುವ ಚಿತ್ರಗಳು, ಜರಿಹುಳಗಳು, ಮೂರನೇ

ಕಲ್ಲಾಸರೆಯಲ್ಲಿ ಕೈ ಕೈ ಹಿಡಿದುಕೊಂಡ ಮನುಷ್ಯರ, ಗೂಳಿ ಹಾಗೂ ಜಿಂಕೆಯ ಚಿತ್ರಗಳನ್ನು ಗುರುತಿಸಬಹುದು. ಮಳೆ, ಗಾಳಿ, ಬಿಸಿಲಿನ ಸವಕಳಿಯಿಂದ ಚಿತ್ರಗಳು ಅಸ್ಪಷ್ಟವಾಗಿದ್ದು, ಇಲ್ಲಿ ರೇಖಾ ಚಿತ್ರಗಳು ಹಾಗೂ ಛಾಯಾ ಚಿತ್ರಗಳು ಕಂಡುಬಂದಿವೆ.

ಬಯಲು ಬಂಡೆಯ ಕುಟ್ಟು ಮತ್ತು ಗೀರು ಚಿತ್ರಗಳು

ಬಯಲು ಬಂಡೆಯ ಚಿತ್ರಗಳನ್ನು ಚೂಪಾದ ಉಳಿಯಂತಹ ಸಾಧನ, ಚೂಪಾದ ಶಿಲಾಯುಧದಿಂದ ಅಥವಾ ಲೋಹದ ಆಯುಧಗಳನ್ನು ಬಳಸಿಕೊಂಡು ನಿರಂತರವಾಗಿ ಕುಟ್ಟುವ ಮೂಲಕ ಅಥವಾ ಕೊರೆಯುವ ಮೂಲಕ ಬಯಲು ಬಂಡೆಗಳ ಮೇಲೆ ಸ್ವತಂತ್ರವಾಗಿ ಬಿದ್ದಿರುವ ದೊಡ್ಡ ದೊಡ್ಡ ಬಂಡೆಗಳ ಮೇಲೆ ಚಿತ್ರ ಬಿಡಿಸುತ್ತಿದ್ದರು. ಇವುಗಳನ್ನು ಬಯಲು ಬಂಡೆಯ ಕುಟ್ಟು ಮತ್ತು ಗೀರು ಚಿತ್ರಗಳೆನ್ನಬಹುದು. ಇವು ಪ್ರಮುಖವಾಗಿ ಕೊಪ್ಪಳ ಜಿಲ್ಲೆಯ ಹಲವಾರು ಕಡೆ ಶೋಧಿಸಲ್ಪಟ್ಟಿವೆ. ಅವು ಸಿದ್ದಿಕೇರಿ, ಹಿರೇಬೆನಕಲ್, ಮಲ್ಲಾಪುರ, ಅಗೋಲಿ, ಬಸಾಪಟ್ಟಣಗಳನ್ನು ಹೆಸರಿಸಬಹುದು.

ಸಿದ್ದಿಕೇರಿ

ಇದು ಗಂಗಾವತಿಯಿಂದ ಪಶ್ಚಿಮಕ್ಕೆ ಸುಮಾರು ೨ ಕಿ.ಮೀ ದೂರದಲ್ಲಿದೆ. ಇಲ್ಲಿಯ ಬೆಟ್ಟಗಳಲ್ಲಿ ಅನೇಕ ಗೀರು ಮತ್ತು ಕುಟ್ಟು ಚಿತ್ರಗಳು ಕಂಡುಬಂದಿವೆ.

ನೆಲೆ ಒಂದು

ಜಾನಮ್ಮನ ವಟ್ಲ ಎನ್ನುವ ಬೆಟ್ಟದಲ್ಲಿ ಒಂದು ನೈಸರ್ಗಿಕ ಚಿಕ್ಕ ಕೆರೆ ಇದೆ. ಇದರ ದಡದ ಬಂಡೆಯಲ್ಲಿ ಚಿಕ್ಕ ಚಿಕ್ಕ ಕುಳಿಗಳನ್ನು ಹಾಕಿ ಅದರಿಂದಲೇ ಎರಡು ಆಕೃತಿಗಳನ್ನು ಮೂಡಿಸಲಾಗಿದೆ. ಮೊದಲನೆಯದು ರೋಮನ್ ಮೂಲಾಕ್ಷರ ಖ ನಂತಿದೆ. ಇನ್ನೊಂದು ವೈದ್ಯಕೀಯ ಚಿಹ್ನೆಯಂತಿದೆ. ಈ ಎರಡು ಚಿತ್ರಗಳಿಂದ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಬಂಡೆಯ ಸಮನಾದ ಮುಖ ಭಾಗದಲ್ಲಿ ಒಟ್ಟು ೨೨ ಕುಳಿಗಳನ್ನು ಹಾಕಲಾಗಿದೆ. ಇವು ಕ್ರಮಬದ್ಧವಾಗಿರದೆ ಅಲ್ಲಲ್ಲೆ ಇವೆ. ಈ ಕುಳಿಗಳನ್ನು ಒಂದು ಉಳಿಯಾಕಾರದ ಆಯುಧದಿಂದ ಸತತವಾಗಿ ತಿರುಗಿ ಕೊರೆದ ತಂತ್ರದಲ್ಲಿ ಮಾಡಲಾಗಿದೆ.

ಹಿರೇಬೆಣಕಲ್

ಇಲ್ಲಿರುವ ಮೊರೆರಗುಡ್ಡದ ಶಿಲಾಸಮಾದಿಗಳ ನೆಲೆ ಅಗ್ನೇಯಬದಿಯ ಚಿತ್ರಿತ ಶಿಲಾಶ್ರಯದ ಪಶ್ಚಿಮ ಭಾಗಕ್ಕೆ ಗೀರು ಮತ್ತು ಕುಟ್ಟು ಚಿತ್ರಗಳು ಕಂಡುಬಂದಿವೆ.

ನೆಲೆ ಒಂದು

ಈ ಬೆಟ್ಟದ ಬಂಡೆಯೊಂದರ ಮೇಲೆ ಚಿಕ್ಕ ಚಿಕ್ಕ ಕುಳಿಗಳಿಂದ ಆಕೃತಿಯನ್ನು ರಚಿಸಲಾಗಿದೆ. ತಿರುವಿ ಮಾಡಿದ ತಂತ್ರದಲ್ಲಿ ಕುಳಿಗಳನ್ನು ನಿರ್ಮಿಸಲಾಗಿದೆ. ಅವು ಬಹಳ ಆಳವಾಗಿಲ್ಲ. ಒಂದು ವೃತ್ತ ಮತ್ತು ಅದರ ಮಧ್ಯಭಾಗದಿಂದ ಒಂದು ಉದ್ದರೇಖೆಯಲ್ಲಿ ಇದನ್ನು ರಚಿಸಲಾಗಿದೆ. ೧೪ ಕುಳಿಗಳ ಒಂದು ಸರಳ ರೇಖೆಯಿದ್ದು, ಅದರ ಕೆಳ ತುದಿಗೆ ಕೊನೆ ಕುಳಿಯ ಎರಡು ಬದಿಯಲ್ಲಿ ತಲಾ ನಾಲ್ಕು ಚುಕ್ಕೆಗಳನ್ನು ಅರೆವೃತ್ತಾಕಾರದಲ್ಲಿ ಕೊರೆಯಲಾಗಿದೆ. ಅವು ಕೊನೆಯಿಂದ ಅನೇಕ ಕುಳಿಯ ಬದಿಗೆ ಬಂದಿದ್ದು, ಅದರಿಂದ ಸರಳರೇಖೆಗೆ ಒಂದು ವೃತ್ತದ ರಚನೆಯಾಗಿದೆ. ವೃತ್ತದ ಬಲಬದಿಯ ಅರೆ ವೃತ್ತದಲ್ಲಿ ಐದು ಕುಳಿಗಳ ಸಾಲು ಇದ್ದು, ಅದರ ಎರಡು ಕುಳಿಗಳು ವೃತ್ತದ ಹೊರಗೆ ಇವೆ.

ಮಲ್ಲಾಪುರ

ಮಲ್ಲಾಪುರದ ವಾನಭದ್ರೇಶ್ವರ ಬೆಟ್ಟದ ದಕ್ಷಿಣ ತುದಿಯಲ್ಲಿ ಕಪ್ಪು ಕಲ್ಲುಗಳ ಶ್ರೇಣಿ ಇದ್ದು, ಅಲ್ಲಿಯ ಕಪ್ಪು ಕಲ್ಲುಗಳ ಬಂಡೆಗಳಲ್ಲಿ ಚಿತ್ರಗಳನ್ನು ಕೊರೆಯಲಾಗಿದೆ. ಈ ನೆಲೆಯಲ್ಲಿ ಐದು ಬಂಡೆಗಳ ಮೇಲೆ ಕೊರೆದ ಮತ್ತು ಕುಟ್ಟು ಚಿತ್ರಗಳು ಕಂಡುಬಂದಿವೆ. ಎತ್ತಿನ ಚಿತ್ರ, ಎದುರು ಬದುರಾಗಿ ನಿಂತ ಎತ್ತಿನ ಚಿತ್ರ, ಮೂರು ಪ್ರಾಣಿಗಳು ಎದುರು ಬದುರಾಗಿದ್ದು ಎರಡು ಎತ್ತುಗಳು ಹಾಗೂ ಒಂದು ಜಿಂಕೆಯ ಚಿತ್ರವಿದೆ. ಕುದುರೆಯ ಮೇಲೆ ಮನುಷ್ಯ ನಿಂತ ಚಿತ್ರ, ಬಲಿಷ್ಠ ಗೂಳಿಯ ಚಿತ್ರ, ವೃತ್ತದ ಚಿತ್ರ, ಒಂದು ಪ್ರಾಣಿಯ ಮೇಲೆ ಕುಳಿತಿರುವ ಮನುಷ್ಯನ ಚಿತ್ರ ಒಂದರ ಹಿಂದೆ ಒಂದು ಇರುವಂತಹ ಗೂಳಿ ಚಿತ್ರ, ಚಿಕ್ಕ ಕುಳಿ ಚಿತ್ರಗಳು ಇಲ್ಲಿ ಕಂಡುಬಂದಿವೆ. ಹಾಗೆ ಕಪ್ಪು ಗುಡ್ಡದ ಉತ್ತರ ಬದಿಯ ಕಪ್ಪು ಕಲ್ಲಿನ ಶ್ರೇಣಿಯಲ್ಲಿ ಅನೇಕ ಬಂಡೆಗಳ ಮೇಲೆ ಕುಟ್ಟಿದ ಮತ್ತು ಕೊರೆದ ಚಿತ್ರಗಳಿವೆ. ಭಿನ್ನವಾದ ಎತ್ತಿನ ಚಿತ್ರ, ಒಂದರ ಹಿಂದೆ ಒಂದು ಇರುವಂತಹ ಮೂರು ಸಾಲು ಎತ್ತಿನ ಚಿತ್ರಗಳು, ಕೈಯಲ್ಲಿ ಕೋಲು ಹಿಡಿದು ಎತ್ತಿನ ಮೇಲೆ ನಿಂತಿರುವ ಸವಾರನ ಚಿತ್ರ, ಒಂದರಂತೆ ಮೂರು ವೃತ್ತಗಳ ಚಿತ್ರಗಳು, ದನದ ಮೇಲೆ ವ್ಯಕ್ತಿಯೊಬ್ಬ ಕುಳಿತು ಕೈಯಿಂದ ದನದ ಭಾಗವನ್ನು ಹಿಡಿದಂತ ಚಿತ್ರ, ತ್ರಿಕೋನಾಕಾರದ ಮುಖವಿರುವ ಎತ್ತಿನ ಚಿತ್ರ, ಎದುರಾಗಿ ನಿಂತ ಎತ್ತಿನ ಚಿತ್ರ, ತ್ರಿಶೂಲ ಹಿಡಿದು ನಿಂತಿರುವ ವ್ಯಕ್ತಿ, ನಾಲ್ಕು ಎತ್ತು ಮತ್ತು ಅಶ್ವಸವಾರರ ಚಿತ್ರ, ತ್ರಿಶೂಲದ ಮೇಲ್ಭಾಗದ ಎಡ ಹಾಗೂ ಬಲಭಾಗದಲ್ಲಿ ಚಂದ್ರ ಹಾಗೂ ಸೂರ್ಯರ ಚಿತ್ರವಿದೆ. ಅಲ್ಲಲ್ಲಿ ಎತ್ತಿನ ಚಿತ್ರಗಳಿದ್ದು, ಕುಟ್ಟಿದ ಚಿತ್ರಗಳಾಗಿವೆ.

ಅಗೋಲಿ

ಗಂಗಾವತಿಯಿಂದ ದಾಸನುಳ ತಿರುವಿನಿಂದ ವಾಯುವ್ಯಕ್ಕೆ ಸುಮಾರು ೧೦

ಕಿ.ಮೀ.ದೂರದಲ್ಲಿ ಈ ಗ್ರಾಮವಿದೆ. ಇಲ್ಲಿ ವರ್ಣಚಿತ್ರ ನೆಲೆಗಳಲ್ಲೇ ಕೊರೆದ ಚಿತ್ರಗಳು ಇವೆ. ಮೊರೆರ ಗುಡ್ಡದಲ್ಲಿರುವ ನೈಸರ್ಗಿಕ ಬಂಡೆಯ ಮೇಲೆ ಕುಳಿ ಆಕೃತಿ ಇವೆ. ಚಿಕ್ಕ ಚಿಕ್ಕ ಕುಳಿಗಳಿಂದಲೇ ಹಡಗಿನ ಆಕಾರದಲ್ಲಿ ಚಿತ್ರವನ್ನು ಮೂಡಿಸಲಾಗಿದೆ. ಬೃಹತ್ ಶಿಲಾಯುಗದ ಶಿಲಾಸಮಾಧಿಗಳಿರುವ ಮೂರನೇಯ ನೆಲೆಯಲ್ಲಿ ಈ ಚಿತ್ರಗಳಿವೆ. ಬಂಡೆಯ ಮೇಲೆ ಪರಸ್ಪರ ಎದುರಾಗಿ ನಿಂತ ಎರಡು ಎತ್ತಿನ ಚಿತ್ರಗಳಿವೆ. ಹಾಗೂ ಇನ್ನೊಂದು ಬಂಡೆಯಲ್ಲಿ ಪಾದದ ಚಿತ್ರವಿದ್ದೂ, ಎರಡು ಪಾದಗಳ ಮಧ್ಯದಲ್ಲಿ ಒಂದೇ ರೇಖೆ ಇದೆ. ಈ ಪಾದಗಳಿಗೆ ಬೆರಳುಗಳಿಲ್ಲ ಪಾದಗಳ ಮೇಲೆ ದೊಡ್ಡದಾದ ಕುಳಿಗಳ ಅಸ್ಪಷ್ಟ ಆಕೃತಿ ಇದೆ.

ಬಸಾಪಟ್ಟಣ

ಗಂಗಾವತಿಯಿಂದ ಕೊಪ್ಪಳಗೆ ಹೋಗುವ ರಸ್ತೆಯಲ್ಲಿ ತುಂಗಭದ್ರಾ ನದಿಯ ಎಡದಂಡೆ ಕಾಲುವೆಯ ಬದಿಯ ಅನ್ಸಾರಿ ಫಾರಂನ ಹಿಂದಿನ ಕೆರೆಯಲ್ಲಿ ಒಂದು ನೆಲೆ ಇದೆ. ಅಲ್ಲಿ ಬೇರೆ ಬೇರೆ ಬಂಡೆಗಳ ಮೇಲೆ ಕೊರೆದ ಚಿತ್ರಗಳಿವೆ. ಎತ್ತಿನ ಮೇಲೆ ವ್ಯಕ್ತಿಯೊಬ್ಬ ಕುಳಿತು ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿದ್ದ ಚಿತ್ರ ಇನ್ನೊಂದು ಬಂಡೆಯ ಮೇಲಿನ ಚಿತ್ರದಲ್ಲಿ ಎತ್ತಿನ ಚಿತ್ರವಿದ್ದು, ಕೋಡನ್ನು ದಪ್ಪವಾಗಿ ತೋರಿಸಿದ್ದು, ಮುಂದಕ್ಕೆ ಬಾಗಿದೆ. ಇಣಿ ತುಂಬಾ ದೊಡ್ಡದಿದ್ದು, ಹಿಂದಕ್ಕೆ ಭಾಗಿದೆ. ಇನ್ನೂ ನಾಲ್ಕು ಎತ್ತಿನ ಚಿತ್ರಗಳಿದ್ದು, ಮಧ್ಯ ಒಬ್ಬ ಮನುಷ್ಯನ ಚಿತ್ರವಿದೆ. ಎರಡು ಕೈಗಳನ್ನು ಮೇಲಕ್ಕೆತ್ತಿ ಕುಣಿಯುತ್ತಿದ್ದಂತೆ ತೋರುತ್ತದೆ. ಹಾಗೂ ಆ ನಾಲ್ಕು ಎತ್ತಿನ ಚಿತ್ರಗಳು ಸಹಜವಾಗಿವೆ. ಇಲ್ಲಿ ಎತ್ತಿನ ಆಕಾರದಲ್ಲಿ ಚಿಕ್ಕ ಚಿಕ್ಕ ಕುಳಿಗಳನ್ನು ಹಾಕಿಕೊಂಡು ನಂತರ ಅವುಗಳನ್ನು ಒಂದಕ್ಕೊಂದು ಸೇರಿಸಿದಂತೆ ಗೆರೆ ಹಾಕಲಾಗಿದೆ. ಇಡೀ ಕೊರೆದ ಚಿತ್ರಗಳಲ್ಲಿ ಕುಳಿಗಳು ಕಾಣಿಸುತ್ತವೆ. ಇನ್ನೊಂದು ಬಂಡೆಯಲ್ಲಿ ಮನುಷ್ಯನ ಚಿತ್ರವಿದ್ದು, ಬಲಗೈಯಲ್ಲಿ ಗುಂಡಾದ ವಸ್ತುವನ್ನು ಹಾಗೂ ಎಡಗೈಯಲ್ಲಿ ಖಡ್ಗವನ್ನು ಅಥವಾ ಕೋಲನ್ನು ಹಿಡಿದಂತೆ ಚಿತ್ರವಿದೆ. ಇದು ಏಕ ರೇಖೆಯುಳ್ಳ ಚಿತ್ರವಾಗಿದೆ.

ಒಟ್ಟಾರೆ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳನ್ನು ಗಮನಿಸಿದಾಗ ಕೆಲವು ಮಹತ್ವದ ಅಂಶಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಕರ್ನಾಟಕದಲ್ಲಿ ಅತೀ ಹೆಚ್ಚಿನ ಆದಿಮಾನವ ಚಿತ್ರಕಲೆಯ ನೆಲೆಗಳು ಕಂಡು ಬಂದಿವೆ. ಅಲ್ಲದೆ ಭಾರತದಲ್ಲಿ ವಿಶಿಷ್ಟವಾಗಿರುವ ಬಾಲವನ್ನು ಹೊಂದಿದ ಮನುಷ್ಯರ ಚಿತ್ರಗಳು ಈ ಪ್ರದೇಶದಲ್ಲಿರುವುದು ಮಾನವನ ವೈಜ್ಞಾನಿಕ ಬೆಳವಣಿಗೆಯ ವಿಕಾಸದ ಹಂತಗಳನ್ನು ಸೂಚಿಸುತ್ತದೆ. ಇಲ್ಲಿನ ಚಿತ್ರಗಳು ಎರಡು ರೀತಿಯಲ್ಲಿ ಕಂಡು ಬಂದಿವೆ. ಗುಹೆಯ ಒಳಭಾಗದಲ್ಲಿರುವ ವರ್ಣ ಚಿತ್ರಗಳು ಮತ್ತು ಬಯಲು ಬಂಡೆಗಳ ಮೇಲೆ ರಚನೆಯಾಗಿರುವ ವರ್ಣರಹಿತ ಚಿತ್ರಗಳು ಈ ಪ್ರದೇಶದಲ್ಲಿವೆ. ಈ ಚಿತ್ರಗಳ ಅಧ್ಯಯನದಿಂದ ಶಿಲಾಯುಗ ಕಾಲದಲ್ಲಿ

ಆದಿ ಮಾನವ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ವಾಸಿಸಿದ್ದನು ಅವನ ವಾಸದ ನೆಲೆಯ ಸ್ವರೂಪಗಳೇನು ಎಂಬುದನ್ನು ಕಂಡುಕೊಳ್ಳಬಹುದಾಗಿದೆ. ಹಿರೆಬೆನಕಲ್ ಬೆಟ್ಟದ ಮೇಲಿರುವ ಚಿಕ್ಕದಾದ ಕಲ್ಲಿನ ಮನೆಗಳು, ಅದೇ ಬೆಟ್ಟದಲ್ಲಿರುವ ಆದಿ ಮಾನವರ ಚಿತ್ರಗಳು ಆ ಕಾಲದ ಅವರ ಜೀವನವಿಧಾನ ಮತ್ತು ಸಾಂಸ್ಕೃತಿಕ ಬದುಕನ್ನು ತಿಳಿಸಿಕೊಡುತ್ತವೆ. ಇದಲ್ಲದೆ ಕೊಪ್ಪಳ ಗುಡ್ಡದಲ್ಲಿರುವ ಆದಿ ಮಾನವ ಚಿತ್ರಗಳು ಮತ್ತು ಇದೆ ಗುಡ್ಡದಲ್ಲಿರುವ ಮೌರ್ಯರ ಕಾಲದ ಅಶೋಕನ ಶಿಲಾ ಶಾಸನಗಳು ಈ ಜಿಲ್ಲೆಯ ಮಾನವನು ಆದಿಮಾನವ ಹಂತದಿಂದ ನಾಗರೀಕ ಬದುಕಿಗೆ ರೂಪಾಂತರಗೊಳ್ಳುತ್ತಿರುವ ವಿಷಯಗಳನ್ನು ತಿಳಿಸಿಕೊಡುತ್ತವೆ. ಇದಲ್ಲದೆ ಆನೆಗುಂದಿಯಲ್ಲಿರುವ ಚಿತ್ರಗಳು ಮತ್ತೊಂದು ರೀತಿಯ ವಿಶೇಷತೆಯನ್ನು ಹೊಂದಿದೆ.

ಇಲ್ಲಿನ ಚಿತ್ರಗಳಲ್ಲಿ ಕೆಲವು ಕಡೆಗೆ ದೋಣಿಯ ಚಿತ್ರಗಳು ಕಂಡುಬಂದಿರುವುದು ಮತ್ತು ಮೀನು, ಮೊಸಳೆಯ ಚಿತ್ರಗಳು ಕಂಡುಬಂದಿದ್ದು, ಅವರ ಬದುಕಿನ ಮೇಲೆ ಬೆಳಕು ಚಲ್ಲುತ್ತವೆ. ಈ ಪ್ರದೇಶದಲ್ಲಿ ಸಮೀಪವೇ ತುಂಗಭದ್ರ ನದಿ ಹರಿದಿದ್ದು, ಅವರು ದೋಣಿಯನ್ನು ಬಳಸಿರುವ ಸಾಧ್ಯತೆಯನ್ನು ಕಂಡುಕೊಳ್ಳಬಹುದಾಗಿದೆ. ಅಲ್ಲದೆ ಮೀನು ಮೊಸಳೆಯಂತಹ ಚಿತ್ರಗಳು ಅವರ ಆಹಾರ ಪದ್ದತಿಯ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. ಇದೇ ಪ್ರದೇಶದ ಕೆಲವು ಶಿಲಾಶ್ರಯಗಳಲ್ಲಿ ಕಂಡುಬಂದಿರುವ ಮನುಷ್ಯ ಚಿತ್ರಗಳು ಕುತೂಹಲಕಾರಿಯಾಗಿವೆ. ಮೈತುಂಬ ರೇಖಾ ವಿನ್ಯಾಸಗಳನ್ನು ಹೊಂದಿರುವ ಈ ಚಿತ್ರಗಳು ಆ ಕಾಲದ ಮಾಟ, ಮಂತ್ರ, ವಶೀಕರಣ, ತಾಂತ್ರಿಕತೆ ಮುಂತಾದ ಸಂಗತಿಗಳ ಬಗ್ಗೆ ಬೆಳಕು ಚಲ್ಲುತ್ತವೆ. ಹೀಗೆ ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಗಳು ಇನ್ನೂ ಹೆಚ್ಚಿನ ಅಧ್ಯಯನದ ಅವಶ್ಯಕತೆಯನ್ನು ಬಿಂಬಿಸುತ್ತವೆ.

❑❑❑

ಹಿರೇಬೆನಕಲ್‌ನ ಶಿಲಾಶ್ರಯದ ಚಿತ್ರಗಳು



ಕೈಕೈ ಹಿಡಿದು ಸಾಲಾಗಿ ನಿಂತ ಮನುಷ್ಯರ ಚಿತ್ರ



ಅಶ್ವ ಹಾಗೂ ಅಶ್ವಸವಾರರ ಚಿತ್ರ



ಸಾಮೂಹಿಕವಾಗಿ ಬೇಟೆಯಾಡುತ್ತಿರುವ ಚಿತ್ರ

ಹಿರೇಬೆನಕಲ್‌ನ ಶಿಲಾಶ್ರಯದ ಚಿತ್ರಗಳು



ಸಾಲಾಗಿ ನಿಂತ ಮನುಷ್ಯರ ಹಾಗೂ ಅಶ್ವಸವಾರರ ಚಿತ್ರ



ಕೈಯಲ್ಲಿ ಆಯುದ ಹಿಡಿದುಕೊಂಡಿರುವ ಅಶ್ವಸವಾರರ ಚಿತ್ರ



ಬೇಟೆಯಾಡುತ್ತಿರುವ ಚಿತ್ರ

ಚಿಕ್ಕರಾಂಪುರ ಶಿಲಾಶ್ರಯದ ಚಿತ್ರಗಳು



ಹಲವಾರು ಮಂಡಲ ಹಾಗೂ ಮನುಷ್ಯರ ಚಿತ್ರ



ಜಿಂಕೆ, ನಾಯಿ ಹಾಗೂ ಗುಳಿಯ ಚಿತ್ರ




ಪ್ರಾಣಿಗಳ ಸಮೂಹದ ಚಿತ್ರ

ಚಿಕ್ಕರಾಂಪುರ ಶಿಲಾಶ್ರಯದ ಚಿತ್ರಗಳು



ಕೆಳಮುಖಮಾಡಿ ಚಿತ್ರಿಸಿರುವ ಮನುಷ್ಯನ ಚಿತ್ರ




ಪಕ್ಷಿಗಳ ಹಾಗೂ ಪ್ರಾಣಿಗಳ ಸಮೂಹ ಚಿತ್ರ



ಕೈಕೈ ಹಿಡಿದು ಸಾಲಾಗಿ ನಿಂತ ಮನುಷ್ಯರ ಚಿತ್ರ

ಚಿಕ್ಕರಾಂಪುರ ಶಿಲಾಶ್ರಯದ ಚಿತ್ರಗಳು



ಬೇಟೆಯಾಡುತ್ತಿರುವ ಚಿತ್ರ



ಜಿಂಕೆಗಳ, ಗೂಳಿಗಳ ಹಾಗೂ ಮನುಷ್ಯರ ಸಮೂಹ ಚಿತ್ರ



ಕೈಕೈ ಹಿಡಿದು ಸಾಲಾಗಿ ನಿಂತ ಮನುಷ್ಯರ ಚಿತ್ರ


ಕೊಪ್ಪಳದ ಶಿಲಾಶ್ರಯದ ಚಿತ್ರಗಳು



ಕುದುರೆ, ಜಿಂಕೆ, ಗೂಳಿಗಳಿರುವ ಚಿತ್ರ



ಜಿಂಕೆಗಳ ಸಮೂಹ ಚಿತ್ರ




ಹುಲಿಯ ಚಿತ್ರ

ಗಡ್ಡಿಯ ಶಿಲಾಶ್ರಯದ ಚಿತ್ರಗಳು




ಮನುಷ್ಯರ ಚಿತ್ರ



ಕೈಕೈಹಿಡಿದು ಸಾಲಾಗಿ ನಿಂತಿರುವ ಮನುಷ್ಯಾಕೃತಿಗಳು



ಗೂಳಿ ಹಾಗೂ ಜಿಂಕೆಗಳ ಚಿತ್ರ



ನಗ್ನ ಮನುಷ್ಯರ ಚಿತ್ರಗಳು (ರಾಮದುರ್ಗದ)



ಪ್ರಾಣಿಗಳ ಚಿತ್ರ (ಆನೆಗುಂದಿ)



ಬಾಲವಿರುವ ಮನುಷ್ಯನ ಚಿತ್ರ (ಆನೆಗುಂದಿ)

ಹಂಪಸದುರ್ಗದ ಚಿತ್ರಗಳು



ಪ್ರಾಣಿಗಳ ಹಾಗೂ ಮನುಷ್ಯರ ರೇಖಾ ಚಿತ್ರಗಳು




ಪ್ರಾಣಿಗಳ ಚಿತ್ರ



ಗೂಳಿ, ಪಕ್ಷಿ ಹಾಗೂ ಮನುಷ್ಯರ ಚಿತ್ರ


ಕಡೆಬಾಗಿಲಿನ ಚಿತ್ರಗಳು



ಕೋಣದ ಚಿತ್ರ



ಪ್ರಾಣಿಗಳ ಚಿತ್ರ




ಪ್ರಾಣಿಗಳು, ಅಶ್ವಸವಾರರು ಮತ್ತು ಮನುಷ್ಯಾಕೃತಿಗಳು

ಆಗೋಲಿಯ ಚಿತ್ರಗಳು



ಮಂಡಲದ ಚಿತ್ರ




ಹೂವಿನ ಗೀರು ಚಿತ್ರ



ಆನೆಯ ಗೀರು ಚಿತ್ರ

ಮಲ್ಲಾಪುರದ ಚಿತ್ರಗಳು



ಜಿಂಕೆಯ ಚಿತ್ರ






ನಗ್ನ ಮನುಷ್ಯರ ಚಿತ್ರ

ಕೊಪ್ಪಳ ಜಿಲ್ಲೆಯ ಚಿತ್ರಕಲೆ


ತಿರುಮಲಾಪುರದ ಚಿತ್ರಗಳು



ಪ್ರಾಣಿಗಳ ಹಾಗೂ ಮನುಷ್ಯರ ಚಿತ್ರಗಳು



ಮನುಷ್ಯರು ಮತ್ತು ವಿವಿಧ ಬಗೆಯ ಚಿತ್ರಗಳು



ಮನುಷ್ಯರ ಮತ್ತು ಪ್ರಾಣಿಗಳ ಚಿತ್ರ

ತಾವರಗೆರೆಯ ಚಿತ್ರಗಳು



ಸಾಲು ಜಿಂಕೆಗಳ ಚಿತ್ರ




ಚೇಳು, ನವಿಲು ಹಾಗೂ ಜಿಂಕೆಯ ಚಿತ್ರ




ಗೂಳಿಯ ಸಮೂಹದ ಚಿತ್ರ



ಗೂಳಿಗಳ ಚಿತ್ರ (ಹೊಸ ಬಂಡಿಹರ್ಲಾಪುರ)



ಗೂಳಿಯ ಗೀರು ಚಿತ್ರ (ಗಾಣಗಿತ್ತಿಯ ಗುಡ್ಡ)



ಗೂಳಿಯ ಗೀರು ಚಿತ್ರ (ಗಾಣಗಿತ್ತಿಯ ಗುಡ್ಡ)

ಅಧ್ಯಾಯ - ನಾಲ್ಕು

ಕೊಪ್ಪಳ ಜಿಲ್ಲೆಯ ಜನಪದ ಚಿತ್ರಕಲೆ

ಜನಪದ ಕಲೆಯನ್ನು ಸಾಮಾನ್ಯರಿಂದ ಬಂದ ಕಲೆ ಎಂದೇ ಹೇಳಬಹುದಾಗಿದೆ. ಗ್ರಾಮೀಣರು ಅಥವಾ ಹಳ್ಳಿಗಾಡಿನ ಜನರು ತಮಗೆ ಅಂದ ಚಂದ ಕಂಡಂತೆ ರಚಿಸಿಕೊಂಡ ಚಿತ್ರಕಲೆ ಜನಪದ ಚಿತ್ರಕಲೆ ಎನಿಸಿಕೊಳ್ಳುತ್ತದೆ. ಇದನ್ನು ದೇಶಿ ಚಿತ್ರಕಲೆ ಎಂದೂ ಸಹ ಕರೆಯಬಹುದಾಗಿದೆ. ದೇಶಿ ಅಂದರೆ ಗ್ರಾಮೀಣ ಜನರಿಗೆ ಬಳಸುವ ಶಬ್ಧ, ದೇಶಿ ಚಿತ್ರಕಲೆಗೆ ಗ್ರಾಮೀಣ ಚಿತ್ರಕಲೆ ಅಥವಾ ಜನಪದ ಚಿತ್ರಕಲೆ ಎಂತಲೂ ಬಳಸಬಹುದಾಗಿದೆ.

ಜನಪದ ಚಿತ್ರಕಲೆಯು ಕೆಲಸಮಾಡುವ ಸಂದರ್ಭದಲ್ಲಿ ದಣಿವು ಅಥವಾ ಬೇಸರ ಕಳೆಯಲು ಮನರಂಜನೆಗಾಗಿ ಹುಟ್ಟಿಕೊಂಡಿರುವ ಕಲೆ. ಸಾಮಾನ್ಯರ, ಅಧ್ಯಯನದ ಯಾವ ಅರಿವೂ ಇಲ್ಲದೆ ತಾವು ಪಡೆದ ಅನುಭವಗಳಿಗೆ ಸಹಜವಾದ ಮೂರ್ತರೂಪ ನೀಡಿದರೆ ಅದೇ ಜನಪದ ಚಿತ್ರಕಲೆ ಎನಿಸಿಕೊಳ್ಳುತ್ತದೆ. ಇದು ಅನುಭವಕ್ಕೆ ಸೀಮಿತವಾಗಿ ಅಶಾಶ್ವತವಾಗಿ ಬೆಳೆದು ಬಂದಿರುವುದು. ಇದು ಶಾಶ್ವತವಾಗಿರುವುದಿಲ್ಲ. ಜನಪದ ಕಲೆಯು ಜನರ ನಿತ್ಯ ಜೀವನದಲ್ಲಿ ನಡೆಯುತ್ತಲೇ ಇರುವ ಹಲವಾರು ಅಂಶಗಳನ್ನು ಕಾಣಬಹುದು. ಜನಪದ ಚಿತ್ರಕಲೆಯಲ್ಲಿ ರೇಖೆಗಳು ಮುಖ್ಯ ಪಾತ್ರವಹಿಸುತ್ತವೆ. ಅಲಂಕಾರದಿಂದ ಕೂಡಿರುವ ಚಿತ್ರಗಳು, ದೈನಂದಿನ ಬದುಕಿನ ವಿವರಗಳು ಚಿತ್ರರಚನೆಯ ಮೂಲ ವಿಷಯಗಳಾಗಿವೆ. ಜನಪದ ಚಿತ್ರಕಲೆಯ ವೈಶಿಷ್ಟ್ಯಗಳಲ್ಲಿ ವರ್ಣಗಾರಿಕೆಯೂ ಅತ್ಯಂತ ಮಹತ್ವದಾಗಿದೆ. ಶ್ರೀಮಂತವಾದ, ಆಕರ್ಷಕವಾದ ವರ್ಣಗಳು ಜನಪದರಿಗೆ ಹೆಚ್ಚು ಪ್ರಿಯವಾಗಿರುತ್ತವೆ. ಪ್ರಾಥಮಿಕ ವರ್ಣಗಳೆಂದು ಹೆಸರಾದ ನೀಲಿ, ಕೆಂಪು, ಹಳದಿ ವರ್ಣವಲ್ಲದೆ ಕಪ್ಪು, ಬಿಳಿ ವರ್ಣಗಳ ಬಳಕೆಯೂ ಅಧಿಕವಾಗಿರುತ್ತದೆ. ಒಟ್ಟಾರೆಯಾಗಿ ಕಣ್ಣಿಗೆ ಪ್ರಖರವಾಗಿ ಕಾಣುವ ಬಣ್ಣಗಳ ವರ್ಣಗಾರಿಕೆ ಜನಪದ ಚಿತ್ರಗಳಲ್ಲಿ ಹೆಚ್ಚು ಕಂಡುಬಂದಿವೆ.

ಪಾರದರ್ಶಕವಾದ ವರ್ಣಗಳನ್ನು ವಿಶೇಷ ಆಕರ್ಷಕವಾಗಿ ತೊಗಲುಗೊಂಬೆ ಚಿತ್ರಗಳಿಗೆ ಲೇಪನಗೊಂಡಿರುವುದನ್ನು ಸಹಿತ ಕಾಣಬಹುದಾಗಿದೆ.

ಜನಪದರು ತಮ್ಮ ಸುತ್ತಮುತ್ತಲಿರುವ ನೈಸರ್ಗಿಕ ವಸ್ತುಗಳಾದ ಕಲ್ಲು, ಮಣ್ಣು, ಹೂ, ಎಲೆ ಮುಂತಾದ ವಸ್ತುಗಳಿಂದ ಬಣ್ಣ ತಯಾರಿಸಿಕೊಳ್ಳುತ್ತಾರೆ. ಅಲ್ಲದೆ ಹಬ್ಬ, ಉತ್ಸವ, ಜಾತ್ರೆ ಮುಂತಾದ ಸಂದರ್ಭಗಳಿಗೆ ತಕ್ಕಂತೆ ಚಿತ್ರ ಬಿಡಿಸುವುದು ಕಂಡುಬರುತ್ತದೆ. ಹೀಗೆ ಜನಪದ ಚಿತ್ರಕಲೆ ವಸ್ತು, ರೇಖಾವಿನ್ಯಾಸ, ಬಣ್ಣಗಾರಿಕೆ, ಬಳಕೆಯ ಸಾಮಗ್ರಿ ಮೊದಲಾದವುಗಳಲ್ಲಿ ಶುದ್ಧ ಜನಪದೀಯ ಅಂಶಗಳನ್ನು ಪಡೆದುಕೊಂಡಿರುತ್ತದೆ. ಜನಪದ ಚಿತ್ರಕಲೆ ಪ್ರಾಗೈತಿಹಾಸಿಕ ಕಾಲದಿಂದ ಸೃಷ್ಟಿಯಾಗುತ್ತ ಬಂದಿರುವುದನ್ನು ತಿಳಿದುಕೊಳ್ಳಬಹುದಾಗಿದೆ. ಅತ್ಯಂತ ಪ್ರಾಚೀನ ಕಾಲದ ಮಾನವನೂ ಬೇಟೆ ಸಿಕ್ಕಾಗಲೋ, ಒಂದು ಗೆಲವು ಸಾಧಿಸಿದಾಗಲೋ ತನ್ನ ಸಂತೋಷಕ್ಕಾಗಿ ಕುಣಿದು ಕುಪ್ಪಳಿಸಿ ಕೇಕೆ ಹಾಕುತ್ತಿದ್ದಿರಬೇಕು. ಅದರ ಭಾವಗಳನ್ನು, ನೆನಪುಗಳನ್ನು ಚಿತ್ರಿಸಿಕೊಂಡಿರಬೇಕು ಇವೆಲ್ಲ ಜನಪದ ಕಲೆಗೆ ಮೂಲ ಎನ್ನಬಹುದಾಗಿದೆ.

ಜನಪದ ಚಿತ್ರಕಲೆಯು ಪ್ರಸ್ತುತ ಇದೇ ವರ್ಷದಲ್ಲಿ ಹುಟ್ಟಿ ಬಂದಿತು ಎಂದು ಹೇಳಲಾಗುವುದಿಲ್ಲ. ಆದಿಮಾನವನ ಕಾಲದಿಂದಲೂ ಹುಟ್ಟಿ ಬೆಳೆದು ಬಂದ ಕಲೆಯು ಮುಂದೆ ಬದಲಾಗುತ್ತ ಜನಪದ ಕಲೆ, ಶಿಷ್ಟಪದ ಕಲೆ, ನವ್ಯಕಲೆ ಹೀಗೆ ಹಂತ ಹಂತವಾಗಿ ಬೆಳೆದುಬಂದಿರುವುದನ್ನು ನಾವು ಕಾಣುತ್ತೇವೆ. ಮಾನವನ ನಿತ್ಯ ಬದುಕಿನಲ್ಲಿ ಸುಖ ದುಃಖಗಳನ್ನು ಸಮನಾಗಿಸಿಕೊಳ್ಳಲು ಕಲೆಯ ಮಾಧ್ಯಮವನ್ನು ಹುಡುಕಿಕೊಂಡ. ತನಗುಂಟಾದ ಸಂತೋಷದ ಕುರುಹಾಗಿ ಮಾನವ ಹಲವು ಬಗೆಯಲ್ಲಿ ಹಾವ ಭಾವಗಳನ್ನು ವ್ಯಕ್ತಪಡಿಸುತ್ತಾನೆ. ಸುಗ್ಗಿಯ ಕಾಲದಲ್ಲಿ ಸಂತೋಷದಿಂದ ಗುಂಪುಗುಂಪಾಗಿ ಕುಣಿಯುವದು, ಹಾಡುವುದು, ಒಕ್ಕುವಾಗ, ಕುಟ್ಟುವಾಗ, ಬೀಸುವಾಗ, ಲೀಲಾಜಾಲವಾಗಿ ಹಾಡುವುದು. ಗೋಡೆಗಳ ಮೇಲೆ, ನೆಲದ ಮೇಲೆ ಸಂತೋಷದಿಂದ ಚಿತ್ರಗಳನ್ನು ಬಿಡಿಸುವುದು ಜನಪದ ಕಲೆ ಎನ್ನಬಹುದು. ಇವುಗಳಿಗೆ ತಾಳ ಮಾನಗಳಿಲ್ಲದೆ ಬಿಡಿಸುವಂತಹ ಚಿತ್ರಗಳಾಗಿರುತ್ತವೆ.

ಪ್ರಸ್ತುತ ಕೊಪ್ಪಳ ಜಿಲ್ಲೆಯಲ್ಲಿ ಇಂತಹ ಹಲವಾರು ಜಪದ ಚಿತ್ರಕಲಾ ಪ್ರಕಾರಗಳು ಕಂಡುಬಂದಿರುತ್ತವೆ. ಅವುಗಳಲ್ಲಿ ಕಿನ್ನಾಳ ಕಲೆಯು ಮುಖ್ಯವಾಗಿರುವಂತಹದು. ಇನ್ನುಳಿದವುಗಳೆಂದರೆ ಹಚ್ಚೆ ಚಿತ್ರಕಲೆ, ಶೀಗಿ ಚಿತ್ರಕಲೆ, ರಂಗೋಲಿ ಕಲೆ, ತೊಗಲುಗೊಂಬೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಮದರಂಗಿ ಕಲೆ, ಕಸೂತಿ ಕಲೆ, ಕೌದಿಕಲೆ ಇನ್ನೂ ಹಲವಾರು ಕಲೆಗಳು ಇಲ್ಲಿ ಕಂಡುಬಂದಿವೆ. ಇವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

ಕಿನ್ನಾಳ ಕಲೆ

ಹೈದರಾಬಾದ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ಕೊಪ್ಪಳವು ಇತಿಹಾಸ ಪ್ರಸಿದ್ಧವಾಗಿದೆ. ಕೊಪ್ಪಳದಿಂದ ಹನ್ನೊಂದು ಕಿಲೋಮೀಟರ್ ದೂರದಲ್ಲಿರುವ ಕಿನ್ನಾಳವು ಒಂದು ಚಿಕ್ಕ ಗ್ರಾಮ. ಕಿನ್ನಾಳವನ್ನು ವಿಜಯನಗರ ಕಾಲದಲ್ಲಿ 'ಕಿನ್ನರಿಪುರ' ಎಂದು ಕರೆಯಲಾಗುತ್ತಿತ್ತು. ಅಂದಿನಿಂದ ಇಂದಿನವರೆಗೆ ಕಿನ್ನಾಳವು ತನ್ನ ಕಲಾ ಕೌಶಲ್ಯದಿಂದಾಗಿ ಪ್ರಸಿದ್ಧಿಯನ್ನು ಪಡೆದಿದೆ. ಇಂದಿಗೂ ಸಹಿತ ಇಲ್ಲಿ ಹೆಚ್ಚಿನ ಜನಾಂಗದವರು ಕಲಾ ವೃತ್ತಿಯನ್ನೇ ತಮ್ಮ ಬದುಕಿಗಾಗಿ ಅವಲಂಬಿಸಿದ್ದಾರೆ. ಇಲ್ಲಿ ಚಿತ್ರಕಲೆ ಮಾತ್ರವಲ್ಲದೆ ಶಿಲ್ಪಕಲೆ, ನೆಗೆಕಲೆ, ಕಸೂತಿ ಕಲೆ, ಹಚ್ಚೆ ಕಲೆ ಮುಂತಾದ ಕಲಾ ಪ್ರಕಾರಗಳು ರಚನೆಯಾಗಿತ್ತಿವೆ. ಇಲ್ಲಿ ಮುಖ್ಯವಾಗಿ ಕಿನ್ನಾಳ ಚಿತ್ರಕಲೆ ಅದಕ್ಕೆ ಪೂರಕವಾಗಿ ಶಿಲ್ಪ ಮತ್ತು ವರ್ಣಗಾರಿಕೆಯನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಅಳವಡಿಸಿಕೊಳ್ಳಲಾಗಿದೆ.

ಕಿನ್ನಾಳ ಕಲೆಯು ಮೂಲವಾಗಿ ಒಂದು ಜನಪದ ಕಲಾ ಪ್ರಕಾರವಾಗಿದ್ದು, ವಿಜಯನಗರ ಕಾಲದಲ್ಲಿ ರಾಜಮನ್ನಣೆಯನ್ನು ಪಡೆದುಕೊಂಡಿದ್ದು, ಕುತೂಹಲ ಹುಟ್ಟಿಸುತ್ತದೆ. ವಿಜಯನಗರ ಪತನದ ನಂತರ ಅಲ್ಲಿ ರಾಜಾಶ್ರಯ ಪಡೆದಿದ್ದ ಕಲಾವಿದರೆಲ್ಲರೂ ಬೇರೆ ಬೇರೆ ಪ್ರಾಂತ್ಯಗಳಿಗೆ ವಲಸೆ ಹೋದರು, ಈ ರೀತಿ ಚದುರಿದ ಕಲಾವಿದರಲ್ಲಿ ಕೆಲವರು ಕಿನ್ನಾಳಕ್ಕೆ ಬಂದು ನೆಲೆನಿಂತು ವಿಜಯನಗರಕ್ಕಿಂತ ಭಿನ್ನವಾದ ಸ್ಥಳೀಯ ಜನಪದ ಪ್ರಭಾವಗಳಿಂದ ಪ್ರೇರಿತವಾದ ಪ್ರತ್ಯೇಕ ಕಲಾಶೈಲಿಯೊಂದನ್ನು ರೂಪಿಸಿಕೊಂಡಂತೆ ಕಾಣುತ್ತದೆ. ಮುಂದೆ ಇದೇ ಸ್ಥಳೀಯ ಹೆಸರಿನಿಂದ ಕಿನ್ನಾಳ ಕಲೆ ಎಂದು ಪ್ರಸಿದ್ಧಿಗೆ ಬಂದಿತು. ಅಲ್ಲದೆ ಈ ಕಲಾಪರಂಪರೆಯನ್ನು ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಬಂದಿದ್ದಕ್ಕಾಗಿ ಇದೊಂದು ಜನಪದ ಕಲಾಪ್ರಕಾರವೆಂದು ಕರೆಯತೊಡಗಿದಂತೆ ಕಾಣುತ್ತದೆ.

ಕಿನ್ನಾಳ ಕಲೆಯು ವಿಶಿಷ್ಟ ತಯಾರಿಕಾ ವಿಧಾನವನ್ನು ಒಳಗೊಂಡಿದೆ. ಅಲ್ಲದೆ ಈ ಕಲಾ ಪ್ರಕಾರಕ್ಕೆ ಬೇಕಾಗುವ ಪರಿಕರಗಳಲ್ಲಿ ಸಹಿತ ಇಂದಿಗೂ ಕೆಲವು ದೇಶಿಯ ವಸ್ತುಗಳಿಂದ ಸ್ಥಳೀಯವಾಗಿ ತಯಾರಿಸಿಕೊಳ್ಳುತ್ತಾರೆ. ಈ ಕಲಾಪ್ರಕಾರವು ಶಿಲ್ಪ ಮತ್ತು ಚಿತ್ರಕಲೆಯ ಸಮ್ಮಿಶ್ರಣ ಲಕ್ಷಣವನ್ನು ಒಳಗೊಂಡಿದೆ. ಇದಕ್ಕೆ ಬೇಕಾಗುವ ಮುಖ್ಯಪರಿಕರಗಳಲ್ಲಿ ವಿವಿಧ ರೀತಿಯ ಬಣ್ಣಗಳು, ಕಟ್ಟಿಗೆ, ಬಟ್ಟೆ, ಅಂಟುದ್ರಾವಣ, ಕುಂಚಗಳು ಕಟ್ಟಿಗೆಯನ್ನು ಬೇಕಾದ ಆಕಾರಕ್ಕೆ ರೂಪಿಸಿಕೊಳ್ಳಲು ಬಡಿಗಿತನದ ವಿವಿಧ ಪರಿಕರಗಳು ಬೇಕಾಗುತ್ತವೆ. ಕಿನ್ನಾಳ ಕಲಾವಿದರು ಹಲವು ರೀತಿಯ ಕಲಾಕೃತಿಗಳನ್ನು ರಚಿಸುತ್ತಾರೆ. ಅಲಂಕಾರಿಕ ಮರದ ಫಲಕಗಳು, ತೊಟ್ಟಿಲುಗಳು, ದೇವತಾ ಮೂರ್ತಿಗಳು, ಆಟಿಕೆಗೊಂಬೆಗಳು, ಮುಖವಾಡಗಳು, ಅಲಂಕಾರಿಕ ಫಲಪುಷ್ಪಗಳು, ಕಾಮರತಿ ಶಿಲ್ಪಗಳು, ಪ್ರಭಾವಳಿಗಳು, ದುರುಮುರುಗಿಯವರ ಪೆಟ್ಟಿಗೆಗಳು, ಆಸನಗಳು, ಪೀಠೋಪಕರಣಗಳು

ಮುಂತಾದವುಗಳು ಪ್ರಮುಖವಾಗಿವೆ. ಕಿನ್ನಾಳ ಕಲಾವಿದರು ಮುಖ್ಯವಾಗಿ ಮೂರು ರೀತಿಯಲ್ಲಿ ಕಲಾಕೃತಿಗಳನ್ನು ರಚಿಸುತ್ತಾರೆ. ಮರದ ಫಲಕದ ಮೇಲೆ ಒಂದು ರೀತಿಯ ಕಲಾಕೃತಿ ರಚಿಸಿದರೆ ಮತ್ತೊಂದು ರೀತಿಯಲ್ಲಿ ಮರದ ಶಿಲ್ಪಗಳನ್ನು ಬೇಕಾದ ವಿನ್ಯಾಸಕ್ಕೆ ರೂಪಿಸಿಕೊಂಡು ಅವುಗಳಿಗೆ ಬಣ್ಣ ಲೇಪನ ಮಾಡಿ ಅಲಂಕರಿಸುತ್ತಾರೆ. ಇನ್ನೂ ಒಂದು ರೀತಿಯಲ್ಲಿ ರಚಿಸುವ ವಿಧಾನವೆಂದರೆ ಕಿಟ್ಟವನ್ನು ತಯಾರಿಸಿ ಅದರಿಂದ ಗೊಂಬೆಗಳನ್ನು ಇಲ್ಲವೆ ಮೂರ್ತಿಗಳನ್ನು ರಚಿಸಿ, ಬಣ್ಣ ಲೇಪನ ಮಾಡುತ್ತಾರೆ. ಮರದ ಫಲಕದ ಮೇಲೆ ರಚನೆ ಮಾಡುವ ಕಲಾಕೃತಿಗಳು ಹೆಚ್ಚಾಗಿ ಚಿತ್ರಕಲೆಯ ಪ್ರತಿಭೆಯನ್ನು ಅಪೇಕ್ಷಿಸುತ್ತವೆ. ಇಲ್ಲಿ ಮೊದಲಿಗೆ ಮರದ ಫಲಕವನ್ನು ಚೌಕ, ಆಯತ, ತ್ರಿಕೋನ, ಪಂಚಕೋನ, ಷಟ್‌ಕೋನ, ಅಷ್ಟಕೋನ, ವೃತ್ತಾಕಾರ, ನಕ್ಷತ್ರಾಕಾರ, ಅರ್ಧವೃತ್ತಾಕಾರ ಹೀಗೆ ವಿವಿಧ ಬಗೆಯಲ್ಲಿ ಮರದ ಫಲಕಗಳನ್ನು ಕತ್ತರಿಸಿಕೊಂಡು ಅದನ್ನು ಉಜ್ಜಿ ನುಣುಪುಗೊಳಿಸುತ್ತಾರೆ.

ಅನಂತರ ಚಿತ್ರರಚನೆ ಮಾಡಬೇಕಾದ ಮೇಲ್ಮೈಗೆ ತೆಳುವಾದ ಬಟ್ಟೆಯನ್ನು ಅಂಟುದ್ರಾವಣದಲ್ಲಿ ಅದ್ದಿ ಲೇಪಿಸುತ್ತಾರೆ. ಅದು ಒಣಗಿದ ನಂತರ ಬಿಳಿಯಾದ ಹುಣಸೆ ಬೀಜದಿಂದ ಮಾಡಿದ ಕಿಟ್ಟದ ಲೇಪನವನ್ನು ಅಂಟುದ್ರಾವಣದೊಂದಿಗೆ ಬೆರೆಸಿ ಮಂದವಾಗಿ ಲೇಪಿಸುತ್ತಾರೆ. ಅನಂತರ ಬಾಳಯ್ಯ ಎಂಬ ಕಣಿಜ ಮೂಲದ ಬಿಳಿವರ್ಣವನ್ನು ಅಂಟಿನೊಂದಿಗೆ ಬೆರೆಸಿ ಲೇಪಿಸಿ, ನುಣುಪುಗೊಳಿಸಿ ಚಿತ್ರ ಬರೆಯಲು ಅಣಿಗೊಳಿಸುತ್ತಾರೆ. ಇದು ಸಂಪೂರ್ಣ ಒಣಗಿದ ನಂತರ ತಮಗೆ ಬೇಕಾದ ವಿನ್ಯಾಸದಲ್ಲಿ ಕಾಗದದ ಮೇಲೆ ರಚಿಸಿಕೊಂಡ ಚಿತ್ರನಕ್ಷೆಯನ್ನು ಈ ಫಲಕದ ಮೇಲೆ ಯಥಾವತ್ತಾಗಿ ಪುನರ್ ರಚಿಸುತ್ತಾರೆ. ಅನಂತರ ತಮಗೆ ಬೇಕಾದಂತೆ, ಚಿತ್ರದ ವಸ್ತುವಿಷಯಕ್ಕೆ ಯೋಗ್ಯವಾಗುವಂತೆ ಬಣ್ಣ ಲೇಪನ ಮಾಡುತ್ತಾರೆ. ಇಂತಹ ಅಲಂಕಾರಿಕ ಫಲಕಗಳಲ್ಲಿ ಹೆಚ್ಚಾಗಿ ನೈಜ ಶೈಲಿಯ, ಇಲ್ಲವೆ ಜಾಮತಿಕ ವಿನ್ಯಾಸದ ಹೂ ಬಳ್ಳಿಯ ನಕ್ಷೆಗಳು, ಸುಳಿವಿನ ವಿನ್ಯಾಸಗಳು ರಚನೆಮಾಡಲಾಗುತ್ತದೆ.

ಕೆಲವು ಸಂದರ್ಭದಲ್ಲಿ ಫಲಕಗಳ ಮೇಲೆ ವಿನ್ಯಾಸ ಮತ್ತು ಉದ್ದೇಶಕ್ಕನುಗುಣವಾಗಿ ದೇವತಾ ಚಿತ್ರಗಳನ್ನು ರಚಿಸಲಾಗುತ್ತದೆ. ಇದರಲ್ಲಿ ಹೆಚ್ಚಾಗಿ ಕೃಷ್ಣನಿಗೆ ಸಂಬಂಧಿಸಿದ ಚಿತ್ರಗಳು, ವಿಷ್ಣುವಿನ ದಶಾವತಾರದ ಚಿತ್ರಗಳು, ನವಗ್ರಹ ಚಿತ್ರಗಳು, ಪಂಚಭೂತಗಳ ಚಿತ್ರಗಳು ದೇವಿಯ ವಿವಿಧ ಅವತಾರಗಳಿಗೆ ಸಂಬಂಧ ಪಟ್ಟ ಚಿತ್ರಗಳು ಮುಖ್ಯವಾಗಿ ರಚನೆಯಾಗುತ್ತವೆ. ಈ ಫಲಕಗಳ ವರ್ಣಲೇಪನದಲ್ಲಿ ಕೆಲವು ಸಂದರ್ಭದಲ್ಲಿ ಉಬ್ಬುಶಿಲ್ಪದ ಹಾಗೆ, ವಿನ್ಯಾಸಗೊಳಿಸಿರುತ್ತಾರೆ. ಹಾಗೂ ಹೆಚ್ಚು ಆಕರ್ಷಕವಾಗಿ ಕಾಣಲು ಬಂಗಾರ ಬೆಳ್ಳಿಯಂತಹ ಲೋಹ ವರ್ಣಗಳನ್ನು ಬಳಸಲಾಗುತ್ತದೆ. ಹಿಂದಿನ ಕಾಲದಲ್ಲಿ ನೈಜವಾದ ಬಂಗಾರ ಮತ್ತು ಬೆಳ್ಳಿಯ ವರ್ಣಗಳನ್ನೇ ಇವರು ಬಳಸುತ್ತಿದ್ದರು

ಆದರೆ ಇತ್ತೀಚಿನ ದಿನಗಳಲ್ಲಿ ಅದಕ್ಕೆ ಬೇರೆಯಾಗಿ ಸುನೇರಿ ಎಂಬ ರಾಸಾಯನಿಕ ವರ್ಣವನ್ನು ಬಂಗಾರದ ಬಣ್ಣದ ಲೇಪನಕ್ಕಾಗಿ ಹಾಗೂ ತವರ ಮತ್ತು ಅಭ್ರಕಗಳನ್ನು ಬೆಳ್ಳಿಯ ವರ್ಣದ ಬದಲಾಗಿ ಬಳಸುತ್ತಿದ್ದಾರೆ.

ಕಿನ್ನಾಳ ಕಲಾವಿದರು ರಚಿಸುವ ಮತ್ತೊಂದು ರೀತಿಯ ಕಲಾಕೃತಿ ರಚನಾ ವಿಧಾನವೆಂದರೆ ಹಗುರವಾದ ಮರದ ಶಿಲ್ಪಗಳನ್ನು ನಿರ್ಮಿಸುವುದಾಗಿದೆ. ಇದಕ್ಕಾಗಿ ಹರವಾಳ, ನುಗ್ಗೆ, ಪೊಲಕಿ ಮುಂತಾದ ಮರಗಳನ್ನು ಬಳಸುತ್ತಾರೆ. ಮೊದಲಿಗೆ ಬೇಕಾದ ವಿನ್ಯಾಸದಲ್ಲಿ ಮರದ ಶಿಲ್ಪಗಳನ್ನು ರಚನೆಮಾಡಿಕೊಂಡು, ನಂತರ ಅವುಗಳಿಗೆ ವರ್ಣಲೇಪನ ಮಾಡಲಾಗುತ್ತದೆ. ಇಲ್ಲಿಯೂ ಸಹಿತ ಮೊದಲಿಗೆ ಬಿಳಿ ವರ್ಣವನ್ನು ಲೇಪಿಸಿಕೊಂಡು ಆನಂತರ ಬೇರೆ ಬೇರೆ ವರ್ಣ ವಿನ್ಯಾಸ ಸೃಷ್ಟಿಸಲಾಗುತ್ತದೆ. ಕೆಲವು ಸಂದರ್ಭದಲ್ಲಿ ಸಂಕೀರ್ಣವಾದ ಶಿಲ್ಪಗಳಿದ್ದರೆ, ಆ ಶಿಲ್ಪದ ಬಿಡಿದಾದ ಭಾಗಗಳನ್ನು ಪ್ರತ್ಯೇಕವಾಗಿ ರಚಿಸಿಕೊಂಡು ನಂತರ ಅವುಗಳನ್ನು ಜೋಡಿಸಲಾಗುತ್ತದೆ. ಈ ಜೋಡಣೆಯಲ್ಲಿ ಲೋಹದ ತಂತಿ, ಬಿದಿರು ಕಡ್ಡಿಗಳನ್ನು ಉಪಯೋಗಿಸುತ್ತಾರೆ. ಆ ಮೇಲೆ ಅಲ್ಲಲ್ಲಿ ಕಿಟ್ಟದ ಲೇಪನವನ್ನು ಮಾಡಿ ವರ್ಣಲೇಪನ ಪೂರೈಸುತ್ತಾರೆ. ಈ ವಿಧಾನದಲ್ಲಿ ಹೆಚ್ಚಾಗಿ ಗ್ರಾಮದೇವತೆಯ ಮೂರ್ತಿಗಳು ಆಟಿಕೆಯ ಗೊಂಬೆಗಳು, ಅಲಂಕಾರಿಕ ವಸ್ತುಗಳು, ಪೀಠೋಪಕರಣಗಳು, ಮಂಟಪ ಮತ್ತು ಪ್ರಭಾವಳಿಗಳಂತಹ ವಿನ್ಯಾಸಗಳು, ಉತ್ಸವ ಮೂರ್ತಿಗಳು, ರಥ ಶಿಲ್ಪಗಳು, ಪಲ್ಲಕ್ಕಿಗಳು, ತೊಟ್ಟಿಲುಗಳು, ಕಾಮರತಿಯರ ಶಿಲ್ಪಗಳು ಮುಂತಾದ ಇನ್ನೂ ಅನೇಕ ಕಲಾಕೃತಿಗಳನ್ನು ರಚಿಸಲಾಗುತ್ತದೆ.

ಕಿನ್ನಾಳ ಕಲಾವಿದರ ಕಲಾಕೃತಿ ರಚನೆಯಲ್ಲಿ ಇನ್ನೂ ಒಂದು ರಚನಾವಿಧಾನವಿದೆ. ಈ ವಿಧಾನದಲ್ಲಿ ಮೊದಲಿಗೆ ಯಾವ ಆಕಾರವನ್ನು ರಚಿಸಬೇಕು ಅದಕ್ಕೆ ತಕ್ಕಹಾಗೆ ಬಿದಿರುಕಡ್ಡಿ ಇಲ್ಲವೆ, ಲೋಹದ ತಂತಿಯಿಂದ ಅಸ್ತಿ ಪಂಜರವನ್ನು ಸಾಂಕೇತಿಕವಾಗಿ ರಚಿಸಿಕೊಳ್ಳುತ್ತಾರೆ. ನಂತರ ಅದಕ್ಕೆ ಜೇಡಿಮಣ್ಣು ಮತ್ತ ಸಗಣಿಯ ಮಿಶ್ರಣವನ್ನು ಲೇಪಿಸಿ, ಗೊಂಬೆಗಳ ವಿನ್ಯಾಸ ರೂಪಿಸುತ್ತಾರೆ. ಆ ಮೇಲೆ ಅವು ಬೇಗ ಹಾಳಾಗದಂತೆ ಅದರ ಮೇಲೆ ತೆಳುವಾದ ಬಟ್ಟೆಯನ್ನು ಅಂಟುದ್ರಾವಣದಲ್ಲಿ ಅದ್ದಿ, ಲೇಪಿಸುತ್ತಾರೆ. ತದ ನಂತರ ಇದರ ಮೇಲೆ ಮಂದವಾದ ಕಿಟ್ಟದ ಲೇಪನವನ್ನು ಮಾಡಿ, ನುಣುಪುಗೊಳಿಸುತ್ತಾರೆ. ಹೀಗೆ ತಯಾರಿಸಿದ ಗೊಂಬೆ ಮತ್ತು ಮೂರ್ತಿಗಳು ಒಣಗಿದ ನಂತರ ವೈವಿಧ್ಯಮಯವಾದ ಮತ್ತು ಆಕರ್ಷಕವಾದ ಬಣ್ಣ ಲೇಪನ ಮಾಡುತ್ತಾರೆ.

ಕಿನ್ನಾಳ ಚಿತ್ರಕಲಾವಿದರು ಕಲಾಕೃತಿಗಳನ್ನು ರಚಿಸಲು ಬಳಸುವ ಪರಿಕರಗಳಲ್ಲಿ ಬಣ್ಣಗಳು ಪ್ರಮುಖವಾಗಿವೆ. ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ವರ್ಣಗಳನ್ನು ಬಳಸುತ್ತಿದ್ದರೂ ಸಹಿತ, ಕೆಲವು ಪಾರಂಪರಿಕ ವರ್ಣಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. 'ಬಾಳಯ್ಯ' ಎಂಬ ಬಿಳಿ

ವರ್ಣವು ಇಲ್ಲಿ ಪ್ರಮುಖವಾಗಿದೆ. ಪ್ರಕೃತಿಯಲ್ಲಿ ಸಿಗುವ ಖನಿಜ ಮೂಲದ ಬಿಳಿಯಾದ ಮತ್ತು ಮೃದುವಾದ ಕಲ್ಲಿನಿಂದ ಇದನ್ನು ತಯಾರಿಸುತ್ತಾರೆ. ಬಿಳಿಕಲ್ಲನ್ನು ಗಂಧ ತೇಯುವ ಹಾಗೆ ನೀರು ಹಾಕಿ ತೇಯುವ ಮೂಲಕ ಮಂದವಾದ ದ್ರಾವಣ ತಯಾರಿಸಿಕೊಳ್ಳುತ್ತಾರೆ. ಇದನ್ನು ಬಟ್ಟೆಯಲ್ಲಿ ಶೋಧಿಸಿ ಅದಕ್ಕೆ ಮರದ ಅಂಟನ್ನು ಬೆರೆಸಿಕೊಳ್ಳುತ್ತಾರೆ. ಇದರಿಂದ ಬಿಳಿ ಬಣ್ಣವು ಉತ್ತಮವಾದ ಅಂಟುಗುಣವನ್ನು ಪಡೆದುಕೊಳ್ಳುತ್ತದೆ. ಅದೇ ಪ್ರಕಾರ ಹುಣಸೆಬೀಜದಿಂದ ತಯಾರಿಸಿಕೊಳ್ಳುವ ಕಿಟ್ಟದ ಲೇಪನವು ವಿಶೇಷವಾಗಿದೆ. ಹುಣಸೆ ಬೀಜಗಳನ್ನು ನೆನೆಸಿ ಚೆನ್ನಾಗಿ ಕುಟ್ಟಿಪುಡಿ ಮಾಡಿ ಅದಕ್ಕೆ ಬಳಪದ ಕಲ್ಲಿನಿಂದ ತಯಾರಿಸಿದ ಬಿಳಿಪುಡಿಯನ್ನು ಮಿಶ್ರಣಗೊಳಿಸುತ್ತಾರೆ. ನಂತರ ಅದಕ್ಕೆ ಮರದ ಅಂಟು ಮಿಶ್ರಣಗೊಳಿಸಿ ಕಣಕದ ಹಾಗೆ ಮಂದವಾದ ಮಿಶ್ರಣ ತಯಾರಿಸುತ್ತಾರೆ. ಇದನ್ನು ಕಲಾಕೃತಿ ರಚನೆಯಲ್ಲಿ ಪೂರಕವಾಗಿ ಬಳಸುತ್ತಾರೆ. ಹಳದಿ ಬಣ್ಣವನ್ನು ಸಹಿತ ಇವರು ತಯಾರಿಸಿಕೊಳ್ಳುತ್ತಾರೆ. ಹರಿದಾಳ ಎಂಬ ಹಳದಿ ಬಣ್ಣದ ಮೃದುವಾದ ಖನೀಜ ಮೂಲದ ಮಣ್ಣಿನ ಗಟ್ಟಿಯನ್ನು ಕುಟ್ಟಿ ಪುಡಿಮಾಡಿ ಬಟ್ಟೆಯ ಮೂಲಕ ಶೋಧಿಸಿ ಅದಕ್ಕೆ ಅಂಟುದ್ರಾವಣ ಬೆರೆಸಿ ಕಲಾಕೃತಿಗಳಿಗೆ ಬಳಸುತ್ತಾರೆ. ಇದಲ್ಲದೆ, ತವರ ಮತ್ತು ಅಬ್ರಕ ಎಂಬ ಲೋಹಗಳನ್ನು ವರ್ಣಮಾಧ್ಯಮವಾಗಿ ಬಳಸುವುದು ಇವರ ವಿಶೇಷತೆಯಾಗಿದೆ. ಅದೇ ರೀತಿ ಕಿನ್ನಾಳ ಚಿತ್ರಕಲಾವಿದರು ಬಣ್ಣಲೇಪನಕ್ಕಾಗಿ ಕುಂಚಗಳನ್ನು ಸಹಿತ ತಾವೇ ತಯಾರಿಸಿಕೊಳ್ಳುತ್ತಾರೆ. ಇವುಗಳನ್ನು ಅಳಿಲು, ಮೊಲ ಮುಂತಾದ ಪ್ರಾಣಿಗಳ ಕೂದಲುಗಳಿಂದ ತಯಾರಿಸಿಕೊಳ್ಳುತ್ತಾರೆ. ಮೊದಲಿಗೆ ಬಿದಿರು ಕಡ್ಡಿಗಳನ್ನು ಚೂಪಾದ ವಿನ್ಯಾಸಕ್ಕೆ ಕೆತ್ತಿಕೊಂಡು ನಂತರ ಅದರ ಸುತ್ತಲು ಪ್ರಾಣಿಗಳ ಕೂದಲುಗಳನ್ನು ಸಮವಾಗಿ ಬರುವಂತೆ ದಾರದಿಂದ ಬಂದಿಸುತ್ತಾರೆ. ಆ ಮೇಲೆ ಇವು ಗಟ್ಟಿಯಾಗಿ ಕುಳಿತುಕೊಳ್ಳಲು ಅಂಟುದ್ರಾವಣ ಇಲ್ಲವೆ ಅರಗಿನ ಲೇಪನವನ್ನು ಮಾಡುತ್ತಾರೆ. ಇದಲ್ಲದೆ ತವರದ ಬಣ್ಣವನ್ನು ಉಜ್ಜಿ ನುಣುಪುಗೊಳಿಸಲು ವಿಶೇಷವಾದ ಕಲ್ಲಿನಿಂದ ಮಾಡಿದ ಹರಳಿನ ಉಪಕರಣವನ್ನು ಬಳಸುತ್ತಾರೆ.

ಕಿನ್ನಾಳ ಕಲಾವಿದರು ಅಲಂಕಾರಿಕ ಫಲಪುಷ್ಪಗಳನ್ನು ರಚಿಸುವಾಗ ಮತ್ತೊಂದು ವಿಧಾನವನ್ನು ಅನುಸರಿಸುತ್ತಾರೆ. ಹಗುರವಾದ ಮರದಿಂದ ತಮಗೆ ಬೇಕಾದ ಹಣ್ಣುಹಂಪಲಗಳ ಆಕಾರಗಳನ್ನು ರೂಪಿಸಿಕೊಂಡು ಅದಕ್ಕೆ ಆಯಾ ಫಲ-ಪುಷ್ಪಗಳಿಗೆ ತಕ್ಕ ಹಾಗೆ ವರ್ಣಲೇಪನ ಮಾಡುತ್ತಾರೆ. ಈ ಫಲ-ಪುಷ್ಪಗಳು ನೈಜವೆಂಬಂತೆ ಕಂಡುಬರುತ್ತವೆ. ಇಲ್ಲಿ ಕಿನ್ನಾಳ ಕಲಾವಿದರ ವರ್ಣಲೇಪನದ ಅನುಭವ ಮತ್ತು ಪ್ರಾವಿಣ್ಯತೆ ತಿಳಿದುಬರುತ್ತದೆ. ಇಂತಹ ಪ್ರಮುಖ ವಸ್ತುಗಳಲ್ಲದೆ ವಿವಿಧ ಬಗೆಯ ಗೊಂಬೆಗಳು, ಆಟಿಕೆಯ ಸಾಮಾನುಗಳು ಇವರಿಂದ ರಚನೆಯಾಗುತ್ತವೆ. ಇವುಗಳಲ್ಲಿ ಪ್ರಾತಿನಿಧಿಕವಾಗಿ ಕೆಲವು ಕಲಾಕೃತಿಗಳನ್ನು ಕೆಳಗಿನಂತೆ ವಿವರಿಸಬಹುದು.

ಕಾಮಣ್ಣ ಮೂರ್ತಿ

ಈ ಮೂರ್ತಿಯನ್ನು ಹಿರೇಬೇವು ಮತ್ತು ಪಳಕು ಹಾಲೆಮರದ ಕಟ್ಟಿಗೆಯಿಂದ ತಯಾರಿಸುತ್ತಾರೆ. ಇದನ್ನು ತಯಾರಿಸಬೇಕಾದರೆ ದೇಹದ ದಡ ಒಂದು ಕಟ್ಟಿಗೆಯಿಂದ ಕೀಲುಗಳು, ಸಂದುಗಳು, ಕೈ ಮತ್ತು ಕಾಲುಗಳು ಇವು ಬೇರೆ ಬೇರೆ ಕಟ್ಟಿಗೆಯಿಂದ ಜೋಡಿಸುತ್ತಾರೆ. ಇದಕ್ಕೆ ಒಂದು ಮೂರ್ತಿರೂಪವನ್ನು ಕೊಟ್ಟು, ಕೊರಳಿನ ಭಾಗದಲ್ಲಿ ವಿಭೂತಿ ತಯಾರಿಸುವ ಮಣ್ಣಿನಿಂದ, ಕಿವಿ, ಕೈಯಲ್ಲಿ ಬಳೆಗಳನ್ನು ಕಟ್ಟಿಗೆಯ ಪೌಡರ ಲೇಪನ ಮಾಡಿ ಈ ಮೂರ್ತಿಯನ್ನು ಅಂದಗೊಳಿಸುತ್ತಾರೆ.

ಈ ರೀತಿಯಾಗಿ ತಯಾರಿಸಿದ ಮೇಲೆ ಉಸುಕಿನ ಕಾಗದ (ಪಾಲಿಶ್ ಪೇಪರ್) ದಿಂದ ತಿಕ್ಕಿ ನಯಗೊಳಿಸಿ, ಕಾಟನ್ ಬಟ್ಟೆಯನ್ನು ಹುಣಸೆ ಬೀಜದ ರಸದಿಂದ ಅದಕ್ಕೆ ಹಚ್ಚುತ್ತಾರೆ. ಅದು ಒಣಗಿದ ನಂತರ ಅಂಟಿನ ನೀರು ಹಚ್ಚುತ್ತಾರೆ. ಒಣಗಿದ ಮೇಲೆ ಬಿಳಿ ಬಣ್ಣ ಲೇಪಿಸಿ ಅದರ ಮೇಲೆ ಅರ ಹಚ್ಚಿ ತಿಕ್ಕುತ್ತಾರೆ. ಮತ್ತೆ ಬಿಳಿ ಬಣ್ಣ ಹಚ್ಚಿ ಪಾಲಿಶ್ ಪೇಪರ್‌ನಿಂದ ಅದನ್ನು ನಯಗೊಳಿಸಿ ಬಣ್ಣ ಹಚ್ಚಿ ಆ ಮೂರ್ತಿಯನ್ನು ಶೃಂಗರಿಸುತ್ತಾರೆ.

ಕಾವೇರಿ

ಇದು ಕೂಡಾ ದೇವತಾ ಮೂರ್ತಿ ಇದನ್ನು ಮಾಡಲಿಕ್ಕೆ ಮೊದಲು ಹಿರೆ ಬೇವಿನ ಮರದ ಮಣಿಯನ್ನು ಅದಕ್ಕೆ ಸರಿಯಾಗಿ ತಿಕ್ಕಿ ಹದಮಾಡುತ್ತಾರೆ, ನಂತರ ಮೊಸಳೆಯನ್ನು ತಯಾರಿಸುತ್ತಾರೆ. ಇದು ಪಳಕೆ ಕಟ್ಟಿಗೆಯಿಂದ ರಚನೆಯಾಗುತ್ತದೆ. ನೀರಲ್ಲಿ ಹೊರಟ ಮೊಸಳೆಯ ಮೇಲೆ ಕಾವೇರಿಯ ಚಿತ್ರ ಬಿಡಿಸುತ್ತಾರೆ. ಕಾವೇರಿಯ ಕೈಯಲ್ಲಿ ತುಂಬಿದ ಕೊಡ ಸಮುದ್ರದಲ್ಲಿ ಚೆಲ್ಲುತ್ತಿರುವ ನೀರಿನ ಬಿಂದಿಗೆಯ ಹಾಗೆ ತಯಾರಿಸಿ ಅದು ನೋಡುಗನಿಗೆ ಒಂದು ಬಗೆಯ ರೋಮಾಂಚನವಾಗುವಂತೆ ರಚಿಸುತ್ತಾರೆ.

ಗೌರಿ

ಈ ಮೂರ್ತಿಯನ್ನು ಮಾಡುವುದಕ್ಕೆ ಹತ್ತಿ ಮರವನ್ನು ಉಪಯೋಗಿಸುತ್ತಾರೆ. ಈ ಮರದ ಕಟ್ಟಿಗೆಯ ಜೊತೆಗೆ ನುಗ್ಗೆ ಗಿಡದ ಕಟ್ಟಿಗೆಯನ್ನು ಬಳಸಿ ಮೂರ್ತಿ ತಯಾರಿಸುತ್ತಾರೆ. ಹಲವಾರು ವಿವಿಧ ಬಣ್ಣಗಳನ್ನು ಲೇಪನ ಮಾಡಿ ಆ ಮೂರ್ತಿಯನ್ನು ಅಂದಗೊಳಿಸುತ್ತಾರೆ.

ರತಿ

ಇದು ಗಂಗಾವತಿಯ ಅರಣ್ಯ ಪ್ರದೇಶದಲ್ಲಿ ಸಿಗುವ ಹತ್ತಿ ಮರದ ಕಟ್ಟಿಗೆಯಿಂದ ತಯಾರಿಸುತ್ತಾರೆ. ಅಲ್ಲಲ್ಲಿ ಸಂದು ಇದ್ದ ಜಾಗದಲ್ಲಿ ನುಗ್ಗೆ ಗಿಡದ ಕಟ್ಟಿಗೆಯನ್ನು ಬಳಸಿ ಒಂದು

ಮೂರ್ತಿಯನ್ನು ಮಾಡುತ್ತಾರೆ. ನಿಜವಾದ ಮೂರ್ತಿ ಇದ್ದಂತೆ ನೋಡುಗನಿಗೆ ಕಾಣುತ್ತದೆ. ನಂತರ ಈ ಗೊಂಬೆಗಳಿಗೆ ಗಟ್ಟಿರಾಳ, ಕಲೆರಾಳ ಮತ್ತು ಚಿಮಣಿ ಎಣ್ಣೆ ಬೆರೆಸಿ ಒಂದು ಬಗೆಯ ತೈಲ ಮಾಡಿ ಆ ಮೂರ್ತಿಗೆ ಲೇಪನ ಮಾಡುತ್ತಾರೆ.

ಹನುಮಂತ

ಈ ಮೂರ್ತಿಯು ಗಂಗಾವತಿಯ ತೊಪ್ಪಲಿನಲ್ಲಿ ಸಿಗುವ ಪಳಕಿ ಕೊರಡನ್ನು ಉಪಯೋಗಿಸುತ್ತಾರೆ. ಮತ್ತು ಅದರ ಜೊತೆಯಲ್ಲಿ ನುಗ್ಗೆ ಗಿಡದ ಕಟ್ಟಿಗೆಯನ್ನು ಬಳಸುತ್ತಾರೆ. ನಂತರ ಬಣ್ಣಹಚ್ಚಿ ನಿಜವಾದ ಹನುಮಂತನಂತೆ ಕಂಗೊಳಿಸುವಂತೆ ಅದಕ್ಕೆ ಎಲ್ಲ ನಮೂನೆಯ ಅಲಂಕಾರ ಮಾಡುತ್ತಾರೆ. ಆ ಆಕೃತಿಗೆ ಹಸಿರು, ಬಿಳಿ ಮತ್ತು ಕೆಂಪು ಬಣ್ಣಗಳನ್ನೇ ಪ್ರಮುಖವಾಗಿ ಬಳಸಲಾಗಿದೆ ಮತ್ತು ಹಿನ್ನೆಲೆಗೆ ಕೆಂಪು ಬಣ್ಣವನ್ನು ಚಪ್ಪಟೆಯಾಗಿ ಲೇಪಿಸಲಾಗಿದೆ.

ಬ್ರಹ್ಮ, ವಿಷ್ಣು, ಮಹೇಶ್ವರರು

ಇವರು ಅನಸೂಯಾಳ ಮನೆಗೆ ಭಿಕ್ಷೆಗಾಗಿ ಬಂದಿರುವ ದೃಶ್ಯ ಮತ್ತೊಂದು ಚಿತ್ರದಲ್ಲಿ ಇದೆ. ಎಡಗಡೆ ಗುಡಿಸಲು ಅನಸೂಯ ದಂಪತಿಗಳು ಗುಡಿಸಲು ಮುಂದೆ ಕುಳಿತಿರುವಂತೆಯೂ ಅನುಸೂಯ ತ್ರಿಮೂರ್ತಿಗಳನ್ನು ಸ್ವಾಗತಿಸುತ್ತಿರುವಂತೆಯೂ ಇದೆ. ಹುಲ್ಲಿನ ಹಾಸಿಗೆಯ ಮೇಲೆ ಅಡ್ಡವಾಗಿ ಒಂದೇ ತಳ ರೇಖೆಯ ಮೇಲೆ ಆಕೃತಿಯನ್ನು ಚಿತ್ರಿಸಿರುವುದನ್ನು ಅಲ್ಲಿ ನೋಡಬಹುದಾಗಿದೆ. ಬಣ್ಣಗಳ ಉಪಯೋಗದ ಕೂಡಾ ಆ ಆಕೃತಿಗಳಿಗೆ ತಕ್ಕಂತೆ ಇದೆ. ಹೀಗೆ ಲಜ್ಜಾ ಗೌರಿ, ಶೀಗಿಗೌರಿ, ರಾಮ, ಶಿವ ಮುಂತಾದ ದೇವತಾಮೂರ್ತಿಗಳನ್ನು ತಯಾರಿಸುತ್ತಾರೆ.

ಸಾಮಾನ್ಯ ಮೂರ್ತಿಗಳು

ಈ ಸಾಮಾನ್ಯ ಮೂರ್ತಿಗಳಲ್ಲಿ ಸಿಂಹಾಸನ, ಆನೆಯ ಸಾಲು ಮತ್ತು ಜಿಂಕೆ, ಮೊಲ ಮುಂತಾದ ಪ್ರಾಣಿ ಸಂಕುಲಗಳ ಮೂರ್ತಿಯನ್ನು ತಯಾರಿಸುತ್ತಾರೆ. ಇವು ಶ್ರೀಮಂತರ ಮನೆಯಲ್ಲಿ ಷೋಕೇಸ್ ಮತ್ತು ಮನೆಯ ಮುಂಭಾಗದಲ್ಲಿ ಇಟ್ಟಿರುತ್ತಾರೆ.

ಆಟಿಕೆ ಮೂರ್ತಿಗಳು

ಇವು ಚಿಕ್ಕ ಮಕ್ಕಳಿಗೆ ಮಾತ್ರ ಮೀಸಲಿಟ್ಟ ಆಟಿಕೆಗಳು. ಅದರ ವಯೋಮಾನಕ್ಕೆ ತಕ್ಕಂತೆ ಉತ್ತಮ ಗುಣಮಟ್ಟದ ಆಟಿಕೆಗಳನ್ನು ಹುಡುಕಿಕೊಡುವುದು ಪಾಲಕರ ಕರ್ತವ್ಯ ಮನೆಯಲ್ಲಿ ಪಾಲಕರು ಮಕ್ಕಳ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳುವುದಿಲ್ಲ. ಮೊನಚು ಅಂಚುಳ್ಳ ಲೋಹದ ಆಟಿಕೆಗಳನ್ನು ಕೊಟ್ಟಿರುತ್ತಾರೆ. ಕಂದಮ್ಮಗಳಿಗೆ ಎಷ್ಟು ವೈವಿಧ್ಯಮಯ ಆಟಿಕೆಗಳನ್ನು ತಂದು ಕೊಡುತ್ತೇವೆಯೋ ಅಷ್ಟೇ ವೈವಿಧ್ಯಮಯ ಅಪಾಯಗಳನ್ನು ಅವು ತರಬಲ್ಲವು. ಆದ್ದರಿಂದ

ಅಂತಹ ಅಪಾಯ ಆಗಬಾರದೆಂದು ಕಿನ್ನಾಳ ಕಲಾವಿದರು ನುಣುಪಾಗಿರುವ ಆಟಿಕೆ ಸಾಮಾನುಗಳಾದ, ಬಸವ, ಎತ್ತಿನಗಾಡಿ, ಗೊಂಬೆ ಇಂತಹ ಆಟಿಕೆ ಸಾಮಾನುಗಳನ್ನು ತಯಾರಿಸಿ ಮಾರುತ್ತೇರೆ.

ಶೋಕೇಸ್ ಆಟಿಕೆಗಳು

ಇವು ಶ್ರೀಮಂತರ ಮನೆಯ ಗಾಜಿನ ಕಬೋರ್ಡ್‌ದಲ್ಲಿ ರಾರಾಜಿಸುತ್ತಿರುವ ಆಟಿಕೆ ಸಾಮಾನುಗಳೆಂದರೆ ಗೌರಿ, ಹುಲಿ, ಸಿಂಹ, ಚಿರತೆ ಮತ್ತು ಒಡೆದ ಬೆಂಗು, ನವಿಲು, ಬಾತುಕೋಳಿ, ಕೋಳಿ, ಹುಂಜ, ಕೊಕ್ಕರೆ, ಹಂಸ, ಚಿಗರಿ, ಸಾರಂಗ, ಒಂಟಿ, ಆನೆ ಮುಂತಾದವುಗಳು ಹಣ್ಣು ಹಂಪಲುಗಳು ಇವು ಆ ಶ್ರೀಮಂತರ ಮನೆಯಲ್ಲಿ ಹೆಚ್ಚು ಸುಂದರವಾಗಿ ಕಾಣುತ್ತಿರುತ್ತವೆ. ಹೀಗೆ ಕಿನ್ನಾಳದ ಕಲೆಗಾರರು ವಿವಿಧ ನಮೂನೆಯ ಆಟಿಕೆ ಸಾಮಾನುಗಳನ್ನು ತಯಾರಿಸಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

ಕಿನ್ನಾಳದ ಚಿತ್ರಗಾರ ಕುಟುಂಬ ವಂಶಪಾರಂಪರ್ಯವಾಗಿ ಚಿತ್ರಶೈಲಿಯನ್ನು ರೂಢಿಸಿಕೊಂಡು ಬಂದಿದೆ. ಚಿತ್ರಕಲೆ ಅವರ ಕುಲಕಸುಬೂ ಹೌದು, ವೃತ್ತಿಪರ ಕಸುಬು ಕೂಡ ಹೌದು, ಆ ಕುಟುಂಬವು ಇಂದಿಗೂ ಚಿತ್ರಕಲೆಯನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. ಸಾಂಪ್ರದಾಯಿಕ ಕಲೆಯಾಗಿದ್ದ ವಿಜಯನಗರ ಕಾಲದ ಕಲೆಯು ವಿಜಯನಗರ ಪತನಾ ನಂತರ ಕಿನ್ನಾಳದ ನವಾಬರ ಆಶ್ರಯ ಪಡೆದು ಕಿನ್ನಾಳದ ಕಲೆಯಾಗಿ ಬೆಳೆಯಿತು. ಚಿತ್ರಗಾರ ಕುಟುಂಬದವರೆಲ್ಲರು ಈ ಕಲೆಯನ್ನು ಮಾಡುವುದರಿಂದಾಗಿ ಇದು ಜನಪದ ಕಲೆಯಾಗಿ ಪರಿವರ್ತನೆಯಾಗುತ್ತ ಇಂದಿಗೂ ತನ್ನ ಹೆಸರನ್ನು ಉಳಿಸಿ, ಬೆಳೆಸಿಕೊಳ್ಳುತ್ತಾ ಬಂದಿದೆ. ಇತ್ತೀಚೆಗಷ್ಟೇ ನಡೆದ ಜನವರಿ ೨೬ರ ಗಣರಾಜ್ಯೋತ್ಸವ ಅಂಗವಾಗಿ ದೆಹಲಿಯಲ್ಲಿ ಏರ್ಪಡಿಸಿದ್ದ ಸ್ಥಬ್ಧ ಚಿತ್ರಣದಲ್ಲಿ ಕಿನ್ನಾಳ ಕಲಾವಿದರು ಪಾಲ್ಗೊಂಡು ಕಿನ್ನಾಳ ಕಲೆಯನ್ನು ದೇಶ ವಿದೇಶಗಳಿಗೆ ಪರಿಚಯಿಸಿದ್ದಾರೆ. ಈ ಕಲೆಯು ಇನ್ನೂ ಹೆಚ್ಚು ಹೆಚ್ಚು ಬೆಳೆಯಬೇಕಾಗಿದೆ. ಅದಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕಾಗಿದೆ. ಕಿನ್ನಾಳ ಕಲೆಯ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳು ಈ ನಿಟ್ಟಿನಲ್ಲಿ ನಡೆಯಬೇಕಾಗಿದೆ.

ಹಚ್ಚೆ ಚಿತ್ರಕಲೆ

ಕೊಪ್ಪಳ ಜಿಲ್ಲೆಯಾದ್ಯಂತ ಹಚ್ಚೆ ಚಿತ್ರಕಲೆ ಕಂಡುಬಂದಿರುವದನ್ನು ನಾವು ಕಾಣಬಹುದಾಗಿದೆ. ಹಚ್ಚೆ ಚಿತ್ರಕಲೆಯು ಜನಪದ ಚಿತ್ರಕಲಾ ಪ್ರಕಾರದಲ್ಲಿ ಒಂದು ವಿಶೇಷವಾದ ಪ್ರಕಾರ. ಇದಕ್ಕೆ ಜನಪದರಲ್ಲಿ ಹಲವಾರು, ನಂಬಿಕೆಗಳು, ಆಚರಣೆಗಳು ಕಂಡುಬಂದಿವೆ. ಇದು ಸೌಂದರ್ಯಪ್ರಜ್ಞೆಯ ಪ್ರಜ್ಞೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಲೆಯಾಗಿದೆ. ಹಚ್ಚೆ ಕಲೆಗೆ ತನ್ನದೇ ಆದ ದೀರ್ಘಕಾಲದ ಇತಿಹಾಸವನ್ನು ಹೊಂದಿದೆ ಎಂದು ಹಲವಾರು ವಿದ್ವಾಂಸರು ಅದರ ಪ್ರಾಚೀನತೆಯನ್ನು

ಚರ್ಚಿಸಿದ್ದಾರೆ. ಮನುಷ್ಯ ತಾನು ಸುಖಿ ಇರಲಿ, ದುಃಖಿ ಇರಲಿ, ಬದುಕಿನಲ್ಲಿ ಸಿರಿತನ ಇರಲಿ ಬಡತನ ಇರಲಿ ಮಣ್ಣಿನ ಕಾಯ ಮಣ್ಣಾಗುವ ತನಕ ಆತನೊಡನೆ ಚರ್ಮದ ಮೇಲೆ ಬಂದ ಚಿತ್ರಕಲೆ ಶಾಶ್ವತ ಚಿತ್ರಕಲೆಯೆನಿಸುತ್ತದೆ.[೧] ಅದನ್ನೇ ನಾವು ಹಚ್ಚೆ ಚಿತ್ರಕಲೆ ಎನ್ನುತ್ತೇವೆ. ಕನ್ನಡದಲ್ಲಿ ಹಚ್ಚೆ ಪದವು ಪಚ್ಚೆ ಮೂಲದಿಂದ ಬಂದಿದೆ. ಪಚ್ಚೆ ಎಂದರೆ ಹಸಿರು ಮಣಿ ಅಥವಾ ರತ್ನ. ಹಸಿರು ಬಣ್ಣ ಹಣೆಯ ಮೇಲಿನ ಸ್ಥಿರವಾದ ತಿಲಕ ಎಂದರ್ಥಗಳಿವೆ.[೨] ಚರ್ಮದ ಮೇಲೆ ಶಾಶ್ವತವಾಗಿ ಇರಬಲ್ಲ ಹಸಿರು ಬಣ್ಣದ ಗುರುತನ್ನು ಹಚ್ಚೆ ಎನ್ನುವರು. ಜಿಲ್ಲೆಯಲ್ಲಿ ಹಲವಾರು ಕಡೆ ಹಚ್ಚೆ ಹಾಕುವವರು ಇದ್ದಾರೆ. ಅದರಲ್ಲಿ ಬುಡಶೆಟ್ನಾಳ, ಕೆರೆಹಳ್ಳಿ, ಹಟ್ಟಿ, ಮೋರನಾಳಗಳಲ್ಲಿ ಹೆಚ್ಚಾಗಿದ್ದಾರೆ. ಪ್ರಾಚೀನವಾದ ಈ ಕಲೆಯನ್ನು ಜಿಲ್ಲೆಯಾದ್ಯಂತ ನಾವು ಇಂದಿಗೂ ಕಾಣಬಹುದಾಗಿದೆ.

ಹಚ್ಚೆಯನ್ನು ಹಲವಾರು ಗಿಡಮೂಲಿಕೆಗಳಿಂದ ತಯಾರಿಸಿಕೊಂಡು ಕಾಡಿಗಿ ಅಥವಾ ದೀಪದ ಕುಡಿಯಿಂದ ಕಪ್ಪನ್ನು ತಯಾರಿಸಿಕೊಂಡು ಅದರಿಂದ ಮಸಿ ತಯಾರಿಸಿಕೊಳ್ಳುತ್ತಾರೆ. ಅದನ್ನು ಒಂದು ಕುಡಿಕೆಯಲ್ಲಿ ತುಂಬಿಸಿಕೊಂಡಿರುತ್ತಾರೆ. ಚರ್ಮದ ನಾನಾ ಭಾಗಗಳಲ್ಲಿ ಬೇಕಾದ ಚಿತ್ರಗಳನ್ನು ಮೊದಲೇ ರಚಿಸಿಕೊಂಡು ಅದರ ಮೇಲೆ ಸಣ್ಣ ಸೂಜಿಯನ್ನು ಮಸಿಯಲ್ಲಿ ಅದ್ದಿ ಚರ್ಮದ ಮೇಲೆ ಚುಚ್ಚಿ ಚುಚ್ಚಿ ಚಿತ್ರ ರಚನೆ ಮಾಡುತ್ತಾರೆ. ಅದನ್ನು ಚುಚ್ಚುವಾಗ ನೋವನ್ನು ಮರೆಯಲು ಹಲವಾರು ಜನಪದ ಹಾಡುಗಳನ್ನು ಹಾಡಿ ಮರೆಸುತ್ತಾರೆ. ಚಿತ್ರ ಎರಡು ಮೂರು ದಿನಗಳ ನಂತರ ಸ್ಪಷ್ಟವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಹಚ್ಚೆಯನ್ನು ಬಿಡಿಸಲು ಯಂತ್ರೋಪಕರಣಗಳನ್ನು ಬಳಸಲಾಗುತ್ತದೆ.

ಹಚ್ಚೆಯನ್ನು ಕೆಳವರ್ಗದ ಜನರು ಮಾತ್ರ ಹಾಕುತ್ತಾರೆ. ಎಲ್ಲ ವರ್ಗದ ಜನರು ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಹಾಕುವ ಕೆಲವರಿಗೆ ಇದು ವೃತ್ತಿಯು ಹೌದು, ಪ್ರವೃತ್ತಿಯು ಹೌದು. ಹಚ್ಚೆ ಹಾಕುವವರು ತಮ್ಮನ್ನು ತಾವು ಮಾದರಿಯಂತೆ ತಮ್ಮ ಮೈಮೇಲಿನ ಹಚ್ಚೆ ಚಿತ್ರಗಳನ್ನು ತೋರಿಸುತ್ತ, ಸ್ತ್ರೀವರ್ಗವನ್ನು ಆಕರ್ಷಿಸುತ್ತ ಹಚ್ಚೆಗೆ ತೊಡಗುತ್ತಾರೆ. ಹೆಣ್ಣು ಮಕ್ಕಳಿಗೆ ಹಚ್ಚೆಯ ಬಗ್ಗೆ ನಂಬಿಕೆಗಳನ್ನು ಹೇಳುತ್ತಾ ಹಚ್ಚೆಯನ್ನು ಹಾಕಿಸಿಕೊಳ್ಳುವ ಭಾವವನ್ನು ಉಂಟುಮಾಡುತ್ತಾರೆ. ಹೆಚ್ಚಾಗಿ ಜಿಲ್ಲೆಯಲ್ಲಿ ಕಿಳ್ಳೇಕ್ಯಾತರು, ಸಿಳ್ಳೇಕ್ಯಾತರು, ಬೆಸ್ತರು ಹೀಗೆ ಹಲವಾರು ಕೆಳವರ್ಗದ ಕುಟುಂಬದವರು ಹಚ್ಚೆಹಾಕುತ್ತಾರೆ.

ಚಿತ್ರದ ವಿಷಯವನ್ನಾಗಿ ಚಿತ್ತಾಕರ್ಷಕವಾದ ತೇರು, ಗೋಪುರ, ಆಂಜನೇಯ, ನಕ್ಷತ್ರ, ಚೇಳು, ಸೂರ್ಯ, ಚಂದ್ರ, ಹೂವು, ದುಂಡುಮಲ್ಲಿಗೆ, ಶಂಕು, ನಾಗರ ಹೆಡೆ, ಶಿವನ ಮುಡಿ, ಚಕ್ರ, ಕಮಲ, ಶಿಲುಬೆ, ಜೋಗಿಜಡೆ, ಗೌರಿಮುಡಿ, ಪಗಡಿಮನೆ, ನವಿಲು, ಪಾತರಗಿತ್ತಿ, ಗಾಳಿಪಟ,

೦೧. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೭೧

೦೨. ಜಿ. ಎ. ಕವಲಿ : ಕನ್ನಡ ಕಸ್ತೂರಿ ಕೋಶ, ಪುಟ – ೫೬೬

ಗಿಡ, ತ್ರಿಶೂಲ, ಓಂ, ಪಲ್ಲಕ್ಕಿ, ಈಶ್ವರಲಿಂಗ, ಗೌರಿಕಣ್ಣಿ, ಧೂಪಾರತಿ, ನಂದಿ, ತಕ್ಕಡಿ, ಗಿಳಿ, ಗದೆ, ದೀಪ, ಏಣಿ, ಆಭರಣ ಹೀಗೆ ಹತ್ತು ಹಲವಾರು ತರಹದ ಚಿತ್ರಗಳನ್ನು ದೇಹದ ಹಲವಾರು ಭಾಗಗಳಲ್ಲಿ ಚಿತ್ರಿಸಿಕೊಳ್ಳುತ್ತಾರೆ. ಇಂತಹ ಹಚ್ಚೆ ಚಿತ್ರದ ಬಗ್ಗೆ ಜನಪದರಲ್ಲಿ ಹಲವಾರು ನಂಬಿಕೆಗಳು ಇಂದಿಗೂ ಉಳಿದುಕೊಂಡು ಬಂದಿವೆ. ಕೆಳಗಿನಂತೆ ಅವುಗಳನ್ನು ಹೇಳಬಹುದಾಗಿದೆ.

ಹಚ್ಚೆ ಇಲ್ಲದವರು ರಾಸಿಯ ಕಣಕ್ಕೆ ಹೋಗಬಾರದು, ಮಾಟಮಂತ್ರ ಮೈಗೆ ಹತ್ತುವುದಿಲ್ಲ, ವಿಷ ಏರುವುದಿಲ್ಲ, ಹಚ್ಚೆ ಇದ್ದರೆ ಮಾಡಿದ ಅಡುಗೆ ಹುಲುಸಾಗುತ್ತದೆ, ಹಚ್ಚೆ ಇಲ್ಲದವಳ ಕೈಯಲ್ಲಿ ನೀರು ಕುಡಿಯಬಾರದು, ಕಷ್ಟಗಳು ಬರುವುದಿಲ್ಲ, ಮಕ್ಕಳಾಗುತ್ತವೆ, ಹರಕೆ ಈಡೇರುತ್ತದೆ. ಮುತ್ತೈದೆಯ ಶಾಶ್ವತ ಸಂಕೇತ, ದೃಷ್ಟಿ ಆಗುವುದಿಲ್ಲ, ಕೆಟ್ಟಕನಸು ಬೀಳುವುದಿಲ್ಲ ಹೀಗೆ ಹಲವಾರು ನಂಬಿಕೆಗಳಿಂದ ಜಿಲ್ಲೆಯಲ್ಲಿ ಹಚ್ಚೆ ಚಿತ್ರಕಲೆಯು ಇನ್ನೂ ಜೀವಂತವಾಗಿದೆ. ಹಚ್ಚೆಯಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳನ್ನು ಕಾಣುತ್ತೇವೆ. ಒಂದು ಶಾಶ್ವತ ಹಚ್ಚೆ, ಚಿತ್ರ ಇನ್ನೊಂದು ಅಶಾಶ್ವತ ಹಚ್ಚೆ ಕಲೆ. ಶಾಶ್ವತ ಚಿತ್ರಕಲೆಯಲ್ಲಿ ಹಚ್ಚೆಯನ್ನು ಚರ್ಮದ ಆಳದಲ್ಲಿ ಚಿತ್ರಿಸಿರುತ್ತಾರೆ. ಇದು ಸಾಯುವವರೆಗೂ ಜೊತೆಯಲ್ಲಿಯೇ ಇರುತ್ತದೆ. ಅಶಾಶ್ವತ ಹಚ್ಚೆಯನ್ನು ಚರ್ಮದ ಮೇಲ್ಭಾಗದಲ್ಲಿ ಮಾತ್ರ ಚಿತ್ರಿಸಿರುತ್ತಾರೆ. ಇದು ಕೆಲವು ದಿನಗಳ ಕಾಲಮಾತ್ರ ಇರುತ್ತದೆ. ನಂತರ ಅಳಿಸಿ ಹೋಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಮದರಂಗಿ ದೇಶ ವಿದೇಶಗಳಲ್ಲಿ ಹಚ್ಚೆ ಚಿತ್ರಕಲೆ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಇಂಗ್ಲೀಷ್‌ನಲ್ಲಿ ಅದನ್ನು 'ಟ್ಯಾಟೋ' ಎಂದು ಕರೆಯಲಾಗುತ್ತದೆ. ಇತ್ತೀಚೆಗೆ ಹಲವಾರು ತರಹದ ಚಿತ್ರಗಳನ್ನು ಮೈ ಮೇಲೆ ಸೃಜನಾತ್ಮಕ ಚಿತ್ರರಚಿಸಿಕೊಂಡು ಸೌಂದರ್ಯಮಯವಾಗಿ ಕಾಣುವ ದೃಷಿವಿಯಿಂದ ಹಲವಾರು ತರಹದ ಅಶಾಶ್ವತ ಚಿತ್ರಗಳನ್ನು ಬಿಡಿಸಿಕೊಳ್ಳುತ್ತಿರುವುದನ್ನು ಕೂಡಾ ನಾವು ಕಾಣಬಹುದಾಗಿದೆ.

ಶೀಗಿ ಚಿತ್ರಕಲೆ

ಈ ಚಿತ್ರಕಲೆಯನ್ನು ಸಹಿತ ಕೊಪ್ಪಳ ಜಿಲ್ಲೆಯಾದ್ಯಂತ ನಾವು ಕಾಣಬಹುದಾಗಿದೆ. ಶೀಗಿ ಹುಣ್ಣಿಮೆಯ ಹಬ್ಬದಂದು ಹಳ್ಳಿಗಳ ಮನೆಗಳನ್ನೆಲ್ಲಾ ಸಗಣಿಯಿಂದ ಸಾರಿಸಿ, ಗೋಡೆಗಳಿಗೆಲ್ಲ ಬಣ್ಣ, ಸುಣ್ಣವನ್ನು ಬಳಿದು, ಜನಪದ ಚಿತ್ರಗಳನ್ನು ರಚನೆ ಮಾಡುತ್ತಾರೆ. ಇದನ್ನು ಶೀಗಿ ಚಿತ್ರಕಲೆ ಎನ್ನಬಹುದು. ಸಾಮಾನ್ಯವಾಗಿ ಸೂರ್ಯ, ಚಂದ್ರ, ಹಸ್ತ, ಬೊಟ್ಟು, ವಕ್ರರೇಖೆಗಳು, ಹೂಬಳ್ಳಿಗಳು, ಚಿತ್ರದ ವಸ್ತು ವಿಷಯಗಲಾಗಿದ್ದು ನೋಡಲು ತುಂಬಾ ಸುಂದರವಾಗಿ ಕಾಣುತ್ತವೆ. ಹಬ್ಬದ ವಾತಾವರಣವನ್ನು ವ್ಯಕ್ತಪಡಿಸುವಂತಿರುತ್ತವೆ. ನೆಮ್ಮದಿಯನ್ನು ನೀಡುತ್ತವೆ. ಈ ಕಲೆಯು ಜನಸಾಮಾನ್ಯರಲ್ಲಿ ವಂಶಪಾರಂಪರ್ಯವಾಗಿಯೇ ಬೆಳೆಯುತ್ತಾ ಬಂದಿರುವುದು. ಜಿಲ್ಲೆಯಲ್ಲಿ ಈ ಕಲೆ ಇಂದಿಗೂ ಸೊಬಗನ್ನು ತಂದುಕೊಡುವಂತಹದ್ದಾಗಿದೆ.

ಮದರಂಗಿ ಚಿತ್ರಕಲೆ

ಮದರಂಗಿ ಚಿತ್ರಕಲೆಯು ಅಶಾಶ್ವತವಾದ ಚಿತ್ರಕಲೆ ಎಂದೇ ಕರೆಯಬಹುದಾಗಿದೆ. ಸಂಪ್ರದಾಯ, ಕಲಾತ್ಮಕತೆ, ಸೌಭಾಗ್ಯಗಳೆಲ್ಲ ಮದರಂಗಿಯ ರೂಪದಲ್ಲಿ ಸ್ತ್ರೀಯ ಕೈ, ಕಾಲುಗಳ ಮೇಲೆ ರಚಿಸಲ್ಪಡುತ್ತದೆ. ಸ್ತ್ರೀಪುರುಷರಿಬ್ಬರಲ್ಲಿಯೂ ಕಂಡುಬಂದರು ಸ್ತ್ರೀಯರಲ್ಲಿ ಹೆಚ್ಚಾಗಿ ರಚಿಸಲ್ಪಡುತ್ತದೆ. ಸಂಸ್ಕೃತ ಭಾಷೆಯಲ್ಲಿ ಮದಯಂತಿಕಾ, ಹಿಂದಿಯಲ್ಲಿ ಮೆಂಹದಿ, ಮರಾಠಿಯಲ್ಲಿ ಮಂದಿಯಾಚೆ, ತೆಲುಗಿನಲ್ಲಿ ಗೌರಿಂಟಾಡು, ಇಂಗ್ಲೀಷಿನಲ್ಲಿ ಹೆನ್ನು, ಪರ್ಸಿಯನ್‌ದಲ್ಲಿ 'ಹಿನಾ'[೩] ಎಂದು ಮದರಂಗಿಯನ್ನು ಕರೆಯಲಾಗಿದೆ.

ದೇಶ ವಿದೇಶಗಳಲ್ಲಿಯೂ ಸಹಿತ ಹಚ್ಚೆಯ ತರ ಮದರಂಗಿಯು ಪ್ರಸಿದ್ಧಿಯನ್ನು ಪಡೆದಿರುವುದನ್ನು ಕಾಣಬಹುದು. ಇದನ್ನು ಮುಸ್ಲಿಂ ಹೆಣ್ಣುಮಕ್ಕಳು ಹೆಚ್ಚಾಗಿ ರಚಿಸಿಕೊಳ್ಳುತ್ತಾರೆ. ಮದರಂಗಿ ಎಲೆಯಿಂದ ಮದರಂಗಿ ಗಿಡದ ಎಲೆಯನ್ನು ಚೆನ್ನಾಗಿ ಒಣಗಿಸಿ ಕುಟ್ಟಿ ಪುಡಿ ಮಾಡುತ್ತಾರೆ. ಈ ಪುಡಿಯನ್ನು ತೆಳ್ಳನೆಯ ಬಟ್ಟೆ ಇಲ್ಲವೆ ಹಿಟ್ಟು ಸೋಸುವ ಸರಣಿಗೆ (ಜರಡಿಯಲ್ಲಿ) ಹಾಕಿ ಸೋಸುತ್ತಾರೆ. ಸೋಸಿದ ಪುಡಿಯನ್ನು ಒಂದು ಪಾತ್ರೆಯಲ್ಲಿ ಇಟ್ಟಿರುತ್ತಾರೆ. ಹಚ್ಚಿಕೊಳ್ಳುವ ಸಂದರ್ಭದಲ್ಲಿ ಈ ಪುಡಿಯನ್ನು ಲಿಂಬೆರಸ, ಕಾಚು, ವಿಳ್ಯದೆಲೆಯ ಮಿಶ್ರಣದಲ್ಲಿ ಕೂಡಿಸಿ ನೀರನ್ನು ಹಾಕಿ ಮಿಶ್ರಮ ಮಾಡಿ ನೆನೆಸುತ್ತಾರೆ. ಅದು ಚೆನ್ನಾಗಿ ನೆನೆದ ಮೇಲೆ ಅದನ್ನು ಕೈಕಾಲುಗಳಿಗೆ ಹಚ್ಚಿಕೊಳ್ಳುತ್ತಾರೆ. ಮದರಂಗಿಯನ್ನು ರಾತ್ರಿಯ ವೇಳೆ ಮಲಗುವ ಮುನ್ನ ಹಚ್ಚಿ ಮಲಗಿಕೊಂಡು ಬೆಳಗಿನ ಜಾವ ತೊಳೆದುಕೊಳ್ಳುತ್ತಾರೆ. ಹಬ್ಬ, ಹುಣ್ಣಿಮೆ, ಉತ್ಸವ, ನಾಮಕರಣ, ಮದುವೆ ಇಂತಹ ಮಹತ್ವದ ದಿನಗಳಲ್ಲಿ ಮದರಂಗಿಯನ್ನು ಹೆಚ್ಚಾಗಿ ಹಚ್ಚಿಕೊಳ್ಳುವುದನ್ನು ಜಿಲ್ಲೆಯಲ್ಲಿಯೂ ಸಹಿತ ಕಾಣಬಹುದಾಗಿದೆ.

ತೊಗಲು ಗೊಂಬೆಯಾಟ

ತೊಗಲು ಗೊಂಬೆಯಾಟವು ಇಂದಿನ ದಿನಮಾನಗಳಲ್ಲಿ ಮರೆಯಾಗುತ್ತಾ ಬಂದಿದ್ದರು. ಕೊಪ್ಪಳ ಜಿಲ್ಲೆಯಲ್ಲಿ ಇಂದಿಗೂ ಸಹಿತ ಒಂದೆರಡು ಕುಟುಂಬಗಳನ್ನು ನಾವು ಕಾಣಬಹುದಾಗಿದೆ. ತೊಗಲು ಗೊಂಬೆಗೆ ಇಂಗ್ಲೀಷ್‌ನಲ್ಲಿ Leather Puppet ಎಂದು ಕರೆಯುತ್ತಾರೆ.

ರಾಮಾಯಣ, ಮಹಾಭಾರತ ಹಾಗೂ ಪುರಾಣಗಳಿಗೆ ಸಂಬಂಧಪಟ್ಟ ಹಲವಾರು ನಾಟಕಗಳನ್ನು ಈ ತೊಗಲುಗೊಂಬೆಯಾಟದಲ್ಲಿ ಕಾಣಬಹುದಾಗಿದೆ. ರಾಮಾಯಣಕ್ಕೆ ಸಂಬಂಧಪಟ್ಟ, ರಾಮ, ಲಕ್ಷ್ಮಣ, ಸೀತೆ, ಆಂಜನೇಯ, ಮಹಾರಾಕ್ಷಸರು, ವಾನರಸೈನಿಕರ, ಹೀಗೆ ಹಲವಾರು ಚಿತ್ರಗಳು, ಮಹಾಭಾರತಕ್ಕೆ ಸಂಬಂಧಪಟ್ಟಂತೆ ಕೃಷ್ಣ, ಅರ್ಜುನ, ಭೀಮ, ದುರ್ಯೋಧನ, ಕೌರವರು,

---

೦೩. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪುಟ – ೧೧೨

ಪಾಂಡವರಿಗೆ ಸಂಬಂಧಪಟ್ಟವರ ಹಲವಾರು ಚಿತ್ರಗಳು, ಪುರಾಣಗಳಿಗೆ ಸಂಬಂಧಪಟ್ಟ ಶಿವ-ಪಾರ್ವತಿ, ಲಕ್ಷ್ಮಿ-ಸರಸ್ವತಿ, ಬ್ರಹ್ಮ, ವಿಷ್ಣು, ಮಹೇಶ್ವರ, ಗಣಪತಿ, ಹೀಗೆ ಹಲವಾರು ಚಿತ್ರಗಳು ಜಿಂಕೆ, ಮೇಕೆ, ಹಸು, ಎಮ್ಮೆ ಹೀಗೆ ಹಲವಾರು ಪ್ರಾಣಿಗಳ ಚರ್ಮವನ್ನು ಬಳಸಿಕೊಂಡು ಗೊಂಬೆಗಳನ್ನು ತಯಾರಿಸಿ ಬಣ್ಣ ಬಳಿಯುತ್ತಿದ್ದರು.

ತೊಗಲು ಗೊಂಬೆಯಲ್ಲಿ ಸಾಮಾನ್ಯವಾಗಿ ಎರಡು ರೀತಿಯ ಗೊಂಬೆಗಳನ್ನು ನಾವು ಕಾಣುತ್ತೇವೆ. ೧. ಸೂತ್ರದ ಗೊಂಬೆ, ೨.ಕೀಲು ಗೊಂಬೆ, ಸೂತ್ರದ ಗೊಂಬೆಯು ದೇಶದ ಕೆಲವೆಡೆ ಮಾತ್ರ ಕಂಡುಬರುತ್ತದೆ. ಆದರೆ ಕೀಲುಗೊಂಬೆ ದೇಶದ ಹಲವೆಡೆ ಕಂಡುಬಂದಿದ್ದು, ಜಿಲ್ಲೆಯಲ್ಲಿಯು ಸಹ ಇದೆ. ಇದು ಕೈ ಕಾಲುಗಳಲ್ಲಿ, ಮುಖಕ್ಕೆ ಕಡ್ಡಿಯನ್ನು ಹಾಕಿ ಕಿಳ್ಳಿಕ್ಯಾತರು ಪರದೆಯ ಹಿಂದೆ ಮಾತಿಗೆ, ಪ್ರಸಂಗಕ್ಕೆ ತಕ್ಕಂತೆ ಅವುಗಳನ್ನು ಅಲ್ಲಾಡಿಸಿ ಪರದೆಯ ಹಿಂದೆ ಮಾತಿಗೆ, ಪ್ರಸಂಗಕ್ಕೆ ತಕ್ಕಂತೆ ಅವುಗಳನ್ನು ಅಲ್ಲಾಡಿಸಿ ಅವುಗಳಿಗೆ ಚಲನೆ ಕೊಡುತ್ತಾರೆ. ಹಿಂದಿನಿಂದ ಬೆಳಕನ್ನು ಚಲ್ಲುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಬೆಳಕಿನಲ್ಲಿ ಗೊಂಬೆಯ ನೆರಳು ಮುಂದಿರುವ ಬಿಳಿ ಪರದೆಯ ಮೇಲೆ ಮೂಡುತ್ತದೆ. ಇದನ್ನೇ ತೊಗಲುಗೊಂಬೆಯಾಟ ಎನ್ನುತ್ತಾರೆ. ಇದರ ಮುಂದುವರೆದ ಭಾಗವೇ ಇತ್ತೀಚಿನ ದಿನಮಾನಗಳಲ್ಲಿ ಕಂಡುಬರುವ ಚಲನಚಿತ್ರ ಎಂದು ಹೇಳಬಹುದಾಗಿದೆ.

ಜಿಲ್ಲೆಯ ಕೊಪ್ಪಳ ತಾಲೂಕಿನ 'ಮೋರಹಳ್ಳಿ' ಗ್ರಾಮದ ದಿ.ದೊಡ್ಡಬಾಳಪ್ಪ ಕಿಳ್ಳಿಕ್ಯಾತರು ಹಿರಿಯ ತೊಗಲುಗಂಬೆಯಾಟದ ಕಲಾವಿದ ತಮ್ಮ ಹಿರಿಯ ತಲೆಮಾರಿನಿಂದ ಈ ಆಟ ಆಡುತ್ತಾರೆ. ಆದರೆ ಕೆಲವು ಅನಾನುಕೂಲದ ಕಾರಣದಿಂದ ಈ ಆಟ ನಿಲ್ಲಿಸಿದ್ದನು. ಅಳವಂಡಿಯ ಮುಖ್ಯಾಧ್ಯಾಪಕರಾಗಿದ್ದ. ಹೆಚ್.ಎಸ್.ಪಾಟೀಲ್‌ರು ತಾಲೂಕಿನ ನಾನಾ ಕಡೆ ಆಟ ಆಡಲು ಅನುಕೂಲತೆ ಒದಗಿಸಿದರು.[೪] ಮುಂದೆ ಸರಳ ರೀತಿಯಿಂದ ಕಾರ್ಯಕ್ರಮ ನೀಡಿ ಅಂತರ ರಾಷ್ಟ್ರೀಯ ಕಲಾವಿದರಾಗಿ ತೆಹರಾನಿಗೂ ಹೋಗಿ ಬಂದಿದ್ದಾರೆ. ಈತನಿಗೆ ಜನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಈತನ ಮಗ ವಿರೂಪಾಕ್ಷಪ್ಪ ಕ್ಷತ್ರಿ ಹುಲಕೋಟಿ ನಿವಾಸಿಯಾಗಿದ್ದು ಈತನಿಗೂ ಜಾನಪದ ಅಕಾಡೆಮಿ ಪ್ರಶಸ್ತಿ ಬಂದಿದೆ. ತೊಗಲು ಗೊಂಬೆಯಾಟದಲ್ಲಿ ಕೇವಲ ಒಬ್ಬರ ಪಾತ್ರ ಮುಖ್ಯವಾಗಿರದೆ, ಇಡೀ ಕುಟುಂಬದವರ ಪಾತ್ರ ಮುಖ್ಯವಾಗಿರುತ್ತದೆ.

ಕೊಪ್ಪಳ ಜಿಲ್ಲೆಯಲ್ಲಿ ಕೇವಲ ಇವಷ್ಟೇ ಕಲೆಗಳಲ್ಲದೆ ಇನ್ನೂ ಹಲವಾರು ಕಲೆಗಳಿವೆ. ಇವುಗಳ ಬಗ್ಗೆ ಈ ನಿಟ್ಟಿನಲ್ಲಿ ಇನ್ನೂ ಅನೇಕ ಅಧ್ಯಯನಗಳು ನಡೆಯಬೇಕಾಗಿವೆ. ಕೊಪ್ಪಳ ಜಿಲ್ಲೆಯ ಜನಪದ ಚಿತ್ರಕಲೆಗಳನ್ನು ಗಮನಿಸಿದಾಗ ಹಲವಾರು ಅಂಶಗಳು ಕಂಡುಬರುತ್ತವೆ. ಈ

---

೧೪. ಪ್ರೊ. ಅಲ್ಲಮಪ್ರಭು ಬೆಟ್ಟದೂರ (ಸಂ.) : ಕೊಪ್ಪಳ ಜಿಲ್ಲಾ ದರ್ಶನ, ಪುಟ - ೨೧೮

ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಜನಪದ ಕಲಾ ಪ್ರಕಾರವೆಂದರೆ ಕಿನ್ನಾಳ ಕಲೆಯಾಗಿದೆ. ಇದಲ್ಲದೆ ಕರ್ನಾಟಕದ ಇನ್ನುಳಿದ ಪ್ರದೇಶದಂತೆ ಇಲ್ಲಿಯೂ ಸಹಿತ ಹಚ್ಚೆ ಚಿತ್ರಕಲೆ, ರಂಗೋಲಿ, ನೇಗಿ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಕಸೂತಿ ಕಲೆ, ನೆಯ್ಗೆ ಕಲೆ, ಮದರಂಗಿ ಕಲೆ ಇನ್ನಿತರ ಕರಕುಶಲ ಕಲೆಗಳು ಸಾಮಾನ್ಯವಾಗಿ ಕಂಡುಬರುತ್ತವೆ.

ಯಾವುದೇ ಪ್ರದೇಶದ ಜನಪದ ಕಲಾ ಪ್ರಕಾರಗಳು ಆಯಾ ಭಾಗದ ನಂಬಿಕೆ ಆಚರಣೆ, ಧಾರ್ಮಿಕತೆ, ಸಾಮಾಜಿಕ ಬದುಕು, ನಿತ್ಯ ಜೀವನದ ಘಟನೆಗಳು, ರಾಜಕೀಯ ಘಟನಾವಳಿಗಳು, ಪರಿಸರದ ಪ್ರಭಾವ ಮತ್ತು ಒಟ್ಟಾರೆ ಆ ಭಾಗದ ಸಂಸ್ಕೃತಿಯನ್ನು ಆಧರಿಸಿ ಬೆಳೆಯುತ್ತವೆ. ಕಾಲ ಬದಲಾದಂತೆ, ಮನುಷ್ಯನ ಜೀವನ ವಿಧಾನ ಬದಲಾದಂತೆ, ಜನಪದ ಕಲೆಗಳು ಸಹಿತ ಬದಲಾಗುತ್ತ ಬಂದಿರುವುದನ್ನು ಗಮನಿಸಬಹುದಾಗಿದೆ. ಈ ಅಂಶವು ಕೊಪ್ಪಳ ಜಿಲ್ಲೆಯ ಜನಪದ ಚಿತ್ರಕಲೆಗೂ ಅನ್ವಯಿಸುತ್ತದೆ. ಪ್ರಾರಂಭಿಕ ಹಂತದ ಆದಿಮಾನವ ಚಿತ್ರಗಳು ಜಿಲ್ಲೆಯ ಮೂಲ ಸಂಸ್ಕೃತಿಯ ಕಡೆಗೆ ಗಮನ ಸೆಳೆದರೆ, ಐತಿಹಾಸಿಕ ಕಾಲದ ಜನಪದ ಕಲಾಪ್ರಕಾರಗಳು ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗಳ ಕಡೆಗೆ ಬೆರಳು ಮಾಡುತ್ತವೆ. ಜಿಲ್ಲೆಯಲ್ಲಿ ಇರುವ ಜನಪದ ಕಲಾ ಪ್ರಕಾರಗಳಲ್ಲಿ ವಿಜಯನಗರ ಪತನ ನಂತರ ಬಹುಮಟ್ಟಿನ ಬದಲಾವಣೆಗಳು ಘಟಿಸಿರುವುದು ಕಂಡುಬರುತ್ತದೆ. ಈ ಮಾತಿಗೆ ಕಿನ್ನಾಳ ಕಲೆಯು ಒಂದು ಉತ್ತಮ ನಿದರ್ಶನವಾಗಿದೆ. ವಿಜಯನಗರ ಕಾಲದಲ್ಲಿ ರಾಜಾಶ್ರಯ ಪಡೆದಿದ್ದ ಜಿಲ್ಲೆಯ ಹಲವಾರು ಕಲಾವಿದರು ರಾಜಾಶ್ರಯ ತಪ್ಪಿದ ನಂತರ ಬೇರೆ ಬೇರೆ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿ ಸ್ಥಳೀಯ ಅಂಶಗಳನ್ನು ಒಳಗೊಂಡಂತೆ ವಿವಿಧ ರೀತಿಯ ಜನಪದ ಕಲಾಪ್ರಕಾರಗಳಿಗೆ ರೂಪ ಕೊಡ ತೊಡಗಿದರು. ಅದರಿಂದಾಗಿಯೇ ಜಿಲ್ಲೆಯ ಜನಪದ ಕಲೆಗಳಲ್ಲಿ ವಿಜಯನಗರ ಸಾಮ್ರಾಟರ ಪ್ರಭಾವ ಕಂಡುಬರುತ್ತದೆ.

ಜಿಲ್ಲೆಯ ಜನಪದ ಕಲೆಗಳು ಬಹುಮಟ್ಟಿಗೆ ಒಂದೆ ಕಡೆಗೆ ಹೆಚ್ಚಿನ ಪ್ರಮಾಣದಲ್ಲಿ ನೆಲೆನಿಂತಂತೆ ಕಂಡುಬರುತ್ತದೆ. ಕನಕಗಿರಿ, ಭಾಗ್ಯನಗರ, ಆನೆಗುಂದಿ, ಕಿನ್ನಾಳ ಮುಂತಾದವುಗಳು ಇಂದಿಗೂ ಸಹಿತ ಜನಪದ ಕಲೆಯ ಕೇಂದ್ರಗಳಾಗಿ ಗುರುತಿಸಿಕೊಂಡಿವೆ. ಇವುಗಳನ್ನು ಹೊರತುಪಡಿಸಿದಂತೆ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಕಲಾ ಪ್ರಕಾರಗಳು ಬಳಕೆಯಲ್ಲಿವೆ. ದೀಪಾವಳಿಯಲ್ಲಿ ಸಗಣಿಯಿಂದ ಪಾಂಡವರ ಮೂರ್ತಿಗಳನ್ನು ಮಾಡುವುದು, ಕಾರಹುಣ್ಣಿಮೆಯಲ್ಲಿ ಮನೆಬಾಗಿಲು ಮತ್ತು ಎತ್ತುಗಳಿಗೆ ಬಣ್ಣದ ಅಲಂಕಾರ ಮಾಡುವುದು, ದನದ ಕೊಟ್ಟಿಗೆಗಳನ್ನು ಅಲಂಕಾರ ಮಾಡುವುದು, ಮದುವೆ ಮುಂತಾದ ಸಮಾರಂಭಗಳಲ್ಲಿ ಗೋಡೆಯ ಮೇಲೆ ಸಂಬಂಧಪಟ್ಟ ಚಿತ್ರಗಳನ್ನು ರಚಿಸುವುದು, ದಿನನಿತ್ಯ ರಂಗದಲ್ಲಿ ಹಾಕುವುದು, ಜಾತ್ರೆ ಉತ್ಸವಗಳಲ್ಲಿ ಆಯಾ ದೇವರಿಗೆ ಸಂಬಂಧಪಟ್ಟ ಚಿತ್ರಗಳನ್ನು

ರಚಿಸುವುದು, ದೇವಾಲಯಗಳನ್ನು ಸುಣ್ಣ, ಬಣ್ಣ ಮತ್ತು ಚಿತ್ರಗಳಿಂದ ಅಲಂಕರಿಸುವುದು, ಹಚ್ಚೆ ಹಾಕಿಸಿಕೊಳ್ಳುವುದು ಮುಂತಾದ ಹಲವಾರು ಜನಪದ ಕಲಾ ಪ್ರಕಾರಗಳು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಪ್ರಚಲಿತವಾಗಿರುವುದು ಕಂಡುಬರುತ್ತದೆ.

ಕೌದಿಕಲೆ

ಈ ಕಲೆಯು ಒಂದು ಜನಪದ ಕಲಾಪ್ರಕಾರವಾಗಿದ್ದು, ಜನ ಸಾಮಾನ್ಯರಿಂದ ರಚಿಸಲ್ಪಟ್ಟಿರುತ್ತದೆ. ಈ ಕಲೆಯು ಜಿಲ್ಲೆಯಾದ್ಯಂತ ಕಂಡುಬಂದಿದ್ದು ಇತ್ತೀಚಿನ ದಿನಮಾನಗಳಲ್ಲಿ ಇದು ಅಳಿವಿನಂಚಿನಲ್ಲಿದೆ ಎಂದು ಹೇಳಬಹುದು. ಆಧುನಿಕ ಯುಗಕ್ಕೆ ಮಾರುಹೋದ ಜನರು ಇಂತಹ ಕೌದಿಗಳನ್ನು ಬಳಸುವುದನ್ನು ಕಡಿಮೆ ಮಾಡುತ್ತಿದ್ದಾರೆ.

ಕೌದಿಯನ್ನು ಬಟ್ಟೆಯಿಂದ ತಯಾರಿಸುತ್ತಾರೆ. ಇಲ್ಲಿ ಹಲವಾರು ಹಳೆಯ ಬಟ್ಟೆಗಳನ್ನು ಚಿಕ್ಕ ಚಿಕ್ಕದಾಗಿ ಚೌಕ, ಆಯತ, ತ್ರಿಕೋನ ಹೀಗೆ ಹಲವಾರು ಆಕಾರಗಳಲ್ಲಿ ಕತ್ತರಿಸಿ ಬೇರೆ ಬೇರೆ ಬಣ್ಣಗಳ ಬಟ್ಟೆಯನ್ನು ಜೋಡಿಸುತ್ತಾ ಹೊಲಿಗೆ ಹಾಕುತ್ತಾರೆ. ಹೊಲಿಗೆಯಲ್ಲಿಯೇ ಹಲವಾರು ಅಲಂಕಾರಗಳನ್ನು ಕೌದಿಯಲ್ಲಿ ರಚನೆಮಾಡಿರುತ್ತಾರೆ. ಪ್ರತಿಯೊಂದು ಮೂಲೆಗೂ ಒಂದೊಂದು ತ್ರಿಕೋನಾಕಾರದ ಬಟ್ಟೆಯನ್ನು ಹೊಲೆದು, ಅದು ಹೊರಚಾಚಿರುವಂತೆ ಮಾಡಿರುತ್ತಾರೆ. ಇವುಗಳನ್ನು ಯಂತ್ರದ ಸಹಾಯವಿಲ್ಲದೇ ಕೈಯಿಂದಲೇ ಹೊಲೆಯುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಯಂತ್ರಗಳನ್ನು ಬಳಸಿಕೊಂಡು ಕೌದಿ ನಿರ್ಮಾಣ ಮಾಡುತ್ತಿದ್ದಾರೆ.

ಕೌದಿಗಳನ್ನು ಚಿಕ್ಕಮಕ್ಕಳ ತೊಟ್ಟಿಲಿನಲ್ಲಿ ಹಾಸುವ ಕೌದಿಗಳನ್ನು ತೊಟ್ಟಿಲಿನ ಅಳತೆಗೆ ತಕ್ಕಂತೆ ಹೊಲಿದಿರುತ್ತಾರೆ. ಇನ್ನೂ ಸಾಮಾನ್ಯರಿಗಾಗಿ ಸ್ವಲ್ಪ ದೊಡ್ಡ ಗಾತ್ರದಲ್ಲಿ ಇವುಗಳನ್ನು ಹೊಲಿದಿರುತ್ತಾರೆ. ಇವುಗಳು ನೋಡಲು ಹಲವಾರು ವರ್ಣಗಳಿಂದ ಕೂಡಿರುವುದರಿಂದ ಬೇಗ ಆಕರ್ಷಕವಾಗುತ್ತಿವೆ. ಕೌದಿಗಳನ್ನು ಹೊಲಿಯುವ ಹಲವಾರು ವರ್ಗಗಳು ಜಿಲ್ಲೆಯಲ್ಲಿರುವುದನ್ನು ಕಾಣಬಹುದಾಗಿದೆ.

ಕರಕುಶಲ ಕಲೆ

ಜಿಲ್ಲೆಯಲ್ಲಿ ಹಲವಾರು ಕರಕುಶಲ ಕಲೆಗಳನ್ನು ನಾವು ಕಾಣಬಹುದಾಗಿದೆ. ಅದರಲ್ಲಿ ಮುಖ್ಯವಾಗಿ ಆನೆಗುಂದಿಯಲ್ಲಿರುವ ಮಹಿಳಾ ಕರಕುಶಲ ಕೇಂದ್ರ ಆನೆಗುಂದಿಯನ್ನು ಮುಖ್ಯವಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಈ ಕರಕುಶಲ ಕೇಂದ್ರವು ಕಿಷ್ಕಿಂದಾ ಟ್ರಸ್ಟ್‌ವತಿಯಿಂದ ೧೯೯೯ರಲ್ಲಿ ಸ್ಥಾಪನೆಯಾಯಿತು. ಇದರ ಮೂಲ ಉದ್ದೇಶ ನೈಸರ್ಗಿಕವಾಗಿ ದೊರೆಯುವ ಬಾಳೆನಾರನ್ನು ಬಳಸಿಕೊಂಡು ಸ್ಥಳೀಯ ಮಹಿಳೆಯರಿಗೆ ಕರಕುಶಲ ತರಬೇತಿ ನೀಡಿ, ಅವರನ್ನು ಸ್ವಾವಲಂಬನೆಯತ್ತ ಕೊಂಡೊಯ್ಯುವುದು

ಮತ್ತು ಕರಕುಶಲ ಕಲಾಕೃತಿ ತಯಾರಿಸಿ, ಮಾರಾಟ ಮಾಡಿ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ. ಕೇವಲ ನಾಲ್ಕು ಮಹಿಳೆಯರಿಂದ ಆರಂಭವಾದ ಈ ಕೈಗಾರಿಕೆಯು ಇಂದು ೪೦೦ಕ್ಕೂ ಹೆಚ್ಚು ಮಹಿಳೆಯರನ್ನು ತನ್ನ ವ್ಯಾಪ್ತಿಗೆ ಸೆಳೆದುಕೊಂಡಿದೆ.

ಇಲ್ಲಿ ವರ್ಣರಂಜಿತ ನೈಸರ್ಗಿಕ ಬಾಳೆ ನಾರಿನಿಂದ ತಯಾರಾಗುವ ಕರಕುಶಲ ಕಲಾಕೃತಿಗಳು ಕೇವಲ ಕರ್ನಾಟಕ ಮಾತ್ರವಲ್ಲದೆ, ದೇಶವಿದೇಶಗಳಲ್ಲಿಯೂ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿದೆ. ಇಲ್ಲಿ ಹೆಚ್ಚಾಗಿ ಅಲಂಕಾರಿಕವಾದ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಲಾಗುತ್ತದೆ. ಅವುಗಳಲ್ಲಿ ಲೇಡಿಸ್ ಹ್ಯಾಂಡ್ ಬ್ಯಾಗ್, ಶಾರ್ಟ್ ಬ್ಯಾಗ್, ಲಾಂಗ್‌ಬ್ಯಾಗ್, ಮ್ಯಾಟುಗಳು, ಮುಚ್ಚಳಿಕೆಗಳು, ಡಬ್ಬಿಗಳು, ಬ್ಯಾಂಗಲ್ ಬಾಕ್ಸ್, ಮೇಕಪ್ ಕಿಟ್, ತಂಪಾಗಿರಿಸುವ ಕ್ಯಾಪ್, ಹ್ಯಾಟ್, ಆರಾಮದಾಯಕ ಪಾದರಕ್ಷೆಗಳು, ಮಣಿಸರ, ಬುಟ್ಟಿಗಳು, ಟ್ರೇಗಳು, ಫೋಟೋ ಫ್ರೇಮ್‌ಗಳು, ಅನೇಕ ಆಟಿಕೆ ಸಾಮಾನುಗಳು, ಡೋರ್ ಮ್ಯಾಟ್, ಟೇಬಲ್‌ಮ್ಯಾಟ್, ಕುಶನ್ ಕವರ್ಸ್, ಮೊಬೈಲ್ ಕವರ್ಸ್, ಬಾಟಲ್ ಕಂಟೇನರ್, ಬುಕ್ಸ್ ಸ್ಟ್ಯಾಂಡ್, ಚಾಪೆ, ತೋರಣ, ಅಲಂಕಾರಿಕ ಬಳೆಗಳು, ಹಣ್ಣಿನ ಬಾಸ್ಕೆಟ್, ಅನೇಕ ಆಕಾರದ ತಟ್ಟೆಗಳು, ಬಟ್ಟೆಯ ಗೊಂಬೆಗಳು ಹೂದಾನಿ, ಚಾಕಾಕೃತಿಯ ಡಬ್ಬಿಗಳು, ದುಂಡಾದ ಮ್ಯಾಟಗಳು, ಗ್ರೀಟಿಂಗ್ಸ್‌ಗಳು ಇನ್ನೂ ಅನೇಕ ತರಹದ ಕರಕುಶಲ ಕಲಾಕೃತಿಗಳು ಇಲ್ಲಿ ವೈವಿಧ್ಯಮಯವಾಗಿ ತಯಾರಾಗುತ್ತವೆ. ಈ ಕುಶಲ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಕುಶಲ ಕರ್ಮಿಗಳನ್ನು ತಲಾ ೧೫ ಜನರಂತೆ ಒಂದು ಗುಂಪನ್ನು ಮಾಡಿ ಒಂದೊಂದು ರೀತಿಯ ಕಾರ್ಯವನ್ನು ಅವರಿಗೆ ವಹಿಸಿದ್ದಾರೆ. ಈ ರೀತಿಯ ೧೮ ಗುಂಪುಗಳಿದ್ದು, ಒಂದೊಂದು ಗುಂಪು ಒಂದೊಂದು ಕಾರ್ಯ ನಿರ್ವಹಿಸುತ್ತವೆ. ನಾರನ್ನು ಹೊಸೆದು ಹುರಿ ತಯಾರಿಸುವವರು ಒಂದು ಗುಂಪಾದರೆ, ಆ ಹುರಿಗಳನ್ನು ತೆಗೆದುಕೊಂಡು ಇನ್ನೊಂದು ಗುಂಪು ಹ್ಯಾಂಡ್ ಬ್ಯಾಗ್ ತಯಾರಿಸುತ್ತದೆ. ಇನ್ನೊಂದು ಗುಂಪು ಮ್ಯಾಟ್ ತಯಾರಿಸುತ್ತದೆ. ಮತ್ತೆರಡು ಗುಂಪು ಬುಟ್ಟಿ ಹೆಣೆಯುತ್ತದೆ. ಈ ರೀತಿ ಪ್ರತಿಯೊಂದು ಗುಂಪು ಒಂದೊಂದು ಕಾರ್ಯನಿರ್ವಹಿಸುತ್ತವೆ.

ಈ ರೀತಿ ಕರಕುಶಲ ಕರ್ಮಿಗಳು ಹಲವಾರು ಕಲಾಕೃತಿಗಳನ್ನು ಕಲಾತ್ಮಕವಾಗಿಯೂ ಮತ್ತು ವಿಶೇಷವಾಗಿಯೂ ತಯಾರಿಸುತ್ತಾರೆ. ಹೀಗೆ ವಿಭಿನ್ನವಾಗಿ ತಯಾರಾದ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಮತ್ತು ಮಾರಾಟಕ್ಕೆ ಕಳಿಸುತ್ತಾರೆ. ಇಂತಹ ಕರಕುಶಲ ಕಲೆಯಿಂದ ಜಿಲ್ಲೆಯ ಕಲೆಯು ಇನ್ನೂ ಶ್ರೀಮಂತಗೊಂಡಿದೆ. ಮತ್ತು ಹಲವಾರು ಜನರ ಪ್ರಶಂಸೆಗೆ ಪಾತ್ರವಾಗಿದೆ.

□□□

ಕಿನ್ನಾಳ ರೇಖಾಚಿತ್ರಗಳು



ನರಸಿಂಹಾವತಾರ




ವಾಮನಾವತಾರ

ಕಿನ್ನಾಳ ರೇಖಾಚಿತ್ರಗಳು



ರಾಮ–ರಾವನರ ಯುದ್ಧ



ರತಿ–ಮನ್ಮತರ ಯುದ್ಧ



ಕುಂಕುಮ ಭರಣಿ



ನಕ್ಷತ್ರಾಕಾರದ ಚೌಕಿ



ಆಭರಣಗಳನ್ನು ಇಡುವ ಪೆಟ್ಟಿಗೆ




ಕಿನ್ನಾಳದ ಕಲಾಕೃತಿಗಳು



ಷಡ್ಬುಜಾಕೃತಿಯ ಮೇಲಿನ ಚಿತ್ರಗಳು



ವೃತ್ತಾಕೃತಿಯ ಮೇಲಿನ ಚಿತ್ರಗಳು







ಚೌಕಾಕೃತಿಯ ಮೇಲಿನ ಚಿತ್ರಗಳು







ಕಲಾಕೃತಿ ರಚನೆಯಲ್ಲಿ ತೊಡಗಿರುವ ಕಿನ್ನಾಳ ಕಲಾವಿದರು

ಅಧ್ಯಾಯ - ಐದು

ಕೊಪ್ಪಳ ಜಿಲ್ಲೆಯ ಶಿಷ್ಟಪದ ಚಿತ್ರಕಲೆ

ಕಲಾವಿದನು ಕಲಾಕೃತಿಗಳನ್ನು ತನಗಿಷ್ಟ ಬಂದಂತೆ ರಚನೆ ಮಾಡದೆ ಒಂದು ಮಾರ್ಗ ಮತ್ತು ಪರಂಪರೆಗೆ ಅನುಗುಣವಾಗಿ ಪ್ರಮಾಣ ಬದ್ಧವಾಗಿ, ತಾಳಮಾನಕ್ಕೆ ಅನುಗುಣವಾಗಿ ಕೃತಿ ರಚಿಸುತ್ತಾನೆ. ಇಂತಹ ವಿಧಾನವು ಶಿಷ್ಟ ಎಂಬುದಾಗಿ ಕರೆಸಿಕೊಂಡಿದೆ. ಚಿತ್ರರಚನೆಯನ್ನು ಮಾಡುವ ಹವ್ಯಾಸವು ಮಾನವನಿಗೆ ಶಿಲಾಯುಗ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಆತ ನಾಗರಿಕ ಬದುಕಿಗೆ ಕಾಲಿಡುವ ಮುಂಚಿನ ಅನಾಗರಿಕ, ಪ್ರಾಣಿ ಸದೃಶ್ಯ ಜೀವನ ವಿಧಾನದಲ್ಲಿಯು ಚಿತ್ರರಚನೆ ಮಾಡಿದ್ದಾನೆ. ಈ ಚಿತ್ರಗಳು ಮತ್ತು ನಂತರದ ಜನಪದ ಚಿತ್ರಗಳು ನಿರ್ದಿಷ್ಟವಾದ ರಚನಾವಿಧಾನಗಳನ್ನು ಅನುಸರಿಸಿದಂತವುಗಳಲ್ಲ ಕಲಾವಿದನ ಭಾವನೆ ಅದಕ್ಕೆ ಅನುಗುಣವಾದ ತಕ್ಷಣದ ಪ್ರತಿಕ್ರಿಯೆಯ ರೂಪದಲ್ಲಿ ಈ ಕಲಾಕೃತಿಗಳಿವೆ. ಆದರೆ ಮುಂದೆ ಮಾನವ ನಾಗರಿಕತೆಯ ಬದುಕನ್ನು ಅಳವಡಿಸಿಕೊಂಡ ನಂತರ ತನ್ನ ಜೀವನ ಶೈಲಿಗೆ ಮಾರ್ಗ ಸೂಚಿಗಳನ್ನು ಹಾಕಿಕೊಂಡಂತೆ ಚಿತ್ರಕಲೆಗೂ ಸಹಿತ ಹೀಗೆ ರಚನೆ ಮಾಡಬೇಕೆಂಬುದಾಗಿ ಒಂದು ಮಾರ್ಗದ ಚೌಕಟ್ಟನ್ನು ರೂಪಿಸಿಕೊಂಡನು. ಇದನ್ನು ಮಾರ್ಗ ಅಥವಾ ಶಿಷ್ಟ ಎಂಬುದಾಗಿ ವಿದ್ವಾಂಸರು ಗುರುತಿಸಿದ್ದಾರೆ.

ಕೊಪ್ಪಳ ಜಿಲ್ಲೆಯಲ್ಲಿ ಅನೇಕ ಪ್ರಾಚೀನ, ದೇವಾಲಯಗಳು ಆಧುನಿಕ ದೇವಾಲಯಗಳು ಮತ್ತು ಮಠಗಳಲ್ಲಿ ಇಂತಹ ಶಿಷ್ಟಪದ ಚಿತ್ರಗಳಿವೆ. ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಈ ರೀತಿಯ ಶಿಷ್ಟಪದ ಚಿತ್ರಗಳನ್ನು ಒಂದೊಂದಾಗಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಕನಕಾಚಲಪತಿ ದೇವಾಲಯ ಕನಕಗಿರಿ

ಇದು ಗಂಗಾವತಿ ತಾಲೂಕಿನಲ್ಲಿದ್ದ ಕನಕಗಿರಿಯು ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಅದರ ಅಧೀನ ಪಾಳೆಗಾರಿಕಾ ರಾಜ್ಯವಾಗಿತ್ತು. ಇಲ್ಲಿ ಗುಜ್ಜಲವಂಶದ ನಾಯಕ ಮನೆತನದವರು

ಕ್ರಿ.ಶ.೧೪೩೬ ರಿಂದ ೧೮೩೩ರವರೆಗೆ ಆಡಳಿತ ನಡೆಸಿದರು.[೧] ಕಲಾಪ್ರೇಮಿಗಳಾದ ಇವರು ತಮ್ಮ ರಾಜಧಾನಿ ಕನಕಗಿರಿಯಲ್ಲಿ ಹಲವಾರು ಕಲಾಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಇಲ್ಲಿಯ ದೊರೆಗಳಲ್ಲಿ ಕ್ರಿ.ಶ.೧೫೩೩ ರಿಂದ ೧೫೭೮ರವರೆಗೆ ಆಡಳಿತ ನಡೆಸಿದ ಮೂರನೆಯ ದೊರೆ ಕೆಲ ವಡಿ ಉಡಚನಾಯಕನು ಚಿತ್ರಕಲಾಪ್ರೇಮಿಯಾಗಿದ್ದನು.[೨] ಇವನು ಕನಕಗಿರಿಯ ಪ್ರಧಾನ ದೇವಾಲಯವಾದ ಶ್ರೀ ಕನಕಾಚಲಪತಿ ದೇವಸ್ಥಾನದಲ್ಲಿ ವಿಜಯನಗರ ಶೈಲಿಯ ವರ್ಣಚಿತ್ರಗಳನ್ನು ಹಲವಾರು ಕಲಾವಿದರಿಂದ ರಚಿಸಿದ್ದಾನೆ.

ಕನಕಾಚಲ (ಲಕ್ಷ್ಮೀನರಸಿಂಹ) ದೇವಾಲಯದ ರಂಗಮಂಟಪ ಹಾಗೂ ದ್ವಾರಮಂಟಪದ ಛತ್ತಿನಲ್ಲಿ ವರ್ಣಚಿತ್ರಗಳನ್ನು ಬಿಡಿಸಲಾಗಿತ್ತು. ಆದರೆ ಅಲ್ಲಿರುವ ಯಾವ ಚಿತ್ರಗಳು ಈಗ ಕಂಡುಬರುವುದಿಲ್ಲ. ಅವು ಸಂಪೂರ್ಣವಾಗಿ ನಾಶಗೊಂಡಿವೆ.

ಹಲವಾರು ಪುಸ್ತಕಗಳ ಮಾಹಿತಿಯಂತೆ ಚಿತ್ರಗಳನ್ನು ಈ ಕೆಳಗಿನಂತೆ ತಿಳಿಸಬಹುದಾಗಿದೆ. ದ್ವಾರಮಂಟಪದ ಛತ್ತಿನ ಅಂಕಣಗಳು ಆಯತಾಕಾರದಲ್ಲಿವೆ. ಅದಕ್ಕೆ ಪೂರಕವಾಗಿ ಇಡೀ ಅಂಕಣವನ್ನು ವ್ಯಾಪಿಸಿದಂತೆ ಚಿತ್ರಗಳನ್ನು ಸಂಯೋಜಿಸಲಾಗದೆ. ಆಯತಾಕಾರದ ಚಿತ್ರಪಟ್ಟಿಕೆಯ ಮಧ್ಯದಲ್ಲಿ ಒಂದರೊಳಗೊಂದರಂತೆ ಮೂರುಚೌಕ ಅಂಕಣಗಳನ್ನು ಸಂಯೋಜಿಸಿ, ಅದರ ಮಧ್ಯದಲ್ಲಿ ಮೂರು ವೃತ್ತ ಪಟ್ಟಿಕೆಗಳಿದ್ದು, ಒಳಭಾಗವೆಲ್ಲ ಅಲಂಕೃತಗೊಂಡಿದೆ. ವೃತ್ತಗಳ ನಡುವೆ ಚಿತ್ರವೊಂದರಲ್ಲಿ ಮುದ್ದಾದ ಬಾಲಕೃಷ್ಣನ ಚಿತ್ರವಿದ್ದು, ಬಲಗಾಲನ್ನು ಕೆಳಕ್ಕೆ ಇಳಿಬಿಟ್ಟು, ಎಡಗಾಲನ್ನು ಮೇಲೆತ್ತಿ ಹೆಬ್ಬೆರಳನ್ನು ಬಾಯಲ್ಲಿರಿಸಿಕೊಂಡ ಬಾಲಕೃಷ್ಣ ನಗ್ನನಾಗಿದ್ದಾನೆ. ವೃತ್ತಗಳ ನಡುವೆ ಚೌಕಾಕಾರಪಟ್ಟಿಗಳಲ್ಲಿ ಎಲೆಯಾಕೃತಿಗಳು, ಅಲಂಕೃತ ರಂಗೋಲಿಯಾಕೃತಿಗಳಿದ್ದು ಪುನರಾವರ್ತಿತವಾಗುತ್ತಿದ್ದರೂ ಎಲ್ಲವೂ ಒಂದೇ ಪ್ರಮಾಣದಲ್ಲಿರುವುದು ಕಲಾವಿದರ ನೈಪುಣ್ಯತೆಗೆ ಸಾಕ್ಷಿಯಾಗಿವೆ. ಎಡಭಾಗದ ಛತ್ತಿನಲ್ಲಿ ಚಕ್ರ ಬಿಲ್ಲುಗಳನ್ನಿಡಿದು ಗಿಣಿಯ ಮೇಲೆ ಕುಳಿತು ಪರಸ್ಪರ ಹೋರಾಡುತ್ತಿರುವ ಚಿತ್ರ, ವಿಷ್ಣುವಿನ ದಶಾವತಾರಗಳಾದ ಮತ್ಸ್ಯಾವತಾರ, ಕೂರ್ಮಾವತಾರ, ವರಹಾವತಾರ, ನರಸಿಂಹಾವತಾರ ಮತ್ತು ವಾಮನವತಾರ ದೃಶ್ಯಗಳನ್ನು ಇಲ್ಲಿ ಚಿತ್ರಿಸಲಾಗಿತ್ತು. ಶೃಂಗಾರ ದೃಶ್ಯಗಳು, ಸಿಂಹ, ಕಮಲ, ಮೀನು, ಹಾವು, ಕಪ್ಪೆ, ಹಂಸಗಳು, ನೃತ್ಯಗಾತಿಯರ ಸಾಲು ಚಿತ್ರಗಳು ತೊಲೆಗಳ ಮೇಲೆಲ್ಲಾ ಕಂಡುಬಂದಿದ್ದವು.

ಹುಚ್ಚಪ್ಪಯ್ಯ ಮಠ, ಆನೆಗುಂದಿ

ಆನೆಗುಂದಿಯು ತುಂಗಭದ್ರಾ ನದಿತೀರದಲ್ಲಿದ್ದು, ಇಲ್ಲಿ ವಿಜಯನಗರ ಕಾಲದ ಕೆಲವು ಸ್ಮಾರಕಗಳಿವೆ. ಅವುಗಳಲ್ಲಿ ಹುಚ್ಚಪ್ಪಯ್ಯನ ಮಠದ ಛತ್ತಿನಲ್ಲಿ ಚಿತ್ರಗಳು ಕಂಡುಬಂದಿದ್ದು, ಅದರಲ್ಲಿ

೦೧. ಪ್ರೊ. ಅಲ್ಲಮಪ್ರಭು ಬೆಟ್ಟದೂರ (ಸಂ.) : ಕೊಪ್ಪಳ ಜಿಲ್ಲಾ ದರ್ಶನ, ಪುಟ – ೧೮೬

೦೨. ಅದೇ., ಪುಟ – ೧೮೬

ಬಹಳಷ್ಟು ಚಿತ್ರಗಳು ನಾಶವಾಗಿವೆ. ಇಲ್ಲಿ ಆನೆ, ಕಮಲದ ಹೂವಿನ ಹಾರಗಳು, ನವನಾರಿ ಗುಂಜಾರ ಹಾಗೂ ಸ್ತ್ರೀಚಿತ್ರಣ ಕಂಡುಬಂದಿದೆ. ಉಳಿದಿರುವ ಸ್ವಲ್ಪ ಚಿತ್ರಗಳು ಕೂಡಾ ನಾಶವಾಗುತ್ತಿರುವುದನ್ನು ನಾವು ಕಾಣುತ್ತೇವೆ. ಇವು ವರ್ಣಚಿತ್ರಗಳಾದರೂ ಕೂಡಾ ಹೊರ ರೇಖೆಗಳು ಮಾತ್ರ ಉಳಿದುಕೊಂಡು, ರೇಖಾಚಿತ್ರದಂತೆ ಭಾಸವಾಗುತ್ತಿದೆ.

ಕನಕಗಿರಿಯ ಕನಕಾಚಲಪತಿ ದೇವಸ್ಥಾನ

ಈ ದೇವಾಲಯವನ್ನು ವಿಜಯನಗರ ಸಾಮಾಜಿಕ ದೊರೆಯಾದ ಗುಜ್ಜಲಮರದ ದೊರೆ ಕೆಲವಡಿ ಉಡಚ ನಾಯಕನು ಕ್ರಿ.ಶ.೧೫೩೩–೧೫೭೮ರ ಅವಧಿಯಲ್ಲಿ ವಿಸ್ತರಿಸಿ ಕಟ್ಟುವಾಗ ಹೊಸದಾಗಿ ರಂಗಮಂಟಪ ನಿರ್ಮಿಸಿ ಅದರ ಮೇಲ್ಛಾವಣಿಯಲ್ಲಿ ಭಿತ್ತಿಚಿತ್ರಗಳನ್ನು ಬರೆಸಿದ್ದಾನೆ. ಜೊತೆಗೆ ಪ್ರಧಾನಗೋಪುರದ ಜಂತೆಯಲ್ಲಿಯೂ ಚಿತ್ರರಚಿಸಲಾಗಿದೆ. ಇಲ್ಲಿ ಕೃಷ್ಣನ ಬಾಲಲೀಲೆಯ ಚಿತ್ರಗಳು, ದಶಾವತಾರದ ಚಿತ್ರಗಳು, ಹೂಬಳ್ಳಿಯ ನಕ್ಷಾವಿನ್ಯಾಸಗಳು ರಚಿಸಲಾಗಿದೆ.[೩] ಇವು ಈಗ ಸಂಪೂರ್ಣವಾಗಿ ಅಳಿಸಿಹೋಗಿವೆ.

ಕನಕಗಿರಿಯ ಮತ್ತು ಆನೆಗುಂದಿಯ ವರ್ಣಚಿತ್ರಗಳ ರಚನೆಗಾಗಿ ಬಿಳಿ, ಕಪ್ಪು, ಬೂದು ಮತ್ತು ತಿಳಿಹಳದಿ ಬಣ್ಣಗಳನ್ನು ಬಳಸಲಾಗಿದೆ. ವ್ಯಕ್ತಿ ಅಥವಾ ಪ್ರಾಣಿಗಳ ಕಣ್ಣುಗಳು ಮುಖದಲ್ಲಿ ಸಹಜಕ್ಕಿಂತ ದೊಡ್ಡದಾಗಿ ಚಿತ್ರಿಸಲ್ಪಟ್ಟಿವೆ. ಇದರಿಂದ ಮುಖದಲ್ಲಿ ಕಣ್ಣುಗಳು ಪ್ರಧಾನವಾಗಿ ಕಾಣಿಸುತ್ತವೆ. ವಿಷ್ಣುವಿನ ದಶಾವತಾರದ ಚಿತ್ರಗಳಲ್ಲಿ ಹಣೆಗಳ ಮೇಲೆ ತ್ರಿನಾಮಗಳಿರುವುದು ವಿಶೇಷ ಪ್ರತಿಯೊಂದು ದೃಶ್ಯವನ್ನು ಚೌಕ ಇಲ್ಲವೇ ವೃತ್ತಗಳಲ್ಲಿ ಬಿಡಿಸಲಾಗಿರುತ್ತದೆ. ಚೌಕ ಮತ್ತು ವೃತ್ತಗಳು ಪುನರಾವರ್ತಿತವಾಗಿದ್ದರೂ ಅವು ಅಳತೆಯಲ್ಲಿ ವ್ಯಾಸದಲ್ಲಿ ಸಮಪ್ರಮಾಣದಲ್ಲಿರುತ್ತವೆ. ಸಾಮಾನ್ಯವಾಗಿ ಪ್ರತಿ ಅಂಕಣದ ಚಿತ್ರಿತ ಭಾಗದ ನಟ್ಟನಡುವೆ ಬಾಲಕೃಷ್ಣ ಚಿತ್ರ ಬಿಡಿಸಲಾಗಿರುತ್ತದೆ.

ವೆಂಕಟೇಶ್ವರ ದೇವಸ್ಥಾನ, ಕನಕಗಿರಿ

ಈ ದೇವಾಲಯದಲ್ಲಿ ೮೦ರ ದಶಕದಲ್ಲಿ ಸ್ಥಳೀಯ ಕಲಾವಿದರು ರಚಿಸಿದ ಆಧುನಿಕ ತೈಲವರ್ಣ ಭಿತ್ತಿಚಿತ್ರಗಳಿವೆ. ಈ ದೇವಾಲಯದಲ್ಲಿ ಒಟ್ಟು ೮ ಚಿತ್ರಗಳಿದ್ದು, ಅದರಲ್ಲಿ ನಾಲ್ಕುಚಿತ್ರಗಳು ಆಂಜನೇಯ ವಿವಿಧ ಭಂಗಿಗಳನ್ನು ಒಳಗೊಂಡಿದೆ. ಈ ಚಿತ್ರಗಳ ಬಗ್ಗೆ ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿವರಿಸಬಹುದು.

ಎದೆ ಬಗಿದುಕೊಂಡ ಆಂಜನೇಯನ ಚಿತ್ರ

ಈ ಕಲಾಕೃತಿಯಲ್ಲಿ ಆಂಜವನೇಯನು ಎದ್ದು ನಿಂತ ಬಂಗಿಯಲ್ಲಿ, ಆವೇಶಭರಿತನಾಗಿ, ಭಕ್ತಿಯ ತನ್ಮಯತೆಯಿಂದ ತನ್ನ ಎದೆ ಬಗಿದುಕೊಂಡು, ರಾಮ ಸೀತೆಯರನ್ನು ಹೃದಯದಲ್ಲಿ

೦೩. ಪ್ರೊ, ಅಲ್ಲಮಪ್ರಭು ಬೆಟ್ಟದೂರ : ಕೊಪ್ಪಳ ಜಿಲ್ಲಾ ದರ್ಶನ, ಪುಟ– ೧೮೭

ತೋರಿಸುತ್ತಿದ್ದಾನೆ. ಪುರಾಣ ಕಥೆಯ ಪ್ರಕಾರ ಹನುಮಂತನು ರಾಮ ಭಕ್ತನಾಗಿದ್ದು, ರಾಮನು ಆತನ ಭಕ್ತಿಯ ಪರಾಕಾಷ್ಠತೆಯನ್ನು ಜಗತ್ತಿಗೆ ತಿಳಿಸಿಕೊಡಲು ಈ ರೀತಿಯ ಸಂದರ್ಭವನ್ನು ಸೃಷ್ಟಿಸುತ್ತಾನೆ. ಚಿತ್ರದಲ್ಲಿ ಹನುಮಂತನು ತನ್ನ ಚೂಪಾದ ಉಗುರುಗಳಿಂದ ಎದೆಯನ್ನು ಎರಡು ಭಾಗವಾಗಿ ಸೀಳಿಕೊಂಡು ತನ್ನ ಸ್ವಾಮಿಯನ್ನು ಮತ್ತು ಮಾತೆ ಸೀತೆಯನ್ನು ತೋರಿಸುತ್ತಿದ್ದಾನೆ. ಆಂಜನೇಯನ ಬಲಿಷ್ಠವಾದ ದೇಹ ತುಂಬಿಕೊಂಡಿರುವ ಅಂಗ ಸೌಷ್ಟವ, ಭಾವನಾತ್ಮಕ ಮುಖ, ಚಿತ್ರಕ್ಕೆ ಚಲನೆಯನ್ನು ಕೊಟ್ಟಿವೆ. ನೀಲಿವರ್ಣದ ವಸ್ತ್ರವನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದು, ತೆಳು ಗುಲಾಭಿ ವರ್ಣದ (ಉತ್ತರಿಯ) ಶಾಲವನ್ನು ಧರಿಸಿದ್ದಾನೆ. ಕಾಲಿನ ಕೆಳಭಾಗದಲ್ಲಿ ಗದೆಯನ್ನು ರಚಿಸಲಾಗಿದೆ. ಹಿನ್ನೆಲೆಯಲ್ಲಿ ಚಿಕ್ಕ ಜಲಪಾತ, ನೀರಿನ ಹರಿವು, ದೇವಾಲಯ, ಬೆಟ್ಟ ಗುಡ್ಡಗಳು, ನೀಲಿ ಆಕಾಶ ಮುಂತಾದವುಗಳನ್ನು ಚಿತ್ರಿಸಲಾಗಿದೆ.

ಸಂಜೀವಿನಿ ಪರ್ವತವನ್ನು ತರುತ್ತಿರುವ ಆಂಜನೇಯ

ಪ್ರಸ್ತುತ ಚಿತ್ರದಲ್ಲಿ ಆಂಜನೇಯನು ಸಂಜೀವಿನಿ ಪರ್ವತವನ್ನು ಹೊತ್ತುಕೊಂಡು ಆಕಾಶ ಮಾರ್ಗದಲ್ಲಿ ಬರುತ್ತಿರುವ ಸನ್ನಿವೇಶವನ್ನು ಚಿತ್ರಿಸಲಾಗಿದೆ. ರಾಮಾಯಣ ಕಥೆಯ ಪ್ರಕಾರ ರಾಮ, ರಾವಣರ ಯುದ್ಧದಲ್ಲಿ ಲಕ್ಷಣನು ಇಂದ್ರತುವಿನ ಬಾಣದಿಂದ ಮೂರ್ಚೆಗೊಂಡು ಅಸ್ತಂಗತನಾಗುವ ಸಂದರ್ಭ ಬಂದಿರುತ್ತದೆ. ಆಗ ಆಂಜನೇಯನು ಸಂಜೀವಿನಿ ಪರ್ವತವನ್ನು ತಂದು ಸಂಜಿವಿನಿ ಗಿಡದ ಎಲೆಯಿಂದ ಲಕ್ಷ್ಮನನ್ನು ಪುನಹ ಬದುಕಿಸುವ ಸನ್ನಿವೇಶವಿದೆ. ಆಂಜನೆಯನು ಸಂಜೀವಿನಿ ಮೂಲಿಕೆಯನ್ನು ಹುಡುಕಿಕೊಂಡು ಹೊರಟಾಗ ಆ ಬೆಟ್ಟದಲ್ಲಿ ಅದರ ಗುರುತು ಪತ್ತೆಯಾಗದ ಕಾರಣ ಇಡೀ ಪರ್ವತವನ್ನು ಎತ್ತಿಕೊಂಡು ಬಂದು ತನ್ನ ಕಾರ್ಯವನ್ನು ಪೂರೈಸುತ್ತಾನೆ. ಚಿತ್ರದಲ್ಲಿ ಆಂಜನೇಯ ಎಡಗೈಯಲ್ಲಿ ಪರ್ವತವನ್ನು ಎತ್ತಿಕೊಂಡಿದ್ದು, ಬಲಬುಜದ ಮೇಲೆ ಗದೆಯನ್ನು ಹೊತ್ತುಕೊಂಡಿದ್ದಾನೆ. ಅತ್ಯಂತ ರಭಸದಿಂದ ಆಕಾಶಮಾರ್ಗವಾಗಿ ಚಲಿಸುತ್ತಿದ್ದಾನೆ. ಕಿರೀಟ, ಕೊರಳು, ಕೈ, ಕಾಲುಗಳಲ್ಲಿ ಆಭರಣ ಚಿತ್ರಿಸಲಾಗಿದೆ. ಅಲ್ಲದೆ ಪಾದುಕೆಗಳನ್ನು ರಚಿಸಿರುವುದು ಕುತೂಹಲಕರವಾಗಿದೆ. ಕೆಂಪು ಬಣ್ಣದ ನಡುಪಟ್ಟಿ, ಮತ್ತು ಶಾಲು ಹೊದ್ದುಕೊಂಡಿದ್ದಾನೆ. ಕೆಳಭಾಗದಲ್ಲಿ ಪರ್ವತ, ಗಿಡ–ಮರಗಳು, ನದಿ ಮುಂತಾದವುಗಳನ್ನು ಚಿತ್ರಿಸಿಲಾಗಿದೆ. ಹಾಗೂ ಎದೆಯ ಮೇಲೆ ರಾಮನ ಚಿತ್ರವಿದ್ದು, ಸುಂದರವಾದ ಪುಷ್ಪಮಾಲೆಯನ್ನು ಕೊರಳಲ್ಲಿ ಧರಿಸಿಕೊಂಡಿದ್ದಾನೆ.

ಧ್ಯಾನದಲ್ಲಿ ಕುಳಿತ ಆಂಜನೇಯ

ಪ್ರಸ್ತುತ ಈ ಚಿತ್ರದಲ್ಲಿ ಆಂಜನೇಯನು ಸರೋವರದ ದಡದಲ್ಲಿ ಕುಳಿತುಕೊಂಡು ರಾಮನ ಧ್ಯಾನದಲ್ಲಿ ಮಗ್ನನಾಗಿದ್ದಾನೆ. ಇವನ ಭಕ್ತಿಯ ಸ್ವರೂಪವನ್ನು ತೋರಿಸಲು ಎದೆಯ

ಭಾಗದಲ್ಲಿ ಶ್ರೀರಾಮ ಕಾಣಿಸಿಕೊಂಡಿದ್ದಾನೆ. ತಲೆಗೆ ಕಿರೀಟಧರಿಸಿ ಕೊಂಡಿದ್ದು, ತಲೆಯ ಹಿಂಭಾಗದಲ್ಲಿ ಪ್ರಕರವಾದ ಕಿರಣಗಳಿವೆ. ಮುಂದೆ ಕೆಂಪು ವಸ್ತ್ರವಿದ್ದು ಅದರ ಮೇಲೆ ಒಂದು ಶ್ರೀರಾಮ ಎಂದು ಬರೆದು ಪುಸ್ತಕವಿದೆ. ಪಕ್ಕದಲ್ಲೇ ತನ್ನ ಗದೆಯನ್ನು ಇಟ್ಟುಕೊಂಡು ಆಂಜನೇಯ ತನ್ನ ಎರಡು ಕೈಗಳನ್ನು ಒಂದರ ಮೇಲೆ ಒಂದು ಇಟ್ಟುಕೊಂಡು ತಪಸ್ಸಿಗೆ ಕುತಿದ್ದಾನೆ. ಇವನ ತಪಸ್ಸಿಗೆ ಮೆಚ್ಚಿ ರಾಮನು ಆಕಾಶದಲ್ಲಿ ಪ್ರಸನ್ನನಾಗಿ ಆಶೀರ್ವಾದ ಮಾಡುತ್ತಿದ್ದಾನೆ. ಆಂಜನೆಯ ಹಿಂಭಾಗದಲ್ಲಿ ಒಂದು ಚಿಕ್ಕ ಸರೋವರವಿದ್ದು ಅದರಲ್ಲಿ ಕಮಲದ ಹೂ ಹಾಗೂ ಹಂಸ ಪಕ್ಷಿಗಳನ್ನು ಚಿತ್ರಿಸಿದ್ದಾರೆ. ಅದರ ಹಿಂದೆ ಒಂದು ದೇವಾಲಯವಿದ್ದು ಬೆಟ್ಟ ಗುಡ್ಡಗಳಿಂದ ಆವೃತ್ತವಾಗಿದೆ.

ಬೃಹತ್ ಸ್ವರೂಪ ತೋರಿಸುತ್ತಿರುವ ಆಂಜನೇಯ

ಈ ಚಿತ್ರದಲ್ಲಿ ಆಂಜನೇಯನು ತನ್ನ ಬೃಹತ್ ಸ್ವರೂಪವನ್ನು ತೋರಿಸುತ್ತಿದ್ದಾನೆ. ಚಿತ್ರದಲ್ಲಿ ಆಂಜನೇಯನು ತನ್ನ ಬಲಗೈಯನ್ನು ಆಶೀರ್ವದಿಸುತ್ತಿರುವ ಭಂಗಿಯಲ್ಲಿ ಹಿಡಿದಿದ್ದಾನೆ. ಎಡಗೈಯಲ್ಲಿ ಗದೆಯನ್ನು ಹಿಡಿದುಕೊಂಡು, ತನ್ನ ಎರಡು ಕಾಲುಗಳನ್ನು ಅಗಲಿಸಿಕೊಂಡು ತನ್ನ ಶಕ್ತಿಯನ್ನು ತೋರಿಸುತ್ತಿರುವಂತಿದೆ. ಕತ್ತು, ಸೊಂಟಕ್ಕೆ ಹಾಗೂ ಕಾಲಿಗೆ ವಿಶೇಷ ಆಭರಣಗಳಿಂದ ಅಲಂಕಾರವಾಗಿದೆ. ತನ್ನ ಬಲ ಕೈ ಒಂದು ಗಂಟೆಯನ್ನು ಕಟ್ಟಿಕೊಂಡು ನಿಂತಿದ್ದಾನೆ. ಹಿಂಭಾಗದಲ್ಲಿ ಒಂದು ಸರೋವರವಿದ್ದು, ಅದರಲ್ಲಿ ಕಮಲದ ಹೂ ಗಳು ಅರಳಿನಿಂತಿವೆ. ಹಂಸ ಪಕ್ಷಿ ಆಟವಾಡುತ್ತಿವೆ. ಆನೆ ಸ್ನಾನ ಮಾಡುತ್ತಿದೆ. ಆನೆಗಿಂತಲು ಅತೀ ಬೃಹದಾಕಾರವಾಗಿ ಆಂಜನೆಯನ್ನು ಚಿತ್ರಿಸಲಾಗಿದ್ದು, ಆಂಜನೆಯನ ಕೊರಳಿನಲ್ಲಿ ಪುಷ್ಪಮಾಲೆ ಅತೀ ಸುಂದರವಾಗಿದೆ. ಇವನ ಹಿಂಭಾಗದಲ್ಲಿ ಬೆಟ್ಟಗುಡ್ಡಗಳನ್ನು ಚಿತ್ರಿಸಿದ್ದು, ನೀಲಿ ಆಕಾಶವನ್ನು ಚಿತ್ರಿಸಲಾಗಿದೆ.

ಕಮಲದ ಮೇಲೆ ನಿಂತ ಗಣಪತಿ

ಒಂದು ವೃತ್ತದಲ್ಲಿ ಚಿತ್ರಿಸಿರುವ ಈ ಗಣಪತಿಯು ಸರೋವರದಲ್ಲಿರುವ ಒಂದು ಕಮಲದ ಮೇಲೆ ಎದ್ದು ನಿಂತುಕೊಂಡಿದ್ದಾನೆ. ನಾಲ್ಕು ಕೈಗಳನ್ನು ಹೊಂದಿರುವ ಈ ಗಣಪತಿಯು ಹಿಂಭಾಗದ ಒಂದು ಕೈಯಲ್ಲಿ ಚಕ್ರವನ್ನು ಹಾಗೂ ಇನ್ನೊಂದು ಕೈಯಲ್ಲಿ ತನಗೆ ಇಷ್ಟವಾದ ಲಾಡುಗಳ ಪಾತ್ರೆಯನ್ನು ಹಿಡಿದಿದ್ದಾನೆ. ತನ್ನ ಬಲಗೈಯಿಂದ ಆಶೀರ್ವದಿಸುತ್ತಿದ್ದು, ಎಡಗೈಯಲ್ಲಿ ವಸ್ತ್ರವನ್ನು ಹಿಡಿದುಕೊಂಡಿದ್ದಾನೆ. ತಲೆಯ ಮೇಲೆ ಕಿರೀಟವನ್ನು ಹೊಂದಿದ್ದು, ಮೈಯೆಲ್ಲಾ ಆಭರಣಗಳನ್ನು ತೊಟ್ಟುಕೊಂಡಿದ್ದಾನೆ. ನೀಲಿ, ಹಳದಿ ಹಾಗೂ ಹಸಿರುಬಣ್ಣದ ವಸ್ತ್ರಗಳನ್ನು ಧರಿಸಿ ನಿಂತ್ತಿದ್ದಾನೆ. ಹಿಂಭಾಗದ ಸರೋವರದಲ್ಲಿ ಹಂಸ ಪಕ್ಷಿಗಳು ಆಟವಾಡುತ್ತಿವೆ. ಅದರ ಹಿಂದಿನ ಪ್ರದೇಶದಲ್ಲಿ ದೇವಸ್ಥಾನ ಬಂದಿದ್ದು, ಸುತ್ತಮುತ್ತಲು ಬೆಟ್ಟ-ಗುಡ್ಡ, ಗಿಡ-ಮರಗಳಿಂದ ಆವೃತ್ತವಾಗಿದೆ.

ಸಿಂಹದ ಮೇಲೆ ಕುಳಿತ ಕಾತ್ಯಾಯಿನಿ

ಈ ಚಿತ್ರವು ದೇವಸ್ಥಾನದ ಹೊರಗೋಡೆಯಲ್ಲಿದ್ದು ಇದು ಇತ್ತೀಚಿನ ಚಿತ್ರವಾಗಿದೆ. ಅಷ್ಟೊಂದು ನೈಜವಾಗಿ ಈ ಚಿತ್ರವನ್ನು ಬಿಡಿಸಿರುವುದಿಲ್ಲ. ಬಲಮುಖವಾಗಿ ನಿಂತ ಸಿಂಹದ ಮೇಲೆ ಕುಳಿತ ಕಾತ್ಯಾಯಿನಿ ನಾಲ್ಕು ಕೈಗಳನ್ನು ಹೊಂದಿದ್ದು, ಹಿಂಭಾಗದ ಒಂದು ಕೈಯಲ್ಲಿ ಖಡ್ಗ, ಹಾಗೂ ಇನ್ನೊಂದು ಕೈಯಲ್ಲಿ ಗದೆಯನ್ನು ಹಿಡಿದುಕೊಂಡಿದ್ದಾಳೆ. ತನ್ನ ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದು, ಇನ್ನೊಂದು ಕೈಯಲ್ಲಿ ಗಿಳಿಯನ್ನು ಹಿಡಿದುಕೊಂಡಿದ್ದಾಳೆ. ಈ ಚಿತ್ರಕ್ಕೆ ಕೇವಲ ನೀಲಿ, ಹಳದಿ ಹಾಗೂ ಕೆಂಪು ವರ್ಣಗಳನ್ನು ಮಾತ್ರ ಉಪಯೋಗಿಸಲಾಗಿದ್ದು, ಅವು ಜಲವರ್ಣಗಳಾಗಿವೆ.

ಲಿಂಗಪೂಜೆಯಲ್ಲಿ ನಿರತ ಮುನಿ

ಪ್ರಸ್ತುತ ಈ ಚಿತ್ರವು ನೈಜವಾಗಿರದೆ ಕೆಲದಶಕಗಳ ಹಿಂದಿನ ಚಿತ್ರವಾಗಿದೆ. ಇಲ್ಲಿ ಒಬ್ಬ ಮುನಿಯು ತನ್ನ ಎಡಗೈಯಲ್ಲಿ ಲಿಂಗವನ್ನು ಹಿಡಿದು ಇನ್ನೊಂದು ಕೈಯಲ್ಲಿ ಜಪ ಮಣಿಯನ್ನು ಹಿಡಿದು, ಜಪಮಾಡುವ ಭಂಗಿಯಲ್ಲಿದೆ. ಇದು ರೇಖಾ ಚಿತ್ರವಾಗಿದ್ದು ಮೈ ಮೇಲಿರುವ ಬಟ್ಟೆಯ ಮೇಲೆ ತಲೆ ಕೂದಲು ಮತ್ತು ಗಡ್ಡದ ಭಾಗದಲ್ಲಿ ಮಾತ್ರ ಬಣ್ಣವನ್ನು ತುಂಬಲಾಗಿದ್ದು, ಇದು ರೇಖಾಚಿತ್ರವಾಗಿದೆ. ಹಿಂಭಾಗದಲ್ಲಿ ಗಿಡದ ಚಿತ್ರವನ್ನು ತೋರಿಸಲಾಗಿದೆ. ಇದನ್ನು ಜಲವರ್ಣದಿಂದ ರಚಿಸಲಾಗಿದೆ.

ಎದುರು ಹನುಮಪ್ಪ ದೇವಸ್ಥಾನ, ಕನಕಗಿರಿ

ಕನಕಗಿರಿಯ ಎದುರು ಹನುಮಪ್ಪ ದೇವಸ್ಥಾನದಲ್ಲಿ ಕಳೆದ ದಶಮಾನದ ಸುಮಾರು ೮ ಚಿತ್ರಗಳು ಕಂಡುಬಂದಿವೆ. ಇಲ್ಲಿ ಮುಖ್ಯವಾಗಿ ಆಂಜನೇಯನಿಗೆ ಸಂಬಂಧಪಟ್ಟ ವಿವಿಧ ಭಂಗಿಯ ಚಿತ್ರಗಳಿದ್ದು, ತೈಲ ವರ್ಣದಲ್ಲಿ ರಚಿಸಲ್ಪಟ್ಟಿವೆ. ಅವುಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

ಆದಿಶೇಷನ ಮೇಲೆ ಪವಡಿಸಿದ ಮಹಾವಿಷ್ಣು

ಪ್ರಸ್ತುತ ಈ ಚಿತ್ರದಲ್ಲಿ ಮಹಾವಿಷ್ಣುವು ಏಳು ಹೆಡೆಯುಳ್ಳ ಆದಿಶೇಷನ ಮೇಲೆ ಮಲಗಿಕೊಂಡಿದ್ದಾನೆ. ಲಕ್ಷ್ಮೀಯು ಪಾದಸೇವೆ ಮಾಡುತ್ತಿದ್ದಾಳೆ. ಮಹಾವಿಷ್ಣು ತನ್ನ ಹಿಂಬದಿಯ ಎಡಗೈಯಲ್ಲಿ ಶಂಖವನ್ನು ಹಿಡಿದು, ಬಲಗೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಮುಂಭಾಗದ ಎಡಗೈಯಲ್ಲಿ ಕಮಲದ ಹೂವನ್ನು ಹಿಡಿದುಕೊಂಡಿದ್ದು, ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದಾನೆ. ತೆಳು ನೀಲಿವರ್ಣದ ಮೈ ಕಾಂತಿಯನ್ನು ಹೊಂದಿದ್ದು, ತಲೆಯ ಮೇಲೆ ಕಿರೀಟ, ಅದರಲ್ಲಿ ನವಿಲುಗರಿ ಹೊಂದಿದ್ದಾನೆ. ಕೆಂಪು, ಹಳದಿ ಹಾಗೂ ಹಸಿರು ಬಣ್ಣದ ವಸ್ತ್ರ ಧರಿಸಿಕೊಂಡಿದ್ದಾನೆ.

ಪಕ್ಕದಲ್ಲಿ ಗದೆಯನ್ನು ಇಟ್ಟುಕೊಂಡಿದ್ದಾನೆ. ಸುತ್ತಲು ಗಣಪತಿ, ಶೀಲು, ಸುಬ್ರಹ್ಮಣ್ಯ, ತುಂಬುರ, ಗರುಡ, ಆಂಜನೇಯ ಇವರೆಲ್ಲ ಮಹಾ ವಿಷ್ಣುವಿಗೆ ನಮಿಸುತ್ತಿದ್ದಾರೆ. ಆಂಜನೇಯ ಕೆಳಗಡೆ ಕುಳಿತುಕೊಂಡು ಪುಷ್ಪಾರ್ಚನೆ ಮಾಡುತ್ತಿದ್ದಾನೆ. ವಿಷ್ಣುವಿನ ಹಿಂಭಾಗದಲ್ಲಿ ನಾರದ ಮುನಿಗಳಿದ್ದಾರೆ. ವಿಷ್ಣುವಿನ ಹೊಕ್ಕುಳಿಂದ ಹೋಗಿರುವ ಕಾಮದಲ್ಲಿರುವ ಬ್ರಹ್ಮನನ್ನು ಸಹ ಚಿತ್ರದಲ್ಲಿ ಚಿತ್ರಿಸಲಾಗಿದೆ.

ವಿಶ್ವರೂಪ ತೋರಿಸುತ್ತಿರುವ ಶ್ರೀಕೃಷ್ಣ

ಈ ಚಿತ್ರದಲ್ಲಿ ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಗೀತೊಪದೇಶ ಮಾಡುತ್ತಿರುವ ಚಿತ್ರ ಬಹಳ ಸೊಗಸಾಗಿ ಮೂಡಿ ಬಂದಿದೆ. ಇಲ್ಲಿ ಶ್ರೀ ಕೃಷ್ಣನ ವಿಶ್ವರೂಪಕಂಡ ಅರ್ಜುನ ಮೊಣಕಾಲುರಿ ಶ್ರೀಕೃಷ್ಣನಿಗೆ ನಮಸ್ಕರಿಸುತ್ತಿದ್ದಾನೆ. ಚಿತ್ರದ ಹಿನ್ನೆಲೆಯಲ್ಲಿ ನಾಲ್ಕು ಕುದುರೆಯುಳ್ಳ ರಥವಿದೆ. ಅದರ ಹಿಂಭಾಗದಲ್ಲಿ ಅನೇಕ ರಥಗಳು, ಕುದುರೆಗಳು, ಸೈನಿಕರ ಚಿತ್ರಗಳಿವೆ. ಶ್ರೀಕೃಷ್ಣ ತನ್ನ ಬಲಗೈಯನ್ನು ಎದೆಯ ಭಾಗದಲ್ಲಿ ಹಿಡಿದುಕೊಂಡು, ಎಡಗೈಯಿಂದ ವಿಶ್ವರೂಪದ ದರ್ಶನ ಮಾಡಿಸುತ್ತಿದ್ದಾನೆ. ಆಕಾಶದಲ್ಲಿ ವಿಷ್ಣುವಿನ ವಿಶ್ವರೂಪದ ಚಿತ್ರವಿದೆ. ಅರ್ಜುನನ ಮೈ ತುಂಬ ಯುದ್ಧದ ಕವಚ, ಕುಂಡಲಗಳನ್ನು ಧರಿಸಿಕೊಂಡು ಕೈಯಲ್ಲಿ ಬಿಲ್ಲನ್ನು ಹಿಡಿದುಕೊಂದ್ದಾನೆ. ಶ್ರೀಕೃಷ್ಣನ ಮೈ ಬಣ್ಣ ತೆಳು ನೀಲಿಯಾಗಿದ್ದು, ಮೈಯೆಲ್ಲಾ ಆಭರಣಗಳನ್ನು ಧರಿಸಿಕೊಂಡಿದ್ದಾನೆ. ಕೆಂಪು, ಹಳದಿ, ಹಸಿರು ವರ್ಣದ ವಸ್ತ್ರಗಳನ್ನು ಧರಿಸಿ, ಗೀತೋಪದೇಶ ಮಾಡುತ್ತಿದ್ದಾನೆ. ಪುರಾಣ ಕಥೆಯ ಪ್ರಕಾರ ಅರ್ಜುನ ವೈರಾಗ್ಯ ತೋರಿ ಯುದ್ಧದಿಂದ ಮರಳಿ ಹೋಗುತ್ತಿರುವ ಸಂದರ್ಭದಲ್ಲಿ ಭಗವಾನ ಶ್ರೀಕೃಷ್ಣನು ಇದು ನೀನು ಮಾಡಲೇ ಬೇಕಾದಂತಹ ಕೆಲಸ, ಇದು ನಿನ್ನಿಂದಲೆ ಆಗಬೇಕು. ಕೌರವರ ವಧೆಯಾಗಬೇಕು ಎಂದು ಉಪದೇಶ ಮಾಡುತ್ತಾನೆ.

ಪ್ರತಿಯೊಂದು ಪ್ರಾಣಿ-ಪಕ್ಷಿ ಯಾವುದೇ ಕೆಲಸ ಮಾಡಬೇಕಾದರೆ ಅದು ನನ್ನ ಅಪ್ಪಣೆಯ ಮೇರೆಗೆ ಮಾಡುತ್ತವೆ ಎಂದು ಹೇಳುತ್ತಾನೆ. ಆಗ ಶ್ರೀಕೃಷ್ಣನು ನಿನ್ನ ನಿಜ ಸ್ವರೂಪ ತೋರಿಸು ಎಂದಾಗ ಭಗವಾನ್ ಶ್ರೀಕೃಷ್ಣನು ತನ್ನ ವಿಶ್ವರೂಪ ತೋರಿಸಿದಾಗ ಅವನಿಗೆ ಮೊಣಕಾಲೂರಿ, ಶಿರಬಾಗಿ ನಮಸ್ಕರಿಸುತ್ತಾನೆ. ಈ ಸಂದರ್ಭದ ಚಿತ್ರವನ್ನು ಇಲ್ಲಿ ರಚಿಸುವಲ್ಲಿ ಕಲಾವಿದನ ಕೈಚಳಕ ಬಹಳ ಮುಖ್ಯವಾಗಿದೆ.

ಮಹಾಭಾರತ ರಚಿಸುತ್ತಿರುವ ಗಣಪತಿ

ಪ್ರಸ್ತುತ ಈ ಚಿತ್ರದಲ್ಲಿ ಆಸನದ ಮೇಲೆ ಕುಳಿತ ಗಣಪತಿಯು ಮಹಾಭಾರತವನ್ನು ರಚಿಸುತ್ತಿದ್ದಾನೆ. ಗಣಪತಿಯು ತಲೆಯ ಮೇಲೆ ಕಿರೀಟ ಹೊಂದಿದ್ದು, ಕೊರಳು, ಕಿವಿ, ತೋಳು, ಕೈ ಹಾಗೂ ಕಾಲುಗಳಲ್ಲಿ ಆಭರಣವನ್ನು ತೊಟ್ಟುಕೊಂಡಿದ್ದಾನೆ. ಹಳದಿ, ಕೆಂಪು, ಮತ್ತು ನೀಲಿವರ್ಣದ ವಸ್ತುವನ್ನು ಧರಿಸಿಕೊಂಡಿದ್ದಾನೆ. ನವಿಲು ಗರಿಯಿಂದ ಮಹಾಭಾರತ ರಚಿಸುತ್ತಿದ್ದಾನೆ. ಕೊರಳಲ್ಲಿ

ಪುಷ್ಪಮಾಲೆಯನ್ನು ಹಾಕಿಕೊಂಡಿದ್ದಾನೆ. ಸೊಂಡಿಲಿನಲ್ಲಿ ಲಾಡು ಹಿಡಿದುಕೊಂಡಿದ್ದಾನೆ. ಗಣಪತಿಯ ಎರಡು ಪಕ್ಕದಲ್ಲಿ ದೀಪಗಳು ಉರಿಯುತ್ತಲಿವೆ. ಮುಂದೆ ಒಂದು ಪಾತ್ರೆಯಲ್ಲಿ ಲಾಡು ಹಾಗೂ ಇನ್ನೊಂದು ಪಾತ್ರೆಯಲ್ಲಿ ಹಣ್ಣುಹಂಪಲುಗಳು ಇವೆ. ಎಲೆಯ ಮೇಲೆ ಕರ್ಪೂರ ಉರಿಯುತ್ತಿದೆ. ಅಲ್ಲಲ್ಲಿ ಪುಷ್ಪಗಳು ಚಲ್ಲಲಾಗಿದೆ. ತನ್ನ ಹಿಂದಿನ ಕೈಗಳಲ್ಲಿ ಕೊಡಲಿ ಹಾಗೂ ಪುಷ್ಪವನ್ನು ಹಿಡಿದ ಗಣಪತಿಯ ಚಿತ್ರ ನೋಡಲು ತುಂಬಾ ಸುಂದರವಾಗಿದೆ. ಇದು ಪುರಾಣಗಳ ಪ್ರಕಾರ ವ್ಯಾಸ ಮುನಿಯು ಹೇಳಿ, ಗಣಪತಿಯ ಕೈಯಿಂದ ಮಹಾಭಾರತವನ್ನು ಬರೆಯಿಸಿದ ಎಂಬ ನಂಬಿಕೆ ಹಲವಾರು ಪುರಾಣಗಳಿಂದ ತಿಳಿದು ಬರುತ್ತದೆ.

ಸಂಜೀವಿನಿ ಪರ್ವತ ತರುತ್ತಿರುವ ಆಂಜನೇಯ

ಪ್ರಸ್ತುತ ಈ ಚಿತ್ರದಲ್ಲಿ ಆಂಜನೇಯ ಸಂಜೀವಿನಿ ಪರ್ವತವನ್ನು ಹೊತ್ತುಕೊಂಡು ಬರುತ್ತಿದ್ದಾನೆ. ವೆಂಕಟೇಶ್ವರ ದೇವಸ್ಥಾನ ಕನಕಗಿರಿ ಚಿತ್ರದಲ್ಲಿ ವಿವರಿಸಿದಂತೆ ಈ ಚಿತ್ರವು ನೋಡಲು ಒಂದೇ ತರಹ ಇದ್ದರು ಬಣ್ಣದ ಬಳಕೆ, ಮತ್ತು ಚಿತ್ರದ ಹಿನ್ನೆಲೆ ಹಾಗೂ ಹಿನ್ನೆಲೆಯಲ್ಲಿರುವ ದೇವಸ್ಥಾನಗಳು ಅದಕ್ಕಿಂತ ಭಿನ್ನವಾಗಿದ್ದು, ನೋಡಲು ಹೊಸದಾಗಿದೆ ಮತ್ತು ಸುಂದರವಾಗಿದೆ.

ಪಂಚಮುಖದ ಆಂಜನೇಯ

ಪ್ರಸ್ತುತ ಈ ಚಿತ್ರದಲ್ಲಿ ಪಂಚಭೂತಗಳ ಸಂಕೇತವಾಗಿ ಆಂಜನೇಯನಿಗೆ ಐದು ಮುಖಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಆಂಜನೇಯ ನಿಂತ ಭಂಗಿಯಲ್ಲಿದ್ದು, ಹತ್ತು ಕೈಗಳನ್ನು ಹೊಂದಿದ್ದಾನೆ. ಒಂದು ಕೈಯಲ್ಲಿ ಕಳಸ, ಇನ್ನೊಂದು ಕೈಯಲ್ಲಿ ಖಡ್ಗ, ಚಾಕು, ಕತ್ತಿ, ತ್ರಿಶೂಲ, ಕೊಡಲಿ, ಡಾಲು, ಗುರಾಣಿ, ಕಮಲ ಹಾಗೂ ಗದೆಯನ್ನು ಕೈಯಲ್ಲಿ ಹಿಡಿದುಕೊಂಡು ನಿಂತಿದ್ದಾನೆ. ಹಿನ್ನೆಲೆಯಾಗಿ ನೀಲಿ ಬಣ್ಣವನ್ನು ಬಳಸಲಾಗಿದ್ದು, ಪಕ್ಕದಲ್ಲಿ ಎರಡು ಕಂಬಗಳು ಹಲವಾರು ವಿನ್ಯಾಸದಿಂದ ಕಲಾತ್ಮಕವಾಗಿವೆ. ಮುಂದೆ ದೀಪದ ಕಂಬಗಳಿದ್ದುದ್ದು, ಒಂದು ಕಡೆ ಲಾಡು ತುಂಬಿದ ಪಾತ್ರೆ, ಇನ್ನೊಂದು ಪಾತ್ರೆಯಲ್ಲಿ ಹಣ್ಣು ಹಂಪಲಿನಿಂದ ತುಂಬಿದೆ. ಪಾದದಡಿಯಲ್ಲಿ ಹೂಗಳನ್ನು ಹಾಕಿದ ಈ ಚಿತ್ರವು ತುಂಬಾ ಸೊಗಸಾಗಿದೆ.

ರಾಮಧ್ಯಾನದಲ್ಲಿ ನಿರತ ಆಂಜನೇಯ

ಇಲ್ಲಿ ರಾಮಧ್ಯಾನದಲ್ಲಿ ಕುಳಿತ ಆಂಜನೇಯನು ಪದ್ಮಾಸನ ಭಂಗಿಯಲ್ಲಿ ಕುಳಿತ್ತಿದ್ದಾನೆ. ಈ ಮೇಲೆ ಇದೆ ತರಹದ ಚಿತ್ರವನ್ನು ವಿವರಿಸಲಾಗಿದ್ದು. ಆ ಚಿತ್ರಕ್ಕಿಂತ ಇದು ತುಂಬಾ ಸುಂದರವಾಗಿದೆ ಹಾಗೂ ಮುಖದಲ್ಲಿ ಭಕ್ತಿಯ ಭಾವ ಎದ್ದು ಕಾಣಿಸುತ್ತದೆ. ಇವನ ಭಕ್ತಿಗೆ ಮೆಚ್ಚಿ ಹಿನ್ನೆಲೆಯಲ್ಲಿ ರಾಮ-ಸೀತೆಯರು ಪ್ರಸನ್ನರಾಗಿ ಆಶೀರ್ವಾದ ಮಾಡುತ್ತಿದ್ದಾರೆ.

ಆಶೀರ್ವದಿಸುತ್ತಿರುವ ಆಂಜನೇಯ

ಈ ಚಿತ್ರದಲ್ಲಿ ಆಂಜನೇಯನು ನೆಗೆದು ಬಂದು ಆಶೀರ್ವಾದ ಮಾಡುತ್ತಿರುವ ಭಂಗಿಯಲ್ಲಿದೆ. ತನ್ನ ಬಲಗಾಲನ್ನು ಮುಂದೆ ಚಾಚಿ, ಎಡಗಾಲನ್ನು ಹಿಂದೆ ಇಟ್ಟಿದ್ದಾನೆ. ಎಡಗೈಯಲ್ಲಿ ಗದೆಯನ್ನು ಹಿಡಿದುಕೊಂಡು, ಬಲಗೈಯಲ್ಲಿ ಆಶೀರ್ವಾದ ಮಾಡುತ್ತಿದ್ದಾನೆ. ಕೆಂಪು ವಸ್ತ್ರ ಧರಿಸಿದ ಈ ಆಂಜನೇಯನು ನೋಡಲು ದಷ್ಟಪುಷ್ಟವಾಗಿ ತೋರುತ್ತಾನೆ. ಹಿಂಭಾಗದಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದ್ದು, ಬಿಲ್ಲುಬಾಣಗಳನ್ನು ತೋರಿಸಲಾಗಿದೆ. ಒಂದು ಭಾಗದಲ್ಲಿ ಪಾದುಕೆಗಳನ್ನು ತೋರಿಸಲಾಗಿದೆ. ಪಾದದ ಮೇಲೆ ಪುಷ್ಪಾರ್ಚನೆ ಮಾಡಲಾಗಿದೆ.

ಶ್ರೀರಾಮ ಪಟ್ಟಾಭಿಷೇಕ

ಈ ಚಿತ್ರದಲ್ಲಿ ಶ್ರೀರಾಮನ ಪಟ್ಟಾಭಿಷೇಕ ನಡೆಯುತ್ತಿದ್ದು, ಸಿಂಹಾಸನದ ಮೇಲೆ ರಾಮ ಸೀತೆಯರಿಬ್ಬರು ಕುಳಿತ್ತಿದ್ದಾರೆ. ರಾಮನು ತನ್ನ ಒಂದು ಕೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ಇನ್ನೊಂದು ಕೈಯಿಂದ ಆಶೀರ್ವದಿಸುತ್ತಿದ್ದಾನೆ. ಹಸಿರು ಶಲ್ಯ, ಹಾಗೂ ಹಳದಿ, ಕೆಂಪು ವಸ್ತ್ರ ಧರಿಸಿಕೊಂಡು ತಲೆಯ ಮೇಲೆ ಕಿರೀಟ, ಕೊರಳು ಮತ್ತು ಕೈಗಳಿಗೆ ಆಭರಣವನ್ನು ತೊಟ್ಟಿಕೊಂಡಿದ್ದಾನೆ. ಬೆನ್ನಿಗೆ ಬತ್ತಳಿಕೆ ಇದ್ದು, ಅದರಲ್ಲಿ ಭಾಣಗಳಿವೆ. ಉದ್ದನೆಯ ಪುಷ್ಪಮಾಲೆಯನ್ನು ಧರಿಸಿದ ರಾಮನು ನೀಲಿವರ್ಣದಲ್ಲಿದ್ದಾನೆ. ಪಕ್ಕದಲ್ಲಿ ಕುಳಿತ ಸೀತಾಮಾತೆಯು ಆಶೀರ್ವದಿಸುತ್ತಲಿದ್ದು, ಕೆಂಪು ವರ್ಣದ ಸೀರೆಯನ್ನು ತೊಟ್ಟು ಆಭರಣ ಭರಿತಳಾಗಿದ್ದಾಳೆ ಮುಂಭಾಗದಲ್ಲಿ ಕೆಳಗಡೆ ಕುಳಿತ ಲಕ್ಷ್ಮಣ ಹಾಗೂ ಆಂಜನೇಯರು ಆಶೀರ್ವಾದ ಪಡೆದುಕೊಳ್ಳುತ್ತಿದ್ದಾರೆ. ಆಂಜನೇಯನು ಪಾದವನ್ನು ಮುಟ್ಟಿದ್ದಾನೆ. ಭಕ್ತಿಯ ಭಾವ ಇಲ್ಲಿ ಎದ್ದು ಕಾಣಿಸುತ್ತದೆ. ನೀಲಿ ಮತ್ತು ಕೆಂಪು ವಸ್ತ್ರ ಧರಿಸಿಕೊಂಡಿದ್ದಾನೆ. ರಾಮನ ಹಿಂದೆ ಇರುವ ಸೇವಕರು ಚಾಮರವನ್ನು ತೆಗೆದುಕೊಂಡು ಗಾಳಿಯನ್ನು ಬೀಸುತ್ತಿದ್ದಾರೆ. ಪಕ್ಕದಲ್ಲಿರುವ ಕಂಬಗಳು ಅದರ ಹಿಂದಿರುವ ಅಲಂಕಾರಿಕ ಪರದೆಗಳನ್ನು ಗಮನಿಸಿದಾಗ ಇದು ಅರಮನೆಯ ದೃಶ್ಯವೆಂದು ಖಚಿತವಾಗುತ್ತದೆ.

ಗುರಳಕೇರಿ ದುರಗಮ್ಮ ದೇವಸ್ಥಾನ ಕನಕಗಿರಿ

ಈ ದೇವಸ್ಥಾನವು ಕನಕಗಿರಿಯಲ್ಲಿದ್ದು, ಇಲ್ಲಿ ತೈಲವರ್ಣದಿಂದ ರಚಿಸಲ್ಪಟ್ಟ ಸುಮಾರು ೧೦ ಚಿತ್ರಗಳಿವೆ. ಇವು ದುರ್ಗಾದೇವಿಗೆ ಸಂಬಂಧ ಪಟ್ಟಂತೆ ಹಾಗೂ ಗಣಪತಿ, ಕಾಮಧೇನು, ಆಂಜನೇಯ, ಕೃಷ್ಣ ಹಾಗೂ ಜಯ-ವಿಜಯರಿಗೆ ಸಂಬಂಧಪಟ್ಟ ಚಿತ್ರಗಳು ಇಲ್ಲಿ ಕಂಡುಬಂದಿವೆ.

ಜಯ-ವಿಜಯರ ಚಿತ್ರ

ಪ್ರಸ್ತುತ ಈ ದೇವಾಲಯದ ದ್ವಾರ ಬಾಗಿಲಿನಲ್ಲಿ ಜಯ ವಿಜಯ ಚಿತ್ರವಿದ್ದು, ಇವರು

ಮಾಡುತ್ತಿದ್ದಾರೆ ಎಂದು ಹೇಳಬಹುದಾಗಿದೆ. ಜಯ ವಿಜಯರಿಗೆ ನಾಲ್ಕು ಕೈಗಳಿದ್ದು, ಹಿಂದಿನ ಬಲಗೈಯಲ್ಲಿ ಚಕ್ರ ಹಿಡಿದುಕೊಂಡು ಎಡಗೈಯಲ್ಲಿ ಶಂಖ ಹಿಡಿದುಕೊಂಡಿದ್ದಾರೆ. ಮುಂದಿನ ಎರಡು ಕೈಯಿಂದ ಗದೆಯನ್ನು ಹಿಡಿದುಕೊಂಡು, ಅದನ್ನು ನೆಲದ ಮೇಲೆ ನಿಲ್ಲಿಸಿದ್ದಾರೆ. ನೇರವಾಗಿ ನಿಂತುಕೊಂಡು ಜಯ ವಿಜಯರು ಕ್ರಮವಾಗಿ ಎಡಗಾಲನ್ನು ಬಲಕ್ಕೆ ಹಾಗೂ ಬಲಗಾಲನ್ನು ಎಡಗೈ ಚಾಚಿ ನಿಂತಿದ್ದಾರೆ. ಮೈಯ ವರ್ಣವನ್ನು ಬಿಳಿ ವರ್ಣದಿಂದ ಲೇಪಿಸಲಾಗಿದ್ದು, ನೀಲಿ ಶಲ್ಯ ಹಾಗೂ ಹಳದಿ ವಸ್ತ್ರವನ್ನು ಧರಿಸಿಕೊಂಡಿದ್ದಾರೆ. ತಲೆಯ ಮೇಲೆ ಕಿರೀಟ ಹೊಂದಿದ್ದು, ಹಿನ್ನೆಲೆಯಾಗಿ ಚಕ್ರವನ್ನು ಹಾಗೂ ಮೈಮೇಲೆ ಆಭರಣಗಳನ್ನು ಚಿತ್ರಿಸಲಾಗಿದೆ.

ಸಂಜೀವಿನಿ ಪರ್ವತ ತರುತ್ತಿರುವ ಆಂಜನೇಯ

ಪ್ರಸ್ತುತ ಈ ಚಿತ್ರದ ಬಗ್ಗೆ ಹಿಂದೆ ವಿವರಿಸಲಾಗಿದ್ದು, ಆ ಚಿತ್ರಕ್ಕಿಂತ ಸ್ವಲ್ಪ ಭಿನ್ನತೆಗಳು ಈ ಚಿತ್ರದಲ್ಲಿವೆ. ಕೇವಲ ಈ ಚಿತ್ರದಲ್ಲಿ ಸಂಜೀವಿನಿ ಪರ್ವತ ಹೊತ್ತಿರುವ ಆಂಜನೇಯ, ಸಂಜೀವಿನಿಪರ್ವತ ಮತ್ತು ನೆಲದ ಚಿತ್ರವನ್ನು ಮಾತ್ರ ಚಿತ್ರಿಸಲಾಗಿದ್ದು, ಹಿನ್ನೆಲೆಯ ಚಿತ್ರವನ್ನು ಚಿತ್ರಿಸಿರುವುದಿಲ್ಲ. ಮುಖದ, ಬಾಯಿಯ ಉಬ್ಬು ಭಾಗವನ್ನು ತೆಳುಗೆಂಪು ಬಣ್ಣದಲ್ಲಿ ಚಿತ್ರಿಸಿದ್ದು, ಇನ್ನುಳಿದ ದೇಹ ಭಾಗವನ್ನು ಹಸಿರು ಬಣ್ಣದಿಂದ ಲೇಪಿಸಲಾಗಿದೆ. ಬದಿಯ ಒಂದು ಹಲ್ಲನ್ನು ದುರ್ಗಿಯ ಹಲ್ಲಿನಂತೆ ಉದ್ದವಾಗಿ ರಚಿಸಿದ್ದಾರೆ.

ಶಿವನನ್ನು ಮೆಟ್ಟನಿಂತ ದುರ್ಗಿ

ಪ್ರಸ್ತುತ ಈ ಚಿತ್ರದಲ್ಲಿ ದುರ್ಗಿಯು ಚಂಡಿಯ ರೂಪತೊಟ್ಟ ಶಿವನನ್ನು ಮೆಟ್ಟನಿಂತಿದ್ದಾಳೆ. ಮೈಭಾಗದಲ್ಲಿ ನೀಲಿ ವರ್ಣಲೇಪಿಸಲಾಗಿದ್ದು, ಹಿನ್ನೆಲೆಯಾಗಿ ಕೆಂಪು ವರ್ಣವನ್ನು ಲೇಪಿಸಿದ್ದಾರೆ. ತನ್ನ ಹತ್ತು ಕೈಗಳಲ್ಲಿ ಒಂದೊಂದು ಆಯುಧ ಹಿಡಿದು, ಒಂದು ಕೈಯಲ್ಲಿ ರಾಕ್ಷಸನ ತಲೆಯನ್ನು ಹಿಡಿದುಕೊಂಡಿದ್ದಾಳೆ. ಮಚ್ಚಿನಂತಹ ಆಯುಧ, ಚಕ್ರ, ತ್ರಿಶೂಲ, ಗದೆ, ಖಡ್ಗ, ಶಂಕ, ಬಿಲ್ಲು-ಬಾಣ, ಡಾಲುಗಳನ್ನು ಹಿಡಿದಿದ್ದಾಳೆ. ನಾಲಿಗೆಯನ್ನು ಉದ್ದವಾಗಿ ಹೊರಗೆ ಚಾಚಿದ್ದಾಳೆ. ಎರಡು ಕೋರೆ ಹಲ್ಲುಗಳನ್ನು ಗಮನಿಸಿದಾಗ ಈ ಚಿತ್ರ ರೌದ್ರ ಅವತಾರ ಕಾಣಿಸುತ್ತಿದೆ.

ಕೊರಳಲ್ಲಿ ರುಂಡಮಾಲೆ, ತಲೆ ಬುರುಡೆಯ ಮಾಲೆಯನ್ನು ಹಾಕಿಕೊಂಡಿದ್ದಾಳೆ. ಶಿವನು ಕೆಳಗೆ ಬಿದ್ದಿದ್ದಾನೆ. ಅವನ ಮೇಲೆ ಒಂದು ಕಾಲು ಇಟ್ಟಿದ್ದಾಳೆ. ಇನ್ನೊಂದು ಕಾಲನ್ನು ಭೂಮಿಯ ಮೇಲೆ ಇಟ್ಟಿದ್ದಾಳೆ. ಒಂದು ಕೈಯಲ್ಲಿ ಡಮರುಗವನ್ನು ಹಿಡಿದ ಶಿವ ತನ್ನ ಕಣ್ಣುಗಳನ್ನು ಮುಚ್ಚಿಕೊಂಡಿದ್ದಾನೆ. ಸರ್ಪವು ಭೂಮಿಯ ಕಡೆ ತಲೆಬಾಗಿ ನಿಂತಿದೆ. ಚರ್ಮವನ್ನು ವಸ್ತ್ರವನ್ನಾಗಿ ಶಿವ ಸುತ್ತಿಕೊಂಡಿದ್ದಾನೆ.

ಕಮಲದ ಮೇಲೆ ಕುಳಿತ ಲಕ್ಷ್ಮೀ

ಈ ಚಿತ್ರದಲ್ಲಿ ಲಕ್ಷ್ಮೀಯು ಆಶೀರ್ವದಿಸುತ್ತಿರುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ನಾಲ್ಕು ಕೈಗಳನ್ನು ಹೊಂದಿದ್ದು, ಹಿಂದಿನ ಎರಡು ಕೈಗಳಲ್ಲಿ ಕಮಲದ ಹೂವನ್ನು ಹಿಡಿದುಕೊಂಡಿದ್ದಾಳೆ. ಮುಂದಿನ ಎರಡು ಕೈಗಳನ್ನು ಕ್ರಮವಾಗಿ ಮೇಲ್ಮುಖ ಹಾಗೂ ಕೆಳಮುಖ ಮಾಡಿ ಕೈಗಳಿಂದ ಆಶೀರ್ವದಿಸುತ್ತಿರುವ ರೀತಿಯಲ್ಲಿದೆ. ಬಾಯಲ್ಲಿ ಓಂ ಎಂದು ಬರೆದುಕೊಂಡಿದ್ದು, ಕೈಯಿಂದ ನಗನಾಣ್ಯಗಳು ಚೆಲ್ಲುತ್ತಿವೆ. ಕಿರೀಟಧಾರಿಯಾಗಿದ್ದು, ಸರೋವರದಲ್ಲಿರುವ ಒಂದು ದೊಡ್ಡ ಕಮಲದ ಮೇಲೆ ಕುಳಿತುಕೊಂಡಿದ್ದಾಳೆ. ಪಕ್ಕದಲ್ಲಿಯೇ ಬಿಳಿಯ ಆನೆ ನೀರಿನಲ್ಲಿ ಮುಳುಗಿಕೊಂಡು ಸೊಂಡಿಲನ್ನು ಮೇಲೆತ್ತಿ ಹಿಡಿದಿದೆ. ಲಕ್ಷ್ಮೀಯು ತೆಳುಗೆಂಪು ಸೀರೆಯನ್ನು ತೊಟ್ಟುಕೊಂಡಿದ್ದು, ಮೈ ಮೇಲೆ ಆಭರಣಗಳನ್ನು ಹಾಕಿಕೊಂಡಿದ್ದಾಳೆ.

ವೀಣೆ ನುಡಿಸುತ್ತಿರುವ ಸರಸ್ವತಿ

ಈ ಚಿತ್ರದಲ್ಲಿ ವಿದ್ಯಾದೇವತೆಯಾದ ಸರಸ್ವತಿಯು ವೀಣೆಯನ್ನು ನುಡಿಸುತ್ತಾ ಒಂದು ಬಂಡೆಯ ಮೇಲೆ ಕುಳಿತ್ತಿದ್ದಾಳೆ. ನಾಲ್ಕು ಕೈಗಳನ್ನು ಹೊಂದಿದ್ದು, ಹಿಂದಿನ ಬಲಗೈಯಲ್ಲಿ ಜಪಮಣಿ, ಹಾಗೂ ಎಡಗೈಯಲ್ಲಿ ಜಲೆ ಕಟ್ಟನ್ನು ಹಿಡಿದಿದ್ದಾಳೆ, ಬಿಳಿವರ್ಣದ ಸೀರೆಯನ್ನು ತೊಟ್ಟಿದ್ದು, ಆಭರಣಭರಿತಳಾಗಿದ್ದಾಳೆ. ಮುಂದೆ ನವಿಲು ಇದ್ದು, ಅದು ವೀಣೆಯ ಶಬ್ಧವನ್ನು ಆಲಿಸುತ್ತಿರುವ ಹಾಗಿದೆ. ಹಿನ್ನೆಲೆಯಾಗಿ ದೊಡ್ಡಮರದ ಚಿತ್ರವಿದೆ. ಹಾಗೂ ಸರೋವರ, ಬೆಟ್ಟ-ಗುಡ್ಡಗಳಿವೆ. ಸರೋವರದಲ್ಲಿ ಕಮಲದ ಹೂ ಇದೆ. ಪಕ್ಕದಲ್ಲಿ ಹಂಸಗಳು ಆಟವಾಡುತ್ತಲಿವೆ. ಒಟ್ಟಿನಲ್ಲಿನ ಈ ಚಿತ್ರವು ನೋಡಲು ತುಂಬಾ ಸುಂದರವಾಗಿ ಮೂಡಿ ಬಂದಿದೆ.

ಕಾಮಧೇನುವಿನ ಚಿತ್ರ

ಈ ಚಿತ್ರದಲ್ಲಿ ಕಾಮಧೇನುವಿನ ಚಿತ್ರವಿದ್ದು, ಬಲಮುಖವಾಗಿ ನಿಂತುಕೊಂಡಿದೆ. ಹೆಣ್ಣು ದೇವತೆಯ ಮುಖ ಚಿತ್ರದಲ್ಲಿದ್ದು, ನವಿಲಿನ ರೆಕ್ಕೆ ಮತ್ತು ಗರಿಗಳನ್ನು ಹೊಂದಿದೆ. ನಾಲ್ಕು ಕಾಲುಗಳನ್ನು ಹೊಂದಿದ್ದು, ಹಸುವಿನ ದೇಹಭಾಗವನ್ನು ಕಾಮಧೇನು ಹೊಂದಿದೆ. ಇಲ್ಲಿ ಎರಡು ಬಾಲವನ್ನು ಹೊಂದಿರುವುದು ವಿಶೇಷವಾಗಿದೆ.

ತಲೆಯ ಮೇಲೆ ಕಿರೀಟ, ಕೊರಳೊಳಗೆ ಹಾಗೂ ಕಾಲುಗಳಿಗೆ ಆಭರಣವನ್ನು ಚಿತ್ರಿಸಲಾಗಿದೆ. ಕೆಳಗಡೆ ಕರುವೊಂದಿದ್ದು, ಹಾಲು ಕುಡಿಯುತ್ತಿದೆ. ಹಿನ್ನೆಲೆಯಾಗಿ ಹೂ ಬಳ್ಳಿಯ ಚಿತ್ರಗಳಿವೆ ಹಾಗೂ ಒಂದು ಗಿಡದ ಕೆಳಗಿರುವ ಕಟ್ಟೆಯ ಮೇಲೆ ಜಮದಗ್ನಿ ಋಷಿಯು ಜಪಮಾಲೆ ಹಿಡಿದುಕೊಂಡು ಕುಳಿತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮಹಿಷಾಸುರನನ್ನು ಮರ್ಧನ ಮಾಡುತ್ತಿರುವ ಚಾಮುಂಡಿ

ಪ್ರಸ್ತುತ ಈ ಚಿತ್ರದಲ್ಲಿ ಚಾಮುಂಡಿಯು ಮಹಿಷಾಸುರನನ್ನು ಕೊಲ್ಲುತ್ತಿದ್ದಾಳೆ, ಹದಿನೆಂಟು ಕೈಗಳನ್ನು ಹೊಂದಿದ್ದು, ಖಡ್ಗ, ಗದೆ, ಕಮಲ, ಬಿಲ್ಲು, ಬಾಣ, ತ್ರಿಶೂಲ, ಚಕ್ರ, ಶಂಖ, ಖಡ್ಗವನ್ನು ತನ್ನ ಕೈಗಳಲ್ಲಿ ಹಿಡಿದು ಸಂಹಾರ ಮಾಡುತ್ತಿದ್ದಾಳೆ. ಸಿಂಹದ ಮೇಲೆ ಕುಳಿತುಕೊಂಡು, ಒಂದು ಕೈಯಲ್ಲಿ ರಾಕ್ಷಸನ ಕತ್ತನ್ನು ಹಿಸುಕುತ್ತಿದ್ದಾಳೆ, ಕೆಳಗಡೆ ಬಿದ್ದ ಮಹಿಷಾಸುರನನ್ನು ಸಿಂಹ ಉಗುರಿನಿಂದ ಮೈಯನ್ನು ಹರಿದು, ತನ್ನ ಬಾಯಿಂದ ಕಚ್ಚುತ್ತಿದೆ. ಪಕ್ಕದಲ್ಲಿಯೇ ಮಹಿಷಾಸುರನ ವಾಹನ ಎಮ್ಮೆ ಒಂದು ಕಡೆ ಬಿದ್ದಿದೆ. ಚಿತ್ರದ ಹಿನ್ನೆಲೆಯಾಗಿ ನೀಲಿವರ್ಣವನ್ನು ಬಳಸಲಾಗಿದ್ದು, ಚಾಮುಂಡಿಯು ಕೆಂಪು ಸೀರೆಯನ್ನು ತೊಟ್ಟುಕೊಂಡು ಪುಷ್ಪಮಾಲೆಯನ್ನು ಹಾಕಿಕೊಂಡಿದ್ದಾಳೆ ಸಿಟ್ಟಿನ ಕಣ್ಣುಳ್ಳವಳಾಗಿದ್ದಾಳೆ.

ನಾಟ್ಯ ಗಣಪತಿ

ಈ ಚಿತ್ರದಲ್ಲಿ ಗಣಪತಿಯು ನಾಟ್ಯ ಮಾಡುತ್ತಿದ್ದಾನೆ. ಇದು ಗಣಪತಿಯು ನಾಲ್ಕು ಕೈಗಳನ್ನು ಹೊಂದಿದ್ದು, ತನ್ನ ಹಿಂದಿನ ಬಲಗೈಯಲ್ಲಿ ತ್ರಿಶೂಲ ಹಾಗೂ ಎಡಗೈಯಲ್ಲಿ ಲಾಡುವಿನ ಪಾತ್ರೆಯನ್ನು ಹಿಡಿದಿದ್ದಾನೆ. ಮುಂದಿನ ಕೈಗಳು ನೃತ್ಯದ ಭಂಗಿಯಲ್ಲಿವೆ. ತನ್ನ ಬಲಗಾಲನ್ನು ಎತ್ತಿ ಎಡಕ್ಕೆ ಚಾಚಿದ್ದಾನೆ. ಸೊಂಡಿಲು ಲಾಡುವಿನ ಪಾತ್ರೆಯ ಕಡೆ ವಾಲಿದೆ. ತಲೆಯಲ್ಲಿ ಕಿರೀಟವನ್ನು ಹೊಂದಿದ್ದು, ಹಿನ್ನೆಲೆಯಾಗಿ ಚಕ್ರವನ್ನು ಚಿತ್ರಿಸದ್ದಾರೆ. ಹಸಿರು ಹಾಗೂ ಹಳದಿವರ್ಣದ ವಸ್ತ್ರವನ್ನು ತೊಟ್ಟುಕೊಂಡಿದ್ದಾನೆ.

ಕೊಳಲು ನುಡಿಸುತ್ತಿರುವ ಕೃಷ್ಣ

ಪ್ರಸ್ತುತ ಈ ಚಿತ್ರದಲ್ಲಿ ನೀಲಿವರ್ಣದ ಕೃಷ್ಣ ಕೊಳಲು ನುಡಿಸುತ್ತಿದ್ದಾನೆ. ತಲೆಯ ಮೇಲೆ ಕಿರೀಟ ಹಾಗೂ ಅದರಲ್ಲಿ ನವಿಲುಗರಿ ಇದೆ. ಹಸಿರು, ಕೆಂಪು, ಹಳದಿ ಬಣ್ಣದ ವಸ್ತ್ರಗಳನ್ನು ತೊಟ್ಟಿಕೊಂಡಿದ್ದಾನೆ. ಮುಖ ಹಸನ್ಮುಖವಾಗಿದೆ. ತನ್ನ ಬಲಗಾಲನ್ನು ಮಡಿಚಿ ಎಡಕ್ಕೆ ಇಟ್ಟಿದ್ದಾನೆ. ಗೋವು ಮತ್ತು ಕರು ಅವನ ಕೊಳಲ ನಾದವನ್ನು ಆಲಿಸುತ್ತಿವೆ. ಹಿನ್ನೆಲೆಯಾಗಿ ಸರೋವರ, ಗಿಡ, ಮರಗಳು, ದೇವಸ್ಥಾನ, ಬೆಟ್ಟಗುಡ್ಡಗಳಿಂದ ಆವೃತ್ತವಾಗಿದೆ. ಹೆಚ್ಚಾಗಿ ನೀಲಿವರ್ಣವು ಚಿತ್ರದಲ್ಲಿ ಕಂಡುಬರುತ್ತದೆ.

ಅರ್ಜುನನ ರಥದ ಸಾರಥ್ಯವಹಿಸಿದ ಕೃಷ್ಣ

ಪ್ರಸ್ತುತ ಈ ಚಿತ್ರವು ಕುರುಕ್ಷೇತ್ರದ ಮಹಾಯುದ್ಧದ ಒಂದು ಸನ್ನಿವೇಶದ, ಚಿತ್ರವಾಗಿದ್ದು ಈ ಚಿತ್ರ ತುಂಬಾ ಸೊಗಸಾಗಿ ಮೂಡಿ ಬಂದಿದೆ. ೧೯೯೦ರಲ್ಲಿ ರಚಿಸಿದ ಈ ಚಿತ್ರವು ಪ್ರಸ್ತುತ

ಗಂಗಾವತಿಯ ಹೋಟೆಲ್ ಒಂದರಲ್ಲಿದೆ. ಈ ಚಿತ್ರದಲ್ಲಿ ಯುದ್ಧದ ಕವಚ ಕುಂಡಲಗಳನ್ನು ಧರಿಸಿ ಅರ್ಜುನ ಯುದ್ಧವಾಡುತ್ತಿದ್ದಾನೆ. ಭಗವಾನ್ ಕೃಷ್ಣನು ಕುದುರೆಯ ಲಗಾಮುಗಳನ್ನು ಕೈಯಲ್ಲಿ ಹಿಡಿದು ರಥದ ಸಾರಥ್ಯ ಮಾಡುತ್ತಿದ್ದಾನೆ. ನಾಲ್ಕು ಕುದುರೆಗಳನ್ನು ಹೊಂದಿದ ಈ ರಥವು ಅತ್ಯಂತ ನೈಜವಾಗಿ ಚಿತ್ರಿಸಿಲ್ಪಟ್ಟಿದೆ. ಕುದುರೆಗಳು ವೇಗವಾಗಿ ಒಡುವುದನ್ನು ಚಿತ್ರಿಸಿದ್ದಾರೆ. ಹಿನ್ನೆಲೆಯಲ್ಲಿ ಅನೇಕರು ಹೋರಾಡುತ್ತಿದ್ದಾರೆ. ಕುದುರೆಗಳಿವೆ, ರಥಗಳಿವೆ. ಕೆಳಗಡೆ ಚಲ್ಲಿದ ರಕ್ತ, ಮುರಿದ ರಥದ ಗಾಲಿಗಳು ಬಿಲ್ಲು-ಬಾಣಗಳು ತುಂಬಾ ನೈಜವಾಗಿ ಚಿತ್ರಿಸಲಾಗಿದೆ. ಆದರೆ ಈ ಚಿತ್ರದ ಮೇಲೆ ದೇವರ ಪಟಹಾಕಿ ಪೂಜೆ ಮಾಡುತ್ತಿರುವುದರಿಂದ ಪೂರ್ಣ ಚಿತ್ರಣ ನೋಡಲು ಲಭ್ಯವಾಗದಿರುವುದು ವಿಷಾದನೀಯ ಎನ್ನಿಸುತ್ತದೆ.

ದುರ್ಗಾದೇವಿ ದೇವಸ್ಥಾನ ವಾಲಿಪರ್ವತ ಕಿಷ್ಕಿಂದ, ಆನೆಗುಂದಿ

ಈ ದೇವಾಲಯದಲ್ಲಿ ೧೦ ದುರ್ಗಾದೇವಿಗೆ ಸಂಬಂಧಪಟ್ಟ ಚಿತ್ರಗಳನ್ನು ರಚಿಸಲಾಗಿದೆ. ಇವುಗಳನ್ನು ತೈಲವರ್ಣದಲ್ಲಿ ರಚಿಸಲಾಗಿದೆ. ಸುಮಾರು ೧೫ ವರ್ಷಗಳ ಹಿಂದಿನ ಈ ಚಿತ್ರಗಳು ನೋಡಲು ತುಂಬಾ ನೈಜವಾಗಿವೆ. ಇದರಲ್ಲಿರುವ ಮಹಿಷಾಸುರನನ್ನು ಕೊಲ್ಲುತ್ತಿರುವ ದುರ್ಗಾದೇವಿಯ ಚಿತ್ರವು ಕನಕಗಿರಿಯ ದುರ್ಗಾದೇವಿ ದೇವಸ್ಥಾನದಲ್ಲಿರುವ ಚಿತ್ರದ ಹಾಗೆ ಇದೆ. ಆದ್ದರಿಂದ ಈ ಎರಡೂ ಚಿತ್ರದ ವಿವರಣೆ ಒಂದೆ ಆಗಿದ್ದು ಅಲ್ಲಿಯಕ್ಕಿಂತ ಇದು ನೋಡಲು ತುಂಬಾ ಸುಂದರವಾಗಿದೆ.

ಆಶಿರ್ವದಿಸುತ್ತಿರುವ ದುರ್ಗಾದೇವಿ

ಈ ಚಿತ್ರದಲ್ಲಿ ದುರ್ಗಾದೇವಿಯು ಸಿಂಹದ ಮುಂದೆ ನಿಂತು ಆಶೀರ್ವಾದ ಮಾಡುತ್ತಿದ್ದಾಳೆ. ಹಸನ್ಮುಖಿಯಾದ ದುರ್ಗಾದೇವಿಯು ಎಂಟು ಕೈಗಳನ್ನು ಹೊಂದಿದ್ದಾಳೆ. ತಲೆಯ ಮೇಲೆ ಕಿರೀಟ ಇದ್ದು, ಹಿನ್ನೆಲೆಯಲ್ಲಿ ಪ್ರಕಾರವಾದ ಬೆಳಕು ಇದೆ. ತನ್ನ ಕೈಯಲ್ಲಿ ಚಕ್ರ, ತ್ರಿಶೂಲ, ಖಡ್ಗ, ಶಂಖ, ಗದೆ, ಬಿಲ್ಲು ಹಿಡಿದಿದ್ದಾಳೆ. ತನ್ನ ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದು, ಎಡಗೈಯನ್ನು ಸಿಂಹದ ತಲೆಯ ಮೇಲೆ ಇಟ್ಟು ಕಮಲದ ಹೂವನ್ನು ಕೈಯಲ್ಲಿ ಹಿಡಿದು ಕೊಂಡಿದ್ದಾಳೆ. ಕೆಂಪು ಸೀರೆಯನ್ನು ತೊಟ್ಟುಕೊಂಡು ಪುಷ್ಪಮಾಲೆ ಹಾಗೂ ಆಭರಣವನ್ನು ಧರಿಸಿಕೊಂಡಿದ್ದಾಳೆ. ಹಿನ್ನೆಲೆಯಲ್ಲಿ ಸಣ್ಣ ಸಣ್ಣ ಹೂವಿನ ಗಿಡಗಳು, ಸರೋವರ ಬೆಟ್ಟ-ಗುಡ್ಡದ ಮಧ್ಯದಿಂದ ಹಾಯ್ದು ಬರುತ್ತಿರುವ ನೀರು, ಆಕಾಶದಲ್ಲಿರುವ ಮೋಡಗಳು ಅದ್ಭುತವಾಗಿವೆ.

ಹುಲಿಯ ಮೇಲೆ ಕುಳಿತ ದುರ್ಗಾದೇವಿ

ಹುಲಿಯ ಮೇಲೆ ಕುಳಿತ ದುರ್ಗಾದೇವಿಯು ಆಶೀರ್ವಾದ ಮಾಡುತ್ತಿದ್ದಾಳೆ. ತಲೆಯ

ಮೇಲೆ ಕಿರೀಟ ಇದೆ. ಅದರ ಹಿನ್ನೆಲೆಯಲ್ಲಿ ಪ್ರಕರವಾದ ಬೆಳಕು ಇದೆ. ಎಂಟು ಕೈಗಳಿದ್ದು, ಚಕ್ರ, ಬಿಲ್ಲು, ಖಡ್ಗ, ಶಂಖ, ತ್ರಿಶೂಲ, ಗದೆಯನ್ನು ಹಾಗೂ ಕಮಲವನ್ನು ಹಿಡಿದುಕೊಂಡಿದ್ದಾಳೆ. ತನ್ನ ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದಾಳೆ. ಹುಲಿಯು ಬಲಮುಖವಾಗಿ ನಿಂತು, ಎದುರಿಗೆ ನೋಡುತ್ತಿದೆ. ದುರ್ಗಾದೇವಿಯ ಹುಲಿಯ ಮೇಲೆ ಹೊದಿಸಿದ ಹಸಿರು ವರ್ಣದ ವಸ್ತ್ರದ ಮೇಲೆ ಕುಳಿತು, ಕೆಲವು ಸೀರೆಯನ್ನು ತೊಟ್ಟುಕೊಂಡಿದ್ದಾಳೆ. ಹಿನ್ನೆಲೆಯಲ್ಲಿ ಸರೋವರ, ಗಿಡ, ಮರಗಳು, ದೇವಸ್ಥಾನ, ಬೆಟ್ಟ-ಗುಡ್ಡಗಳಿಂದ ಆವೃತವಾಗಿದೆ.

ಅಗ್ನಿ ಸ್ವರೂಪದಲ್ಲಿರುವ ದುರ್ಗಾದೇವಿ

ಈ ಚಿತ್ರವು ದೇವಸ್ಥಾನದ ಹಿಂದಿನ ಗೋಡೆಯ ಮೇಲೆ ಹೊರಗೆ ಬಂದಿರುವ ಬಂಡೆಗಳನ್ನು ಬಳಸಿಕೊಂಡು ಚಿತ್ರಿಸಲಾಗಿದೆ. ಜ್ವಾಲಾಮುಖಿಯಂತೆ ಹೊಮ್ಮುತ್ತಿರುವ ಬೆಂಕಿಯಲ್ಲಿ ದುರ್ಗಾಮಾತೆಯು ಪ್ರಸನ್ನಳಾಗಿ ಆಶೀರ್ವಾದ ಮಾಡಿದಂತೆ ಈ ಚಿತ್ರವಿದ್ದು, ನೈಜವಾಗಿ ಚಿತ್ರಿಸಿದ್ದಾರೆ. ನಾಲ್ಕು ಕೈಗಳನ್ನು ಹೊಂದಿದ ದುರ್ಗಾ ಮಾತೆಯು ಕೈಯಲ್ಲಿ ತ್ರಿಶೂಲ, ಕೊಡಲಿ, ಕಮಲವನ್ನು ಹಿಡಿದುಕೊಂಡು ಆಶೀರ್ವಾದ ಮಾಡುತ್ತಿದ್ದಾಳೆ. ಹಸಿರು ವರ್ಣದ ಸೀರೆಯನ್ನು ತೊಟ್ಟು, ಕಿರೀಟ ಹಾಗೂ ಆಭರಣಗಳನ್ನು ಧರಿಸಿಕೊಂಡಿದ್ದಾಳೆ. ಹಿನ್ನೆಲೆಯಾಗಿ ನೀಲಿವರ್ಣವನ್ನು ಬಳಸಲಾಗಿದೆ.

ಕಮಲದ ಮೇಲೆ ಕುಳಿತಿರುವ ಪಂಚಮುಖದ ಗಾಯಿತ್ರಿ ದೇವಿ

ಈ ಚಿತ್ರದಲ್ಲಿ ಗಾಯಿತ್ರಿ ದೇವಿಯು ಪಂಚಮುಖಗಳನ್ನು ಹೊಂದಿದ್ದು, ಅವು ಕೆಂಪು, ಹಸಿರು, ನೀಲಿ ವರ್ಣದಲ್ಲಿವೆ. ಹತ್ತು ಕೈಗಳಿದ್ದು, ಕೈಯಲ್ಲಿ ಕಮಲ, ಚಕ್ರ, ಗದೆ, ಶಂಖ, ಕೊಡಲಿ, ಪಾತ್ರೆಯನ್ನು ಹಿಡಿದಿದ್ದಾಳೆ. ಎರಡು ಕೈಗಳಿಂದ ಆಶಿರ್ವಾದ ಮಾಡುತ್ತಿದ್ದು, ಸರೋವರದಲ್ಲಿರುವ ಕಮಲದ ಮೇಲೆ ಒಂದು ಕಾಲನ್ನು ತೊಡೆಯ ಮೇಲೆ ಇನ್ನೊಂದು ಕಾಲನ್ನು ಕೆಳಗೆ ಇಳಿಬಿಟ್ಟ ಕೂತ ಈ ಗಾಯಿತ್ರಿ ಚಿತ್ರವು ತುಂಬಾ ಹಸನ್ಮುಖದಿಂದ ಕೂಡಿದೆ. ಹಿನ್ನೆಲೆಯಲ್ಲಿ ಬೆಟ್ಟಗುಡ್ಡಗಳ ಚಿತ್ರಣವಿದೆ.

ಶಿವನ ಮೇಲೆ ಕುಳಿತ ಪಾರ್ವತಿ

ಪ್ರಸ್ತುತ ಈ ಚಿತ್ರವು ತುಂಬಾ ವಿಶೇಷವಾಗಿದೆ. ಈ ಚಿತ್ರದಲ್ಲಿ ಪಾರ್ವತಿ ಅಥವಾ ಕಾಳಿಕಾದೇವಿಯನ್ನು ತುಂಬಾ ದೊಡ್ಡ ಗಾತ್ರದಲ್ಲಿ ತೋರಿಸಿದ್ದು, ಶಿವ, ಬ್ರಹ್ಮ, ವಿಷ್ಣು, ಮಹೇಶ್ವರ, ಗಣಪತಿ, ಲಕ್ಷ್ಮೀ, ಸರಸ್ವತಿಯನ್ನು ಚಿಕ್ಕ ಗಾತ್ರದಲ್ಲಿ ತೋರಿಸಲಾಗಿದೆ. ಕಾರಣ ಎಲ್ಲಾ ದೇವತೆಗಳ ಕೈಯಿಂದ ಒಬ್ಬ ರಾಕ್ಷಸನನ್ನು ಸಂಹಾರ ಮಾಡಲಾಗಿರುವುದಿಲ್ಲ. ಆಗ ಎಲ್ಲ ದೇವತೆಗಳು ಸೇರಿ ಕಾಳಿ ದೇವಿಗೆ ಶಕ್ತಿಯನ್ನು ಕೊಡುತ್ತಾರೆ. ಇದರ ಒಂದು ಉದ್ದೇಶಕ್ಕಾಗಿ ಕಾಳಿಯನ್ನು ದೊಡ್ಡ

ಪ್ರಮಾಣದಲ್ಲಿ ಚಿತ್ರಿಸಲಾಗಿದೆ. ಕಿರೀಟ ಆಭರಣಗಳು ಹಾಗೂ ಕೆಂಪು ಸೀರೆಯನ್ನು ತೊಟ್ಟ ಪಾರ್ವತಿ ದೇವಿ (ಕಾಳಿ) ಶಿವನ ಮೇಲೆ ಕುಳಿತುಕೊಂಡಿದ್ದಾಳೆ. ಹಿನ್ನೆಲೆಯಲ್ಲಿ ಪರದೆ ಮತ್ತು ಕಂಬಗಳು ಹಾಗೂ ಪುಷ್ಪ ಮಾಲೆಗಳವೆ. ಪಾರ್ವತಿ ತನ್ನ ಎರಡು ಕೈಗಳಿಂದ ಪುಷ್ಪಮಾಲೆಯನ್ನು ಧರಿಸುತ್ತಿರುವ ಈ ಚಿತ್ರ ತುಂಬಾ ಸೊಗಸಾಗಿದೆ.

ಕಮಲದ ಮೇಲೆ ಕುಳಿತಿರುವ ಲಕ್ಷ್ಮೀ

ಈ ಚಿತ್ರದಲ್ಲಿ ಲಕ್ಷ್ಮೀಯು ಹಸನ್ಮುಖಿಯಾಗಿದ್ದು, ಸರೋವರದಲ್ಲಿರುವ ಕಮಲದ ಮೇಲೆ ಕುಳಿತಿದ್ದಾಳೆ. ಕೆಂಪು ಸೀರೆಯನ್ನು ಉಟ್ಟಿಕೊಂಡಿದ್ದಾಳೆ. ನಾಲ್ಕು ಕೈಗಳನ್ನು ಹೊಂದಿದ್ದಾಳೆ ಹಿಂದಿನ ಎರಡು ಕೈಗಳಲ್ಲಿ ಕಮಲದ ಹೂಗಳನ್ನು ಹಿಡಿದುಕೊಂಡಿದ್ದಾಳೆ. ಒಂದು ಕೈಯಿಂದ ಆಶೀರ್ವಾದ ಮಾಡುತ್ತಿದ್ದು, ಆ ಕೈಯಿಂದ ನಗ ನಾಣ್ಯಗಳು ಮುಂದೆ ಎಲೆಯ ಮೇಲೆ ಇರುವ ಪಾತ್ರೆಯಲ್ಲಿ ಬೀಳುತ್ತಿವೆ. ಹಿನ್ನೆಲೆಯಲ್ಲಿ ಬೆಟ್ಟಗುಡ್ಡದ ಚಿತ್ರಗಳಿವೆ.

ಹುಲಿಯ ಮುಂದೆ ನಿಂತಿರುವ ದುರ್ಗಾದೇವಿ

ಇಲ್ಲಿ ದುರ್ಗಾದೇವಿಯು ಹುಲಿಯ ಮುಂದೆ ನಿಂತುಕೊಂಡಿದ್ದಾಳೆ ಎಂಟು ಕೈಗಳನ್ನು ಹೊಂದಿರುವ ದೇವಿಯು ಕೈಯಲ್ಲಿ ಚಕ್ರ, ಖಡ್ಗ, ಕಮಲ, ಶಂಖ, ತ್ರಿಶೂಲ, ಬಿಲ್ಲು, ಗದೆಯನ್ನು ಹಿಡಿದುಕೊಂಡಿದ್ದಾಳೆ. ಗದೆಯನ್ನು ನೆಲದ ಮೇಲೆ ನಿಲ್ಲಿಸಿಕೊಂಡು ನಿಂತು, ತನ್ನ ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದಾಳೆ. ಕೆಂಪು ಸೀರೆಯನ್ನು, ತಲೆಗೆ ಕಿರೀಟವನ್ನು ಮೈ ತುಂಬ ಆಭರಣ ಹಾಗೂ ಪುಷ್ಪ ಮಾಲೆಯನ್ನು ತೊಟ್ಟು ನಿಂತಿದ್ದಾಳೆ. ಅವಳ ಹಿಂದೆಯೇ ದೊಡ್ಡ ಹುಲಿಯೊಂದು ಬಲಮುಖವಾಗಿ ಮಲಗಿಕೊಂಡು, ನೇರವಾಗಿ ನೋಡುತ್ತಿದೆ. ಹಿನ್ನೆಲೆಯಲ್ಲಿ ದೊಡ್ಡ ಮರ ಒಂದಿದ್ದು, ಎಲೆಗಳನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ದೇವಸ್ಥಾನವೊಂದರ ಪಕ್ಕದಿಂದ ಬರುತ್ತಿರುವ ಜಲಪಾತ ನೋಡಲು ಸಂತೋಷವನ್ನು ಉಂಟುಮಾಡುತ್ತದೆ.

ಆಸನದ ಮೇಲೆ ಕುಳಿತ ಗಣಪತಿ

ಪ್ರಸ್ತುತ ಈ ಚಿತ್ರವು ದೇವಸ್ಥಾನದ ಗರ್ಭಗುಡಿಯ ಮೇಲ್ಭಾಗದಲ್ಲಿದೆ. ಗಣಪತಿಗೆ ನಾಲ್ಕುಕೈಗಳಿದ್ದು, ಕೈಯಲ್ಲಿ ಕೊಡಲಿ, ಲಾಡುಗಳ ಪಾತ್ರೆಯನ್ನು ಹಿಡಿದುಕೊಂಡಿದ್ದು, ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದಾನೆ. ಬಿಳಿಯ ವಸ್ತ್ರವನ್ನು ಸುತ್ತಿಕೊಂಡು, ಕೆಂಪು ಶಲ್ಯವನ್ನು ಹೆಗಲಮೇಲೆ ಹಾಕಿಕೊಂಡಿದ್ದಾನೆ. ತಲೆಯ ಮೇಲೆ ಕಿರೀಟ ಇದೆ. ಹಿನ್ನೆಲೆಯಲ್ಲಿ ಪ್ರಕರವಾದ ಬೆಳಕಿದ್ದು, ತೀಕ್ಷ್ಣ ಕಿರಣಗಳನ್ನು ಸಹಿತ ಚಿತ್ರಿಸಲಾಗಿದೆ. ಪಕ್ಕದಲ್ಲಿ ತನ್ನ ವಾಹನ ಇಲಿ ಹಾಗೂ ಇನ್ನೊಂದು ಕಡೆ ಹಾವಿನ ಚಿತ್ರವಿದೆ.

ಬಂಡೆಯ ಮೇಲೆ ಕುಳಿತು ವೀಣೆ ನುಡಿಸುತ್ತಿರುವ ಸರಸ್ವತಿ

ಈ ಚಿತ್ರವು ಗರ್ಭಗುಡಿಯ ಬಾಗಿಲಿನ ಎಡಬದಿಗೆ ಇರುವುದು. ವಿದ್ಯಾದೇವಿಯಾದ ಸರಸ್ವತಿಯು ಹಸನ್ಮುಖಿಯಾಗಿ ವೀಣೆ ನುಡಿಸುತ್ತಾ ಕುಳಿತಿರುವಳು, ವೀಣೆಯನ್ನು ಸುಂದರವಾಗಿ ಚಿತ್ರಿಸಲಾಗಿದೆ. ಬಿಳಿವರ್ಣದ ಸೀರೆಯನ್ನು ಧರಿಸಿಕೊಂಡಿದ್ದಾಳೆ. ತಲೆಯ ಮೇಲೆ ಕಿರೀಟವಿದೆ. ಅದರ ಹಿನ್ನೆಲೆಯಲ್ಲಿ ಪ್ರಕರವಾದ ಬೆಳಕಿದೆ. ಸರಸ್ವತಿಯ ಮುಂಭಾಗದಲ್ಲಿ ನವಿಲಿನ ಚಿತ್ರವಿದೆ. ಚಿತ್ರವು ನೈಜ ಶೈಲಿಯಲ್ಲಿದೆ.

ರಂಗನಾಥ ದೇವಸ್ಥಾನ ಆನೆಗುಂದಿ

ಈ ದೇವಸ್ಥಾನವು ಆನೆಗುಂದಿಯಲ್ಲಿದ್ದು, ಇಲ್ಲಿ ಹದಿನೆಂಟು ಕಳೆದ ಎರಡು ದಶಕಗಳ ಹಿಂದಿನ ಭಿತ್ತಿ ಚಿತ್ರಗಳು ಕಂಡು ಬಂದಿವೆ. ಇವುಗಳನ್ನು ತೈಲವರ್ಣದಲ್ಲಿ ರಚಿಸಲಾಗಿದೆ. ಪೌರಾಣಿಕ ಕಥೆಗಳನ್ನು ಆಧರಿಸಿ ಇಲ್ಲಿರುವ ಚಿತ್ರಗಳನ್ನು ರಚಿಸಲಾಗಿದ್ದು, ಅವು ನೈಜ ಶೈಲಿಯಲ್ಲಿವೆ.

ಅರ್ಜುನನಿಗೆ ವಿಶ್ವರೂಪ ತೋರಿಸುತ್ತಿರುವ ಕೃಷ್ಣ

ಪ್ರಸ್ತುತ ಈ ಚಿತ್ರವು ಮಹಾಭಾರತದ ಯುದ್ಧದ ಒಂದು ಸಂದರ್ಭದ ಚಿತ್ರವಾಗಿದೆ. ಅರ್ಜುನ ವೈರಾಗ್ಯ ತೋರಿ ಕೌರವರನ್ನು ಕೊಲ್ಲಲು ಇಷ್ಟಪಡದೆ, ಯುದ್ಧಭೂಮಿಯಿಂದ ಮರಳುತ್ತಿರುವಾಗ ಭಗವಾನ್ ಶ್ರೀಕೃಷ್ಣನು ಅವನಿಗೆ ಉಪದೇಶ ಮಾಡಿ ಇವುಗಳ ಮೂಲ ಕತೃ ನಾನೇ ಎಂದು ಹೇಳಿ ತನ್ನ ವಿಶ್ವರೂಪವನ್ನು ತೋರಿಸುತ್ತಿರುವ ದೃಶ್ಯ ತುಂಬಾ ಸುಂದರವಾಗಿದೆ. ಈ ಚಿತ್ರದಲ್ಲಿ ಅರ್ಜುನನು ಕುಳಿತುಕೊಂಡು ಕೃಷ್ಣನಿಗೆ ನಮಸ್ಕರಿಸುತ್ತಿದ್ದಾನೆ. ಶ್ರೀಕೃಷ್ಣ ಆಶೀರ್ವದಿಸುತ್ತಿದ್ದಾನೆ. ಆಕಾಶದಲ್ಲಿ ಕೃಷ್ಣನ ಹಲವಾರು ರೂಪಗಳನ್ನು ತೋರಿಸುತ್ತಿದ್ದಾನೆ. ಅವನ ತಲೆಯ ಮೇಲೆ ಹನ್ನೊಂದು ಹೆಡೆಯುಳ್ಳ ಸರ್ಪವನ್ನು ಚಿತ್ರಿಸಲಾಗದೆ. ನಾಲ್ಕು ಕುದುರೆಗಳುಳ್ಳ ಅರ್ಜುನನ ರಥ, ಕೌರವ ಪಾಂಡವರ ಸೈನ್ಯವನ್ನು, ಆನೆ, ಕುದುರೆಗಳನ್ನು ಹಿನ್ನೆಲೆಯಲ್ಲಿ ತೋರಿಸಲಾಗಿದೆ. ಇದು ಕನಕಗಿರಿಯ ಎದುರು ಹನುಮಪ್ಪ ದೇವಸ್ಥಾನದ ಚಿತ್ರಕ್ಕಿಂತ ವಿಭಿನ್ನವಾಗಿದೆ.

ಆಧಿಶೇಷನ ಮೇಲೆ ಪವಡಿಸಿದ ಮಹಾವಿಷ್ಣು

ಐದು ಹೆಡೆಯುಳ್ಳ ಆಧಿಶೇಷನ ಮೇಲೆ ಭಗವಾನ್ ಮಹಾವಿಷ್ಣು ಮಲಗಿಕೊಂಡಿದ್ದಾನೆ. ಹಂದಿನ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಶಂಖವನ್ನು ಹಿಡಿದುಕೊಂಡು, ಮುಂದಿನ ಬಲಗೈಯನ್ನು ತಲೆ ಆಧಾರವಾಗಿಟ್ಟುಕೊಂಡು ಎಡಗೈಯನ್ನು ಮೊಣಕಾಲಿನ ಮೇಲಿಟ್ಟು, ಕೈಯಲ್ಲಿ ಕಮಲದ ಹೂವನ್ನು ಹಿಡಿದುಕೊಂಡಿದ್ದಾನೆ. ಪಾದದ ಹತ್ತಿರ ಕುಳಿತಿರುವ ಲಕ್ಷ್ಮಿಯು ಪಾದಸೇವೆ ಮಾಡಿತ್ತಿದ್ದಾಳೆ. ಮಹಾವಿಷ್ಣುವಿನ ವಾಹನವಾದ ಗರುಡ ದೇವನು ಮೊಣಕಾಲೂರಿ ಆಶಿರ್ವಾದ ಪಡೆಯುತ್ತಿದ್ದಾನೆ.

ಹೊಕ್ಕಳಿಂದ ಬಂದ ಕಮಲದ ಹೂವಿನಲ್ಲಿ ಬ್ರಹ್ಮದೇವನನ್ನು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಸಮುದ್ರವನ್ನು ತೋರಿಸಲಾಗದೆ. ಚಿತ್ರವು ನೈಜ ಶೈಲಿಯಲ್ಲಿದೆ.

ಸಪ್ತಾಶ್ವರ ರಥದ ಮೇಲೆ ಕುಳಿತಿರುವ ಸೂರ್ಯದೇವ

ಈ ಚಿತ್ರದಲ್ಲಿ ಏಳು ಕುದುರೆಗಳನ್ನು ಹೊಂದಿದ ರಥದಲ್ಲಿ ಸೂರ್ಯದೇವನು ಆಕಾಶಮಾರ್ಗವಾಗಿ ಬರುತ್ತಿದ್ದಾನೆ. ಕುದುರೆಗಳನ್ನು ಗಮನಿಸಿದಾಗ ವೇಗವಾಗಿ ಬರುತ್ತಿದ್ದಾನೆ ಅನ್ನಿಸುತ್ತಿದೆ. ರಥದಲ್ಲಿ ಸಾರಥಿ ಇದ್ದು ಸಾರಥಿಯನ್ನು ಸಣ್ಣ ಪ್ರಮಾಣದಲ್ಲಿ ತೋರಿಸಲಾಗಿದೆ. ಸೂರ್ಯದೇವನು ಆಶೀರ್ವಾದ ಮಾಡುವ ಭಂಗಿಯಲ್ಲಿ ಕುಳಿತುಕೊಂಡಿದ್ದು, ಹಿಂದಿನ ಎಡಗೈಯಲ್ಲಿ ಚಕ್ರ ಹಾಗೂ ಬಲಗೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಹಳದಿ ಮತ್ತು ಕೆಂಪುವಸ್ತ್ರವನ್ನು ಸುತ್ತಿಕೊಂಡಿದ್ದು, ಹಸಿರು ಶಲ್ಯವನ್ನು ಹಾಕಿಕೊಂಡಿದ್ದಾನೆ. ಹಿನ್ನೆಲೆಯಲ್ಲಿ ಸೂರ್ಯನ ಚಿತ್ರವನ್ನು ಹಾಗೂ ಆಕಾಶದ ಚಿತ್ರಣವನ್ನು ಚಿತ್ರಿಸಲಾಗಿದೆ. ರಥಕ್ಕೆ ಧ್ವಜವನ್ನು ಹಾಕಲಾಗಿದೆ.

ರಾಮ ಸೀತೆಯರ ಸೇವೆಯಲ್ಲಿ ನಿರತನಾದ ಲಕ್ಷ್ಮಣ

ಗಿಡದ ಕೆಳಗೆ ಕಲ್ಲಿನ ಮೇಲೆ ಕುಳಿತಿರುವ ರಾಮ ಸೀತೆಯರ ಸೇವೆಯಲ್ಲಿ ಲಕ್ಷ್ಮಣ ನಿರತನಾಗಿದ್ದಾನೆ. ಕೆಳಗೆ ಮೊಣಕಾಲೂರಿ ಕುಳಿತ ಲಕ್ಷಣ ಹಲವಾರು ತರಹದ ಹಣ್ಣು-ಹಂಪಲಗಳನ್ನು ರಾಮ-ಸೀತೆಯರಿಗೆ ನೀಡುತ್ತಿದ್ದಾನೆ. ಪ್ರಸ್ತುತ ಚಿತ್ರದಲ್ಲಿ ಸಹೋದರ ಪ್ರೇಮ ಎದ್ದು ಕಾಣಿಸುತ್ತದೆ. ಅಣ್ಣನ ಮೇಲೆ ಇಟ್ಟುಕೊಂಡಿರುವ ಭಕ್ತಿ, ಗೌರವವನ್ನು ನಾವು ನೋಡಬಹುದು. ಕಿತ್ತಳೆಬಣ್ಣದ ವಸ್ತ್ರಗಳನ್ನು ಮೂವರು ಸುತ್ತಿಕೊಂಡಿದ್ದಾರೆ. ಹಿನ್ನೆಲೆಯಲ್ಲಿ ಎರಡು ಗುಡಿಸಲುಗಳನ್ನು ಹಾಗೂ ಗಿಡ-ಮರಗಳನ್ನು ಚಿತ್ರಿಸಲಾಗಿದೆ. ಒಟ್ಟಿನಲ್ಲಿ ಇದು ಒಂದು ಕಾಡಿನಲ್ಲಿರುವ ದೃಶ್ಯವೆಂದು ಸ್ಪಷ್ಟವಾಗುತ್ತದೆ.

ಪಂಚಮುಖ ಆಂಜನೇಯ

ಪ್ರಸ್ತುತ ಈ ಚಿತ್ರದಲ್ಲಿ ಆಂಜನೇಯನನ್ನು ಪಂಚಭೂತಗಳಿಗೆ ಹೋಲಿಸಿ ಚಿತ್ರಿಸಲಾಗಿದೆ. ಐದುಮುಖಗಳನ್ನು ಹೊಂದಿದ್ದು, ಹತ್ತು ಕೈಗಳನ್ನು ಹೊಂದಲಾಗಿದೆ. ಕೈಯಲ್ಲಿ ಕಳಸ, ಖಡ್ಗ, ಗದೆ, ಚಕ್ರ, ತ್ರಿಶೂಲ, ಕೊಡಲಿ, ಡಾಲು, ಕಪಾಲಿ, ಕತ್ತಿಯನ್ನು ಹಿಡಿದಿದ್ದಾನೆ. ಗದೆಯನ್ನು ನೆಲಕ್ಕೆ ಊರಿಸಿದ್ದನೆ. ತನ್ನ ಬಲಗೈಯಿಂದ ಆಶಿರ್ವಾದ ಮಾಡುತ್ತಿದ್ದಾನೆ. ಹಿನ್ನೆಲೆಯಾಗಿ ದೇವಸ್ಥಾನ, ಹರಿದುಬರುತ್ತಿರುವ ನೀರು, ಗಿಡ-ಮರಗಳು, ಬೆಟ್ಟ-ಗುಡ್ಡಗಳು ಹಾಗೂ ಆಕಾಶವನ್ನು ಚಿತ್ರಿಸಲಾಗಿದೆ.

ಆದಿಶೇಷನ ಮೇಲೆ ನಿಂತ ಮಹಾವಿಷ್ಣು

ಇಲ್ಲಿ ಸಮುದ್ರದಲ್ಲಿರುವ ಆದಿಶೇಷನ ಮೇಲೆ ಭಗವಾನ್ ಮಹಾವಿಷ್ಣು ನಿಂತುಕೊಂಡು, ಆಶೀರ್ವಾದ ಮಾಡುತ್ತಿದ್ದಾನೆ. ನಾಲ್ಕು ಕೈಗಳನ್ನು ಹೊಂದಿದ್ದು, ಹಿಂದಿನ ಬಲಗೈಯಲ್ಲಿ ಚಕ್ರ

ಎಡಗೈಯಲ್ಲಿ ಶಂಖ, ಮುಂದಿನ ಎಡಗೈಯಲ್ಲಿ ಕಮಲ ಹಾಗೂ ಗದೆಯನ್ನು ಹಿಡಿದುಕೊಂಡಿದ್ದಾನೆ. ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದಾನೆ. ನೀಲ ವರ್ಣ ಹೊಂದಿದ ಮಹಾವಿಷ್ಣು, ಹಳದಿ ವಸ್ತ್ರ ಹಾಗೂ ಹಸಿರು ವರ್ಣದ ಶಲ್ಯವನ್ನು ಧರಿಸಿಕೊಂಡಿದ್ದಾನೆ. ಕಿರೀಟದ ಹಿಂದೆ ಪ್ರಕರವಾದ ಬೆಳಕಿದೆ. ಕೊಡೆಯಂತೆ ಆಸರೆಯಾದ ಐದು ಹೆಡೆಯ ಆದಿಶೇಷ ತಲೆಯ ಮೇಲ್ಭಾಗದಲ್ಲಿ ಹೆಡೆ ಬಿಚ್ಚಿ ನಿಂತಿದ್ದಾನೆ. ಹಿನ್ನೆಲೆಯಲ್ಲಿ ಸಮುದ್ರವನ್ನು ಈ ಚಿತ್ರದಲ್ಲಿ ಕಾಣಬಹುದು.

ರಾಮ ಸೀತೆಯರ ಚಿತ್ರ

ರಾಮ ಸೀತೆಯರು ನೇರವಾಗಿ ನಿಂತುಕೊಂಡಿದ್ದು, ಆಶೀರ್ವಾದ ಮಾಡುತ್ತಿದ್ದಾರೆ. ನೀಲವರ್ಣದ ರಾಮನು ಕೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು ಬಲಗೈಯಿಂದ ಆಶಿರ್ವಾದ ಮಾಡುತ್ತಿದ್ದಾನೆ. ಕೆಂಪು ಮತ್ತು ಹಳದಿವರ್ಣದ ವಸ್ತ್ರಗಳನ್ನು ಧರಿಸಿಕೊಂಡಿದ್ದಾನೆ. ಪುಷ್ಪಮಾಲೆ ಮತ್ತು ರುದ್ರಾಕ್ಷಿ ಮಾಲೆಯನ್ನು ಹಾಕಿಕೊಂಡಿದ್ದಾನೆ. ಬೆನ್ನ ಹಿಂದೆ ಇರುವ ಬತ್ತಳಿಕೆಯಲ್ಲಿ ಬಾಣಗಳಿವೆ. ಪಾದುಕೆಗಳನ್ನು ಸಹ ಚಿತ್ರದಲ್ಲಿ ತೋರಿಸಲಾಗಿದೆ. ಸೀತಾ ಮಾತೆಯು ತಲೆಯ ಮೇಲೆ ಸೆರಗು ಹಾಕಿಕೊಂಡು ಭಾರತ ಸಂಸ್ಕೃತಿಯ ನಾರಿಯ ತರಹ ನಿಂತಿದ್ದಾಳೆ. ಕೆಂಪು ವರ್ಣದ ಸೀರೆ, ಪುಷ್ಪಹಾರವನ್ನು ಧರಿಸಿಕೊಂಡಿದ್ದಾಳೆ. ಬಲಗೈಯಿಂದ ಆಶೀರ್ವಾದ ಮಾಡುತ್ತಿದ್ದು, ಎಡಗೈಯಲ್ಲಿ ಕಮಲದ ಹೂಗಳನ್ನು ಹಿಡಿದುಕೊಂಡಿದ್ದಾಳೆ. ಹಿನ್ನೆಲೆಯಲ್ಲಿ ಪ್ರಕಾಶಮಾನವಾದ ಬೆಳಕು ಇದೆ ಹಾಗೂ ಕಾಡಿನ ದೃಶ್ಯವಿದೆ.

ಕಮಲದ ಮೇಲೆ ಕುಳಿತಿರುವ ಪಂಚಮುಖಿ ಗಾಯಿತ್ರಿ

ಬೇರೆ ಬೇರೆ ವರ್ಣದ ಐದು ಮುಖಗಳನ್ನು ಹೊಂದಿದ ಗಾಯಿತ್ರಿ ದೇವಿಯು ಸರೋವರದ ಕಮಲದ ಮೇಲೆ ಕುಳಿತುಕೊಂಡಿದ್ದಾಳೆ. ಹತ್ತು ಕೈಗಳಿವೆ, ಕೈಯಲ್ಲಿ ಚಕ್ರ, ಕಮಲ, ಕಪಾಲಿ, ಗದೆ, ಶಂಖ, ಚಾಟಿ, ಕೊಡಲಿಗಳನ್ನು ಹಿಡಿದುಕೊಂಡು, ತನ್ನ ಬಲಗೈ ಹಾಗೂ ಎಡಗೈಯನ್ನು ಮೇಲ್ಮುಖ ಮತ್ತು ಕೆಳಮುಖವಾಗಿ ಮಾಡಿ ಆಶೀರ್ವಾದ ಮಾಡುತ್ತಿದ್ದಾಳೆ. ಪಂಚಮುಖಗಳಿಗೂ ಕಿರೀಟವನ್ನು ಚಿತ್ರಿಸಲಾಗಿದೆ. ಮೈ ಮೇಲೆ ಆಭರಣಗಳನ್ನು ಹಾಕಿಕೊಂಡಿದ್ದಾಳೆ. ಕೆಂಪುವರ್ಣದ ಸೀರೆಯನ್ನು ಧರಿಸಿಕೊಂಡಿದ್ದಾಳೆ. ಹಿನ್ನೆಲೆಯಲ್ಲಿ ಸರೋವರ, ದೇವಸ್ಥಾನ, ಬೆಟ್ಟ-ಗುಡ್ಡಗಳು, ಗಿಡ-ಮರಗಳು, ನೀಲಿ ಆಕಾಶವನ್ನು ಚಿತ್ರದಲ್ಲಿ ತೋರಿಸಲಾಗಿದೆ.

ಕಮಲದ ಮೇಲೆ ನಿಂತ ಲಕ್ಷ್ಮೀ

ಪ್ರಸ್ತುತ ಈ ಚಿತ್ರದಲ್ಲಿ ಲಕ್ಷ್ಮೀಯು ಕಮಲದ ಮೇಲೆ ನಿಂತುಕೊಂಡಿದ್ದಾಳೆ. ಹಸನ್ಮುಖಿಯಾಗಿ ಆಶಿರ್ವಾದ ಮಾಡುತ್ತಿದ್ದು, ಹಿಂಬದಿಯ ಎರಡು ಕೈಗಳಲ್ಲಿ ಕಮಲವನ್ನು ಹಿಡಿದಿದ್ದು, ಮುಂದಿನ

ಎರಡು ಕೈಗಳಿಂದ ಆಶಿರ್ವಾದ ಮಾಡುತ್ತಿದ್ದಾಳೆ. ತಲೆಯ ಮೇಲೆ ಕಿರೀಟ ಮೈತುಂಬ ಆಭರಣ, ಪುಷ್ಪಮಾಲೆ, ಕೆಂಪು ವರ್ಣದ ಸೀರೆಯನ್ನು ಇಲ್ಲಿ ಚಿತ್ರಿಸಲಾಗಿದೆ. ತಲೆಯ ಹಿಂದೆ ಪ್ರಕರವಾದ ಬೆಳಕಿದೆ. ಹಿನ್ನೆಲೆಯಾಗಿ ಇರುವ ಸರೋವರದಲ್ಲಿ ಬಲಗಡೆ ಹಾಣೆಯ ಚಿತ್ರವಿದ್ದು, ದೇಹದ ಅರ್ಧಭಾಗ ನೀರಿನಲ್ಲಿದೆ. ತನ್ನ ಸೊಂಡಿಲಿನಿಂದ ಕಮಲದ ಹೂವನ್ನು ನೀಡುತ್ತಿದೆ. ಎಡಗಡೆ ಹಂಸ ಪಕ್ಷಿ ಇದೆ. ಆಶಿರ್ವದಿಸುತ್ತಿರುವ ಬಲಗೈಯಿಂದ ನಗ-ನಾಣ್ಯಗಳು ಸುರಿಯುತ್ತಿವೆ. ಚಿತ್ರದ ಹಿನ್ನೆಲೆಯಲ್ಲಿ ಆಕಾಶವನ್ನು ಚಿತ್ರಿಸಲಾಗಿದೆ.

ಶಿವ ಪೂಜೆಯಲ್ಲಿ ನಿರತ ಶ್ರೀರಾಮ

ಈ ಚಿತ್ರದಲ್ಲಿ ನೀಲವರ್ಣದ ರಾಮನು ಮೊಣಕಾಲೂರಿ ಕುಳಿತ ಭಂಗಿಯಲ್ಲಿದ್ದು, ಶಿವಲಿಂಗ ಪೂಜೆಯಲ್ಲಿ ನಿರತನಾಗಿದ್ದಾನೆ. ಶಂಖದಿಂದ ಹಾಲನ್ನು ಸುರಿದು ಹಾಲಿನ ಅಭಿಷೇಕ ಮಾಡುತ್ತಿದ್ದಾನೆ. ಬಿಲ್ಲು, ಬಾಣ, ಬತ್ತಳಿಕೆಯನ್ನು ಪಕ್ಕದಲ್ಲಿ ಇಟ್ಟುಕೊಂಡಿದ್ದಾನೆ. ಹಿಂದೆ ಲಕ್ಷಣ, ಕೈಮುಗಿದು ನಿಂತುಕೊಂಡಿದ್ದಾನೆ. ಮುಂಭಾಗದಲ್ಲಿ ಆಂಜನೇಯ ಹಾಗೂ ಅತನ ಸಹಚರರಾದ ವಾನರರು ಕೂಡ ಕೈಮುಗಿದುಕೊಂಡು ನಿಂತ್ತಿದ್ದಾರೆ. ಆಂಜನೇಯ ಗದೆಯನ್ನು ನೆಲದ ಮೇಲೆ ಇಟ್ಟು ನಿಂತಿದ್ದಾನೆ. ಆಕಾಶದಲ್ಲಿ ಶಿವನು ಪ್ರತ್ಯಕ್ಷ ಆಗಿದ್ದಾನೆ. ಡಮರುಗವಿರುವ ತ್ರಿಶೂಲ, ಕೊರಳಲ್ಲಿ ಸರ್ಪ, ತಲೆಯಲ್ಲಿ ಚಂದ್ರ, ಉದ್ದ ಕೇಶಗಳನ್ನು ಹೊಂದಿದ ಶಿವನು ಆನಂದ ಭರಿತನಾಗಿದ್ದಾನೆ. ಹಿನ್ನೆಲೆಯಲ್ಲಿ ಸಮುದ್ರದ ಚಿತ್ರವಿದೆ. ರಾಮಾಯಣದ ಕಥೆಯ ಪ್ರಕಾರ ಯುದ್ಧಕ್ಕೆ ಹೋಗುವ ಮೊದಲು ರಾಮನು ಶಿವನ ಪೂಜೆ ಮಾಡಿ ಹೋಗುತ್ತಿದ್ದನೆಂದು ಪ್ರಸ್ತುತ ಚಿತ್ರದಿಂದ ತಿಳಿದುಕೊಳ್ಳಬಹುದಾಗಿದೆ.

ಪೀಠದ ಮೇಲೆ ನಿಂತಿರುವ ಕನ್ನಿಕಾಪರಮೇಶ್ವರಿ

ಬೆಳ್ಳಿಯ ಪೀಠದ ಮೇಲೆ ನಿಂತ್ತಿರುವ ಕನ್ನಿಕಾಪರಮೇಶ್ವರಿಯು ಎರಡು ಕೈಗಳನ್ನು ಮೇಲ್ಮುಖ ಮತ್ತು ಕೆಳಮುಖವಾಗಿ ಹಿಡಿದು ಆಶೀರ್ವಾದ ಮಾಡುತ್ತಿದ್ದಾಳೆ. ದೇಹದ ಸುತ್ತಲು ದೊಡ್ಡ ಪುಷ್ಪಮಾಲೆ ಇದೆ. ಕೈಯಲ್ಲಿ ಗಿಳಿಯನ್ನು ಹಿಡಿದುಕೊಂಡಿದ್ದಾಳೆ. ತಲೆಯ ಮೇಲೆ ಕಿರೀಟ ಮೈತುಂಬ ಆಭರಣ ಬಿಳಿಯ ಸೀರೆ, ಪುಷ್ಪಮಾಲೆಯನ್ನು ಹಾಕಿಕೊಂಡಿದ್ದಾಳೆ. ಪೀಠದ ಸುತ್ತಲೂ ಹಲವಾರು ನಕ್ಷತ್ರ ವಿನ್ಯಾಸಗಳಿಂದ ಕೂಡಿದ ಪ್ರಭಾವಳಿಯನ್ನು ಅಲಂಕಾರಗೊಳಿಸಲಾಗಿದೆ.

ಕುಳಿತಿರುವ ರಾಘವೇಂದ್ರ ಸ್ವಾಮಿಗಳು

ಇಲ್ಲಿ ರಾಘವೇಂದ್ರ ಸ್ವಾಮಿಗಳನ್ನು ಅತ್ಯಂತ ನೈಜವಾಗಿ ಚಿತ್ರಿಸಲಾಗಿದೆ. ಒಂದು ಮನೆಯ ಮೇಲೆ ಇರುವ ಆಮೆಯ ಮೇಲೆ ಶ್ರೀಗಳು ಆಶೀರ್ವಾದ ಭಂಗಿಯಲ್ಲಿ ಕುಳಿತುಕೊಂಡಿದ್ದಾರೆ.

ಕೊರಳಲ್ಲಿ ಮಾಲೆ ಹಾಕಿಕೊಂಡು ಕೈಯಲ್ಲಿ ಜಪಮಾಲೆ ಹಿಡಿದುಕೊಂಡಿದ್ದಾರೆ. ತಲೆಯ ಮೇಲೆ ಕೆಂಪು ಶಲ್ಯವನ್ನು ಹಾಕಿಕೊಂಡಿದ್ದಾರೆ. ಎದೆಯ ಭಾಗದಲ್ಲಿ ರಾಮನು ಪ್ರತ್ಯಕ್ಷನಾಗಿದ್ದಾನೆ. ಹಿನ್ನೆಲೆಯಲ್ಲಿ ಬೃಂದಾವನದ ಚಿತ್ರವನ್ನು ತುಂಬಾ ಸುಂದರವಾಗಿ ಚಿತ್ರಿಸಲಾಗಿದೆ. ಬೃಂದಾವನದ ಹಿಂದೆ ಹಸುನಿಂತುಕೊಂಡಿದೆ. ರಾಘವೇಂದ್ರ ಸ್ವಾಮಿಗಳ ಪಕ್ಕದಲ್ಲಿ ದೀಪದ ಆರತಿಗಳಿವೆ. ಮುಂದೆ ಹಣ್ಣು–ಹಂಪಲದ ಪಾತ್ರೆ ಇದೆ. ಹಿನ್ನೆಲೆಯಲ್ಲಿ ಗಿಡಮರದ ನೀರಿನ ಹರಿವಿನ ಬೆಟ್ಟಗುಡ್ಡಗಳ ಚಿತ್ರಗಳನ್ನು ಕಾಣಿಸುತ್ತದೆ.

ಹುಲಿಯ ಮೇಲೆ ಕುಳಿತ ಆಧಿಶಕ್ತಿ

ಈ ಕಲಾಕೃತಿಯಲ್ಲಿ ಆಧಿಶಕ್ತಿಯು ಕಾಲ ಮೇಲೆ ಕಾಲು ಹಾಕಿಕೊಂಡು ಹುಲಿಯ ಮೇಲೆ ಕುಳಿತಿದ್ದಾಳೆ. ವಿಶೇಷವಾದ ಕಿರೀಟವನ್ನು ಧರಿಸಿ ಆಶೀರ್ವಾದ ಮಾಡುತ್ತಿದ್ದಾಳೆ. ಚಿತ್ರದಲ್ಲಿ ಆದಿಶಕ್ತಿಗೆ ಎಂಟು ಕೈಗಳಿವೆ. ಕೈಯಲ್ಲಿ ಚಕ್ರ, ಖಡ್ಗ, ಗದೆ, ಕಮಲ, ತ್ರಿಶೂಲ, ಬಿಲ್ಲು, ಬಾಣ, ಶಂಖವನ್ನು ಹಿಡಿದುಕೊಂಡಿದ್ದಾಳೆ. ಕೆಂಪು ಸೀರೆ, ಮೈತುಂಬ ಆಭರಣ ಪುಷ್ಪಮಾಲೆಯನ್ನು ಹಾಕಿಕೊಂಡಿದ್ದಾಳೆ. ಹುಲಿಯು ಬಲಗಡೆ ಮುಖಮಾಡಿ ನಿಂತಿದ್ದು, ಬಾಯನ್ನು ತೆರೆದು ಗರ್ಜಿಸುತ್ತಿದೆ. ಹಿನ್ನೆಲೆಯಲ್ಲಿ ದೇವಸ್ಥಾನ, ದೇವಸ್ಥಾನಕ್ಕೆ ಹೋಗುವ ಕಟ್ಟೆ, ಬೆಟ್ಟ–ಗುಡ್ಡ, ಗಿಡ–ಮರಗಳನ್ನು ಚಿತ್ರದಲ್ಲಿ ಚಿತ್ರಿಸಲಾಗಿದೆ.

ಕಮಲದ ಮೇಲೆ ಕುಳಿತ ಮಹಾಲಕ್ಷ್ಮೀ

ಈ ಕಲಾಕೃತಿಯಲ್ಲಿ ಲಕ್ಷ್ಮೀಯು ಹಸನ್ಮುಖಿಯಾಗಿ ಕಮಲದ ಮೇಲೆ ಕುಳಿತುಕೊಂಡಿದ್ದಾಳೆ. ನಾಲ್ಕು ಕೈಗಳಿದ್ದು, ಹಿಂದಿನ ಎರಡು ಕೈಯಲ್ಲಿ ಕಮಲದ ಹೂವನ್ನು ಹಿಡಿದುಕೊಂಡಿದ್ದಾಳೆ. ಮುಂದಿನ ಎರಡು ಕೈಯಿಂದ ಆಶೀರ್ವಾದ ಮಾಡುತ್ತಿದ್ದು, ಎರಡು ಕೈಯಿಂದ ನಗ–ನಾಣ್ಯಗಳು ಮುಂದೆ ಇಟ್ಟಿರುವ ಪಾತ್ರೆಯಲ್ಲಿ ಬೀಳುತ್ತಿವೆ. ಕೆಂಪು ಸೀರೆ, ಮೈ ತುಂಬ ಆಭರಣ, ತಲೆಯ ಮೇಲೆ ಕಿರೀಟ, ಅದರ ಹಿನ್ನೆಲೆಯಲ್ಲಿ ಪ್ರಕರವಾದ ಕಿರಣಗಳಿವೆ. ಲಕ್ಷ್ಮೀಯು ಕುಳಿತಿರುವ ಕಮಲ ಬಿಳಿ ವರ್ಣದಲ್ಲಿದ್ದು, ಸರೋವರದಲ್ಲಿದೆ. ಎರಡು ಬದಿಗೂ ಬಿಳಿ ಆನೆಗಳು ಸರೋವರದಲ್ಲಿ ನಿಂತುಕೊಂಡು ಸೊಂಡಿಲಿನಲ್ಲಿ ಕಮಲದ ಹೂವನ್ನು ಹಿಡಿದುಕೊಂಡಿವೆ. ಹಿನ್ನೆಲೆಯಲ್ಲಿ ಹೂ–ಗಿಡಗಳು, ಬೆಟ್ಟ–ಗುಡ್ಡಗಳು ಹಾಗೂ ಆಕಾಶದಿಂದ ಆವೃತ್ತವಾಗಿದೆ.

ಶ್ರೀ ಸತ್ಯನಾರಾಯಣಸ್ವಾಮಿಯ ಚಿತ್ರ

ಪ್ರಸ್ತುತ ಈ ಕಲಾಕೃತಿಯಲ್ಲಿ ನಾರಾಯಣ (ವಿಷ್ಣು) ಪ್ರತ್ಯಕ್ಷನಾಗಿ ಆಶಿರ್ವಾದ ಮಾಡುತ್ತಿದ್ದಾನೆ. ಮುಂದೆ ಇಬ್ಬರು ದಂಪತಿಗಳು ಪೂಜೆಯಲ್ಲಿ ಕುಳಿತುಕೊಂಡಿದ್ದಾರೆ. ಅವರ ಮುಂದೆ ಕುಳಿತ

ಪೂಜಾರಿ ಪೂಜೆಯನ್ನು ಮಾಡುತ್ತಿದ್ದಾನೆ. ಪೂಜಾ ಸಿದ್ಧತೆಗಳೆಲ್ಲವು ಚಿತ್ರದಲ್ಲಿ ಕಾಣಬಹುದು. ಭಗವಾನ್ ಸತ್ಯನಾರಾಯಣ ಪ್ರತ್ಯಕ್ಷನಾಗಿದ್ದಾನೆ. ನಾಲ್ಕು ಕೈಗಳನ್ನು ಹೊಂದಿದ್ದು, ಕೈಯಲ್ಲಿ ಚಕ್ರ, ಶಂಖ, ಗದೆಯನ್ನು ಹಿಡಿದುಕೊಂಡಿದ್ದಾನೆ. ಬಲಕ್ಕೆ ಭಗವಾನ್ ನಾರದ ಮುನಿಯು ವೀಣೆಯನ್ನು ಹಿಡಿದುಕೊಂಡು ನಿಂತಿದ್ದಾರೆ. ಹಾಗೆ ಪಕ್ಕದಲ್ಲಿ ಪೂಜೆಗೆ ಬಂದ ವ್ಯಕ್ತಿಯು ಕೂಡಾ ಚಿತ್ರದಲ್ಲಿದ್ದಾರೆ. ಹಿನ್ನೆಲೆಯಲ್ಲಿ ಬಾಳೆಯ ಗಿಡಗಳನ್ನು ಹೂವಿನ ಹಾರಗಳನ್ನು ಚಿತ್ರಿಸಲಾಗಿದೆ.

ಬಂಡೆಯಮೇಲೆ ಕುಳಿತು ವೀಣೆ ನುಡಿಸುತ್ತಿರುವ ಸರಸ್ವತಿ

ಪ್ರಸ್ತುತ ಈ ಚಿತ್ರದ ಹಾಗೆ ಕಿಸ್ಕಿಂದ ಪರ್ವತದ ದುರ್ಗಾ ದೇವಿಯ ಗುಡಿಯಲ್ಲಿ ಇನ್ನೊಂದು ಚಿತ್ರವಿದ್ದು, ಅಲ್ಲಿ ಈ ಚಿತ್ರದ ವಿವರಣೆಯನ್ನು ಮಾಡಲಾಗಿದೆ. ಆದರೂ ಅಲ್ಪಸ್ವಲ್ಪ ಬದಲಾವಣೆಗಳು ಚಿತ್ರದಲ್ಲಿ ಕಂಡುಬಂದಿದ್ದು, ಈ ಚಿತ್ರವು ಅಲ್ಲಿಯಕ್ಕಿಂತ ಸ್ವಲ್ಪ ಹಳೆಯ ಚಿತ್ರಗಳಾಗಿವೆ.

ಆಶೀರ್ವಾದ ಭಂಗಿಯಲ್ಲಿರುವ ಪದ್ಮಾವತಿ

ಈ ಕಲಾಕೃತಿಯಲ್ಲಿ ಪದ್ಮಾವತಿದೇವಿಯು ಪೀಠದ ಮೇಲೆ ಕುಳಿತುಕೊಂಡಿದ್ದಾಳೆ. ನಾಲ್ಕು ಕೈಗಳನ್ನು ಹೊಂದಿದ್ದು, ಹಿಂದಿನ ಎರಡು ಕೈಗಳಲ್ಲಿ ಬಂಗಾರದ ಕಮಲದ ಮೊಗ್ಗುಗಳನ್ನು ಹಿಡಿದಿರುವ ಹಾಗೆ, ಮುಂದಿನ ಎರಡು ಕೈಗಳನ್ನು ಕ್ರಮವಾಗಿ ಮೇಲ್ಮುಖ ಮತ್ತು ಕೆಳಮುಖವಾಗಿ ಆಶೀರ್ವದಿಸುವಂತೆ ಚಿತ್ರಿಸಲಾಗಿದೆ. ಕೆಂಪು ಸೀರೆಯನ್ನು ಉಟ್ಟುಕೊಂಡಿದ್ದಾಳೆ. ಅದರ ತುದಿಯಲ್ಲಿ ಬಂಗಾರದ ಎಳೆಗಳು, ಬಂಗಾರದ ಹೂವಿನ ಚಿತ್ರಗಳನ್ನು ಚಿತ್ರಿಸಲಾಗಿದ್ದು, ನೋಡಲು ಸುಂದರವಾಗಿದೆ. ತನ್ನ ಸುತ್ತಲೂ ಕೆಂಪು, ಹಸಿರು, ಬಿಳಿ ವರ್ಣದ ಪುಷ್ಪಮಾಲೆಯನ್ನು ದೇವಿ ಹೊಂದಿದ್ದಾಳೆ. ದೇವಿಗಿಂತ ದೊಡ್ಡದಾದ ಕೀರ್ತಿ ಮುಖ ಹೊಂದಿದ ಪ್ರಭಾವಳಿಯನ್ನು ಚಿತ್ರಿಸಲಾಗಿದೆ. ಪ್ರಭಾವಳಿಯು ಹಲವಾರು ವಿನ್ಯಾಸದಿಂದ ಕೂಡಿದೆ. ದೇವಿಯ ಹಿಂದೆ ಕೆಂಪು ಹಾಗೂ ಕಂದು ಮಿಶ್ರಿತ ಹಾಗೂ ಪ್ರಭಾವಳಿಯ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಚಿತ್ರಿಸಲಾಗಿದೆ. ಎರಡು ಬದಿಗೂ ಅಲಂಕೃತ ಕಂಬಗಳಿವೆ. ದೇವಿಯ ಮುಂದೆ ಫಲ-ಪುಷ್ಪಗಳು, ಹಣ್ಣು-ಹಂಪಲಗಳು ಮತ್ತು ಪಾದುಕೆಯನ್ನು ಇಲ್ಲಿ ಕಲಾವಿದ ಸುಂಧರವಾಗಿ ನಿರ್ಮಿಸಿದ್ದಾನೆ.

ಆಶೀರ್ವಾದ ಭಂಗಿಯಲ್ಲಿರುವ ವೆಂಕಟೇಶ್ವರ (ರಂಗನಾಥ)

ಪ್ರಸ್ತುತ ಈ ಕಲಾಕೃತಿಯಲ್ಲಿ ವೆಂಕಟೇಶ್ವರನು ಪೀಠದ ಮೇಲೆ ಎದ್ದು ನಿಂತಿರುವ ಭಂಗಿಯಲ್ಲಿದೆ. ಮೈ ತುಂಬ ಚಿನ್ನದ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಎರಡು ಕೈ ರಟ್ಟೆಯ ಮೇಲೆ ಸರ್ಪದ ಚಿತ್ರವಿದೆ. ತಲೆಯ ಮೇಲೆ ಉದ್ದನೆಯ ಕಿರೀಟ, ಕೆಂಪು ವರ್ಣದ ಚಿತ್ರ ಹೊಂದಿದೆ. ತನ್ನ ಸುತ್ತಮುತ್ತಲು ಹಸಿರು, ಬಿಳಿ, ಹಳದಿ, ಕೆಂಪು ವರ್ಣದ ಪುಷ್ಪಮಾಲೆಯನ್ನು

ಹೊದಿಸಲಾಗಿದೆ. ವೆಂಕಟೇಶ್ವರನಕ್ಕಿಂತ ದೊಡ್ಡದಾದ ಕೀರ್ತಿಮುಖ ಹೊಂದಿರುವ ಪ್ರಭಾವಳಿಯನ್ನು ಹೊಂದಿದೆ. ಇವೆಲ್ಲವು ಬಂಗಾರ ವರ್ಣದ್ದಾಗಿದ್ದು, ಹಲವಾರು ಅಲಂಕಾರಗಳಿಂದ ಈ ಚಿತ್ರ ಶೃಂಗಾರಗೊಂಡಿದೆ. ಚಿತ್ರವು ಹಲವಾರು ಕಾರಣಗಳಿಂದ ಅಳಿಸಿ ಹೋಗುತ್ತಿದ್ದು, ಅಳಿದುಳಿದ ಚಿತ್ರವನ್ನು ಗಮನಿಸಿದಾಗ ಕಲಾವಿದನ ಶ್ರಮವು ತಿಳಿದುಬರುತ್ತದೆ. ಇಲ್ಲಿ ಕಲಾವಿದ ಅತೀ ಸೂಕ್ಷ್ಮವಾದ ರಚನೆಗಳನ್ನು ಚಿತ್ರದಲ್ಲಿ ರಚಿಸಿರುವುದು ಕಂಡು ಬರುತ್ತದೆ.

ಕೊಪ್ಪಳ ಜಿಲ್ಲೆಯ ಶಿಷ್ಟಪದ ಚಿತ್ರಕಲೆಯನ್ನು ಗಮನಿಸಿದಾಗ ಅನೇಕ ಅಂಶಗಳು ಕಂಡುಬರುತ್ತವೆ. ಈ ಜಿಲ್ಲೆಯಲ್ಲಿ ಪ್ರಾಚೀನ ದೇವಾಲಯಗಳಲ್ಲಿರುವ ಶಿಷ್ಟಪದ ಚಿತ್ರಕಲೆಯು ಒಂದು ರೀತಿಯಾಗಿದ್ದರೆ, ಆಧುನಿಕ ದೇವಾಲಯಗಳಲ್ಲಿ ರಚನೆಯಾದ ಶಿಷ್ಟಪದ ಚಿತ್ರಕಲೆಯು ಮತ್ತೊಂದು ರೀತಿಯಲ್ಲಿದೆ. ಅಂದರೆ ಪ್ರಾಚೀನ ದೇವಾಲಯದ ಚಿತ್ರಗಳಲ್ಲಿ ಆಯಾ ಪ್ರದೇಶದ ಪಾರಂಪರಿಕ ಚಿತ್ರಕಲೆಗಳ ಪ್ರಭಾವ ಮತ್ತು ಪ್ರೇರಣೆಗಳು ಕಂಡುಬರುತ್ತವೆ. ಇಲ್ಲವೆ ಆಯಾ ಪ್ರದೇಶದ ಪ್ರತ್ಯೇಕ ಕಲಾ ಶೈಲಿಗಳೇ ಪ್ರಾಚೀನ ದೇವಾಲಯಗಳಲ್ಲಿ ರಚನೆಯಾಗಿವೆ. ಆನೆಗುಂದಿಯ ಹುಚ್ಚಪ್ಪಯ್ಯನ ಮಠದಲ್ಲಿ ರಚನೆಯಾಗಿರುವ ಚಿತ್ರಗಳು ವಿಜಯನಗರ ಶೈಲಿಯನ್ನು ಪ್ರತಿನಿಧಿಸುತ್ತಿದ್ದರೆ, ಕನಕಗಿರಿಯ ಕನಕಾಚಲ ದೇವಾಲಯದ ಭಿತ್ತಿ ಚಿತ್ರಗಳು ವಿಜಯನಗರೋತ್ತರ ಚಿತ್ರಶೈಲಿಯನ್ನು ಹೊಂದಿವೆ. ಆದರು ಸಹಿತ ವಿಜಯನಗರ ಸಾಮಂತ ಅರಸರ ಕಾಲದಲ್ಲಿ ಇವು ರಚನೆಯಾಗಿದ್ದರಿಂದ ವಿಜಯನಗರ ಚಿತ್ರಶೈಲಿಯ ಲಕ್ಷಣಗಳನ್ನೇ ಹೋಲುತ್ತವೆ. ಹಂಪೆಯು ಸಮೀಪದಲ್ಲಿಯೇ ಇರುವುದರಿಂದ ಅಲ್ಲಿನ ಕಲಾವಿದರು ಇಲ್ಲಿ ಬಂದು ಚಿತ್ರಿಸಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಆಧುನಿಕ ದೇವಾಲಯಗಳಲ್ಲಿ ರಚನೆಯಾಗಿರುವ ಶಿಷ್ಟಪದ ಚಿತ್ರಗಳು ೮೦ರ ದಶಕದಿಂದ ಈಚೇಗೆ ರಚನೆಯಾಗಿದ್ದು, ಪಾಶ್ಚಾತ್ಯ ಪ್ರಭಾವವು ಇಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರಾಚೀನ ದೇವಾಲಯದ ಚಿತ್ರಗಳು ಪಾರಂಪರಿಕವಾದ ದೇಶಿವರ್ಣಗಳಿಂದ ರಚನೆಗೊಂಡಿದ್ದರೆ, ಆಧುನಿಕ ದೇವಾಲಯದ ಚಿತ್ರಗಳು ರಾಸಾಯನಿಕ ತೈಲವರ್ಣಗಳಿಂದ ರಚಿಸಲ್ಪಟ್ಟಿವೆ. ರಚನಾ ವಿಧಾನವು ಸಹಿತ ಭಿನ್ನವಾಗಿದೆ. ಕೊಪ್ಪಳ ಜಿಲ್ಲೆಯ ಶಿಷ್ಟಪದ ಚಿತ್ರಗಳನ್ನು ಅಧ್ಯಯನ ಮಾಡುವಲ್ಲಿ ಆಧುನಿಕ ದೇವಾಲಯಗಳಲ್ಲಿನ ಆಕರಗಳೇ ನಮಗೆ ಹೆಚ್ಚಿನ ಮಾಹಿತಿಯನ್ನು ನೀಡುತ್ತವೆ. ಇವುಗಳ ಆಧಾರದ ಮೇಲೆ ಕೆಳಗಿನಂತೆ ಕೆಲವು ಅಂಶಗಳನ್ನು ಗಮನಿಸಬಹುದು. ಆಂಜನೇಯ ಮತ್ತು ದುರ್ಗೆಗೆ ಸಂಬಂಧಪಟ್ಟಂತೆ ಹೆಚ್ಚಿನ ಚಿತ್ರಗಳಿವೆ. ಇದಲ್ಲದೆ, ವಿಷ್ಣುವಿನ ಕುರಿತಂತೆ ಇರುವಂತಹ ಚಿತ್ರಗಳು ಅಲ್ಲಲ್ಲಿ ಕಂಡುಬರುತ್ತವೆ. ಇವುಗಳಿಗೆ ಹೋಲಿಸಿದಾಗ ಶೈವಸಂಬಂಧಿಸಿದ ಚಿತ್ರ ರಚನೆಗಳು ಕಡಿಮೆ ಪ್ರಮಾಣದಲ್ಲಿವೆ.

ಆಂಜನೇಯನ ಚಿತ್ರಗಳಲ್ಲಿ ಸಾಮಾನ್ಯವಾಗಿ ಜನಪ್ರಿಯವಾಗಿರುವ ವಿಷಯ ಮತ್ತು

ಭಂಗಿಗಳನ್ನು ಚಿತ್ರ ರಚನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆಂಜನೇಯನು ಸಂಜೀವಿನಿ ಪರ್ವತವನ್ನು ಹೊತ್ತುತರುತ್ತಿರುವುದು, ಎದೆ ಬಗೆದು ರಾಮ-ಸೀತೆಯನ್ನು ತೋರಿಸುತ್ತಿರುವುದು, ಧ್ಯಾನದಲ್ಲಿ ಕುಳಿತ ಆಂಜನೇಯ ಇವು ಪ್ರಮುಖವಾಗಿವೆ. ಶಕ್ತಿ ದೇವತೆಗೆ ಸಂಬಂಧಪಟ್ಟ ಚಿತ್ರಗಳಲ್ಲಿ ಶಿವನನ್ನು ಮೆಟ್ಟಿನಿಂತ ದುರ್ಗಿ, ಮಹಿಷಾಸುರನನ್ನು ಕೊಲ್ಲುತ್ತಿರುವ ಚಾಮುಂಡಿ, ಶುಂಭ, ನಿಶುಂಭರನ್ನು ಸಂಹರಿಸುತ್ತಿರುವ ದುರ್ಗೆ, ಹುಲಿಯ ಮೇಲೆ ಕುಳಿತಿರುವ ಆಧಿಶಕ್ತಿ, ಅಗ್ನಿ ಸ್ವರೂಪಳಾದ ದುರ್ಗಾದೇವಿ ಮುಂತಾದವುಗಳು ಪ್ರಮುಖವಾಗಿವೆ. ವಿಷ್ಣುವಿಗೆ ಸಂಬಂಧಪಟ್ಟ ಚಿತ್ರಗಳಲ್ಲಿ ಆಧಿಶೇಷನ ಮೇಲೆ ಪವಡಿಸಿದ ವಿಷ್ಣು, ವಿಶ್ವರೂಪ ತೋರಿಸುತ್ತಿರುವ ಕೃಷ್ಣ, ಶ್ರೀರಾಮಪಟ್ಟಾಭಿಷೇಕ, ಅರ್ಜುನನ ಸಾರಥ್ಯ ವಹಿಸಿದ ಕೃಷ್ಣ, ಸತ್ಯನಾರಾಯಣ ಸ್ವಾಮಿಯ ಚಿತ್ರ, ಆಶೀರ್ವಾದ ಭಂಗಿಯಲ್ಲಿರುವ ವೆಂಕಟೇಶ್ವರ ಇವುಗಳು ಮುಖ್ಯವಾಗಿವೆ. ಉಳಿದಂತೆ ಅಲ್ಲಲ್ಲಿ ಗಣಪತಿ, ಲಕ್ಷ್ಮಿ, ಸರಸ್ವತಿ, ಜಯ-ವಿಜಯರು, ನಂದಿ ಮತ್ತು ಬೃಂಗಿ ಮುಂತಾದ ಹಲವಾರು ಚಿತ್ರಗಳು ಅಲ್ಲಲ್ಲಿ ಪೂರಕವಾಗಿ ರಚನೆಯಾಗಿವೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಶಿಷ್ಟಪದ ಚಿತ್ರಕಲೆಯು ವಿಶೇಷವಾಗಿ ದೇವಾಲಯಗಳಲ್ಲಿ ಕಂಡುಬಂದಿರುವ ಭಿತ್ತಿ ಚಿತ್ರ ಕಲಾ ಪ್ರಕಾರವು ಹೆಚ್ಚಿನ ಪ್ರಮಾಣದಲ್ಲಿ ಆಧುನಿಕ ಕಾಲದಲ್ಲಿ ಬೆಳೆದುಬಂದಿಲ್ಲ ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

❑❑❑



ನವನಾರಿ ಕುಂಜರ



ಎದೆ ಬಗಿದುಕೊಂಡ ಆಂಜನೇಯ



ಸಂಜೀವಿನಿ ಪರ್ವತ ತರುತ್ತಿರುವ ಆಂಜನೇಯ



ಧ್ಯಾನದಲ್ಲಿ ಕುಳಿತ ಆಂಜನೇಯ



ಕಮಲದ ಮೇಲೆ ನಿಂತ ಗಣಪತಿ



ಬೃಹತ್ ಸ್ವರೂಪ ತೋರಿಸುತ್ತಿರುವ ಆಂಜನೇಯ



ಆಧಿಶೇಷನ ಮೇಲೆ ಪವಡಿಸಿದ ಮಹಾವಿಷ್ಣು



ವಿಶ್ವರೂಪ ತೋರಿಸುತ್ತಿರುವ ಶ್ರೀಕೃಷ್ಣ


ಮಹಾಭಾರತ ರಚಿಸುತ್ತಿರುವ ಗಣಪತಿ


ಪಂಚಮುಖಿ ಆಂಜನೇಯ


ರಾಮಧ್ಯಾನದಲ್ಲಿ ನಿರತ ಆಂಜನೇಯ



ಆಶೀರ್ವದಿಸುತ್ತಿರುವ ಆಂಜನೇಯ



ಶ್ರೀರಾಮ ಪಟ್ಟಾಭಿಷೇಕ





ಜಯ-ವಿಜಯರ ಚಿತ್ರ



ಸಂಜೀವಿನಿ ಪರ್ವತ ತರುತ್ತಿರುವ ಆಂಜನೇಯ



ಶಿವನನ್ನು ಮೆಟ್ಟನಿಂತ ದುರ್ಗಿ



ಕಮಲದ ಮೇಲೆ ಕುಳಿತ ಲಕ್ಷ್ಮೀ



ವೀಣೆ ನುಡಿಸುತ್ತಿರುವ ಸರಸ್ವತಿ



ಕಾಮಧೇನು



ಮಹಿಷಾಸುರನನ್ನು ಮರ್ಧನಮಾಡುತ್ತಿರುವ ಚಾಮುಂಡಿ



ನಾಟ್ಯ ಗಣಪತಿ



ಕೊಳಲು ನುಡಿಸುತ್ತಿರುವ ಕೃಷ್ಣ



ಅರ್ಜುನನ ರಥದ ಸಾರಥ್ಯವಹಿಸಿದ ಕೃಷ್ಣ



ಆಶೀರ್ವದಿಸುತ್ತಿರುವ ದುರ್ಗಾದೇವಿ




ಹುಲಿಯ ಮೇಲೆ ಕುಳಿತ ದುರ್ಗಾದೇವಿ




ಅಗ್ನಿ ಸ್ವರೂಪದಲ್ಲಿರುವ ದುರ್ಗಾದೇವಿ



ಕಮಲದ ಮೇಲೆ ಕುಳಿತಿರುವ ಪಂಚಮುಖದ ಗಾಯತ್ರಿದೇವಿ



ಶಿವನ ಮೇಲೆ ಕುಳಿತ ಪಾರ್ವತಿ



ಅರ್ಜುನನಿಗೆ ವಿಶ್ವರೂಪ ತೋರಿಸುತ್ತಿರುವ ಕೃಷ್ಣ



ಆಧಿಶೇಷನ ಮೇಲೆ ಪಡಿಸಿದ ಮಹಾವಿಷ್ಣು




ಸಪ್ತಾಶ್ವರ ರಥದ ಮೇಲೆ ಕುಳಿತಿರುವ ಸೂರ್ಯದೇವ



ರಾಮ–ಸೀತೆಯರ ಸೇವೆಯಲ್ಲಿ ನಿರತನಾದ ಲಕ್ಷ್ಮಣ



ಕಮಲದ ಮೇಲೆ ಕುಳಿತಿರುವ ಲಕ್ಷ್ಮೀ



ಹುಲಿಯ ಮುಂದೆ ನಿಂತಿರುವ ದುರ್ಗಾದೇವಿ



ಆಸನದ ಮೇಲೆ ಕುಳಿತ ಗಣಪತಿ




ವೀಣೆ ನುಡಿಸುತ್ತಿರುವ ಸರಸ್ವತಿ



ಪಂಚಮುಖಿ ಆಂಜನೇಯ



ಆದಿಶೇಷನ ಮೇಲೆ ನಿಂತ ಮಹಾವಿಷ್ಣು




ರಾಮ-ಸೀತೆ



ಕಮಲದ ಮೇಲೆ ಕುಳಿತಿರುವ ಪಂಚಮುಖಿ ಗಾಯತ್ರಿ


ಕಮಲದ ಮೇಲೆ ನಿಂತ ಲಕ್ಷ್ಮೀ


ಶಿವ ಪೂಜೆಯಲ್ಲಿ ನಿರತ ಶ್ರೀರಾಮ


ಪೀಠದ ಮೇಲೆ ನಿಂತಿರುವ ಕನ್ನಿಕಾಪರಮೇಶ್ವರಿ


ಕುಳಿತಿರುವ ಶ್ರೀ ರಾಘವೇಂದ್ರ ಸ್ವಾಮಿಗಳು



ಹುಲಿಯ ಮೇಲೆ ಕುಳಿತ ಆದಿಶಕ್ತಿ




ಕಮಲದ ಮೇಲೆ ಕುಳಿತ ಮಹಾಲಕ್ಷ್ಮೀ



ಶ್ರೀ ಸತ್ಯನಾರಾಯನ ಸ್ವಾಮಿ


ಬಂಡೆಯಮೇಲೆ ಕುಳಿತು ವೀಣೆ ನುಡಿಸುತ್ತಿರುವ ಸರಸ್ವತಿ


ಆಶೀರ್ವಾದ ಭಂಗಿಯಲ್ಲಿರುವ ಪದ್ಮಾವತಿ


ಆಶೀರ್ವಾದ ಭಂಗಿಯಲ್ಲಿರುವ ವೆಂಕಟೇಶ್ವರ

ಅಧ್ಯಾಯ - ಆರು

ಕೊಪ್ಪಳ ಜಿಲ್ಲೆಯ ಕಲಾವಿದರು ಮತ್ತು ಸ್ಥಿತಿಗತಿ

ಕೊಪ್ಪಳ ಜಿಲ್ಲೆಯಲ್ಲಿ ಇರುವ ಕಲಾವಿದರು ಚಿತ್ರಕಲಾಕೃತಿಗಳನ್ನು ರಚಿಸುವ ಮೂಲಕ ಜಿಲ್ಲೆಯನ್ನು ಕಲೆಯ ದೃಷ್ಟಿಯಿಂದ ಶ್ರೀಮಂತಗೊಳಿಸಿದ್ದಾರೆ. ಜಿಲ್ಲೆಯಲ್ಲಿ ಇರುವಂತಹ ಕಲಾವಿದರನ್ನು ಗಮನಿಸಿದಾಗ ಪಾರಂಪರಿಕ ಕೃತಿಗಳನ್ನು ರಚಿಸುವ ಕಲಾವಿದರು ಮತ್ತು ಆಧುನಿಕ ದೇವಾಲಯಗಳಲ್ಲಿ ಪಾಶ್ಚಾತ್ಯ ಶೈಲಿಯ ಚಿತ್ರರಚಿಸುವ ಕಲಾವಿದರೆಂದು ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು. ಪಾರಂಪರಿಕ ಕಲಾವಿದರು ಹೆಚ್ಚಾಗಿ ಕಿನ್ನಾಳ ಮತ್ತು ಭಾಗ್ಯನಗರ ಪ್ರದೇಶದಲ್ಲಿ ನೆಲೆಸಿದ್ದರೆ, ಮತ್ತೊಂದು ಬಗೆಯ ಕಲಾವಿದರು ಕನಕಗಿರಿ, ಗಂಗಾವತಿ ಮತ್ತು ಕೊಪ್ಪಳದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ. ಹಾಗೆ ನೋಡಿದರೆ ಜಿಲ್ಲೆಯಲ್ಲಿ ಕಂಡುಬರುವ ಪ್ರಾಗೈತಿಹಾಸಿಕ ಚಿತ್ರಗಳನ್ನು ರಚಿಸಿದ ಆದಿಮಾನವರು ಸಹಿತ ಜಿಲ್ಲೆಯ ಕಲಾವಿದರ ವ್ಯಾಪ್ತಿಯಲ್ಲಿ ಒಳಗೊಳ್ಳುತ್ತಾರೆ. ಆದರೆ ಇಲ್ಲಿ ಅಂತಹ ಪ್ರಾಚೀನ ಮಾಹಿತಿಯನ್ನು ಹೊರತುಪಡಿಸಿ, ಸದ್ಯದ ಮಟ್ಟಿಗೆ ಜಿಲ್ಲೆಯಲ್ಲಿ ಕಲಾಕೃತಿ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕಲಾವಿದರನ್ನು ಮಾತ್ರ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ. ಇಲ್ಲಿಯೂ ಸಹಿತ ಅಧ್ಯಯನದ ಹಿನ್ನೆಲೆಯಲ್ಲಿ ಕೆಲವು ಪ್ರಾತಿನಿಧಿಕ ಕಲಾವಿದರನ್ನು ಕುರಿತು ಮಾತ್ರ ಕೆಳಗಿನಂತೆ ಹೇಳಲಾಗಿದೆ.

೧. ವೆಂಕೋಬಪ್ಪ ಕೆ. ಚಿತ್ರಗಾರ

ವೆಂಕೋಬಪ್ಪ ಚಿತ್ರಗಾರ ಅವರು ಕೃಷ್ಣಪ್ಪ ಚಿತ್ರಗಾರ ಅವರ ಮಗನಾಗಿ ಹುಟ್ಟಿದರು. ಇವರು ಬಾಲ್ಯದಿಂದಲೇ ಕಿನ್ನಾಳ ಕಲಾಕೃತಿಗಳನ್ನು ತಮ್ಮ ತಂದೆಯವರಿಂದ ರಚಿಸಲು ಕಲಿತರು. ಅನೇಕ ಅಲಂಕಾರಿಕ ಗೊಂಬೆಗಳು, ದ್ವಾರಪಾಲಕರು, ತೇರಿನ ಅಲಂಕಾರಕ್ಕಾಗಿ ಬಳಸುವ ಗೊಂಬೆಗಳು, ಪಲ್ಲಕ್ಕಿ, ಛತ್ರಿ ಇನ್ನೂ ಹಲವಾರು ಗೊಂಬೆಗಳನ್ನು ಇವರು ರಚಿಸುತ್ತಿದ್ದರು. ಎಂ. ವೈ.

ಘೋರ್ಪಡೆಯವರು ಸಂಡೂರಿನಲ್ಲಿ ಕರಕುಶಲ ಕೇಂದ್ರವೊಂದನ್ನು ಸ್ಥಾಪಿಸಿ ಆ ಕೇಂದ್ರದ ಮೂಲಕ ಈ ಕಲೆಯನ್ನು ಅಭಿವೃದ್ಧಿಪಡಿಸಲು ಈ ಕಲೆಯ ತರಬೇತಿಗೆ ವ್ಯವಸ್ಥೆ ಮಾಡಿದ್ದರು. ನಾಡಿನ ಬೇರೆ ಬೇರೆ ಭಾಗದಿಂದ ಕಿನ್ನಾಳ ಚಿತ್ರಗಾರಿಕೆಯನ್ನು ಕಲಿಯಲು ಬರುವ ಅಭ್ಯರ್ಥಿಗಳು, ಕಿನ್ನಾಳ ಕಲೆಯನ್ನು ತರಬೇತಿ ಹೊಂದಲು, ವೆಂಕೋಬಪ್ಪ ಚಿತ್ರಗಾರರನ್ನು ಮುಖ್ಯಸ್ಥರನ್ನಾಗಿ ನೇಮಿಸಿಕೊಂಡಿದ್ದರು.

೧೯೬೯ರಲ್ಲಿ ಇವರಿಗೆ ಪ್ರಪ್ರಥಮ ರಾಜ್ಯ ಪ್ರಶಸ್ತಿ ಲಭಿಸಿತು. ನಂತರದಲ್ಲಿ ೧೯೮೪ರಲ್ಲಿ ಕರಕುಶಲ ಮಂಡಳಿಯ ರಾಜ್ಯಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿ ನೇಮಗೊಂಡರು. ೧೯೯೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಇವರಿಗೆ ನೀಡಿ ಗೌರವಿಸಿದೆ. ೧೯೯೮ರಲ್ಲಿ ಶಿಲ್ಪಾಚಾರ್ಯರೆಂಬ ಪ್ರಶಸ್ತಿಯನ್ನು ಕಂಚಿನ ಫಲಕದೊಂದಿಗೆ ಅಂದಿನ ಕರ್ನಾಟಕದ ರಾಜ್ಯಪಾಲರಾದ ಶ್ರೀ.ಎ.ಎನ್.ಬ್ಯಾನರ್ಜಿ ಅವರಿಂದ ಪಡೆದುಕೊಂಡರು. ವೆಂಕೋಬಪ್ಪನವರ ಮಗ ಸೋಮಣ್ಣ ಸಹ ರಾಜ್ಯಪ್ರಶಸ್ತಿ ಪಡೆದು, ಒಂದೇ ಕುಟುಂಬದಲ್ಲಿ ಮೂರು ರಾಜ್ಯ ಪ್ರಶಸ್ತಿಯನ್ನು ಪಡೆದ ಏಕೈಕ ಕಿನ್ನಾಳ ಕುಟುಂಬ ಇದಾಗಿದೆ. ಸೋಮಣ್ಣ ಚಿತ್ರಗಾರ ಸಹ ಹೊಸ ಹೊಸ ರೀತಿಯ ಕಲಾಕೃತಿಗಳನ್ನು ರಚಿಸುತ್ತಾ, ಕಿನ್ನಾಳ ಕಲೆಯ ಶ್ರೇಯೋಭಿವೃದ್ಧಿಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸೋಮಣ್ಣ ಚಿತ್ರಗಾರ

ಇವರು ೧೯೪೦ರಲ್ಲಿ ಕಿನ್ನಾಳದಲ್ಲಿ ಜನಿಸಿದರು. ತಂದೆ ದಿ.ವೆಂಕೋಬಪ್ಪ ಚಿತ್ರಗಾರ ಮತ್ತು ಅಜ್ಜ ದಿ.ಕೃಷ್ಣಪ್ಪ ಚಿತ್ರಗಾರರಿಂದ ಬಳುವಳಿಯಾಗಿ ಬಂದ ಕಿನ್ನಾಳ ಕಲೆಯನ್ನು ಮುಂದುವರೆಸುತ್ತಾ ಬಂದಿದ್ದಾರೆ. ಇವರು ಕಿನ್ನಾಳ ಕಲೆಯ ಘೋಷಣೆಯಲ್ಲಿ ಸಾಕಷ್ಟು ಪರಿಶ್ರಮಿಸಿದ್ದಾರೆ. ಆಧುನಿಕ ಆಕರ್ಷಣೆಗಳ ಆರ್ಭಟದಲ್ಲಿಯೂ ಈ ಕಿನ್ನಾಳ ಕಲೆಯನ್ನು ಉಳಿಸಿಕೊಂಡು ಬಂದಿರುವ ಕಿನ್ನಾಳ ಗ್ರಾಮದ ಹಲವು ಕುಟುಂಬಗಳಲ್ಲಿ ಒಂದಾದ ಸೋಮಣ್ಣನವರ ಕುಟುಂಬವು, ಕಿನ್ನಾಳ ಕಲೆಯು ನಶಿಸಿ ಹೋಗಬಾರದೆಂಬ ಉದ್ದೇಶದಿಂದ ಅನುವಂಶಿಕವಾಗಿ ಬಂದ ಕಲೆಯನ್ನು ಪೋಷಿಸಿ ಬೆಳಸಿಕೊಂಡು ಹೋಗುವ ಸಲುವಾಗಿ ಮಕ್ಕಳಿಗೆ ಈ ಕಲೆಯನ್ನು ಹೇಳಿಕೊಡುತ್ತಿದ್ದಾರೆ. ಕಿನ್ನಾಳ ಗ್ರಾಮದ ಸೋಮಣ್ಣನವರು ಗದುಗಿನ ವಿಜಯ ಕಲಾಮಂದಿರದಲ್ಲಿ ಆರ್ಟ್ ಮಾಸ್ಟರ್ ಮತ್ತು ಚಿತ್ರಕಲೆಯ ಡಿಪ್ಲೋಮಾ ಪಡೆದಿದ್ದಾರೆ. ಈಗ ಪ್ರೌಢಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ತಯಾರಿಸಿದ ಅಷ್ಟಭುಜಾಕೃತಿ ಪ್ರಭಾವಳಿ ಚೌಕಿಗೆ ಕರ್ನಾಟಕ ಸರ್ಕಾರವು ೧೯೯೧ರಲ್ಲಿ ಪ್ರಶಂಸಾ ಪತ್ರ ನೀಡಿ ಸನ್ಮಾನಿಸಿದೆ. ೧೯೯೨ರಲ್ಲಿ ಇವರ ಪ್ರಭಾವಳಿ ಚೌಕಿಗೆ ರಾಜ್ಯ ಪ್ರಶಸ್ತಿ, ೧೯೯೩ರಲ್ಲಿ ರಾಯಚೂರಿನ ಜಿಲ್ಲಾಮಟ್ಟದ ಅತ್ಯುತ್ತಮ ಕಲಾಶಿಕ್ಷಕ ಪ್ರಶಸ್ತಿ, ೧೯೯೦ರಲ್ಲಿ

ಮೈಸೂರಿನ ರಾಮಸನ್ಸ್ ಪ್ರತಿಷ್ಠಾನದ ಶಿಲ್ಪಶ್ರೀ ಕಲಾ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಅಜ್ಜ ದಿ.ಕೃಷ್ಣಪ್ಪ ೧೯೬೬ರಲ್ಲಿ ರಾಜ್ಯ ಪ್ರಶಸ್ತಿ ಪಡೆದುಕೊಂಡಿದ್ದಾರೆ. ತಂದೆ ದಿ.ವೆಂಕೋಬಪ್ಪ ೧೯೮೫ರಲ್ಲಿ ರಾಜ್ಯಪ್ರಶಸ್ತಿ, ೧೯೯೨ರಲ್ಲಿ ಇವರಿಗೆ ಒಂದೇ ಕುಟುಂಬದಲ್ಲಿ ಮೂರು ರಾಜ್ಯ ಪ್ರಶಸ್ತಿ ಪಡೆದ ಗೌರವಕ್ಕೆ ಪಾತ್ರರಾದ ಕಲಾವಿದರಾಗಿದ್ದಾರೆ.

ಇವರು ೧೯೯೩ರಲ್ಲಿ ಹೈದ್ರಾಬಾದಿನಲ್ಲಿ ನಡೆದ ದಕ್ಷಿಣವಲಯದ ಸಾಂಸ್ಕೃತಿಕ ಕೇಂದ್ರ ಆಯೋಜಿಸಿದ ರಾಷ್ಟ್ರಮಟ್ಟದ ಕಲಾಶಿಬಿರದಲ್ಲಿ ರಾಜ್ಯದ ಪರವಾಗಿ ಭಾಗವಹಿಸಿದ್ದಾರೆ. ೧೯೯೪ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಹೊನ್ನಾವರದಲ್ಲಿ ಆಯೋಜಿಸಿದ ಸಾಂಪ್ರದಾಯಿಕ ಕಲಾ ಶಿಬಿರದಲ್ಲಿ ಭಾಗವಹಿಸಿ, ಸನ್ಮಾನಿತರಾಗಿದ್ದಾರೆ. ಪರಂಪರೆಯಿಂದ ಬಂದ ಈ ಕಲೆಯು ನಶಿಸಬಾರದು ಎನ್ನುವ ಕಾರಣದಿಂದ ಈ ಕಲೆಯನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದೇನೆ, ಎಂದು ಹೇಳುತ್ತಾರೆ ಶ್ರೀಯುತರು.

ಏಕಪ್ಪ ಚಿತ್ರಗಾರ

ಇವರು ೧೧.೦೫.೧೯೪೩ರಲ್ಲಿ ರಾಮಚಂದ್ರಪ್ಪ ಚಿತ್ರಗಾರ ಅವರ ಮಗನಾಗಿ ಜನಿಸಿದರು. ತಮ್ಮ ತಂದೆಯವರಿಂದ ಕಿನ್ನಾಳ ಕಲೆಯಲ್ಲಿ ತರಬೇತಿ ಪಡೆದುಕೊಂಡು ಕರ್ನಾಟಕದ ಹಲವಾರು ದೇವಾಲಯಗಳಿಗೆ ದ್ವಾರಪಾಲಕರು, ದಶಾವತಾರದ ಗೊಂಬೆ, ಗ್ರಾಮದೇವತೆಗಳ ಮೂರ್ತಿಗಳನ್ನು ರಚಿಸುವಲ್ಲಿ ಸಿದ್ಧಹಸ್ತರು, ಇವರಿಗೆ ನಾಲ್ಕು ಜನ ಮಕ್ಕಳಿದ್ದು, ಅವರು ಕೂಡಾ ಕಿನ್ನಾಳ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇವರ ಎರಡನೆಯ ಮಗ ಅಣ್ಣಪ್ಪ ಆರ್ಟ್ ಮಾಸ್ಟರ್ ಪದವಿಯನ್ನು ಪಡೆದುಕೊಂಡಿದ್ದಾರೆ. ಏಕಪ್ಪನವರು ಹೆಚ್ಚಾಗಿ ದೇವರ ಮೂರ್ತಿ, ಗ್ರಾಮ ದೇವತೆಗಳು, ಪಲ್ಲಕ್ಕಿ, ಕೊಡೆ, ದ್ವಾರಪಾಲಕರು, ತೇರಿನ ಬೊಂಬೆಗಳು, ತೊಟ್ಟಿಲಗೌರಿ, ಲಕ್ಷ್ಮೀ, ಕಿನ್ನಾಳ ಚೌಕಿ, ಗಣೇಶ, ನಂದಿಮೂರ್ತಿ ಶಿಲ್ಪಗಳನ್ನು ರಚಿಸುತ್ತಾರೆ. ಕರಕುಶಲ ಅಭಿವೃದ್ಧಿ ನಿಗಮ ನಡೆಸಲ್ಪಟ್ಟ ಕಾರ್ಯಗಾರದಲ್ಲಿ ಒಂದು ವರ್ಷಗಳ ಕಾಲ ಶಿಕ್ಷಕರಾಗಿ ಸೇವೆಸಲ್ಲಿಸಿದ್ದಾರೆ. ಮತ್ತು ಜಿಲ್ಲಾಡಳಿತದಿಂದ ನಡೆಸಲ್ಪಟ್ಟ ಕಿನ್ನಾಳ ಕಲೆಯ ಮಾರಾಟ ಮಾಡುವ ಸಂಸ್ಥೆಯ ಅಧ್ಯಕ್ಷರಾಗಿ ೩ ವರ್ಷ ಸೇವೆ ಸಲ್ಲಿಸಿದ್ದಾರೆ.

ಇವರು ಹಲವಾರು ಕಾರ್ಯಗಾರದಲ್ಲಿ ನಿರ್ದೇಶಕರಾಗಿ ಕಿನ್ನಾಳ ಕಲೆಯನ್ನು ಕಲಾ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಮಹಾಲಾಸಾ ಕಲಾಶಾಲೆ ಮಂಗಳೂರು, ರವೀಂದ್ರ ಕಲಾನಿಕೇತನ ತುಮಕೂರು, ಶ್ರೀಬಸವೇಶ್ವರ ಚಿತ್ರಕಲಾಶಾಲೆ ಹುಮನಾಬಾದ, ಶ್ರೀ ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಬಸವಕಲ್ಯಾಣ, ಶ್ರೀ ಕಲಾನಿಕೇತನ ಮೈಸೂರು ಮುಂತಾದ ಕಲಾಶಾಲೆಗಳಿಗೆ ಆಹ್ವಾನದ ಮೇರೆಗೆ ಹೋಗಿ ಕಿನ್ನಾಳ ಕಲೆಯ ಕುರಿತು ತರಬೇತಿಗಳನ್ನು ನೀಡಿದ್ದಾರೆ. ೨೦೦೩ರಲ್ಲಿ ಅಖಿತ ಭಾರತ ಸಾಂಪ್ರದಾಯಿಕ ಚಿತ್ರಕಲಾ ಕಾರ್ಯಗಾರದಲ್ಲಿ ಭಾಗವಹಿಸಿ

ಕಲಾಕೃತಿಗಳನ್ನು ರಚಿಸಿದ್ದಾರೆ. ಹಂಪಿ ಉತ್ಸವ, ಚಿತ್ರಸಂತೆಯಲ್ಲಿ ಭಾಗವಹಿಸಿ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

ನಾರಾಯಣಪ್ಪ ಸೀನಪ್ಪ ಚಿತ್ರಗಾರ

ಇವರು ಸೀನಪ್ಪ ಚಿತ್ರಗಾರನ ಮಗನಾಗಿ ೧೯೪೦ರಲ್ಲಿ ಜನಿಸಿದ್ದಾರೆ. ಏಳನೆಯ ತರಗತಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿ, ಕುಲಕಸುಬಾಗಿರುವ ಕಿನ್ನಾಳವನ್ನು ವೃತ್ತಿಯಾಗಿಸಿಕೊಂಡಿದ್ದಾರೆ. ಇವರು ತಮ್ಮ ೧೫ನೆಯ ವಯಸ್ಸಿಗೆ ಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದ್ದಾರೆ. ಇವರ ಮಗ ಕಿಶೋರ್ ಕೂಡಾ ತಂದೆಯೊಂದಿಗೆ ಕಲಾಕೃತಿಗಳನ್ನು ರಚನೆಮಾಡುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಂಶಪಾರಂಪರ್ಯವಾಗಿ ಕಿನ್ನಾಳ ಕಲೆಯನ್ನು ಬೆಳೆಸಿಕೊಂಡು ಬಂದ ಕುಟುಂಬದಲ್ಲಿ ನಾರಾಯಣಪ್ಪನರ ಕುಟುಂಬವು ಒಂದು.

ನಾರಾಯಣಪ್ಪನವರು ೧೯೮೫ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ನಡೆಸಿದ ಕಲಾ ಶಿಬಿರ, ೧೯೯೯ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ತನ್ನ ಸದಸ್ಯರಿಗಾಗಿ ಏರ್ಪಡಿಸಿದ ಕಲಾ ಶಿಬಿರ ಮತ್ತು ಸಾರ್ಕ್ ಸಮ್ಮೇಳನದಲ್ಲಿ ನಡೆದ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ ಮತ್ತು ಹೊರರಾಜ್ಯಗಳಲ್ಲಿಯೂ ಸಹ ಪಾಲ್ಗೊಂಡು ಪಾಂಡಿಚೇರಿ, ಹರಿಯಾಣ ರಾಜ್ಯದ ಸೂರಜ್‌ಕುಂಡ ರಾಜಸ್ಥಾನದ ಉದಯಪುರದ ಶಿಲ್ಪಗ್ರಾಮ, ಇಂದಿರಾಗಾಂಧಿ ಮಾನವ ಸಂಗ್ರಹಾಲಯ, ಭೂಪಾಲ, ಆಸ್ಸಾಂನ ಗೌಹಾಟಿ ಮತ್ತು ಬೆಂಗಳೂರು, ಉಡುಪಿಗಳಲ್ಲಿ ತಮ್ಮ ಚಿತ್ರಗಳನ್ನು ಪ್ರದರ್ಶಿಸಿದ್ದಾರೆ.

ಇವರಿಗೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಅಂದಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರಿಂದ ೧೯೮೭ನೆಯ ಸಾಲಿನ ರಾಜ್ಯ ಪ್ರಶಂಸನಾ ಪತ್ರವನ್ನು ನೀಡಿ ಗೌರವಿಸಿದೆ. ೧೯೮೬ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ೨೦೦೫ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ರಾಜ್ಯ ಪ್ರಶಸ್ತಿ ಇವರಿಗೆ ಸಂದಿದೆ. ಮಂಗಳೂರಿನ ಮಹಾಲಸಾ ಚಿತ್ರಶಾಲೆ ಮತ್ತು ಮೈಸೂರಿನ ಶ್ರೀ ಕಲಾನಿಕೇತನ ಚಿತ್ರಕಲಾ ಶಾಲೆಯಲ್ಲಿ ಕಿನ್ನಾಳ ಕಲೆಯ ಬಗ್ಗೆ ತರಬೇತಿ ನೀಡಿ, ಯುವ ಕಲಾವಿದರು ಅರಿತುಕೊಂಡು ಮುಂದಿನ ಪೀಳಿಗೆಗೆ ಈ ಕಲೆಯನ್ನು ಮುಂದುವರೆಸಿದರೆ ಸಾಕು ಎನ್ನುತ್ತಾರೆ ಶ್ರೀಯುತರು.

ಶೇಷಪ್ಪ ಚಿತ್ರಗಾರ

ಶ್ರೀಯುತರು ೫.೪.೧೯೪೪ರಲ್ಲಿ ಹನುಮಂತಪ್ಪ ಚಿತ್ರಗಾರನ ಮಗನಾಗಿ ಜನಿಸಿದ್ದಾರೆ. ಮುಖ್ಯವಾಗಿ ಇವರ ಕುಲಕಸುಬು ಬಡಿಗಿತನವಾಗಿತ್ತು. ಕಿನ್ನಾಳದಲ್ಲಿ ಕಲೆಯನ್ನು ಮುಂದುವರೆಸಲು ಹಲವಾರು ಕಾರ್ಯಕ್ರಮ ಕಾರ್ಯಗಾರಗಳನ್ನು ಸರ್ಕಾರದವರು ಏರ್ಪಡಿಸಿದ್ದರು. ೧.೧೦.೧೯೮೦

ರಿಂದ ೩೧.೦೩.೧೯೮೮ರವರೆಗೆ ೫ ತಿಂಗಳ ನಡೆದ ಕಾರ್ಯಗಾರದಲ್ಲಿ ಇವರು ಭಾಗವಹಿಸಿ ಕಾರ್ಯಗಾರದ ಮುಖ್ಯಸ್ಥರಾದ ಶ್ರೀ ರಾಮಚಂದ್ರಪ್ಪ ಚಿತ್ರಗಾರರವರಿಂದ ಕಿನ್ನಾಳ ಕಲೆಯನ್ನು ಕಲಿತರು. ಈ ಕಾರ್ಯಗಾರವನ್ನು ರಾಜ್ಯ ಸರಕಾರದ ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಅವರು ಏರ್ಪಡಿಸಿದ್ದರು.

ಕಾರ್ಯಗಾರದಲ್ಲಿ ಪರಿಣತಿ ಹೊಂದಿದ ಮೇಲೆ, ಕಿನ್ನಾಳ ಕಲಾಕೃತಿಗಳನ್ನು ರಚಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಇವರು ವಿಶೇಷವಾಗಿ ಹಣ್ಣು-ಹಂಪಲು ಮತ್ತು ತರಕಾರಿ ತಟ್ಟೆ ತಯಾರಿಸುವಲ್ಲಿ ಪರಿಣತಿ ಹೊಂದಿದ್ದಾರೆ. ಪೇರಲ, ದ್ರಾಕ್ಷಿ, ಸೀತಾಪಲ, ಬಾಳೇಹಣ್ಣು, ದಾಲಿಂಬೆ, ಸೇಬು, ನಿಂಬೆ, ಮೋಸಂಬಿ, ಮಾವು ಮತ್ತು ತರಕಾರಿಗಳಾದ ಹೀರೆಕಾಯಿ, ಮೂಲಂಗಿ, ಹಾಗಲಕಾಯಿ, ಗಜ್ಜರಿ ಮುಂತಾದವುಗಳನ್ನು ನೈಜರೂಪವೆನ್ನುವಷ್ಟು ಸುಂದರವಾಗಿ ರಚಿಸುತ್ತಾರೆ. ಇವುಗಳ ರಚನೆಗೆ ನುಗ್ಗೆ ಕಟ್ಟಿಗೆಯನ್ನು ರಚಿಸುತ್ತಾರೆ. ಇವರ ಹೆಂಡತಿಯಾದ ಲಕ್ಷ್ಮೀಬಾಯಿ ಸಹಿತ ಕಲಾಕೃತಿ ರಚನೆಯಲ್ಲಿ ಸಹಾಯ ಮಾಡುತ್ತಾರೆ. ಕರ್ನಾಟಕದ ಹ್ಯಾಂಡಿಕ್ರಾಫ್ಟ್ ಆರ್ಟಿಸನ್ಸ್ ವೆಲ್ಫೇರ್ ಅಸೋಸಿಯೇಷನ್‌ನವರು ೨೦೦೫ರಲ್ಲಿ ನಡೆಸಿದ ಕರಕುಶಲ ಕಲಾಕೃತಿಗಳ ಪ್ರದರ್ಶನದಲ್ಲಿ ಹಾಗೂ ೨೦೦೫ರಲ್ಲಿಯೇ ಬೆಂಗಳೂರು ಅರಮನೆ ಆವರಣದಲ್ಲಿ ನಡೆದ 'ಫಸ್ಟ್ ಎವರ್ ಸ್ಟೇಟ್ ಲೇವಲ್ ಟ್ಯಾಂಡಿಕ್ರಾಫ್ಟ್' ಪ್ರದರ್ಶನದಲ್ಲಿ ಸಹ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

ಧರ್ಮಣ್ಣ ಚಿತ್ರಗಾರ

ಇವರು ಅಂಬಣ್ಣ ಚಿತ್ರಗಾರರ ಮಗನಾಗಿ ಕಿನ್ನಾಳದಲ್ಲಿ ಜನಿಸಿದ್ದಾರೆ. ವಂಶಪಾರಂಪರ್ಯವಾಗಿ ಬೆಳೆದು ಬಂದ ಈ ಕಿನ್ನಾಳ ಕಲೆಯನ್ನು ಇವರ ಮಕ್ಕಳು ಸಹ ಮುಂದುವರೆಸಿಕೊಂಡು ಬಂದಿದ್ದಾರೆ. ಇವರ ಪತ್ನಿ ನೀಲಮ್ಮ, ಮಗಳು ಇಂದುಮತಿ, ಮಗ ರಾಮು ಮತ್ತು ವೆಂಕಣ್ಣ ಎಲ್ಲರು ಕಲಾಕೃತಿ ರಚನೆಯಲ್ಲಿ ನೆರವಾಗುತ್ತಾರೆ. ಶ್ರೀಯುತರು ೧೦ ರಿಂದ ೧೨ ಅಡಿ ಎತ್ತರವಿರುವ ಗ್ರಾಮದೇವತೆಗಳನ್ನು ವಿಶೇಷವಾಗಿ ರಚಿಸುತ್ತಾರೆ. ದೊಡ್ಡ ದೊಡ್ಡ ಮೂರ್ತಿಗಳನ್ನು ಇವರು ರಚನೆ ಮಾಡುವುದರಿಂದ ಹಗುರವಾದ ಕಟ್ಟಿಗೆಯಾದ ಹತ್ತಿ, ಮಾವು, ರಕ್ತಗೂನಿ ಮರಗಳನ್ನು ಬಳಸುತ್ತಾರೆ. ತೇರಿಗೆ ಅಲಂಕಾರಕ್ಕಾಗಿ ಕಟ್ಟುವ ಗೊಂಬೆಗಳು, ದ್ವಾರಪಾಲಕರು, ಸಿಂಹ, ಶಿವ-ಪಾರ್ವತಿ, ಗಣಪತಿ, ಕಾಮರತಿ, ಮಂಟಪಗೌರಿ, ಕೀಲುಗೌರಿ, ಪಲ್ಲಕ್ಕಿ ಛತ್ರಿ ಮತ್ತು ಆಟಿಕೆ ಸಾಮಾನುಗಳನ್ನು, ರಚಿಸುತ್ತಾರೆ.

ಇವರು ರಚನೆ ಮಾಡಿದ ಗ್ರಾಮದೇವತೆಗಳು ಕೊಪ್ಪಳ, ಬಳ್ಳಾರಿ, ರಾಯಚೂರು, ಧಾರವಾಡ, ಜಿಲ್ಲೆಯಲ್ಲಿ ನೋಡಬಹುದಾಗಿದೆ. ಇವರು ರಚಿಸಿದ ಕಲಾಕೃತಿಗಳನ್ನು ಕಾವೇರಿ ಎಂಪೋರಿಯಂ ಅವರಿಗೆ ಮಾರಾಟ ಮಾಡುತ್ತಾರೆ. ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ಇಂದಿಗೂ ಮುನ್ನಡೆಸುತ್ತ ಬಂದ ಕುಟುಂಬಗಳಲ್ಲಿ ಈ ಕುಟುಂಬವು ಸಹ ಒಂದಾಗಿದೆ.

ಅಣ್ಣಪ್ಪ ಇ.ಚಿತ್ರಗಾರ

ಶ್ರೀಯುತರು ಫೆಬ್ರವರಿ ೧೫ ರಂದು ಕಿನ್ನಾಳದಲ್ಲಿ ಜನಿಸಿದ್ದಾರೆ. ಇವರು ಚಿತ್ರಕಲೆಯಲ್ಲಿ ಎ.ಎಂ.ಜಿ.ಡಿ ಮುಗಿಸಿದ್ದಾರೆ. ತಂದೆಯವರ ಆಶಯದಂತೆ ಶಿಲ್ಪಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ಕಿನ್ನಾಳ ಶೈಲಿ ಮತ್ತು ಮಿಶ್ರ ಮಾಧ್ಯಮದಲ್ಲಿ ದಶಾವತಾರ, ದುರ್ಗಮುರಗಿ ಪೆಟ್ಟಿಗೆ, ಚೌಕಿ, ಪ್ರಭಾವಳಿ, ಹಾಗೂ ಹಂಪಿ ಪರಿಸರದ ನಿಸರ್ಗ ಚಿತ್ರಗಳು, ಲಕ್ಷ್ಮೀ, ವಿಷ್ಣು, ಜೋಗಮ್ಮ ಹೀಗೆ ಹಲವಾರು ದೇವತೆಗಳ ಚಿತ್ರಗಳನ್ನು ಇವರು ರಚಿಸಿದ್ದಾರೆ.

ಇವರು ೨೦೦೨ರಲ್ಲಿ ಅಖಿಲ ಭಾರತ ೬೯ನೇ ಸಾಹಿತ್ಯ ಸಮ್ಮೇಳನ ತುಮಕೂರು, ೨೦೦೩ರಲ್ಲಿ ಬೆಂಗಳೂರು ಚಿತ್ರಸಂತೆ ಮತ್ತು ವಿಜಯ ಕಲಾಮಂದಿರ ಗದಗ, ೨೦೦೪ರಲ್ಲಿ ರೋಟರಿಕ್ಲಬ್ ಹೊಸಪೇಟೆ, ೨೦೦೫ರಲ್ಲಿ ಚಿತ್ರಕಲಾ ಪರಿಷತ್, ೨೦೦೬ರಲ್ಲಿ ಹಂಪಿ ಉತ್ಸವ ಹಾಗೂ ಇನ್ನೂ ಹಲವಾರು ಕಡೆ ಇವರು ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಶ್ರೀಯುತರಿಗೆ ೨೦೦೫ರಲ್ಲಿ ಲಲಿತ ನಾಟ್ಯಸಂಘ ಕಿನ್ನಾಳ ಇವರಿಂದ ಸನ್ಮಾನ ಹಾಗೂ ೨೦೦೬-೦೭ರ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ದೊರಕಿದೆ.[೧]

ಸೀತಮ್ಮ ಚಿತ್ರಗಾರ

ಸೀತಮ್ಮ ಚಿತ್ರಗಾರ ಇವರು ವಂಶಪಾರಂಪರಿಕವಾಗಿ ಬಂದ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇವರ ಪತಿಯ ಹೆಸರು ಗಂಗಪ್ಪ ಚಿತ್ರಗಾರ ಇವರು ಸಹ ಕಿನ್ನಾಳದ ಕಲಾವಿದರೆ, ಇವರು ಕಾಮ-ರತಿ ಶಿಲ್ಪಗಳನ್ನು ಹೆಚ್ಚಾಗಿ ತಯಾರಿಸುತ್ತಾರೆ. ಮಗ ಮಲ್ಲಪ್ಪ ಮತ್ತು ಸೊಸೆ ಮಂಜುಳಾ ಕೂಡಾ ವರ್ಷವಿಡೀ ಕಿನ್ನಾಳ ಕಲಾಕೃತಿಗಳನ್ನು ರಚಿಸುವಲ್ಲಿ ನಿರತರಾಗಿರುತ್ತಾರೆ. ಸೀತಮ್ಮನವರು ವಿಶೇಷವಾಗಿ ಜಾತ್ರೆಯಲ್ಲಿ ಮಾರಾಟವಾಗುವ ಆಟಿಕೆ ಸಾಮಾನು, ಸೆಗಣಿ ಗೊಂಬೆಗಳಾದ ತಾಯಿ, ಮಗು, ಕಿಸಗಾಲ ಗೊಂಬೆ, ಬೀಸುಕಲ್ಲಿನ ಮಹಿಳೆ, ಆಟಿಕೆ ವಸ್ತುಗಳಾದ ಲಾರಿ, ಕಾರು, ಬಂಡೆ, ತೊಟ್ಟಿಲು ಗೌರಿ, ಶಿವ-ಪಾರ್ವತಿ, ಕೀಲುಗೌರಿ ಇನ್ನೂ ಹಲವಾರು ಕಲಾಕೃತಿಗಳನ್ನು ಇವರು ರಚಿಸುತ್ತಾರೆ. ಇವರ ಕುಟುಂಬದವರೆಲ್ಲರು ಕಿನ್ನಾಳ ಕಲೆಯನ್ನೇ ನಂಬಿ ಜೀವನವನ್ನು ಸಾಗಿಸುತ್ತಿದ್ದಾರೆ.

ಹೇಮವ್ವ ಚಿತ್ರಗಾರ

ಇವರು ಚಂದ್ರಮ್ಮ ಚಿತ್ರಗಾರ ಅವರ ಮಗಳಾಗಿ ಕಿನ್ನಾಳದಲ್ಲಿ ಜನಿಸಿದರು. ವಂಶಪಾರಂಪರ್ಯವಾಗಿ ಬಂದ ಕಿನ್ನಾಳ ಕಲೆಯನ್ನು ತಮ್ಮ ತಾಯಿಯಾದ ಚಂದ್ರಮ್ಮ ಅವರಿಂದ

---

೦೧. ಡಾ. ಎಸ್. ಸಿ. ಪಾಟೀಲ ಮತ್ತು ಡಾ. ಪಿ.ಕೆ.ಖಂಡೋಬಾ (ಸಂ.) : ಹೈದ್ರಾಬಾದ್-ಕರ್ನಾಟಕದ ಸಾಂಸ್ಕೃತಿಕ ವಿಷಯ ಕೋಶ, ಸಂಪುಟ - ೨ - ಲಲಿತಕಲೆ, ಪುಟ - ೧೧

ಕಲಿತಿದ್ದಾರೆ. ಇವರು ಹಾಚ್ಚಾಗಿ ಸಗಣಿಗೊಂಬೆಗಳು, ತೊಟ್ಟಿಲುಗೌರಿ, ಕಿಸಗಾಲಗೊಂಬೆ, ತಾಯಿಗೊಂಬೆ, ನಿಂತಗೊಂಬೆ, ಬಿಸುಕಲ್ಲು ಮಹಿಳೆ, ಕೀಲುಗೌರಿ ಮುಂತಾದ ಗೊಂಬೆಗಳನ್ನು ರಚಿಸಿ ಹಲವಾರು ಜಾತ್ರೆಗಳಿಗೆ ಹೋಗಿ ಗೊಂಬೆಗಳನ್ನು ಮಾರಿ ಬಂದ ಹಣದಲ್ಲಿ ಜೀವನ ಸಾಗಿಸುತ್ತಿದ್ದಾರೆ. ೧೯೮೭-೮೮ರಲ್ಲಿ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕಿನ್ನಾಳದಲ್ಲಿ ನಡೆಸಿದ ಕಿನ್ನಾಳ ಕಲೆಯ ಕಾರ್ಯಗಾರದಲ್ಲಿ ೨೫ ಜನ ಮಹಿಳೆಯರಿಗೆ ಕುಶಲಕಲೆಯ ತರಬೇತಿಯಲ್ಲಿ ಹೇಮವ್ವನವರು ಸಹಾಯಕ ಮಾಸ್ಟರ್ ಕ್ರಾಫ್ಟ್‌ಮನ್ ಆಗಿ ತರಬೇತಿ ನೀಡಿದ್ದಾರೆ. ೨೦೦೧ ಮತ್ತು ೨೦೦೪ರಲ್ಲಿ ಕಿನ್ನಾಳದಲ್ಲಿ ನಡೆದ ಭಾರತ ಸರಕಾರದ ರಿಜಿನಲ್ ಡಿಸೈನ್ ಸೆಂಟರ್ ಮತ್ತು ಟೆಕ್ನಿಕಲ್ ಡೆವಲಪ್‌ಮೆಂಟ್ ಸೆಂಟರ್‌ನವರು ನಡೆಸಿದ ಕಾರ್ಯಗಾರದಲ್ಲಿ ಭಾಗವಹಿಸಿ ಕಿನ್ನಾಳ ಕಲಾಕೃತಿಗಳನ್ನು ರಚಿಸಿದ್ದಾರೆ. ಹೇಮವ್ವನವರಿಗೆ ರಾಜ್ಯ ಸರಕಾರದಿಂದ ೫೦೦ ರೂ ಮಾಶಾಸನ ದೊರೆಯುತ್ತದೆ. ಹೇಮವ್ವ ಚಿತ್ರಗಾರವರು ತಯಾರಿಸಿದ ಕಲಾಕೃತಿಗಳನ್ನು ಕಾವೇರಿ ಎಂಪೋರಿಯಂನವರು ಖರೀದಿಸುತ್ತಾರೆ.

ಭಾಗ್ಯಮ್ಮ ಚಿತ್ರಗಾರ

ಇವರು ಹನುಮಂತಪ್ಪ ಚಿತ್ರಗಾರ ಅವರ ಮಗಳಾಗಿ ಕಿನ್ನಾಳದಲ್ಲಿ ಜನಿಸಿದ್ದಾರೆ. ಇವರು ವಂಶಪಾರಂಪರ್ಯವಾಗಿ ಬಂದ ಕಿನ್ನಾಳ ಕಲೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಭಾಗ್ಯಮ್ಮ ಚಿತ್ರಗಾರ ಅವರು ಈ ಮೊದಲು ತಾಯಿ ಮಗು, ನಿಂತಗೊಂಬೆ, ಆಟಿಕೆ ಸಾಮಾನುಗಳು ಮುಂತಾದ ಕೃತಿಗಳನ್ನು ಸೆಗಣಿಯಿಂದ ತಯಾರಿಸುತ್ತಿದ್ದರು. ಈಗ ಕಾವೇರಿ ಎಂಪೋರಿಯಂ ಅವರಿಗೆ ಬೇಕಾಗುವ ಮತ್ತು ಮಾರಾಟವಾಗುವ ಕಾಮದೇನು, ನರ್ತನಗೊಂಬೆ, ಹನುಮಂತ, ಬೀಸುಕಲ್ಲು ಗೊಂಬೆ, ತಾಯಿಮಗು ಗೊಂಬೆ, ನಿಂತಗೊಂಬೆ ಬಸವಣ್ಣ ಮುಂತಾದ ಗೊಂಬೆಗಳನ್ನು ಕಟ್ಟಿಗೆಯಲ್ಲಿ ತಯಾರಿಸಿ ಕೊಡುತ್ತಿದ್ದಾರೆ. ಇವರು ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ೨೦೦೪ರಲ್ಲಿ ರಿಜಿನಲ್ ಡಿಸೈನ್ ಮತ್ತು ಟೆಕ್ನಿಕಲ್ ಸೆಂಟರ್‌ದಿಂದ ನಡೆದ ಕಿನ್ನಾಳ ಕಲಾಕೃತಿಗಳನ್ನು ರಚಿಸುವ ಕಾರ್ಯಗಾರದಲ್ಲಿ ಕಲಾಕೃತಿ ರಚಿಸಿದ್ದಾರೆ. ಹಾಗೂ ಕಾವೇರಿ ಎಂಪೋರಿಯಂನವರು ನಡೆಸಿದ ಕಾರ್ಯಗಾರದಲ್ಲಿಯೂ ಭಾಗವಹಿಸಿ ಕಲಾಕೃತಿಗಳನ್ನು ರಚಿಸಿದ್ದಾರೆ. ಭಾಗ್ಯಮ್ಮರವರಿಗೆ ೧೯೯೩ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ರಾಜ್ಯಪ್ರಶಸ್ತಿ ಹಾಗೂ ೧೯೯೩ರಲ್ಲಿ ಭಾರತ ಸರಕಾರದ ವಸ್ತು ಸಂಗ್ರಾಲಯ ಇವರಿಂದ ಮೆರಿಟ್ ಸರ್ಟಿಫಿಕೇಟ್ ಲಭಿಸಿದೆ.

ಹನುಮಂತಪ್ಪ ಚಿತ್ರಗಾರ

ಶ್ರೀಯುತರು ಜಿಲ್ಲೆಯ ಕೂಕನೂರಿನಲ್ಲಿ ಜನಿಸಿ ಸದ್ಯ ಗಂಗಾವತಿಯಲ್ಲಿ ವಾಸವಾಗಿದ್ದಾರೆ.

ಇವರು ದಿ.ಬೇವಿನಾಳ ನಾರಾಯಣಾಚಾರ್ ಅವರ ಮಾರ್ಗದರ್ಶನದಲ್ಲಿ ಚಿತ್ರಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ದಿ.ಬೇವಿನಾಳ ನಾರಾಯಣಾಚಾರ್ ಅವರಿಗೆ ಜಿಲ್ಲೆಯಲ್ಲಿ ಪ್ರಥಮವಾಗಿ ಚಿತ್ರಕಲೆಯನ್ನೇ ವಾಣಿಜ್ಯ ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡು ನಾಲ್ಕು ದಶಕಗಳ ಹಿಂದೆಯೇ ಸ್ಪ್ರೇ ಮಿಷನ್ ಮತ್ತು ಸಹಕಲಾವಿದರನ್ನು ಇಟ್ಟುಕೊಂಡು ವಾಣಿಜ್ಯ ಕಲೆಗೆ ಮಹತ್ವ ಕೊಟ್ಟ ಹೆಗ್ಗಳಿಕೆ ಸಲ್ಲುತ್ತದೆ.[೨] ಶ್ರೀಯುತ ಹನುಮಂತಪ್ಪನವರು ಜಿಲ್ಲೆಯ ಓರ್ವ ಮಹತ್ವದ ಭಿತ್ತಿ ಚಿತ್ರಕಲಾವಿದರಾಗಿದ್ದಾರೆ. ಇವರು ಹನುಮನಾಳ, ಕಂಪ್ಲಿ ಕೋಟೆಯ ಆಂಜನೇಯ ದೇವಾಲಯ, ಕುಕನೂರ ಗುಹೇಶ್ವರ ದೇವಾಲಯಗಳಲ್ಲಿ ಲಕ್ಷ್ಮೀ, ವೆಂಕಟೇಶ್ವರ, ಶಿವ ಪಾರ್ವತಿ, ಗಣಪತಿ, ಸರಸ್ವತಿ, ಬ್ರಹ್ಮ ವಿಷ್ಣು, ಮಹೇಶ್ವರ, ಆಂಜನೇಯ ಹೀಗೆ ಹಲವಾರು ದೇವಾನು ದೇವತೆಗಳ ಚಿತ್ರಗಳನ್ನು ಗೋಡೆಯ ಮೇಲೆ ತೈಲ ವರ್ಣದಿಂದ ರಚಿಸಿದ್ದಾರೆ. ಕಲಾಕೃತಿಗಳು ನೈಜವಾಗಿ ಮತ್ತು ಸುಂದರವಾಗಿ ಇರುವುದನ್ನು ಕಂಡಾಗ ಶ್ರೀಯುತರ ಕೈಚಳಕ ಅರಿವಾಗುತ್ತದೆ.

ದಿ.ಕಾಳಪ್ಪ ಪತ್ತಾರ

ಶ್ರೀಯುತರು ಜಿಲ್ಲೆಯ ಯಲಬುರ್ಗಿ ತಾಲೂಕಿನ ತಳಕಲ್ಲಿನಲ್ಲಿ ೧೯೧೬ರಲ್ಲಿ ಜನಿಸಿದ್ದಾರೆ. ಇವರು ಶಾಲೆಗೆ ಹೋಗದೆ ವಂಶಪಾರಂಪರ್ಯವಾಗಿ ಬಂದ ಕಲೆಯನ್ನೇ ಆಸಕ್ತಿಯಾಗಿಟ್ಟುಕೊಂಡು ಕಲೆಯನ್ನೇ ಜೀವಾಳ ಎಂದು ತಿಳಿದವರಾಗಿದ್ದರು. ಸಾಧು, ಸಂತರ, ಮಹಿಮಾನ್ವಿತರ ಚಿತ್ರರಚನೆಯಲ್ಲಿ ಅದ್ಭುತ ಪ್ರಾವಿಣ್ಯತೆಯನ್ನು ಸಾಧಿಸಿಕೊಂಡಿದ್ದರು. ಶ್ರೀ ಗವಿಸಿದ್ದೇಶ್ವರ ಮತ್ತು ಸಂತ ಶಿಶುನಾಳ ಷರೀಫರ ಚಿತ್ರಗಳನ್ನು ಬಹಳ ಅದ್ಭುತವಾಗಿ ರಚಿಸ್ದಾರೆ. ೧೯೩೪ರ ಮಾರ್ಚ್ ೩ ರಂದು ಮಹಾತ್ಮಾ ಗಾಂಧಿಯವರು ಹರಿಜನ ಪತ್ರಿಕೆಗೆ ನಿಧಿ ಸಂಗ್ರಹಕ್ಕಾಗಿ ಉತ್ತರ ಕರ್ನಾಟಕದ ಪ್ರವಾಸದ ಸಂದರ್ಭದಲ್ಲಿ ಭಾನಾಪುರ ರೈಲು ನಿಲ್ದಾಣದಲ್ಲಿ ಅರ್ಧಗಂಟೆ ತಂಗಿದ್ದಾಗ ಕಾಳಪ್ಪ ಪತ್ತಾರವರು ಗಾಂಧೀಜಿಯವರ ಚಿತ್ರ ಬಿಡಿಸಿ ಅರ್ಪಿಸಿದ್ದರು, ಬಾಲಕನ ಕಲಾಭಿಜ್ಞತೆಗೆ ಗಾಂಧೀಜಿಯವರು ಅಪಾರ ಪ್ರಶಂಸೆ ವ್ಯಕ್ತಪಡಿಸಿದ್ದರು.[೩] ಶ್ರೀಯುತರು ೧೯೭೧ರಲ್ಲಿ ವಿಧಿವಶರಾದರು.

ಶಂಕರ ಕೆ.ಪತ್ತಾರ

ಇವರು ಕಾಳಪ್ಪ ಪತ್ತಾರ ಅವರ ಮಗನಾಗಿ ಭಾನಾಪುರದಲ್ಲಿ ೧೯೫೫ರಲ್ಲಿ ಜನಿಸಿದ್ದಾರೆ. ತಂದೆಯವರಿಂದ ಬಳುವಳಿಯಾಗಿ ಬಂದ ಚಿತ್ರಕಲೆಯನ್ನು ಹುಟ್ಟಿನಿಂದಲೇ ಬೆಳೆಸಿಕೊಂಡು ಬಂದಿದ್ದಾರೆ. ಭಿತ್ತಿಚಿತ್ರ, ಜಲವರ್ಣ, ತೈಲವರ್ಣ, ದೇಗುಲಗಳ ಚಿತ್ರಾಲಂಕಾರ, ಡ್ರಾಮಾಸೀನರಿಗಳು, ನಾಮಫಲಕಗಳ ರಚನೆಯಲ್ಲಿ ಇವರು ಸಿದ್ದ ಹಸ್ತರು.

---

೦೨. ಪ್ರೊ. ಅಲ್ಲಮಪ್ರಭು ಬೆಟ್ಟದೂರ (ಸಂ.) : ಕೊಪ್ಪಳ ಜಿಲ್ಲಾ ದರ್ಶನ, ಪುಟ – ೧೮೯

೦೩. ಅದೇ., ಪುಟ – ೧೮೯

ರಾಷ್ಟ್ರನಾಯಕರ, ಹಲವಾರು ಗಣ್ಯ ವ್ಯಕ್ತಿಗಳ, ರಾಷ್ಟ್ರೀಯ ಹೋರಾಟಗಾರರ, ಧಾರ್ಮಿಕ ಸಂತರ ಚಿತ್ರಗಳನ್ನು ಬಿಡಿಸಿದ್ದಾರೆ. ಶ್ರೀಯುತರು ಆಧುನಿಕತೆಯ ಅಮೂರ್ತ ಚಿತ್ರಗಳನ್ನು ಮಾತ್ರ ಇಷ್ಟಪಡುವುದಿಲ್ಲ. ಮಹಾತ್ಮಾಗಾಂಧಿ, ಬಸವಣ್ಣ, ಬುದ್ಧ, ಸ್ವಾಮಿ ವಿವೇಕಾಂದ, ಕಿತ್ತೂರುರಾಣಿ ಚನ್ನಮ್ಮ, ಭಾರತಾಂಬೆ ಮುಂತಾದ ಚಿತ್ರಗಳನ್ನು ಬಿಡಿಸಿ ಪ್ರಶಂಸನೆಗೆ ಪಾತ್ರರಾಗಿದ್ದಾರೆ. ಎರಡುವರೆ ಇಂಚು ವ್ಯಾಸದ ವೃತ್ತಾಕಾರ ಅಳತೆಯ ಗ್ಲಾಸ್‌ನಲ್ಲಿ ಕನ್ನಡನಾಡಿನ ೭೦ಕ್ಕೂ ಹೆಚ್ಚು ಶ್ರೇಷ್ಠ ಕವಿಗಳ ಚಿತ್ರಗಳನ್ನು ರಚಿಸಿ ಅಚ್ಚರಿ ಮೂಡಿಸಿದ್ದಾರೆ.

ಮರಿಯಪ್ಪ ಚಿತ್ರಗಾರ

ಗಂಗಾವತಿ ವಾಸಿಯಾಗಿರುವ ಮರಿಯಪ್ಪ ಚಿತ್ರಗಾರ ಅವರ ಪೂರ್ವಿಕರು ಸಹಿತ ಚಿತ್ರಕಲಾವಿದರಾಗಿದ್ದಾರೆ. ಅವರ ಪೂರ್ವಿಕರು ಗುರಗುಂಟಾ ಸಂಸ್ಥಾನದಲ್ಲಿ ಚಿತ್ರ ಕಲಾವಿದರಾಗಿದ್ದರಂತೆ, ಪೂರ್ವಿಕರ ಬಳುವಳಿಯಾಗಿ ಬಂದ ಚಿತ್ರಕಲೆಯು ಶ್ರೀಯುತರ ಜೀವನದ ಒಂದು ಭಾಗವೇ ಆಗಿತ್ತು. ಇವರು ಹಲವಾರು ದೇವಾಲಯಗಳಲ್ಲಿ ದೇವಾನುದೇವತೆಗಳ ವರ್ಣಚಿತ್ರಗಳನ್ನು ಆಕರ್ಷಕವಾಗಿ ಬಿಡಿಸಿದ್ದಾರೆ. ಎಮ್ಮಿಗುಡ್ಡದ ದುರ್ಗಾ ದೇವಾಲಯ, ಹೊಸಪೇಟೆಯ ಗಾಳೆಮ್ಮನಗುಡಿ, ಬಳ್ಳಾರಿ, ಕಂಪ್ಲಿ, ಗದುಗಿನ ಮುಳಗುಂದ ಮುಂತಾದ ಊರುಗಳಲ್ಲಿ ಇವರ ಕಲಾಕೃತಿಗಳನ್ನು ಕಾಣಬಹುದಾಗಿದೆ.

ನಾಗರಾಜ ಚಿತ್ರಗಾರ

ಇವರು ೧೯೮೩ರಲ್ಲಿ ಕನಕಗಿರಿಯಲ್ಲಿ ಜನಿಸಿರುತ್ತಾರೆ. ಇವರು ವಂಶಪಾರಂಪರ್ಯವಾಗಿ ಬಂದ ಚಿತ್ರಕಲೆಯನ್ನೇ ಮೂಲ ಆಧಾರವಾಗಿಟ್ಟುಕೊಂಡು ಜೀವನ ನಡೆಸುತ್ತಿದ್ದಾರೆ. ಭಿತ್ತಿಚಿತ್ರಗಳನ್ನು ಜೊತೆಗೆ ಕಿನ್ನಾಳದ ಗೊಂಬೆಗಳ ತರಹದ ಗೊಂಬೆಗಳನ್ನು ಇವರು ರಚಿಸುತ್ತಾರೆ. ದೇವರ ಛತ್ರಿಗಳು, ಚಾಮರಗಳನ್ನು ಇವರು ತುಂಬಾ ಅಲಂಕೃತವಾಗಿ ರಚನೆ ಮಾಡುತ್ತಾರೆ. ಆನೆಗುಂದಿಯ ರಂಗನಾಥ ದೇವಾಲಯದಲ್ಲಿ ಸುಮಾರು ೨೪ ಭಿತ್ತಿ ಚಿತ್ರಗಳನ್ನು ರಚಿಸಿದ್ದು, ಹಲವಾರು ದೇವಾನುದೇವತೆಗಳ ಸ್ವರೂಪವನ್ನು ಬಿಂಬಿಸುತ್ತಿವೆ.

ಗಂಗಾವತಿಯ ಕಾವೇರಿ ಹೋಟೆಲ್ ಒಂದರಲ್ಲಿರುವ ಕೃಷ್ಣ, ಅರ್ಜುನನ ರಥದ ಸಾರಥ್ಯ ವಹಿಸಿದ ಚಿತ್ರ ತುಂಬಾ ನೈಜವಾಗಿ ಮೂಡಿಬಂದಿದೆ. ಶ್ರೀಯುತರು ಮುಸ್ಲಾಪುರ, ಬಂಕಾಪುರ, ಸುಳೆಕಲ್, ಹುಲಸನಕಟ್ಟಿಯಲ್ಲ ಹಲವಾರು ದೇವಾನು ದೇವತೆಗಳ ಚಿತ್ರಗಳನ್ನು ದೇವಸ್ಥಾನಗಳಲ್ಲಿ ಬಿಡಿಸಿದ್ದಾರೆ. ಇವರು ಕಲಿತಿದ್ದು ಕೇವಲ ಎಸ್.ಎಸ್.ಎಲ್.ಸಿ.ಆದರೆ ಇವರು ಚಿತ್ರಕಲೆಯಲ್ಲಿ ಅಪಾರ ವಿದ್ಯೆಯನ್ನು ಹೊಂದಿದ್ದಾರೆ. ಕಾಮದೇನು ನವಿಲು, ಕುಂಡಲ, ಉಗ್ರರೂಪಿ ಹೀಗೆ

ಹಲವಾರು ಕಲಾಕೃತಿಗಳನ್ನು ಇವರು ರಚಿಸಿದ್ದಾರೆ. ಇವರ ತಮ್ಮನವರು ಕೂಡ ಒಬ್ಬ ಉತ್ತಮ ಚಿತ್ರಕಲಾವಿದರಾಗಿದ್ದಾರೆ.

ನರಸಿಂಹರಾವ್ ಚಿತ್ರಗಾರ

ನರಸಿಂಹರಾವ್ ಚಿತ್ರಗಾರ ಅವರು ೧೯೬೩ರಲ್ಲಿ ತಿಪ್ಪಣ್ಣ ಮತ್ತು ರೇಣುಕಮ್ಮ ದಂಪತಿಗಳ ಮಗನಾಗಿ ಕನಕಗಿರಿಯಲ್ಲಿ ಜನಿಸಿರುತ್ತಾರೆ. ತಂದೆಯು ಕೂಡ ಉತ್ತಮ ಕಲಾವಿದರಾಗಿದ್ದರಿಂದ ಇವರಿಗೆ ಚಿತ್ರಕಲೆ ಒಂದು ಕಷ್ಟದ ಸಂಗತಿಯಾಗಿರಲಿಲ್ಲ. ಹುಟ್ಟಿದಾಗಿನಿಂದಲೂ ಚಿತ್ರಕಲೆಯನ್ನೇ ನೋಡಿ ನೋಡಿ ಇವರು ಕೂಡಾ ಒಬ್ಬ ಉತ್ತಮ ಕಲಾವಿದರಾಗಿ ಬೆಳೆದಿದ್ದಾರೆ. ಇವರು ಓದಿದ್ದು ಕೇವಲ ಎಸ್.ಎಸ್.ಎಲ್.ಸಿ. ಶ್ರೀಯುತರ ಕಲಾಕೃತಿಗಳು ಆಂಧ್ರದ ಅನಂತಪುರ, ಕದರಿ, ಚಿಕ್ಕಹೂಬಳಾ, ಕರಡಿಗುಪ್ಪ್, ವೆಂಕಟರಮನ ದೇವಸ್ಥಾನ, ಕನಕಗಿರಿಯ ಪ್ರತಾಪರಾಯ ದೇವಸ್ಥಾನ, ಗುರಳಕೇರಿ ದುರಗಮ್ಮ, ಆಂಜನೇಯಗುಡಿ ಹೀಗೆ ಹಲವಾರು ದೇವಸ್ಥಾನಗಳಲ್ಲಿ ಅನೇಕ ದೇವಾನು ದೇವತೆಗಳ ಭಿತ್ತಿಚಿತ್ರಗಳನ್ನು ಶ್ರೀಯುತರು ರಚಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ರಾಜು ತೇರದಾಳ

ಕೊಪ್ಪಳ ಜಿಲ್ಲೆಯವರೇ ಆದ ಶ್ರೀ ರಾಜು ತೇರದಾಳ ಅವರು ನವ್ಯ ಶೈಲಿಯಲ್ಲಿ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇವರು ಅಕ್ರಾಲಿಕ್ ಮಾಧ್ಯಮದಲ್ಲಿ ರಚಿಸಿರುವ 'ಓಂ' ಹಾಗೂ 'ಟೈಮ್ ಆಂಡ್ ಸ್ಪೇಸಿಸ್' ಕಲಾಕೃತಿಗಳು ಬಹುಮಾನವನ್ನು ಪಡೆದುಕೊಂಡಿವೆ. ಶ್ರೀಯುತರು ತಮ್ಮ ಹಲವಾರು ಕಲಾಕೃತಿಗಳನ್ನು ಹೊರರಾಜ್ಯಗಳಲ್ಲಿ ದಿಲ್ಲಿ, ಕೊಲ್ಕತ್ತಾ, ಚೆನ್ನೈನಂತಹ ದೊಡ್ಡ ದೊಡ್ಡ ಸಿಟಿಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಹಲವಾರು ದೇವಸ್ಥಾನಗಳಲ್ಲಿ ಇವರು ರಚಿಸಿರುವ ಕಲಾಕೃತಿಗಳು ತುಂಬಾ ಸೊಗಸಾಗಿವೆ. ಇವರ ೨೦೦೧-೦೨ನೇ ಸಾಲಿನಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಬಹುಮಾನ ಪಡೆದು ಗಮನ ಸೆಳೆದಿದ್ದಾರೆ. ಸದ್ಯ ಇವರು ಜಿಲ್ಲೆಯ, ಕೊಪ್ಪಳ ತಾಲೂಕಿನ ಹಲಗೇರಿಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಕಲ್ಮೇಶ ವಡ್ಡರ

ಇವರು ತಿಮ್ಮಣ್ಣ ಮತ್ತು ತಾಯವ್ವ ದಂಪತಿಗಳ ಮಗನಾಗಿ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮುಧೋಳದಲ್ಲಿ ಜನಿಸಿದ್ದಾರೆ. ಅನ್ನದಾನೇಶ್ವರ ಮಹಾವಿದ್ಯಾಲಯದಲ್ಲಿ ಪದವಿ ಮುಗಿಸಿದ ಇವರು ಚಿಕ್ಕಂದಿನಿಂದಲೇ ಚಿತ್ರಕಲೆಯ ಹವ್ಯಾಸವನ್ನು ಬೆಳೆಸಿಕೊಂಡು ಚಿತ್ರ ಬಿಡಿಸಲಾರಂಭಿಸಿದ್ದರು. ಚಿತ್ರಕಲೆಯಲ್ಲಿ ಯಾವುದೇ ಪದವಿಯನ್ನು ಪಡೆಯಲಿಲ್ಲವಾದರೂ ಸಹಿತ ಇವರು ರಚಿಸಿರುವ ಕಲಾಕೃತಿಗಳು ಅದ್ಭುತವಾದವುಗಳು. ಇವರು ನಾಲ್ಕನೇ ತರಗತಿಯಲ್ಲಿ

ಓದುತ್ತಿದ್ದಾಗಲೇ ಮಹಾತ್ಮರ ಚಿತ್ರಗಳನ್ನು ಬಿಡಿಸಲು ಪ್ರಾರಂಭಿಸಿದ್ದರು. ಇವರ ಕಲಾಕೃತಿಗಳನ್ನು ನೋಡಿದ ಈ ಭಾಗದ ಜನರು ಒಂದು ಕ್ಷಣ ಬೆರಗಾಗುತ್ತಿದ್ದರು. ಮುಖ್ಯವಾಗಿ ಪ್ರಕೃತಿ ಪ್ರೇಮಿಯಾಗಿರುವ ಶ್ರೀಯುತರು ಪ್ರಕೃತಿ ದೇವತೆಯ ವರ್ಣನೆಗಳ ಬಗ್ಗೆ ಚಿತ್ರಗಳನ್ನು ಹೆಚ್ಚಾಗಿ ಚಿತ್ರಿಸಿದ್ದಾರೆ. ಅಂತೆಯೇ ಇವರ ಕಲಾಕೃತಿಗಳು ಪ್ರಕೃತಿ ದತ್ತವಾಗಿವೆ ಎನಿಸುತ್ತದೆ.

ಶ್ರೀಯುತರು ರಚಿಸಿರುವ ಕಲಾಕೃತಿಗಳು ಜಿಲ್ಲೆಯ ಹಲವಾರು ಭಾಗಗಳಲ್ಲಿ ಕಾಣಬಹುದು. ಕೊಪ್ಪಳ ತಾಲೂಕಿನ ಕೂಕನಪಲ್ಲಿ, ಗಂಗಾವತಿ ತಾಲೂಕಿನ ಇಂದರಗಿ, ಯಲಬುರ್ಗಾ ತಾಲೂಕಿನ ಕರಮುಡಿ, ಬೊವಗಿ, ಸ್ವಗ್ರಾಮವಾದ ಮುಧೋಳದ ಪ್ರಾಥಮಿಕ ಶಾಲೆಗಳಲ್ಲಿ ಅನೇಕ ದೇವಾನುದೇವತೆಗಳ ಚಿತ್ರಗಳನ್ನು ಬಿಡಿಸಿದ್ದಾರೆ. ಅವುಗಳಲ್ಲಿ ಇಟಗಿ ಭೀಮಾಂಬಿಕೆ, ಲಕ್ಷ್ಮೀ, ಸರಸ್ವತಿ, ಹನುಮಂತ, ಗಾನಯೋಗಿ ಪಂಚಾಕ್ಷರಿ ಗವಾಯಿ ಇನ್ನೂ ಮುಂತಾದವರ ಭಾವಚಿತ್ರಗಳನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ರಾಘವೇಂದ್ರ ಬಯ್ಯಾಪುರ

ಜಿಲ್ಲೆಯವರೇ ಆದ ರಾಘವೇಂದ್ರ ಬಯ್ಯಾಪುರ ಅವರು ಜಿಲ್ಲೆಯ ಒಬ್ಬ ಮಹತ್ವದ ಚಿತ್ರಕಲಾವಿದರಾಗಿದ್ದಾರೆ. ಇವರು ಭಾವಚಿತ್ರ ಕಲೆ, ಸಾಂಪ್ರದಾಯಿಕ ಕಲೆ ಹಾಗೂ ನಿಸರ್ಗ ಚಿತ್ರಣ ಕಲೆಯಲ್ಲಿಯೂ ಸಹಿತ ಪ್ರಾವೀಣ್ಯತೆಯನ್ನು ಪಡೆದುಕೊಂಡಿದ್ದಾರೆ. ವಿಜಯನಗರ ಸಾಂಪ್ರದಾಯಿಕ ಶೈಲಿಗೆ ಪ್ರಭಾವಿತರಾದ ಶ್ರೀಯುತರು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಚಿತ್ರ, ಪಂಪಾ ವಿರೂಪಾಕ್ಷ ಕಲ್ಯಾಣ ಮತ್ತು ರಾಧಾಕೃಷ್ಣ ಚಿತ್ರಗಳನ್ನು ವಿಜಯನಗರ ಶೈಲಿಯಲ್ಲಿ ರಚಿಸಿದ್ದಾರೆ. ಈ ಎಲ್ಲಾ ಚಿತ್ರಗಳನ್ನು ಗಮನಿಸಿದಾಗ ವಿಜಯನಗರ ಸಾಂಪ್ರದಾಯಿಕ ಶೈಲಿಯ ಪ್ರಭಾವ ಮತ್ತು ಪ್ರೇರಣೆ ಅರಿವಾಗುತ್ತದೆ. ಇವರು ಧಾರವಾಡ, ಗದಗ, ಹಂಪಿ, ಬೆಂಗಳೂರು, ರಾಯಚೂರು ಇನ್ನೂ ಹಲವಾರು ಕಡೆ ಕಲಾ ಪ್ರದರ್ಶನಗಳನ್ನು ಮಾಡಿ ಕಲಾವಿಮರ್ಶಕರ, ಕಲಾಭಿಮಾನಿಗಳ ಗಮನ ಸೆಳೆದಿದ್ದಾರೆ.

ಬಸವರಾಜ ಧುತ್ತರಗಿ

ಶ್ರೀಯುತರು ಕುಷ್ಟಗಿ ತಾಲೂಕಿನ ಹನುಮಸಾಗರದ ನಿವಾಸಿಗಳಾದ ಖ್ಯಾತ ರಂಗಸಾಹಿತಿ ಪಿ.ಬಿ.ಧುತ್ತರಗಿಯವರ ಮಗನಾಗಿ ಜನಿಸಿದ್ದಾರೆ. ಇವರಿಗೆ ಚಿಕ್ಕಂದಿನಿಂದಲೇ ಹಲವಾರು ರಂಗಗಳಲ್ಲಿ ಆಸಕ್ತಿ ಇದ್ದುದರಿಂದ ಸಂಗೀತ, ನಟನೆ ಜೊತೆಗೆ ಚಿತ್ರಕಲೆಯಲ್ಲಿಯೂ ಪ್ರಾವೀಣ್ಯತೆಯನ್ನು ಪಡೆದುಕೊಂಡಿದ್ದರು. ಈ ಎಲ್ಲಾ ಕಲೆಗಳು ಒಬ್ಬನಲ್ಲಿಯೇ ಇದೆ ಎಂದರೆ ಅದು ಸಾಮಾನ್ಯವಲ್ಲ ಇವರಿಗೆ ಒಟ್ಟಿಗೆ ಮೂರು ಕಲೆಗಳು ಒಲಿದಿವೆ ಎಂದರೆ ಅದು ಅವರ ಶ್ರಮದ ಫಲವೇ ಸರಿ. ಶ್ರೀಯುತರು ವಿಶೇಷವಾಗಿ ನಾಟಕದ ಸೀನರಿಜ್ ರಚನೆಯಲ್ಲಿ ತುಂಬಾ ಸಂತೋಷವನ್ನು ಕಂಡಿದ್ದಾರೆ.

ಅಂತೆಯೇ ಅವರು ನವನವೀನ ಮಾದರಿಯ ಸಿನರಿಜ್ ಸೆಟ್, ನಾಟಕದ ಪರಿಕರಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜಿಲ್ಲೆಯ ಉತ್ತಮ ಕಲಾವಿದರಲ್ಲಿ ಇವರು ಸಹ ಒಬ್ಬರಾಗಿದ್ದಾರೆ. ಜಿಲ್ಲೆಯಲ್ಲಿ ಇನ್ನೂ ಹಲವಾರು ಚಿಕ್ಕ ಪುಟ್ಟ ಕಲಾವಿದರು ಕಂಡುಬಂದಿದ್ದರು. ಇಲ್ಲಿ ಕೆಲವು ಕಲಾವಿದರನ್ನು ಮಾತ್ರ ಆಯ್ಕೆಮಾಡಿಕೊಂಡು ಅವರ ಬಗ್ಗೆ ಬರೆಯಲಾಗಿದೆ. ಜಿಲ್ಲೆಯಲ್ಲಿ ಕಿನ್ನಾಳ ಕಲಾವಿದರು, ಶಿಷ್ಟಪದ ಕಲಾವಿದರು ಹೆಚ್ಚಾಗಿ ಕಂಡುಬಂದಿದ್ದು, ಅವರ ಬಗ್ಗೆ ಇಲ್ಲಿ ತಿಳಿಸಲಾಗಿದೆ. ಈ ಎಲ್ಲಾ ಕಲಾವಿದರು ಜಿಲ್ಲೆಯ ಕಲೆಯ ಜೀವಂತಿಗೆ ಆಧಾರವಾಗಿದ್ದು, ಇಂದಿಗೂ ತಮ್ಮ ಕಲೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಕಿನ್ನಾಳ ಕಲಾವಿದರೆಲ್ಲರೂ ವಂಶಪಾರಂಪರ್ಯವಾಗಿ ಬಂದ ಕಿನ್ನಾಳ ಕಲೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಶಿಷ್ಟಪದ ಕಲಾವಿದರಲ್ಲಿ ಕೆಲವರು ಪೂರ್ವಜನರಿಂದ ಕಲಿತಿದ್ದಾರೆ. ಇನ್ನೂ ಕೆಲವರು ಗುರುಗಳಿಂದ ಚಿತ್ರಕಲೆಯನ್ನು ಕಲಿತುಕೊಂಡು ಅದನ್ನೇ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಆದಿಮಾನವನ ಕಾಲದಿಂದಲೂ, ಆಧುನಿಕ ಕಾಲದವರೆಗೂ ಕಲಾವಿದರ ಇರುವಿಕೆಯನ್ನು ನಾವು ಕಾಣಬಹುದಾಗಿದೆ.

ಹಲವಾರು ಕಲೆ, ಕಲಾವಿದರಿಂದ ತುಂಬಿರುವ ಜಿಲ್ಲೆಯು ಕಲಾ ಕ್ಷೇತ್ರದಲ್ಲಿ ಹಲವಾರು ತನ್ನದೇ ಆದ ಕೊಡುಗೆಯನ್ನು ನೀಡುತ್ತಲೆ ಬಂದಿದೆ. ಪ್ರಾಗಿತಿಹಾಸ ಕಾಲದಿಂದ ಹಿಡಿದು ನವ್ಯ ಕಲೆಯವರೆಗೂ ಜಿಲ್ಲೆಯಲ್ಲಿ ಕಲಾ ಕೃತಿಗಳನ್ನು ನೋಡಬಹುದಾಗಿದೆ.

ಜಿಲ್ಲೆಯಲ್ಲಿರಾಜರುಗಳ ಅರಸುಮನೆತನದವರ ಮತ್ತು ಮುಖಂಡರುಗಳಿಂದ ಕಲೆಗೆ ಪ್ರೋತ್ಸಾಹ ಸಿಕ್ಕಿರುವುದನ್ನು ನಾವು ಕಾಣಬಹುದಾಗಿದೆ. ವಿಜಯನಗರ ಅರಸರ ಕಲಾಕೊಡುಗೆಯನ್ನು ಇಲ್ಲಿ ನೆನೆಯಬೇಕಾಗುತ್ತದೆ. ವಿಜಯನಗರ ಅರಸರು ಸಾಹಿತ್ಯ, ಸಂಗೀತ, ನೃತ್ಯ, ವಾಸ್ತು ಇವೆಲ್ಲದರ ಜೊತೆಗೆ ಚಿತ್ರಕಲೆಗೂ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದರು. ಇವರ ಆಸ್ಥಾನದಲ್ಲಿ ಹಲವಾರು ಕಲಾವಿದರು ಆಶ್ರಯ ಪಡೆದುಕೊಂಡು ಕಲಾಕೃತಿಗಳ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ವಿಜಯನಗರ ಪತನಾ ನಂತರ ಇಲ್ಲಿನ ಹಲವಾರು ಕಲಾವಿದರು ಚದುರಿ ಬೇರೆ ಬೇರೆ ಊರುಗಳಲ್ಲಿ ವಾಸಿಸುತ್ತಿದ್ದಾರೆ. ಹೀಗೆ ಚದುರಿದ ಕೆಲ ಕಲಾವಿದರು ಕಿನ್ನಾಳಕ್ಕೆ ಹೋಗಿ ಅಲ್ಲಿ ತಮ್ಮದೇ ಆದ ಶೈಲಿಯ ಕಲಾಕೃತಿಗಳನ್ನು ರಚಿಸತೊಡಗಿದರು. ಅದು ಕಿನ್ನಾಳ ಕಲೆ ಎಂದೇ ವಿಶ್ವವಿಖ್ಯಾತಿ ಪಡೆದಿದೆ.

ಕಿನ್ನಾಳದಲ್ಲಿ ಇಂದಿಗೂ ಕೂಡಾ ಹಲವಾರು ಕುಟುಂಬಗಳು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದೆ. ಈ ಕುಟುಂಬಗಳು ಕಿನ್ನಾಳ ಕಲೆಯನ್ನೇ ತಮ್ಮ ಜೀವನದ ಆಧಾರವಾಗಿಸಿಕೊಂಡು ಕಲಾಕೃತಿ ರಚನೆಯಲ್ಲಿ ತೊಡಗಿಕೊಂಡಿವೆ. ಇಂತಹ ಹಲವಾರು

ಕುಟುಂಬಗಳು ನಾನಾ ಸಮಸ್ಯೆಗಳನ್ನು ಇಂದಿಗೂ ಎದುರಿಸುತ್ತಲೇ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇವರು ತಯಾರಿಸಿದ ಕಲಾಕೃತಿಗಳಿಗೆ ಹೆಚ್ಚಿನ ಬೆಲೆಸಿಗದೆ ಇರುವುದು, ಮಾರುಕಟ್ಟೆಯ ವ್ಯವಸ್ಥೆ ಇರದೇ ಇರುವುದು, ಸರ್ಕಾರಿ ಸೌಲಭ್ಯಗಳು ದೊರಕದೆ ಇರುವುದು, ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದ ತಂತ್ರಜ್ಞಾನ ಪ್ರಭಾವದಿಂದ, ೧೮ ಮತ್ತು ೧೯ನೇ ಶತಮಾನದಲ್ಲಿ ನಗರಕೇಂದ್ರಿತ ಕೈಗಾರಿಕೆಗಳು ಯಂತ್ರಗಳಿಂದ ಉತ್ಪಾದಿಸುವ ವಸ್ತುಗಳಿಂದ ಕಿನ್ನಾಳ ಕಲಾವಿದರಿಗೆ ಭಾರಿ ಪೆಟ್ಟು ಬಿದ್ದಿತು. ಇಂತಹ ಹಲವಾರು ಸಮಸ್ಯೆಗಳ ಮಧ್ಯೆ ಕಿನ್ನಾಳ ಕಲಾವಿದರು ತಮ್ಮ ಜೀವನವನ್ನು ಸಾಗಿಸಿಕೊಂಡು ಬಂದಿದ್ದಾರೆ. ಇಂತಹ ಹಲವಾರು ಸಮಸ್ಯೆಗಳ ಮಧ್ಯೆ ಇರುವ ಹಿರಿಯ ಕಲಾವಿದರಿಗೆ ತಿಂಗಳಿಗೆ ೫೦೦ ರೂ.ಗಳಂತೆ ಮಾಶಾಸನವನ್ನು ಸರ್ಕಾರ ನೀಡುತ್ತಿದೆ.

ಜಿಲ್ಲೆಯ ಹಲವಾರು ಕಲಾವಿದರನ್ನು ಗಮನಿಸಿದಾಗ ಚಿತ್ರಗಾರ ಕುಟುಂಬದವರೆ ಹೆಚ್ಚಾಗಿ ಕಾಣಸಿಗುತ್ತಾರೆ. ಜಿಲ್ಲೆಯಲ್ಲಿ ಕಿನ್ನಾಳ ಕಲಾವಿದರು ಮಾತ್ರವಲ್ಲದೆ ಹಲವಾರು ಕರಕುಶಲ ಕಲಾವಿದರು, ಭಿತ್ತಿಚಿತ್ರ ಕಲಾವಿದರು, ಕಲಾಶಿಕ್ಷಕರು ಇದ್ದಾರೆ. ಜಿಲ್ಲೆಯಲ್ಲಿ ಯಾವುದೇ ಕಲಾ ಶಾಲೆಗಳಿಲ್ಲದ ಪರಿಣಾಮ ಆಧುನಿಕ ಶೈಲಿಯ ಕಲಾಕೃತಿಗಳನ್ನು ರಚಿಸುವ ಕಲಾವಿದರು ಅಷ್ಟಾಗಿ ಕಂಡುಬರುವುದಿಲ್ಲ.

❑❑❑

ಅಧ್ಯಾಯ - ಏಳು

ಸಮಾರೋಪ

ಸಂಸ್ಕೃತಿಯ ಬಹುಮುಖ್ಯ ಅಂಗವಾಗಿರುವ ಚಿತ್ರಕಲೆ ಆಯಾ ಪ್ರದೇಶದ ಇನ್ನಿತರ ಯಾವುದೇ ಬಗೆಯ ಅಧ್ಯಯನಗಳಿಗಿಂತ ಭಿನ್ನವಾದ ಅಂಶಗಳನ್ನು ತಿಳಿಸಿಕೊಡುತ್ತದೆ ಎಂಬುದು ಈ ರೀತಿಯ ಅಧ್ಯಯನಗಳಿಂದ ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಚಿತ್ರಕಲೆ ಎಂಬ ಶೀರ್ಷಿಕೆಯ ಪ್ರಸ್ತುತ ಪ್ರಬಂಧದಲ್ಲಿ ಹಲವಾರು ಕುತೂಹಲಕರವಾದ ಸಂಗತಿಗಳು ಬೆಳಕು ಕಂಡಿವೆ. ಚಿತ್ರಕಲೆ ಅಧ್ಯಯನದಿಂದ ಅಲ್ಲಿನ ಜನರ ಆಚಾರ-ವಿಚಾರ, ಧರ್ಮ, ನಂಬಿಕೆ, ಆಚರಣೆ, ಜೀವನವಿಧಾನ, ರಾಜಕೀಯ, ಸಾಮಾಜಿಕ ವ್ಯವಸ್ಥೆ, ಸುತ್ತಲಿನ ಪರಿಸರ ಮುಂತಾದ ವಿಚಾರಗಳು ತಿಳಿದುಬರುತ್ತವೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಮೊದಲು ರಾಯಚೂರು ಜಿಲ್ಲೆಯ ಒಂದು ಭಾಗವಾಗಿದ್ದ ಕೊಪ್ಪಳವು ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡ ನಂತರ ಅದರ ವ್ಯಾಪ್ತಿಯನ್ನು ಆಧರಿಸಿ ಕೈಗೊಳ್ಳಲಾದ ಈ ಅಧ್ಯಯನದಲ್ಲಿ ಒಟ್ಟು ಏಳು ಅಧ್ಯಾಯಗಳಲ್ಲಿ ವಿಷಯ ನಿರೂಪಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳನ್ನು ಕುರಿತು ಹೇಳಲಾಗಿದೆ. ಪ್ರಸ್ತುತ ಅಧ್ಯಯನವನ್ನು ಯಾವ ಉದ್ದೇಶಗಳಿಗಾಗಿ ಕೈಗೊಳ್ಳಲಾಗಿದೆ. ಅದರ ಮಹತ್ವ, ಚಿತ್ರಕಲಾ ಕ್ಷೇತ್ರಕ್ಕೆ ಅಧ್ಯಯನದಿಂದಾಗುವ ಪ್ರಯೋಜನಗಳು, ಕರ್ನಾಟಕ ಕಲಾಸಾಹಿತ್ಯಕ್ಕೆ ಅಧ್ಯಯನದ ಕೊಡುಗೆಗಳೇನು? ಎಂಬುದನ್ನು ತಿಳಿಸಲಾಗಿದೆ. ಅಲ್ಲದೆ ಈ ಅಧ್ಯಯನದಿಂದ ಸಮಕಾಲೀನ ಸಮಾಜಕ್ಕೆ, ದೃಶ್ಯಕಲಾ ಸಂಶೋಧನ ಕ್ಷೇತ್ರಕ್ಕೆ ದೊರಕುವ ಪ್ರಯೋಜನಗಳನ್ನು ಇಲ್ಲಿ ಹೇಳಲಾಗಿದೆ. ಇದಲ್ಲದೆ ಈ ಅಧ್ಯಯನಕ್ಕೆ ಬಳಸಿಕೊಂಡ ಮೂಲ ಆಕರ ಸಾಮಗ್ರಿ, ಆನುಷಂಗಿಕ ಆಕರ ಸಾಮಗ್ರಿ, ಪ್ರಬಂಧ ರಚನೆಗೆ ಅನುಸರಿಸಿದ ವಿಧಾನ ಮುಂತಾದವುಗಳನ್ನು ಪ್ರಥಮ ಅಧ್ಯಾಯದಲ್ಲಿ ಹೇಳಿದೆ.

ಎರಡನೆಯ ಅಧ್ಯಾಯವು ಕೊಪ್ಪಳ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ ಕುರಿತದ್ದಾಗಿದೆ. ಇಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ರಾಜರು, ಸಾಮಂತರು, ಸಂಸ್ಥಾನಿಕರು, ಸ್ಥಳೀಯ ನಾಯಕರು ಮುಂತಾದವರ ಬಗ್ಗೆ ಚರ್ಚಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಕೊಪ್ಪಳವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದ್ದು, ಅದನ್ನು ಇಲ್ಲಿ ಗಮನಿಸಲಾಗಿದೆ. ತಿರುಳ್ಗನ್ನಡನಾಡು, ಮಹಾಕೋಪಣ, ಕುಪಣ, ಕೋಪಣ, ಕೋಪಣಾಚಲ, ಕೋಪಣ ತೀರ್ಥ, ಕೊಂಕಣಪುಲೋವು, ಕೊಪಣಾದಿತೀರ್ಥ ಮುಂತಾದ ಉಲ್ಲೇಖಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಅಲ್ಲದೆ ಮೌರ್ಯರ ಕಾಲದಿಂದ ಇಲ್ಲಿ ಐತಿಹಾಸಿಕ ಕುರುಹುಗಳು ಲಭ್ಯವಾಗಿದ್ದು, ಅಶೋಕನ ಆಡಳಿತದ ವ್ಯಾಪ್ತಿಗೆ ಈ ಪ್ರದೇಶ ಒಳಪಟ್ಟಿದ್ದು, ಅವನ ಶಾಸನಗಳ ಅಂಶಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಮೌರ್ಯರ ನಂತರ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ದೇವಗಿರಿಯ ಸೇವುಣರು, ಯರಂಬರಗೆಯ ಸಿಂಧರು, ವಿಜಯನಗರ ಸಾಮ್ರಾಟರು, ಕನಕಗಿರಿ ಗುಜ್ಜಲವಂಶದ ದೊರೆಗಳು, ಆನೆಗುಂದಿ ಸಂಸ್ಥಾನಿಕರು, ಹೊಸಮಲೆದುರ್ಗ, ಕಮ್ಮಟದುರ್ಗ ರಾಜರ ಹೀಗೆ ಮೊದಲಾದ ರಾಜಮನೆತನಗಳು ಕೊಪ್ಪಳ ಜಿಲ್ಲೆಯ ವಿವಿಧ ಪ್ರದೇಶಗಳನ್ನು ತಮ್ಮ ಆಡಳಿತದ ವ್ಯಾಪ್ತಿಯಲ್ಲಿ ತಂದುಕೊಂಡಿರುವುದನ್ನು ಹಾಗೂ ನಂತರದ ದಿನಗಳಲ್ಲಿ ಈ ಪ್ರದೇಶದ ಮೇಲೆ ಪ್ರಭುತ್ವ ಸ್ಥಾಪಿಸಿದ ಹೈದರಾಲಿ, ಟಿಪ್ಪು್‌ಸುಲ್ತಾನ, ಮರಾಠರು, ಸ್ಥಳೀಯನಾಯಕರು, ಮುಂಡರಗಿ ಭೀಮರಾಯ ಇವರೆಲ್ಲರ ನಂತರ ಬ್ರಿಟಿಷರು, ಹೈದರಾಬಾದಿನ ಸಾಲಾರಜಂಗ ಮೊದಲಾದವರ ಕಾಲಾವಧಿಯಲ್ಲಿ ಜಿಲ್ಲೆಯ ಆಡಳಿತ ವ್ಯವಸ್ಥೆ, ಪ್ರಾದೇಶಿಕತೆಯ ಮಹತ್ವಗಳನ್ನು ಬಿಂಬಿಸಲಾಗಿದೆ.

ಇವೆಲ್ಲವುಗಳಿಗಿಂತ ಮುಖ್ಯವಾಗಿ ಮೌರ್ಯರಿಂದ ಒಳಗೊಂಡು ಇಂದಿನವರೆಗೆ ಜಿಲ್ಲೆಯ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಬೆಳೆದುಬಂದ ಕಲಾಪ್ರಕಾರಗಳನ್ನು ಗುರುತಿಸುವ ಮೂಲಕ ಕೊಪ್ಪಳ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ಅನುಕ್ರಮವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಎರಡನೆಯ ಅಧ್ಯಾಯದಲ್ಲಿ ಮಾಡಲಾಗಿದೆ.

ಪ್ರಾಗೈತಿಹಾಸಿಕ ಚಿತ್ರಕಲೆಗೆ ಸಂಬಂಧಪಟ್ಟಂತೆ ಈ ಮೂರನೇ ಅಧ್ಯಾಯ ರೂಪುಗೊಂಡಿದೆ. ಇಲ್ಲಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡುಬರುವ ಆದಿಮಾನವ ಚಿತ್ರಕಲೆಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಜಿಲ್ಲಾಕೇಂದ್ರವಾದ ಕೊಪ್ಪಳ ಸುತ್ತಮುತ್ತಲಿನ ಬೆಟ್ಟಗುಡ್ಡಗಳು, ಹಿರೇಬೆನಕಲ್ಲು, ಚಿಕ್ಕಬೆನಕಲ್ಲು, ರಾಂಪುರ, ಆನೆಗುಂದಿ ಹೀಗೆ ಒಟ್ಟು ಜಿಲ್ಲೆಯ ಆದಿಮಾನವ ಚಿತ್ರಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಅಲ್ಲದೆ ಜಿಲ್ಲೆಯ ಒಟ್ಟಾರೆ ಪ್ರಾಗೈತಿಹಾಸ ಕಾಲದ ಚಿತ್ರಗಳನ್ನು ಗುಹಾವರ್ಣ ಚಿತ್ರಗಳು, ಬಯಲು ಬಂಡೆಯ ವರ್ಣರಹಿತ ಚಿತ್ರಗಳೆಂದು ವಿಭಾಗಿಸಿಕೊಳ್ಳಲಾಗಿದೆ.

ಮತ್ತೆ ಅದರಲ್ಲಿ ಮತ್ತು ಜಿಲ್ಲೆಯ ಪ್ರಾಗೈತಿಹಾಸ ಕಾಲದ ಚಿತ್ರಗಳ ವಸ್ತುವಿಷಯ, ರಚನಾವಿಧಾನ, ವರ್ಣಗಾರಿಕೆ, ಹಾಗೂ ಉದ್ದೇಶಗಳ ಕುರಿತಾಗಿ ಚರ್ಚಿಸಲಾಗಿದೆ. ಈ ಚಿತ್ರಗಳ ಅಧ್ಯಯನದಿಂದ ಕೊಪ್ಪಳ ಜಿಲ್ಲೆಯ ಅನೇಕ ಕಡೆಗಳಲ್ಲಿ ಆದಿಮಾನವರ ವಾಸದ ನೆಲೆಗಳು ಎಲ್ಲೆಲ್ಲಿ ಇದ್ದವು ಎಂಬ ಅಂಶಗಳಿಗೆ ಮತ್ತಷ್ಟು ಪುಷ್ಟಿ ಒದಗಿಸಲಾಗಿದೆ. ಇದರಿಂದಾಗಿ ಆದಿಮಾನವ ಹಂತದಲ್ಲಿ ಜಿಲ್ಲೆಯ ಜನರ ಬದುಕು ಹೇಗಿತ್ತು, ಅವರ ನಂಬಿಕೆ, ಆಚರಣೆಗಳು ಯಾವ ರೀತಿ ಇದ್ದವು ಎಂಬಂತಹ ಸಂಗತಿಗಳನ್ನು ಕಂಡುಕೊಳ್ಳಲಾಗಿದೆ.

ನಾಲ್ಕನೆಯ ಅಧ್ಯಾಯವು ಕೊಪ್ಪಳ ಜಿಲ್ಲೆಯ ಜನಪದ ಚಿತ್ರಕಲೆ ಕುರಿತದ್ದಾಗಿದೆ. ಇದರಲ್ಲಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡುಬರುವ ಜನಪದ ಚಿತ್ರಕಲಾಪ್ರಕಾರಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಹಚ್ಚೆ, ಮದರಂಗಿ, ಕಸೂತಿ, ರಂಗೋಲಿ, ಹೆಣಿಗೆ, ಹೊಲಿಗೆ, ಕೌದಿಕಲೆ, ಶೀಗಿಕಲೆ, ತೊಗಲುಗೊಂಬೆ, ಕಿನ್ನಾಳಕಲೆ, ಬೆಳದಿಂಗಳ ಚಿತ್ರಕಲೆಗಳ ಹುಟ್ಟು ಬೆಳವಣಿಗೆ ಮತ್ತು ಅವುಗಳ ಸ್ವರೂಪ, ಸದ್ಯದ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವು ಕೊಪ್ಪಳ ಜಿಲ್ಲೆಯ ಶಿಷ್ಟಪದ ಚಿತ್ರಕಲೆಗೆ ಸಂಬಂಧಿಸದ್ದಾಗಿದೆ. ಇದರಲ್ಲಿ ಶಿಷ್ಟಪದ ಚಿತ್ರಕಲೆಯ ಅರ್ಥ, ಸ್ವರೂಪ, ಜನಪದ ಕಲೆ ಮತ್ತು ಶಿಷ್ಟಪದ ಚಿತ್ರಕಲೆಗೆ ಇರುವ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಇದಲ್ಲದೆ ಶಿಷ್ಟಪದ ಚಿತ್ರಕಲೆಯಲ್ಲಿ ಇರುವ ರಚನಾವಿಧಾನಗಳು, ತಾಳಮಾನಗಳು, ಪರಿಕರಗಳ ಬಗ್ಗೆ ಸ್ಥೂಲವಾಗಿ ತಿಳಿಸಲಾಗಿದೆ. ಮುಂದಿನ ಹಂತದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕಂಡುಬರುವ ಶಿಷ್ಟಪದ ಚಿತ್ರಕಲೆಗಳ ನೆಲೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಜಿಲ್ಲೆಯ ಶಿಷ್ಟಪದ ಚಿತ್ರಗಳು ದೇವಾಲಯ, ಮಠ, ಸಾರ್ವಜನಿಕ ಕಟ್ಟಡಗಳು ಮುಂತಾದ ಕಡೆಗಳಲ್ಲಿ ಕಂಡುಬಂದಿದ್ದು, ಇವುಗಳನ್ನು ಪ್ರಾಚೀನ ನೆಲೆಗಳು ಮತ್ತು ಆಧುನಿಕ ನೆಲೆಗಳು ಎಂದು ವಿಂಗಡಿಸಿಕೊಂಡಿದೆ. ಪ್ರಾಚೀನ ನೆಲೆಗಳಲ್ಲಿ ಕನಕಗಿರಿಯ ಕನಕಾಚಲಪತಿ ದೇವಾಲಯ, ಆನೆಗುಂದಿಯ ಹುಚ್ಚಪ್ಪಯ್ಯ ಮಠದ ಚಿತ್ರಗಳು ಒಳಗೊಂಡಿವೆ. ಆಧುನಿಕ ನೆಲೆಗಳಲ್ಲಿ ಕನಕಗಿರಿಯ ಆಂಜನೇಯ ದೇವಸ್ಥಾನ, ವೆಂಕಟೇಶ್ವರ ದೇವಾಲಯ, ದುರ್ಗಮ್ಮ ದೇವಾಲಯ, ಆನೆಗುಂದಿಯ ರಂಗನಾಥ ದೇವಸ್ಥಾನದ ಚಿತ್ರಗಳನ್ನು ಪರಿಗಣಿಸಲಾಗಿದೆ. ಈ ನೆಲೆಗಳಲ್ಲಿನ ಚಿತ್ರಗಳ ವಸ್ತುವಿಷಯ, ವರ್ಣಗಾರಿಕೆ, ರಚನಾವಿಧಾನ, ತಂತ್ರ, ಶೈಲಿ, ಪ್ರಭಾವ ಮತ್ತು ಪ್ರೇರಣೆಗಳ ಕುರಿತು ವಿವೇಚಿಸಲಾಗಿದೆ.

ಆರನೆಯ ಅಧ್ಯಾಯವು ಕೊಪ್ಪಳ ಜಿಲ್ಲೆಯ ಕಲಾವಿದರು ಮತ್ತು ಕಲಾಪರಿಸರವನ್ನು ಕುರಿತಾಗಿದೆ. ಇದರಲ್ಲಿ ಕೊಪ್ಪಳ ಜಿಲ್ಲೆಯ ವಿವಿಧ ಭಾಗಗಳಲ್ಲಿ ನೆಲೆಸಿ ಕಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಕಲಾವಿದರ ಬಗ್ಗೆ ಪ್ರಮುಖವಾಗಿ ಹೇಳಲಾಗಿದೆ. ಜಿಲ್ಲೆಯಲ್ಲಿ ಹೆಚ್ಚಿನ ಕಲಾವಿದರು

ಕಿನ್ನಾಳದಲ್ಲಿ ಕಂಡುಬರುತ್ತಾರೆ. ಇವರು ಚಿತ್ರಕಲೆ ಮತ್ತು ಶಿಲ್ಪಕಲೆ ಎರಡರಲ್ಲೂ ಪ್ರಾವೀಣ್ಯತೆ ಪಡೆದು ಕೊಂಡವರಾಗಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ ತಮ್ಮ ಪಾರಂಪರಿಕ ಕಲೆಯ ಜೊತೆಗೆ ಸಮಕಾಲೀನ ಕಲಾಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಲಾಕೃತಿಗಳನ್ನು ರಚಿಸುವುದು, ಪ್ರದರ್ಶನ ಹಮ್ಮಿಕೊಳ್ಳುವುದು, ಶಿಬಿರಗಳಲ್ಲಿ ಪಾಲ್ಗೊಳ್ಳುವುದು, ಕಲಾಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಜಿಲ್ಲೆಯ ಕಲಾಪರಂಪರೆಯನ್ನು ಜೀವಂತವಾಗಿರಿಸಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಕಿನ್ನಾಳ ಮಾತ್ರವಲ್ಲದೆ ಕನಕಗಿರಿ ಮತ್ತು ಗಂಗಾವತಿಯಲ್ಲಿ ಸಹಿತ ಕೆಲವು ಕಲಾವಿದರು ನೆಲೆಸಿ ಈ ಕಲಾ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಇವರು ಹೆಚ್ಚಾಗಿ ಆಧುನಿಕ ದೇವಾಲಯಗಳಲ್ಲಿ ವರ್ಣಚಿತ್ರಗಳನ್ನು ರಚಿಸುವ ಕೆಲಸಮಾಡುತ್ತಾರೆ. ಇವರು ಸಹಿತ ನಿರಂತರ ಕ್ರಿಯಾಶೀಲರಾಗಿದ್ದಾರೆ. ಹೀಗೆ ಕಲಾವಿದರ ಮೂಲಕ ಜಿಲ್ಲೆಯ ಇಂದಿನ ಕಲಾ ಸಂದರ್ಭವನ್ನು ವಿವೇಚಿಸುವ ಪ್ರಯತ್ನವು ಆರನೆಯ ಅಧ್ಯಾಯದಲ್ಲಿ ಕಂಡುಬರುತ್ತದೆ. ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು. ಮೇಲಿನ ಎಲ್ಲ ಅಧ್ಯಾಯಗಳ ಫಲಿತಾಂಶಗಳನ್ನು ಒಳಗೊಂಡಿದೆ.

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಕೆಲವು ಪ್ರಮುಖ ಫಲಿತಗಳು

೧. ರಾಯಚೂರು ಜಿಲ್ಲೆಯ ಭಾಗವಾಗಿದ್ದ ಕೊಪ್ಪಳವು ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡ ನಂತರ ಇಡೀ ಜಿಲ್ಲೆಯ ವ್ಯಾಪ್ತಿಯನ್ನು ಆಧರಿಸಿ, ಚಿತ್ರಕಲೆಯ ಹಲವು ಪ್ರಕಾರಗಳ ಬಗ್ಗೆ ಕೈಗೊಂಡ ಪ್ರಥಮ ಅಧ್ಯಯನ ಇದಾಗಿದೆ.

೨. ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸ ಚಿತ್ರಕಲೆಯ ನೆಲೆಗಳು ಈ ಜಿಲ್ಲೆಯ ಆದಿಮಾನವನ ಜನವಸತಿಯ ನೆಲೆಗಳಾಗಿದ್ದವು ಎಂಬುದನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ ಈ ಪ್ರದೇಶದ ಪ್ರಾಗೈತಿಹಾಸ ಚಿತ್ರಗಳು ಕರ್ನಾಟಕದಲ್ಲಿಯೇ ವಿಶೇಷವಾಗಿರುವುದನ್ನು ತಿಳಿದುಕೊಳ್ಳಲಾಗಿದೆ.

೩. ಕೊಪ್ಪಳ ಜಿಲ್ಲೆಯು ಜನಪದ ಚಿತ್ರಕಲೆಯ ಆಗರವೇ ಆಗಿದ್ದು, ಇಲ್ಲಿನ ಕಿನ್ನಾಳವು ಇದರಿಂದಾಗಿಯೇ ವಿಶ್ವಪ್ರಸಿದ್ಧಿ ಪಡೆದುಕೊಂಡ ಅಂಶಗಳನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ.

೪. ಜಿಲ್ಲೆಯ ಜನಪದ ಚಿತ್ರಕಲೆಗಳಲ್ಲಿ ವಿಜಯನಗರ, ಮುಸ್ಲಿಂ ಅರಸರು, ಮರಾಠರು ಮತ್ತು ಹೈದ್ರಾಬಾದ್ ನಿಜಾಮರ ಪ್ರಭಾವ ಇರುವುದನ್ನು ಗುರುತಿಸಲಾಗಿದೆ. ಅಲ್ಲದೆ ಕಿನ್ನಾಳದಲ್ಲಿ ಜನಪದ ಕಲಾವಿದರು ಚಿತ್ರಕಲೆ ಮತ್ತು ಶಿಲ್ಪಕಲೆ ಎರಡೂ ಪ್ರಕಾರಗಳಲ್ಲಿ ಪ್ರಾವೀಣ್ಯತೆ ಪಡೆದುಕೊಂಡಿರುವುದನ್ನು ಕಂಡುಕೊಳ್ಳಲಾಗಿದೆ.

೫. ಕೊಪ್ಪಳ ಜಿಲ್ಲೆಯು ಕರ್ನಾಟಕ ಶಿಷ್ಟಪದ ಚಿತ್ರಕಲೆಗೆ ಬಹುದೊಡ್ಡ ಕೊಡುಗೆ ನೀಡಿದೆ.

ಕನಕಗಿರಿ, ಆನೆಗುಂದಿಯಲ್ಲಿನ ಚಿತ್ರಗಳು ಜಿಲ್ಲೆಯ ಶಿಷ್ಟಪದ ಚಿತ್ರ ಕಲೆಯ ಮಹತ್ವದ ನೆಲೆಗಳು ಎಂಬುದನ್ನು ತಿಳಿಸಲಾಗಿದೆ.

೬. ಕೊಪ್ಪಳ ಜಿಲ್ಲೆಯು ಕಲಾವಿದರ ಕುಟುಂಬಗಳಿಂದ ತುಂಬಿಕೊಂಡಿರುವ ಗ್ರಾಮಗಳನ್ನು ಒಳಗೊಂಡಿದೆ. ಕಿನ್ನಾಳವು ಶಿಲ್ಪ ಮತ್ತು ಚಿತ್ರಕಲಾವಿದರಿಂದ ಪ್ರಸಿದ್ಧಿ ಪಡೆದುಕೊಂಡಿದ್ದರೆ, ಭಾಗ್ಯನಗರವು ನೇಯ್ಗೆ ಕಲಾವಿದರು ಹಾಗೂ ಇನ್ನಿತರ ವೃತ್ತಿನಿರತ ಕರಕುಶಲ ಕಲಾವಿದರಿಂದಾಗಿ ಪ್ರಖ್ಯಾತಿ ಪಡೆದುಕೊಂಡಿದೆ.

೭. ಸಮಕಾಲೀನ ಸಂದರ್ಭದಲ್ಲಿಯೂ ಕೊಪ್ಪಳ ಜಿಲ್ಲೆಯಲ್ಲಿ ನಿರಂತರ ಕಲಾಚಟುವಟಿಕೆಗಳು ನಡೆಯುತ್ತಲಿವೆ. ಇಲ್ಲಿನ ಕಲಾವಿದರು ಪಾರಂಪರಿಕ ಮತ್ತು ಆಧುನಿಕ ಕಲೆಯ ಕೊಂಡಿಯಂತೆ ಕೆಲಸ ಮಾಡುತ್ತಲಿದ್ದಾರೆ. ಅಲ್ಲದೆ ನಿರಂತರ ಕಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಜಿಲ್ಲೆಯ ಚಿತ್ರಕಲಾ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಲಾಗಿದೆ.

೮. ಕೊಪ್ಪಳ ಜಿಲ್ಲೆಯಲ್ಲಿ ಆದಿಮಾನವ ಹಂತದಿಂದ ಇಂದಿನವರೆಗೆ ನಿರಂತರವಾಗಿ ಚಿತ್ರಕಲಾ ರಚನೆಯು ನಡೆಯುತ್ತ ಬಂದಿದೆ. ಇದರಿಂದಾಗಿ ನಾಡಿನ ಕಲಾಕ್ಷೇತ್ರಕ್ಕೆ ಸಾಂಸ್ಕೃತಿಕ ಲೋಕಕ್ಕೆ ಜಿಲ್ಲೆಯು ವಿಶೇಷ ಕೊಡುಗೆ ನೀಡಿದೆ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೯. ಕೊಪ್ಪಳ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ರಾಜರು ತಮ್ಮ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿ ಚಿತ್ರಕಲೆ, ಶಿಲ್ಪಕಲೆ, ವಾಸ್ತುಕಲೆಗಳನ್ನು ನಿರಂತರವಾಗಿ ಪ್ರೋತ್ಸಾಹಿಸಿ ಬೆಳೆಸುತ್ತ ಬಂದಿದ್ದಾರೆ ಎಂಬುದು ಈ ಅಧ್ಯಯನದಿಂದ ತಿಳಿದುಬಂದಿದೆ.

೧೦. ಕೊಪ್ಪಳ ಜಿಲ್ಲೆಯು ಕರ್ನಾಟಕದ ಕಲಾಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದೆ ಕಾರಣ ಈ ಪ್ರದೇಶದಲ್ಲಿ ಮೌರ್ಯರಿಂದ ಆರಂಭಿಸಿ ಇಂದಿನವರೆಗೆ ವಿವಿಧ ರಾಜರ ಕಾಲದಲ್ಲಿ ಬೆಳೆದುಬಂದ ಪ್ರತ್ಯೇಕ ಕಲಾಶೈಲಿಗಳು ಕಂಡುಬರುತ್ತವೆ. ಜೈನ, ಬೌದ್ಧ, ಶಾತವಾಹನ, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಸ್ಥಳೀಯ ನಾಯಕರು, ಮುಸ್ಲಿಮರು, ಮರಾಠ ಚಿತ್ರ, ಶಿಲ್ಪಕಲಾಶೈಲಿಗಳು ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಸಮನ್ವಯಗೊಂಡಿರುವುದು ವಿಶೇಷವಾಗಿದೆ.

ಕೊಪ್ಪಳ ಜಿಲ್ಲೆಯ ಚಿತ್ರಕಲೆ ಎಂಬ ಪ್ರಸ್ತುತ ಅಧ್ಯಯನವು ಜಿಲ್ಲೆಯ ಅನೇಕ ಕಲಾ ಪ್ರಕಾರಗಳನ್ನು ಒಳಗೊಂಡಂತೆ ನಡೆಸಿದ ಅಧ್ಯಯನವಾದರೂ ಇದಕ್ಕೆ ತನ್ನದೇ ಆದ ಇತಿಮಿತಿಗಳಿವೆ. ಒಂದು ನಿರ್ದಿಷ್ಟ ಉದ್ದೇಶ, ಸಮಯದ ಚೌಕಟ್ಟಿನೊಳಗೆ ಇದು ರೂಪುಗೊಂಡಿರುವುದರಿಂದ

ಹಲವಾರು ಅಂಶಗಳು ಇಲ್ಲಿ ಪರಿಗಣಿಸಲ್ಪಟ್ಟಿಲ್ಲ. ಕೊಪ್ಪಳ ಜಿಲ್ಲೆಯ ಚಿತ್ರಕಲೆಯ ಕುರಿತಾಗಿ ನಡೆಸಿದ ಈ ಅಧ್ಯಯನವು ಒಂದು ಮಾರ್ಗಸೂಚಿ ಮಾತ್ರವಾಗಿದೆ. ಈ ನಿಟ್ಟಿನಲ್ಲಿ ಇನ್ನೂ ಹಲವು ದೃಷ್ಟಿಕೋನಗಳಿಂದ ಅಧ್ಯಯನ ಮಾಡುವವರಿಗೆ ಇದೊಂದು ಆಕರ ಗ್ರಂಥವಾದರೆ ಅದೇ ಇದರ ಸಾರ್ಥಕತೆ ಎಂದು ಇಲ್ಲಿ ಹೇಳಬಯಸುತ್ತೇನೆ.

❑❑❑

ಅನುಬಂಧಗಳು

ಅನುಬಂಧ – ೧

ಸಂಕ್ಷೇಪಗಳು

ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ಕ.ಸಾ.ಪ.ಬೆಂ	:	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕ್ರಿ.ಶ.	:	ಕ್ರಿಸ್ತ ಶಕ
ಮೈ.ವಿ.ವಿ.	:	ಮೈಸೂರು ವಿಶ್ವವಿದ್ಯಾಲಯ
ಗು.ವಿ.ವಿ.	:	ಗುಲಬರ್ಗಾ ವಿಶ್ವವಿದ್ಯಾಲಯ
ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ತು, ಬೆಂಗಳೂರು
ಪ್ರ.ಮೈ.ವಿ.ವಿ.	:	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
ಪು	:	ಪುಟ
ಅನು	:	ಅನುವಾದ
ಉ.ಕ	:	ಉತ್ತರ ಕರ್ನಾಟಕ
ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಮೀ	:	ಮೀಟರ್
ಕಿ.ಮೀ	:	ಕಿಲೋ ಮೀಟರ್
ಸೆಂ.ಮೀ	:	ಸೆಂಟಿ ಮೀಟರ್
ಸಂ	:	ಸಂಪಾದಕರು
ಪ್ರ.ಸಂ	:	ಪ್ರಧಾನ ಸಂಪಾದಕರು
ಲೇ	:	ಲೇಖಕರು
ಅ.ಪ್ರ.ಮ.ಪ್ರ.	:	ಅಪ್ರಕಟಿತ ಮಹಾಪ್ರಬಂಧ

ಅನುಬಂಧ – ೨

ಗ್ರಂಥಋಣ

೧. **ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ** – **ಡಾ.ಯಾದಪ್ಪ ಪರದೇಶಿ**
ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೧

೨. **ಕರ್ನಾಟಕ ಇತಿಹಾಸ** – **ಪ್ರಸಂ: ಪ್ರೊ. ಕೆ.ಎನ್. ಗಂಗಾನಾಯಕ್**
ಕುವೆಂಪು ಕನ್ನಡ ಅಧ್ಯಯನ
ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು. ೨೦೧೧

೩. **ಕರ್ನಾಟಕ ಚರಿತ್ರೆ (ಸಂಪುಟ –೧)** – **ಅ.ಸುಂದರ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ – ೧೯೯೭

೪. **ಕರ್ನಾಟಕ ಜನಪದ ಚಿತ್ರಕಲೆ** – **ಡಾ.ಎಸ್.ಸಿ.ಪಾಟೀಲ್**
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೊಂಟದಾರ್ಯ ಸಂಸ್ಥಾನ
ಮಠ, ಗದಗ. ೧೯೯೩

೫. **ಕರ್ನಾಟಕ ಜನಪದ ಶಿಲ್ಪಕಲೆ** – **ಡಾ. ಶಿವಾನಂದ ಹೆಚ್. ಬಂಟನೂರು**
ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೨

೬. **ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ** – **ಡಾ.ಕೆ.ಎಂ.ಸುರೇಶ, ವಾಸುದೇವ ಬಡಿಗೇರ, ಡಾ. ಎಸ್.ವೈ. ಸೋಮಶೇಖರ್, ಮಾಡಲಗೇರಿ ಕೊಟ್ರೇಶ್**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೧

೭. **ಕರ್ನಾಟಕದಲ್ಲಿ ನವಶಿಲಾಯುಗ** – **ಬಾ.ರಾ.ಗೋಪಾಲ್**
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೮೭

೮. **ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ** – **ಅ.ಸುಂದರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೯. **ಕರಕುಶಲ ಕಲೆಗಳು** – **ಪ್ರ.ಸಂ: ಕರೀಗೌಡ ಬೀಚನಹಳ್ಳಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ – ೨೦೧೦

೧೦. **ಕಲಾ ಕೋಶ** – **ಸಂ. ಎನ್. ಮರಿಶಾಮಾಚಾರ್**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೧೧. **ಕಲಾಕೋಶ** – **ಪ್ರ.ಸಂ. ಪಿ.ಆರ್.ತಿಪ್ಪೆಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೧೨. **ಕಲಾನುಭವ** – **ವಿ.ಸಿತಾರಾಮಯ್ಯ**
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು. ೧೯೭೬

೧೩. **ಕಲಾ ಪ್ರಪಂಚ** – **ಡಾ.ಶಿವರಾಮ ಕಾರಂತ**
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೨೦೦೦

೧೪. **ಕಲೆ ಎಂದರೇನು?** – **ಸಿ.ಪಿ.ಕೆ**
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
೨೦೦೦

೧೫. **ಕಿನ್ನಾಳ ಕಲೆ ಒಂದು ಅಧ್ಯಯನ** – **ರವಿವಸಾರಾಮ ನಾಯಕ**
ಅಪ್ರಕಟಿತ ಎಂ.ಫಿಲ್ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೬

೧೬. **ಕಿನ್ನಾಳ ಚಿತ್ರಕಲೆ** – **ಆರ್. ಎಚ್. ಕುಲಕರ್ಣಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೨

೧೭. **ಕಿನ್ನಾಳದ ಗೊಂಬೆಗಳು** – **ಗವಿಸಿದ್ಧಪ್ಪ ಎನ್. ಬಳ್ಳಾರಿ**
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ. ೧೯೯೬

೧೮. **ಕೊಪ್ಪಳ ಜಿಲ್ಲಾ ದರ್ಶನ** – **ಸಂ. ಅಲ್ಲಮಪ್ರಭು ಬೆಟ್ಟದೂರ**
ಪ್ರಸಾರಾಂಗ, ಗುಲಬರ್ಗಾ
ವಿಶ್ವವಿದ್ಯಾಲಯ, ಗುಲಬರ್ಗಾ.

೧೯. **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ** – **ರಾಘವೇಂದ್ರ**
ಅಪ್ರಕಟಿತ ಎಂ.ಫಿಲ್ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೨

೨೦. **ಕೊಪ್ಪಳ ಜಿಲ್ಲೆಯ ಶಾಸನಗಳು ಸಾಂಸ್ಕೃತಿಕ ಇತಿಹಾಸ** – **ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್**
ಮೇಘನ ಪ್ರಕಾಶನ, ಕೊಪ್ಪಳ
೨೦೧೦

೨೧. **ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗದ ಸಂಸ್ಕೃತಿ** – **ಡಾ. ಸಾಯಬಣ್ಣ ಕ. ಮೇಲಕರ**
ಭಾರತ ಸಿಂಧೂರರಶ್ಮಿ ಪ್ರಕಾಶನ, ಧಾರವಾಡ
೨೦೧೧

೨೨. **ಕೊಪ್ಪಳ ಸಾಂಸ್ಕೃತಿಕ ಅಧ್ಯಯನ** – **ಪಾಟೀಲ ಬಿ.ಸಿ**
ಹರಿಹರ ಪ್ರಕಾಶನ, ಕೊಪ್ಪಳ
೧೯೯೮

೨೩. **ಗಂಗಾವತಿ ತಾಲೂಕು ದರ್ಶನ** – **ಪ್ರಕಾಶ ಹುಣಸಗಿ**
ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು
೧೯೮೭

೨೪. **ಚಿತ್ರಕಲಾ ಪ್ರಪಂಚ** – **ಪ್ರಸಂ. ಪಿ.ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೩

೨೫.	**ತಿರುಳ್ಗನ್ನಡ ಸವಿ ಸಂಚಿಕೆ** ಅಖಿಲ ಭಾರತ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ. ೧೯೯೩	–	**ಪ್ರಸಂ. ಎಚ್. ಎಸ್. ಪಾಟೀಲ**
೨೬.	**ನಿಜದ ನೆಲೆ** ಡಾ. ಬಿ. ಕೆ. ಹಿರೇಮಠರ ಅಭಿನಂದನಾ ಗ್ರಂಥ, ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ, ಬಾಗಲಕೋಟೆ. ೨೦೦೩	–	**ಸಂ. ಡಾ. ಎಸ್. ಸಿ. ಪಾಟೀಲ & ಸತ್ಯಾನಂದ ಪಾತ್ರೋಟ**
೨೭.	**ಪೂರ್ವೇತಿಹಾಸ** ಚಿಂತನ ಪುಸ್ತಕ, ಶಿರಸಿ ೨೦೦೮	–	**ಇರ್ಫಾನ್ ಹಬೀಬ್**
೨೮.	**ಭಾರತೀಯ ಚಿತ್ರಕಲೆ** ನ್ಯಾಶನಲ್ ಬುಕ್ ಟ್ರಸ್ಟ್, ದೆಹಲಿ ೧೯೯೮	–	**(ಅನು.) ಪಿ. ಆರ್. ತಿಪ್ಪೇಸ್ವಾಮಿ**
೨೯.	**ಭಾರತೀಯ ಜನಪದ ಕಲೆಗಳು** ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು. ೧೯೯೧	–	**ಎನ್. ಮರಿಶಾಮಾಚಾರ್**
೩೦.	**ಭಿತ್ತಿಚಿತ್ರ ಪರಂಪರೆ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೮	–	**ಡಾ. ಅ. ಲ. ನರಸಿಂಹನ್**
೩೧.	**ವರ್ಣಸಂಚಯ** ವಿಜಯ ಲಲಿತಕಲಾ ಮಹಾವಿದ್ಯಾಲಯ ಇಳಕಲ್	–	**ಡಾ. ಎಸ್. ಸಿ. ಪಾಟೀಲ**
೩೨.	**ವಿಜಯನಗರ ಅಧ್ಯಯನ (ಸಂಪುಟ–೩)** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೮	–	**ಎಂ.ಎಲ್. ಶಿವಶಂಕರ ಮತ್ತು ಡಾ.ಎಸ್. ಸಿ. ಪಾಟೀಲ**
೩೩.	**ವಿಜಯನಗರ ಅಧ್ಯಯನ (ಸಂಪುಟ–೬)** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ೨೦೦೧	–	**ಪ್ರೊ, ಎಂ.ವಿ. ಕೃಷ್ಣಪ್ಪ & ಎಚ್.ಟಿ. ತಳವಾರ**

೩೪. **ಶಿಲಾಯುಗದ ಗವಿಚಿತ್ರಗಳು** – **ಡಾ. ಶರಣಬಸಪ್ಪ ಕೋಲ್ಕಾರ**
ಬಸವ ಪ್ರಕಾಶನ, ಗುಲ್ಬರ್ಗಾ
೨೦೧೦

೩೫. **ಶಿಲಾಶ್ರಯ ಕಲೆಯ ದೃಶ್ಯದ್ಯಾನ** – **ಕೆ. ವಿ. ಸುಬ್ರಹ್ಮಣ್ಯಂ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೧

೩೬. **ಶಿಲ್ಪಕಲಾ ಪ್ರಪಂಚ** – **(ಪ್ರ.ಸಂ.) ಪಿ.ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಶಿಲ್ಪಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೩೭. **ಹಂಪಿ ಪರಿಸರದ ಆದಿಮಾನವನ ನೆಲೆಗಳು** – **ಡಾ. ಎಲ್. ಶ್ರೀನಿವಾಸ್**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೦

೩೮. **ಹಂಪಿ ಸಂಪುಟ** – **ಸಂ. ದೇವರಕೊಂಡಾರೆಡ್ಡಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೬

೩೯. **ಹೈದ್ರಾಬಾದ್ ಕರ್ನಾಟಕದ ಸಾಂಸ್ಕೃತಿಕ ವಿಷಯಕೋಶ, ಸಂ – ೨ ಲಲಿತಕಲೆಗಳು** – **ಸಂ. ಡಾ. ಎಸ್. ಸಿ. ಪಾಟೀಲ, ಡಾ. ಪಿ. ಕೆ. ಖಂಡೋಬಾ**
ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ,
ಗುಲ್ಬರ್ಗಾ. ೨೦೧೨

2. English Books

01. **Annual Report of the Archaeological Department of the former Hyderabad State** - **Mon. L**
1934-35

02. **Annual Report of the Geological Survey of the forms – Hyderabad State. Vol-IV**
1941

03. **Excavations at Sangana Kallu** - **Anusari Z.D. and Nagaraj Rao. M. S.**
Deccan College post Graduate and Research Institute, Pune.
1964-65

04. **Further Notice of Rock Paintings in Benakal, Raichur district.** - **A Sundar**
1947

05. **Illustrated in cyclopaedia of the Arts** - **Edt. John Joulies Nockwit**
OXFORD. 1990

06. **Karnataka state Gazetteer, Raichur District** - **Abhishankar K**
Government of Karnataka,
Bengaluru. 1970

07. **Pre – historic of Man and his Art** - **Berehguer M.**
The caves of Ribadesella
Sourvenis Press, London.
1973

08. **The Art of the Cave Dweller** - **Boldwin Brown G.**
Cosmo Publication, New Delhi
1981

❑❑❑



ಕೊಪ್ಪಳ ಜಿಲ್ಲೆಯ ಚಿತ್ರಕಲೆ